ಶಾರದಾ ಪ್ರಕಟನಾಲಯದ ಪ್ರಕಟನೆ

ಭಾಸ ನಾಟಕಚಕ್ರ

☆

ಷ್ಟೋಽಷ್ಟೋಽ ಮುಷ್ಟಿಮುದ್ಯಮ್ಯ ತಿಷ್ಠತ್ಯೇಷ ಘಟೋತ್ಕಚಃ
ಉತ್ತಿಷ್ಠತು ಪುಮಾನ್ ಕಶ್ಚಿದ್ಗಂತುಮಿಚ್ಛೇದ್ಯಮಾಲಯಂ

☆

ಪ್ರೊ. ಯು. ವೆಂಕಟಕೃಷ್ಣರಾವ್

ಭಾಸ ನಾಟಕಚಕ್ರ

ಬರೆದವರು :

ಪ್ರೊ. ವೆಂಕಟಕೃಷ್ಣರಾವ್

★

ಮುದ್ರಣ ಮತ್ತು ಪ್ರಕಾಶನ:

ಶಾರದಾ ಪ್ರಕಟನಾಲಯ

ಅರಳೇಪೇಟೆ :: ಬೆಂಗಳೂರು-೨

ಪ್ರಥಮ ಮುದ್ರಣ :
ಫೆಬ್ರವರಿ ೧೯೬೩

★

★

ಬೆಲೆ :
ರೂ. ೨-೫೦

ಮುನ್ನುಡಿ

'ಭಾಸನಾಟಕಚಕ್ರ'—ಎಂಬೀ ಉತ್ತಮ ಪ್ರಬಂಧಕ್ಕೆ ನಾನು ಮುನ್ನುಡಿ ಬರೆಯುವದಕ್ಕೆ ಕಾರಣ ಎರಡು. ಒಂದು—ನನ್ನ ಕವಿ ಮಿತ್ರರಾದ ಶ್ರೀ ಪಾಂಡೇಶ್ವರ ಗಣಪತಿರಾಯರು ತಮ್ಮ ವಿದ್ವಾನ್ ಮಿತ್ರರಾದ ಈ ಪ್ರಬಂಧ ಕರ್ತರ ಬರೆವಣಿಗೆಯನ್ನು ನನ್ನಕೈಗೂ ಕಣ್ಣಿಗೂ ಹಾಕಿದರು, ನಾನು ಅದನ್ನು ಪ್ರಸಿದ್ಧ ಗುಣಗ್ರಾಹಿ ಪ್ರಕಾಶಕರಾದ ಶಾರದಾ ಪ್ರಕಟನಾಲಯದ ಶ್ರೀ ಬಸವರಾಜರ ಉಡಿಗೆ ಹಾಕಿದೆ;—ಮುದ್ರಣವು ಸಾವಕಾಶವಾದರೂ ಕಾರ್ಯವು ಸಾಂಗವಾಗಿ ಕೊನೆಗಂಡಿತು. 'ಪರಾಕು' ಹಾಕುವ ಕೆಲಸ ನಾನು ಬಿಟ್ಟರಾದೀತೆ- ? ಪ್ರಬಂಧ ಕರ್ತರ ಪರಿಚಯ ಅಷ್ಟಾಗಿ ನನಗಿಲ್ಲ ; ಈ ಮುನ್ನುಡಿಯ ಕಾಲಕ್ಕೆ ಅವರ ಹೆಸರೂ ನೆನಪಾಗುತ್ತಿಲ್ಲ ; ಅವರು ಎಂದೋ ಪ್ರಾರಂಭದಲ್ಲಿ ನನಗೆ ಬರೆದೊಂದು ಕಾಗದ ಕೈಗೆ ಸಿಕ್ಕುತ್ತಿಲ್ಲ ; ನಾನು ನನ್ನ ಪಾಲಿನ ವಿಲಂಬ ಮಾಡಿದರೂ 'ಕರ್ಮ' ಬೆನ್ನು ಬಿಡದು. ಎರಡನೆಯ ಕಾರಣವೂ ಇದೆ. ನನ್ನ ಭಾಸ ಪ್ರೇಮವು ನನ್ನಿಂದ 'ಪ್ರತಿಮಾ' ನಾಟಕವನ್ನು ನಾಲ್ವತ್ತು ವರ್ಷಗಳ ಹಿಂದೆಯೇ ಬರೆಯಿಸಿತು. ಶ್ರೀ ಮುಗಳಿರಂಗರಾಯರ ಸಹಕಾರದಿಂದ ಅದನ್ನು ರಂಗಭೂಮಿಗೆ ಹೊಂದಿಸಿದ್ದಾಯಿತು. ಆಮೇಲೆ ಹತ್ತು ವರ್ಷಕ್ಕೆ ಬಾಗಲಕೋಟೆಯ ನನ್ನ ಹಳೆಯ ಮಿತ್ರರಾದ ಕಂಠೀಯವರ 'ಬಾಲ ನಟರಾಜ ಮಂಡಳಿ' ಯವರು ಅದರ ಪ್ರಯೋಗಗಳನ್ನು ಮಾಡಿದರು ; ನೋಡಿದವರು ನಾಟಕ ಚೆನ್ನಾಗಿತ್ತು ಎಂದುದನ್ನು ಕೇಳಿದ್ದೇನೆ. ಹಳೆಯ ಕನಸಿಗೆ ಹೊಸದೊಂದು ನನಸು ಮೇಳವಿಸಿ ಬರುತ್ತಿದೆ.

ಕಾಲಿದಾಸನಂತೆ ಭಾಸನೂ ಕನ್ನಡಿಗರಿಗೆ ಪ್ರಿಯ ; ಗಟ್ಟಿಗರಾದ ಶಾಸ್ತ್ರಿಗಳ ಒಂದು ಮಹಾಪಂಥವೇ ಭಾಸನ ನಾಟಕಗಳನ್ನು-ಒಂದಾದ ಮೇಲೆ ಒಂದನ್ನು- ಪ್ರೌಢ ಕನ್ನಡದ ಪಟ್ಟಕ್ಕೇರಿಸಿತು ; ಅಂಥ ಶಾಸ್ತ್ರಿಗಳಲ್ಲಿ ಹಲವರು ಮದರಾಸ ಪಟ್ಟಣದ ಕನ್ನಡಿಗರಿಗೆ ಭೂಷಣ ಪ್ರಾಯರು. ಮತ್ತೆ ಮದ್ರಾಸದಿಂದಲೇ 'ಭಾಸ ನಾಟಕ ಚಕ್ರ' ಪ್ರಬಂಧ ಬರುತ್ತಿದೆ. ಶ್ರೀಗಳಾದ ಏ. ಆರ್. ಕೃಷ್ಣಶಾಸ್ತ್ರಿಗಳು, ಸೀ.ಕೆ.ವೆಂಕಟರಾಮಯ್ಯನವರು ಭಾಸನಿಗೆ ಮಹಾ ಪೂಜೆ ಸಲ್ಲಿಸಿದ್ದಾರೆ; ಶ್ರೀ ಎಲ್. ಗುಂಡಪ್ಪಾ, ಶ್ರೀ ಎಲ್. ಬಸವರಾಜು ಇವರು ಭಾಸನ ಏಕಾಂಕಗಳಿಗೆ ಕಂಕಣ ಕಟ್ಟಿದ್ದಾರೆ. ಭಾಸನು ದಕ್ಷಿಣದವನಂತೆ ; ಮೈಸೂರಿನ ಪಂಡಿತ ಅನಂತಾ ಚಾರ್ಯರಿಗೂ 'ಸ್ವಪ್ನ' 'ಪ್ರತಿಜ್ಞೆ'-ಗಳ ಓಲೆಸಿಕ್ಕಿದ್ದವಂತೆ; 'ಕೌಟಿಲ್ಯ'

ನನ್ನು ಬಹಿರಂಗಕ್ಕೆ ತಂದ ಮೈಸೂರು, ಭಾಸನ ಬೆನ್ನೂ ಕಟ್ಟಿತ್ತು ; '೧೯೦೯-೧೦'ರ ಮೈಸೂರು ಆರ್ಕಿಯಾಲಾಜಿಕಲ್ ವರದಿಯಲ್ಲಿ ನಮ್ಮ ಸುವಿಖ್ಯಾತ ಕನ್ನಡ ಕವಿ ಚರಿತ್ರೆಕಾರರು 'ಸ್ವಪ್ನವಾಸವದತ್ತ'ದ ಅದೃಷ್ಟ ತೆರೆದದ್ದಕ್ಕೆ ಮಂಗಲ ಹೇಳಿದ್ದಾರೆ. ಕರ್ಣ, ದುರ್ಯೋಧನ, ರಾವಣರಿಗೆ ಉಜ್ವಲತೆ ತಂದ ಕರ್ನಾಟಕ ; ಅಶ್ವತ್ಥಾಮನಿಗೆ ಚಿರಂಜೀವತ್ವದ • ಬಂಧನದಿಂದ ಬಿಡಿಸಿದ ಕರ್ನಾಟಕ ; 'ಬೆರಳಿಗೆ ಕೊರಳ್' ಕೊಂಡ ಕರ್ನಾಟಕ ; ಕೀಚಕನಿಗೆ ಪುನರ್ಜನ್ಮ ಕೊಟ್ಟ ಕರ್ನಾಟಕ ; ಕುರುಡ ಧೃತ ರಾಷ್ಟ್ರನಿಗೂ ವಿಶ್ವರೂಪ ದರ್ಶನ ಕರುಣಿಸಿದ ಕಲಾಪ್ರೇಮಿ ಕರ್ನಾಟಕವು ತನ್ನ ರಸಿಕತೆಯ ಝುರಿಯನ್ನು ಒತ್ತಿಸಿಗೊಟ್ಟಿಲ್ಲ. ತನ್ನ ಕಲಾವಿಲಾಸದ ಭರದಲ್ಲಿ ಬೀಸುವ ಚವರಿಯನ್ನೆ ಬೇರೆ ಕೋನಕ್ಕೆ ಒಲಿಸಿ ರಾಮ, ಧರ್ಮ, ಕೃಷ್ಣ ಇವರನ್ನು ಲೋಕಾಪವಾದಕ್ಕೆ ಆಗೀಗ ಗುರಿ ಮಾಡುತ್ತದೆ. ಸಾಹಿತ್ಯ ರಂಗಭೂಮಿಯ ನಯ ಮತ್ತು ಜೀವನದ ನೀತಿ ಇವುಗಳ ಸಾಂಗತ್ಯ-ಸಾಮಂಜಸ್ಯ ಯಾವ ಬಗೆಯದು ಎಂಬ ಮಾತು ? ಮತ್ತೆ ಮತ್ತೆ ಯುಕ್ತ ವಿಮರ್ಶೆಗೆ ಒಳಗಾಗಬೇಕು. ಸಹೃದಯ ಪಂಡಿತನು ತನ್ನ ದೃಷ್ಟಿ ಚಾತುರ್ಯದಿಂದ ಎಂಥೆಂಥ ನೂಲು ತೆಗೆದು ಹೊಸಪಟ ನೆಯ್ಯಬಹುದು ಎಂಬುದಕ್ಕೆ ಈ ಪ್ರಬಂಧವೂ ಉತ್ತಮ ಉದಾಹರಣೆ. ಲೇಖಕ ಮತ್ತು ಪ್ರಕಾಶಕರಿಬ್ಬರನ್ನೂ ಈ ಸಂಸ್ಕೃತಿಗಾಗಿ ನಾನೇ ಅಭಿನಂದಿಸುತ್ತೇನೆ.

ಇಲ್ಲಿ ಇಪ್ಪತ್ತೊಂದು ಪ್ರಕರಣಗಳಿವೆ. ಕೆಲವು ಎರಡು ಮೂರು ಪುಟ ಗಳಲ್ಲಿ ಮುಗಿದಿವೆ. ವಾಲ್ಮೀಕಿ, ವ್ಯಾಸ, ಭರತಮುನಿ, ಕೌಟಿಲ್ಯ, ವಾತ್ಸ್ಯಾಯನ, ವಿಷ್ಣುಪುರಾಣ, ಮಹೇಂದ್ರ ವಿಕ್ರಮವರ್ಮ, ಶಕ್ತಿಭದ್ರ, ರಾಜಸಿಂಹ,-ಎಲ್ಲಾ ಭಾಸನಿಗೆ ಕನ್ನಡಿ ಹಿಡಿಯುವವು. 'ಕಾಲಿದಾಸನು ಇಪ್ಪತ್ತೈದುವರ್ಷ ತರುಣನಾಗಿ ದ್ದಾಗ, ೬೦ ಯಾ ೭೦ ವರ್ಷದವನಾಗಿ ಭಾಸನಿದ್ದಿರಬಹುದೋ ತಿಳಿಯದು' (ಪುಟ. ೧೭) ಎನ್ನುತ್ತಾರೆ ಪ್ರಬಂಧಕಾರರು. ಕಾಲಿದಾಸನ ಬಗ್ಗೆಯೂ ಇದೇ ಬಗೆಯ ಪ್ರಬಂಧವೊಂದನ್ನು ಈ ಲೇಖಕರು ಬರೆಯಬಾರದೇ? ಹಾಗೆಯೇ 'ಶೂದ್ರಕ'ನ ವಿಷಯ ! (ಪು. ೧೮೯) ವ್ಯಾಕರಣ ಮಹಾಭಾಷ್ಯಕಾರ ಪತಂಜ ಲಿಯು ಶುಂಗ ಪುಷ್ಯಮಿತ್ರನ ಕಾಲದವನು' ಎನ್ನುತ್ತಾರೆ ಶ್ರೀ ಬಿ. ಎನ್. ಪುರಿ ಯವರು (India in the time of Patanjali–1957). ಹಾಗಾದರೆ ಭಾಸ-ಪತಂಜಲಿ ಎಳೆಗಳೇನಾದರೂ ಇವೆಯೋ? ಪತಂಜಲಿಗಿಂತ ಭಾಸ ಮೊದಲಿನವನಾದರೆ, ಪತಂಜಲಿಗೆ ಭಾಸ ಅನ್ನ ಒದಗಿಸಲಿಲ್ಲವೇ? (ಪುಟ. ೧೬ ; ೨೯, ೩೮). ವಿಮರ್ಶೆಯ ಬಾಗಿಲು ಮುಚ್ಚಿಲ್ಲ ತಾನೆ.

'ಯಜ್ಞಫಲ' ನಾಟಕದ ವಿಷಯದಲ್ಲಿ ಡಾ. ದಾಂಡೇಕರ, ಮತ್ತು ಡಾ. ಕೃಷ್ಣಶಾಸ್ತ್ರಿ, ಭಾಸನಿಗೆ ಅನುಕೂಲ ಮತಕೊಟ್ಟಿರುವರಲ್ಲದೆ, 'ಯಜ್ಞಫಲ' ತನ್ನ ಕೃತಿಯೆಂದು-ಭ್ರಮೆ ಹುಟ್ಟಿಸಿದ್ದ ಶಾಸ್ತ್ರಿಯ ಕೃತಕವನ್ನು ಬಯಲಿಗೆ ಹಾಕಿದ್ದಾರೆ-ಅದನ್ನೂ ಲೇಖಕರು ವಿಮರ್ಶೆಗೊಳಗಾಗಿಸಬೇಕಾಗಿತ್ತೇನೋ? 'ಭಾಸೋ ಹಾಸಃ' ಎಂಬ ಉಹಾಪೋಹ ರಮ್ಯವಾಗಿದೆ. ಭಾಸನ ಅಭಿಮನ್ಯು, ಘಟೋತ್ಕಚ, ದುರ್ಜಯರ ಸ್ಮೃತಿ-ಭಿತ್ತಿಯು ಕಾಲಿದಾಸನ ಸರ್ವದಮನ, ಆಯು, ವಸುಮಿತ್ರರ ಸಂಕೋಚಕ್ಕೆ ಕಾರಣವಾಗಿರಬಹುದೇ? ಎಂಬ ವಿಚಾರ ಹೊಳೆದು ಹೋಗುವದು. ಒಂದೊಂದು ಪ್ರಕರಣವು ಏನೋ ರಹಸ್ಯ ಹೊರಗೆಡಹುವಂತೆ ಕುತೂಹಲೋತ್ಪಾದಕವಾಗಿ ಬರೆಯಲಾಗಿದೆ. ಇದಕ್ಕಾಗಿ ಗ್ರಂಥಕರ್ತರನ್ನು ಮತ್ತೊಮ್ಮೆ ಅಭಿನಂದಿಸಿ ವಿರಮಿಸುತ್ತೇನೆ.

೨೨-೨-೧೯೬೩ —ದ. ರಾ. ಬೇಂದ್ರೆ.

ಸಾಧನಕೇರಿ, ಧಾರವಾಡ.

ಅನುಕ್ರಮಣಿಕೆ

———:———

ಭಾಸ ನಾಟಕಚಕ್ರ

ಗಣೇಶ್ವರಂ ನಮಸ್ಕುರ್ವೇ ಸಿದ್ಧಿದಾಯಕಸತ್ತಮಂ ।
ತಮಸಾಂ ವಿಘ್ನರೂಪಾಣಾಂ ಪ್ರಲಯಃ ಸ್ಮೃತಿಮಾತ್ರತಃ ॥

೧

ಭಾಸನ ಕಾಲವಿಚಾರ

೧೯೧೩ನೆಯ ಇಸವಿಯಲ್ಲಿ ಅನಂತಶಯನದಿಂದ ಮಹಾಮಹೋಪಾಧ್ಯಾಯ ಗಣಪತಿ ಶಾಸ್ತ್ರಿಗಳು ಈ ಹದಿಮೂರು ನಾಟಕಗಳನ್ನು ಭಾಸನವೆಂದು ಪ್ರಕಟಿಸಿದಾಗ, ನಮ್ಮ ದೇಶದ ಪ್ರತಿಯೊಂದು ಭಾಗದಲ್ಲಿಯೂ ವಿದೇಶದ ಫ್ರಾನ್ಸ್, ಇಂಗ್ಲೆಂಡು, ಜರ್ಮನಿ ಮುಂತಾದ ಕಡೆಗಳಲ್ಲಿಯೂ ವಿದ್ವಾಂಸರು ಬಹಳ ಸಂತೋಷದಿಂದ ಅಭಿನಂದಿಸಿದರು. ಆದರೆ ಸ್ವಲ್ಪ ಕಾಲದ ಅನಂತರ, ಸಂತೋಷದ ಭರವು ಸ್ವಲ್ಪ ಕಡಿಮೆಯಾದ ಬಳಿಕ, ಕೆಲವು ವಿದ್ವಾಂಸರು ಈ ಭಾಸನು ಕಾಲಿದಾಸ ಬಾಣಾದಿಗಳು ಹೊಗಳಿದ ಭಾಸನೇ ಆಗಿದ್ದಿರಲಾರನೆಂದು ಸಂಶಯವನ್ನು ವ್ಯಕ್ತಗೊಳಿಸಲಾರಂಭಿಸಿದರು! ಕೆಲವು ವಿದ್ವಾಂಸರು ಈ ನಾಟಕಗಳು ಭಾಸನವಲ್ಲವೆಂದು ಅಲ್ಲಗಳೆದರೂ, ಅವುಗಳಲ್ಲಿ ಭಾಸನ ಪಳಗಿದ ಕೈ ತೋರುವದೆಂದೂ, ಈ ನಾಟಕಗಳು ಕೆಲವು ಶತಮಾನಗಳ ಹಿಂದೆ ಕೇರಳೀಯ ನಾಟಕ ಕಂಪೆನಿಗಳು (ಇವುಗಳಿಗೆ ಆ ದೇಶದಲ್ಲಿ ಚಾಕ್ಯಾರ್‌ರೆಂದು ಕರೆಯುವರಂತೆ) ಅಲ್ಲಲ್ಲಿ ನಾಟಕಗಳನ್ನಾಡಿದಾಗ ತಯಾರಿಸಿದ ರಂಗಭೂಮಿಯಲ್ಲಿ ಆಡಲಿಕ್ಕಾಗಿ ಮಾಡಿದ ಪ್ರತಿ (Stage copies) ಗಳೆಂದೂ ವಾದಿಸಿದರು. ಇದರಲ್ಲಿಯೂ ಸೋಜಿಗವೇನೆಂದರೆ, ಪಿಷಾರಡಿ ಕುಲದಲ್ಲಿ ಹುಟ್ಟಿದ ಇಬ್ಬರು ಮಹನೀಯರು (ಇವರೂ ಕೇರಳೀಯರೇ) ಮೊದಲು ಇವನ್ನು ಭಾಸನವೇ ಎಂದು ಒಪ್ಪಿದ್ದರೂ, ಕಾರಣಾಂತರಗಳಿಂದ ಗಣಪತಿ ಶಾಸ್ತ್ರಿಗಳ ಈ ನೂತನವಾದ ಅಭಿಪ್ರಾಯವನ್ನು ಸರ್ವಾತ್ಮನಾ ವಿರೋಧಿಸಲಾರಂಭಿಸಿದರು. ಈ ಭಾಸನ ವಿರೋಧಿಗಳಲ್ಲಿ ಅಗ್ರಗಣ್ಯರೆಂದರೆ London V.C. School of Oriental Studies ನಲ್ಲಿರುವ ಡಾ. ಬಾರ್‌ನೆತ್ ಮಹಾಶಯರು! ಆದರೆ

ಡಾ|| ವಿ. ಎಸ್. ಸುಕ್ಥಂಕರರೆಂಬ ಮಹಾಶಯರು ಹೇಳಿದಂತೆ ಕೆಲವರು ವಿರೋಧಿಗಳಿದ್ದರೂ, ಈ ನಾಟಕಗಳನ್ನು ಹೊಗಳುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲಿದೆ. ಅಂತೂ 'ಪ್ರಥಿತಯಶಸ್ಕ'ನಾದ ಭಾಸನೇ ಇವನೆಂದು ಒಂದು ಪಕ್ಷವು ವಾದಿಸಿದರೆ, ಇನ್ನೊಂದು ತಂಡವು ಇವನು ೭ನೆಯ ಶತಮಾನದ ಯಾರೋ ಒಬ್ಬನೆಂದೂ ವಾದಿಸಿರುವರು. ಇನ್ನೂ ಕೆಲವರು ಇವನನ್ನು-ಅಂದರೆ ಈ ೧೩ ನಾಟಕಗಳನ್ನು ಬರೆದವನನ್ನು ಭಾಸನೆಂದೊಪ್ಪದೆ, ೧೦ ಅಥವಾ ೧೧ನೆಯ ಶತಮಾನಕ್ಕೂ ಇವನನ್ನು ತಳ್ಳುವರು! ಈ ಎರಡೂ ಪಂಗಡಗಳಲ್ಲಲ್ಲದೆ, ಮಧ್ಯ ಮಾರ್ಗವನ್ನವಲಂಬಿಸುತ್ತ ಕೆಲವರು ಈಗಾಗಲೇ ಹೇಳಿದಂತೆ ನಾಟಕ ಕಂಪೆನಿಗಳು ತಯಾರಿಸಿದ ಪ್ರತಿಗಳೋ ಎಂಬ ಸಂಶಯವೇ ಈಗ ಬಲವತ್ತರವಾಗಿರುವದು. ಇವರ ಅಭಿಪ್ರಾಯಪ್ರಕಾರ ಪ್ರಸಿದ್ಧನಾದ ಭಾಸನ ನಾಟಕಗಳಂತೂ ಇನ್ನು ದೊರಕಲಿಕ್ಕೇ ಸಾಧ್ಯವಿಲ್ಲವಂತೆ!

ಸತ್ಯವು ಹೇಗೂ ಇರಲಿ, ಈ ನಾಟಕಗಳ ಜನಪ್ರಿಯತೆಯು ಉತ್ತರ ದಕ್ಷಿಣ ಹಿಂದುಸ್ತಾನದಲ್ಲಿರುವ ಸರ್ವ ಭಾಷೆಗಳಲ್ಲಿ ಮಾತ್ರ ಪರಿವರ್ತಿಸಲ್ಪಡುವಂತೆ ಮಾಡಿದ್ದಲ್ಲದೆ, ಯುರೋಪು ದೇಶದ ಭಾಷೆಗಳಾದ ಜರ್ಮನ್, ಇಟೇಲಿಯನ್, ಫ್ರೆಂಚ್ ಇತ್ಯಾದಿ ಭಾಷೆಗಳಲ್ಲಿಯೂ ಪರಿವರ್ತಿತವಾಗುವಂತೆ ಮಾಡಿದೆ ಯೆಂಬುದರಿಂದ ವ್ಯಕ್ತವಾಗುತ್ತದೆ. (ಪ್ರಾಯಶಃ ಇಡೀ ಲೋಕದಲ್ಲಿ ಬೈಬಲ್ ಅತಿ ಹೆಚ್ಚು ಭಾಷೆಗಳಲ್ಲಿ ಪರಿವರ್ತಿತವಾಗಿದೆಯಂತೆ. ಅದರೊತ್ತಿಗೆ ನಮ್ಮ ಪಂಚತಂತ್ರವೂ ಅನೇಕ ಭಾಷೆಗಳಲ್ಲಿ ಈಗ ಅಂತರಿಸಲ್ಪಟ್ಟಿದೆಯೆಂದು ಲೆಕ್ಕ ಹಾಕಿದ್ದಾರೆ. ಅದರೊತ್ತಿಗೆ ಮೂರನೆಯದಾಗಿ ಭಾಸನ ನಾಟಕಗಳೆಂದು ಹೇಳಿದರೆ ತಪ್ಪಾಗದೆಂದು ನಮಗನಿಸುತ್ತಿದೆ.) ಪ್ರಾಯಶಃ ೧೯೩೯ರಲ್ಲಿ ಡಾ|| ಸುಕ್ಥಂಕರ್ ರೆಂಬ ಮಹನೀಯರು ಲೆಕ್ಕಹಾಕಿ ಕಂಡಾಗ **ಸ್ವಪ್ನವಾಸವದತ್ತ** ನಾಟಕವನ್ನು ಜರ್ಮನ್, ಫ್ರೆಂಚ್, ಇಟೇಲಿಯನ್ ಭಾಷೆಗಳಲ್ಲಿ, **ಅವಿಮಾರಕ**ವನ್ನು ಜರ್ಮನ್ ಮತ್ತು ಇಟೇಲಿಯನ್ ಭಾಷೆಗಳಲ್ಲಿ, **ಚಾರುದತ್ತ, ಮಧ್ಯಮ ವ್ಯಾಯೋಗ**'ಗಳನ್ನು ನೋರ್ವೇಜಿಯನ್ ಭಾಷೆಗಳಲ್ಲಿ, **ಊರು ಭಂಗ, ಬಾಲಚರಿತ**ಗಳನ್ನು ಜರ್ಮನಿಯೊಳಗೆ ಮತ್ತು **ಅಭಿಷೇಕ**ವನ್ನು ಇಟೇಲಿಯನ್ ಭಾಷೆಗೆ ಆಗಲೇ ಪರಿವರ್ತಿಸಿದ್ದರಂತೆ. ೩೦ ವರ್ಷಗಳ ನಂತರ ಈಗ ಇನ್ನೆಷ್ಟು ಭಾಷೆಗಳಲ್ಲಿ ಪರಿವರ್ತಿತವಾಗಿವೆಯೆಂಬ ಸಂಗತಿ ನಮಗೆ ತಿಳಿಯದು, ಖಂಡಿತವಾಗಿ ರಷಿಯಾ ದೇಶದೊಳಗೂ ಆಗಿರಬಹುದೆಂದು ಹೇಳಬಹುದು. ಒಟ್ಟಿನಲ್ಲಿ ಒಂದೇ ಮಾತಿನಲ್ಲಿ ಹೇಳುವುದಾದರೆ ಈ ನಾಟಕಗಳ ಜನಪ್ರಿಯತೆಗೆ ಬೇರೆ ಯಾವ ಸಾಕ್ಷ್ಯವೂ ಅವಶ್ಯವಿಲ್ಲ

ಎಂಬುದು ಸ್ಥಾಪಿತವಾಯಿತು. ಇಡೀ ಸಂಸ್ಕೃತ ಸಾಹಿತ್ಯದಲ್ಲಿ ಈ ನಾಟಕಗಳಷ್ಟು ಓಜಸ್ವಿಗಳಾಗಿ ರಂಗಭೂಮಿಯಲ್ಲಿ ಅತ್ಯುಜ್ವಲಗಳಾಗಿರುವ ಬೇರೆ ನಾಟಕಗಳೇ ಇಲ್ಲವೆಂದರೂ ಅತಿಶಯೋಕ್ತಿಯಾಗಲಾರದು. (ವಿಶಾಖದತ್ತನ **ಮುದ್ರಾಮಂಜೂಷ**ವು ಈಗ ಓಜಸ್ವಿಗಳಾದ ನಾಟಕಗಳಲ್ಲಿ ಉತ್ತಮವೆಂದು ಪರಿಗಣಿತವಾಗಿದೆಯಷ್ಟೆ; ಆದರೆ ಅದರ ಶೈಲಿಯು ಈ ನಾಟಕಗಳಿಗಿಂತ ಅತಿ ಕ್ಲಿಷ್ಟವಾಗಿದೆಯೆಂಬುದು ಎಲ್ಲರಿಗೂ ಗೊತ್ತಿದೆ; ಆ ವಿಶಾಖದತ್ತನೂ ಪ್ರತಿಜ್ಞಾಯೌಗಂಧರಾಯಣ ನಾಟಕವನ್ನೇ ಅವಲಂಬಿಸಿ ಬರೆದಿದ್ದಾನೆಂಬ ನಿಷ್ಪಕ್ಷಪಾತ ದೃಷ್ಟಿಯಿಂದ ಅದನ್ನೋದುವವರಿಗೆ ಒಡೆದು ಕಾಣುವದು). ಡಾ|| ವಿಂಟರ್‌ನಿಟ್ಜ್ ಎಂಬ ಜರ್ಮನಿ ದೇಶದ ಘನವಿದ್ವಾಂಸರ ಅಭಿಪ್ರಾಯದ ಪ್ರಕಾರ ಈ ನಾಟಕಗಳು ಇಡೀ ಭಾರತೀಯ ಸಾಹಿತ್ಯ ಸಾಗರದ ಅತ್ಯುತ್ಕೃಷ್ಟವಾದ ರತ್ನಗಳೆಂದೂ (ಹೀಗೆ ಹೇಳುವಾಗ ಕ್ಷೀರಸಾಗರದ ಹದಿನಾಲ್ಕು ರತ್ನಗಳಂತಿರುವ ಹದಿನಾಲ್ಕು ನಾಟಕಗಳೆಂದೇ ಅವರು ಭಾವಿಸಿದ್ದರೋ ತಿಳಿಯದು) ವಿದ್ವಾಂಸರೆಲ್ಲರೂ ಗಣಪತಿಶಾಸ್ತ್ರಿಗಳ ಉಪಕಾರವನ್ನೆಂದೆಂದಿಗೂ ಮರೆಯಲೇ ಸಾಧ್ಯವಿಲ್ಲವೆಂದೂ ಕಂಠೋಕ್ತವಾಗಿ ಹೇಳಿದ್ದಾರೆ.

ಭಾಸನ ಕಾಲ :

ಪೂರ್ವ ವಿಮರ್ಶಕರ ಅಭಿಪ್ರಾಯ ಪ್ರಕಾರ ಈತನ ಕಾಲವನ್ನು ಹೀಗೆ ಸಂಗ್ರಹಿಸಬಹುದೆಂದು ತೋರುತ್ತದೆ :—

	ಕ್ರಿ. ಪೂ.
೧) ಭಿಡೆ, ದೀಕ್ಷಿತರ್, ಹರಪ್ರಸಾದಶಾಸ್ತ್ರಿ	ಪ್ರಾಯಶಃ ೬ನೇ ಶತಮಾನ
೨) ಪೂಸಲ್ಕರ್, ಗಣಪತಿಶಾಸ್ತ್ರಿ, ಜಾಗೀರದಾರ್, ಕುಲಕರ್ಣಿ	೪ನೇ ಶತಮಾನ
೩) ಚೌಧುರಿ, ಧ್ರುವ, ಜಯಸ್ವಾಲ್	೨ನೇ ಶತಮಾನ
	A. D.
೪) ಕೊನೋ, ಲಿಂಡೆನೋ, ಸರೂಪ್, ವೆಲ್ಲರ್	೨ನೇ ಶತಮಾನ

೫) ಬ್ಯಾನರ್ಜಿಶಾಸ್ತ್ರಿ, ಭಾಂಡಾರ್‌ಕಾರ್,
ಜೋಲಿ, ಯಾಕೋಬ್ಯಾ, ಕೀಥ್ — ೩ ನೇ ಶತಮಾನ
೬) ಲೆಸ್ನಿ, ವಿಂಟರ್ನಿಟ್ಸ್ — ೪ನೇ ಶತಮಾನ
೭) ಕೆ. ಜಿ. ಶಂಕರ್ — ೫ನೇ ಶತಮಾನ
೮) ಬಾರ್ನೆಟ್, ದೇವಧರ, ಹೀರಾನಂದಶಾಸ್ತ್ರಿ — ೭ನೇ ಶತಮಾನ
೯) ಪಿ. ವಿ. ಕಾಣೆ — ೯ನೇ ಶತಮಾನ
೧೦) ರಾಮಾವತಾರ ಶರ್ಮಪಾಂಡೇಯ — ೧೦ ನೇ ಶತಮಾನ
೧೧) ರಂಗಾಚಾರ್ಯರೆಡ್ಡಿ — ೧೧ನೇ ಶತಮಾನ

ಜಯಸ್ವಾಲ್ ಮತ್ತು ಧ್ರುವ ಇತ್ಯಾದಿ ಮಹನೀಯರು ನಿರ್ಣಯಿಸಿದಂತೆ ನಾವೂ ೨ನೆಯ ಶತಮಾನದಲ್ಲಿಯೇ ಭಾಸನು ಇದ್ದಿರಬಹುದೆಂದೂಹಿಸುವೆವು, ನಮ್ಮ ಕಾರಣಗಳು ಮಾತ್ರ ಪ್ರತ್ಯೇಕವೇ ಆಗಿವೆ. ಬಾಲಚರಿತವೆಂಬ ನಾಟಕವನ್ನು ಈತನು ಬರೆದುದರ ಕಾರಣ—ನಮ್ಮ ಅಭಿಪ್ರಾಯ ಪ್ರಕಾರ—ಈ ಗ್ರಂಥಕರ್ತನ ಆಶ್ರಯದಾತನಾದ ಪುಷ್ಯಮಿತ್ರಶುಂಗನು ತನ್ನ ಸ್ವಾಮಿಯಾದ ಬೃಹದ್ರಥನನ್ನು ಕೊಲ್ಲುವಂತೆ ಮಾಡುವರೆ ಉತ್ಸಾಹ ಪಡಿಸಿತು. ಈ ನಾಟಕದಲ್ಲಿ ಕಂಸನು ತನ್ನ ಅಳಿಯಂದಿರನ್ನು ಧನುರ್ಮಹಕ್ಕೆ ಆಮಂತ್ರಿಸಿದಂತೆ, ಪುಷ್ಯಮಿತ್ರನೂ ತನ್ನ ದೊಡ್ಡದಾದ ಸೈನ್ಯವನ್ನು ನಿಶ್ಶಂಕನಾಗಿದ್ದ ಸ್ವಾಮಿಗೆ ವಿಜೃಂಭಣೆಯಿಂದ ತೋರಿಸುವ ವ್ಯಾಜವನ್ನು ಹೂಡಿ, ಸುಲಭದಲ್ಲಿ ವಿಶೇಷ ರಕ್ತಪಾತವಿಲ್ಲದೇನೆ, ಮೌರ್ಯ ರಾಜನನ್ನು ಮಾತ್ರ ಕೊಂದು ತಾನೇ ಸಿಂಹಾಸನವನ್ನೇರಿದ್ದನ್ನು ಸ್ಮರಿಸುವಂತಿಲ್ಲವೇ ? ಈ ಬಾಲಚರಿತ ನಾಟಕದಲ್ಲಿ ಉಗ್ರಸೇನ ಮಹಾರಾಜನಿಗೆ (ಇವನಿಗಾಗ ಭಾಗವತ ಪುರಾಣದ ಪ್ರಕಾರ ಅಥವಾ ಇನ್ಯಾವ ಪುರಾಣದ ಪ್ರಕಾರವೂ) ಯಾವ ಅಧಿಕಾರವೂ ಇಲ್ಲದಿದ್ದಾಗ 'ಅನುಗತಾರ್ಥ ನಾಮಧೇಯಸ್ಯ' ಎಂಬ ವಿಶೇಷಣವನ್ನುಪಯೋಗಿಸಿದುದು ಸಾರ್ಥಕವಾಗಬೇಕಾದರೆ ಈಗ ನಾವು ಹೇಳಿದ ಊಹೆಯನ್ನೇ ಮುಂದಿಸಿ ಅದನ್ನು ಪುಷ್ಯಮಿತ್ರನಿಗೇ ಅನ್ವಯಿಸುವದೇ ವಾಸಿಯೆಂದೆನಿಸುತ್ತದೆ. ಅರ್ಥಾತ್ ಪುಷ್ಯಮಿತ್ರಪತಂಜಲಿಯರು ಸಮಕಾಲೀನನಾಗಿರಬೇಕೆಂದೂಹಿಸಿದರೆ ತಪ್ಪಾಗಲಾರದು. ಪತಂಜಲಿಯು ತನ್ನ ಮಹಾಭಾಷ್ಯ III–೧–೨ ರಲ್ಲಿ ಕಂಸಂ ಘಾತಯತಿ, ಬಲಿಂ ಬಂಧಯತಿ ಎಂದಾಗಿನ ಕಾಲದ ಶೋಭನಿಕರು (ನಾಟಕದ ಕಂಪೆನಿಗೆ ಸೇರಿದ ನಟರು) ಕಂಸನನ್ನು ಕೊಂದನೆಂದು ದೃಷ್ಟಾಂತಿಸಿದಾಗ, ಇದೇ ಬಾಲಚರಿತವನ್ನೇ ಎದುರಿಗೊಟ್ಟು ಕೊಂಡಿರಬೇಕು—ಅವನ ವಾಕ್ಯವಿದು—"ಯೇ ತಾವ

ವೇತೇ ಶೋಭನಿಕಾ ನಾಮ ಏತೇ ಪ್ರತ್ಯಕ್ಷಂ ಕಂಸಂ ಘಾತಯಂತಿ", ಇತ್ಯಾದಿ. ಇದರಿಂದ ಇನ್ನೊಂದು ವಿಷಯ ಒಡೆದು ತೋರುವದೇನೆಂದರೆ ಆಗಿನ ಕಾಲದಲ್ಲಿ ಈ ಬಾಲಚರಿತವನ್ನು ಕಂಸವಧವೆಂದೂ (ಅಥವಾ ಬರೇ ವಧವೆಂದೇ) ಕರಿಯುತ್ತಿದ್ದಿರಬೇಕು. (ಎಂ. ರಾಮಕೃಷ್ಣ ಕವಿಗಳ ಅಭಿಪ್ರಾಯ ಪ್ರಕಾರ ಈ ೧೩ ನಾಟಕಗಳೊಳಗೆ ಕೆಲವಕ್ಕೆ ಎರಡು ಅಥವಾ ಮೂರೂ ಹೆಸರುಗಳು ಕಾಣುತ್ತವೆ. ಉದಾ – ಊರುಭಂಗಕ್ಕೆ ಗದಾಯುದ್ಧ, ಕರ್ಣಭಾರಕ್ಕೆ ಕವಚದಾನ ಅಥವಾ ಕುಂಡಲಾಹರಣ, ಅಭಿಷೇಕಕ್ಕೆ ರಾಮಾಭಿಷೇಕವೆಂದೂ, ಪ್ರತಿಮಾ ನಾಟಕಕ್ಕೆ ಪ್ರತಿಮಾ ರಾಮ ಅಥವಾ ಪ್ರತಿಮಾ ದಶರಥವೆಂದೂ ಹೆಸರುಗಳು ಹಸ್ತಲಿಖಿತ ಪ್ರತಿಗಳಲ್ಲಿ ದೊರಕಿವೆಯೆಂದು ಹೇಳಿರುವರು. ಸಾಧಾರಣ ೯ ಅಥವಾ ೧೦ನೆಯ ಶತಮಾನದಲ್ಲಿ ಜೀವಿಸಿದ್ದ ಅಮರಕೋಶದ ಪ್ರಸಿದ್ಧ ಟೀಕಾಕಾರನಾದ ಕ್ಷೀರಸ್ವಾಮಿಯು ಎರಡನೇ ಕಾಂಡದ ಕ್ಷತ್ರಿಯ ವರ್ಗದಲ್ಲಿ ಟೀಕಿಸುವ ಸಂದರ್ಭದಲ್ಲಿ (ಪುಟ ೭೬, ಪೂನಾ ಓರಿಯಂಟಲ್ ಸೀರಿಸ್–೪೩ನೆಯ ಪುಸ್ತಕ) ಅನೇಕ ಪ್ರಾಚೀನ ಹೆಸರುಗಳನ್ನು ಕೊಡುವಾಗ – ಶೂದ್ರಕಸ್ತ್ವಗ್ನಿಮಿತ್ರೋ ನಾ ಹಾಲಃಸ್ಯಾತ್ ಶಾಲಿವಾಹನಃ ಎಂದು ಒಂದು ಪ್ರಾಚೀನ ನಾಮಮಾಲೆಯನ್ನು ಉದಾಹರಿಸುವನು–ಇದರಿಂದ ಶೂದ್ರಕನ ಈ ಕೆಳಗಿನ ಶ್ಲೋಕಕ್ಕೆ ಸಾಧಾರಣ ಅರ್ಥ ಹೇಳಬಹುದೆಂದು ತೋರುತ್ತದೆ.

ಋಗ್ವೇದಂ ಸಾಮವೇದಂ ಗಣಿತಮಥ ಕಲಾಂ ವೈಶಿಕೀಂ ಹಸ್ತಿಶಿಕ್ಷಾಂ
ಜ್ಞಾತ್ವಾ ಶರ್ವಪ್ರಸಾದಾ ದ್ವ್ಯಪಗತತಿಮಿರೇ ಚಕ್ಷುಷೀ ಚೋಪಲಭ್ಯ ।
ರಾಜಾನಂ ವೀಕ್ಷ್ಯ ಪುತ್ರಂ ಪರಮ ಸಮುದಯೇನಾಶ್ವಮೇಧೇನ ಚೇಷ್ಟ್ವಾ
ಲಬ್ಧ್ವಾ ಚಾಯುಃ ಶತಾಬ್ದಂ ದಶದಿನ ಸಹಿತಂ ಶೂದ್ರಕೋಽಗ್ನಿಂ ಪ್ರವಿಷ್ಟಃ ।

ಮೃಚ್ಛಕಟಿಕದ ಪ್ರಸ್ತಾವನೆಯಲ್ಲಿ ಬಂದಿರುವ ಈ ಶ್ಲೋಕವನ್ನು ಭಾಸನ ನಾಟಕಗಳಿಗೆ ಅನ್ವಯಿಸಿದ ಪಕ್ಷದಲ್ಲಿ ಋಗ್ವೇದ, ಸಾಮವೇದ, ಗಣಿತ, ಇವಿಷ್ಟರ ಜ್ಞಾನವನ್ನು ಬಿಟ್ಟು, ವೇಶ್ಯಾ ಸ್ತ್ರೀಯರ ಹೃದಯವನ್ನೂ ಹಸ್ತಿಶಿಕ್ಷೆಯ ಜ್ಞಾನವನ್ನೂ ಭಾಸನ ನಾಯಕರಲ್ಲಿ ಪ್ರತಿಯೊಬ್ಬರಲ್ಲಿಯೂ ಕಾಣಬಹುದೆಂತಲೂ, ಅಶ್ವಮೇಧ ಯಜ್ಞವನ್ನಾಚರಿಸಿದ ಪುಷ್ಯಮಿತ್ರನೇ ತನ್ನ ಮಗ (ಅಗ್ನಿಮಿತ್ರ) ರಾಜನಾದದ್ದನ್ನು ಕಣ್ಣಾರೆ ಕಂಡಿದ್ದನೆಂದೂ ಟೀಕಿಸಬಹುದೆಂದೂ ನಮಗನಿಸುತ್ತದೆ. ಪ್ರಾಯಶಃ ಈ ಚಾರುದತ್ತ ನಾಟಕವನ್ನು ಭಾಸನು ಮೊದಲು ಬರೆದು ತನ್ನ ಆಶ್ರಯದಾತನಾದ ಪುಷ್ಯಮಿತ್ರನಿಗೆ (=ಶೂದ್ರಕನಿಗೆ) ನಾಟಕೀಯತೆ

ಯನ್ನು ಕಲಿಸುವರೆ ಬರೆದು, ತನ್ನ ಆಶ್ರಯದಾತನ ಹೆಸರೇ ಪ್ರಸಿದ್ಧವಾಗಿ ಉಳಿಯಲೆಂದು ತನ್ನ ನಾಟಕವನ್ನು ಬೇಕೆಂತಲೇ ಬಚ್ಚಿಟ್ಟನೋ ಎಂದು ಊಹಿಸ ಬೇಕಾಗುತ್ತದೆ. ಯುದ್ಧಗಳಲ್ಲಿ ಮುಳುಗಿದ್ದರೂ ರಾಜನು ಚಾರುದತ್ತನ ಆಶ್ರಯದಿಂದ, ಅದಕ್ಕೆ ರಾಜಕೀಯ ಕಥೆಯ ಸಂನಿವೇಶವನ್ನೂ ಸೊಗಸಾಗಿ ಜೋಡಿಸಿ, ತನ್ನ ಹೆಸರಿನಿಂದಲೇ ಮೃಚ್ಛಕಟಿಕ ನಾಟಕವನ್ನೂ ಪ್ರಚುರಪಡಿಸಿದ ನೆಂದು ಹೇಳಬಹುದೋ ಎಂದು ತೋರುವದು. ಈ ಚಾರುದತ್ತ ಮೃಚ್ಛಕಟಿಕದ ಸಂಬಂಧವನ್ನೂ ಅದರ ತೊಡಕನ್ನೂ ಬಿಡಿಸಲು ಪ್ರಯತ್ನಿಸಿದ ಮಹನೀಯ ರೆಲ್ಲರೂ (ದೇವಧರ ಪ್ರಭೃತಿಗಳು ಚಾರುದತ್ತದಲ್ಲಿಲ್ಲದ ರಾಜಕೀಯ ಕಥೆ ಜೋಡಿಸಲ್ಪಟ್ಟಿದೆ ಎಂಬ ವಿಷಯವನ್ನು ಮಾತ್ರ ಗಮನಿಸಿರುವದು ಸೋಜಿಗವಾಗಿ ತೋರುತ್ತದೆ) ನೀಲಸ್ನೇಹ, (ಗೃಹಂ ವಿಕ್ರಯಕಾಲೇಽಪಿ ನೀಲಸ್ನೇಹೇನ- ರಕ್ಷತಿ), ಸಮುದ್ರಪತ್ತನ ಸಾರಭೂತಃ, ಕರ್ತವ್ಯಕರ ಸ್ತ್ರೀಕೃತ ಸಂಕೇತಃ, ಇವ, ಶಾಕ್ಯ ಶ್ರಮಣಕಃ ಇತ್ಯಾದಿ ಚಾರುದತ್ತ ನಾಟಕದಲ್ಲಿರುವ ಶಬ್ದಗಳನ್ನು ಮೃಚ್ಛಕಟಿಕದಲ್ಲಿ ಯಾಕೆ ಬಿಟ್ಟೇಬಿಟ್ಟರೆಂಬ ಪ್ರಶ್ನೆಯನ್ನು ಎಬ್ಬಿಸದೇನೆ ಇರುವದು ನಮಗತಿ ಕುತೂಹಲ ಜನಕವಾಗಿದೆ. ಈ ಕೆಲವು ಶಬ್ದಗಳು ಕಾಲಿದಾಸ, ಭಾರವಿ, ದಂಡಿ, ಮಾಘ ಇಂಥವರ ಕಾವ್ಯಗಳಲ್ಲಿಯೂ ದೊರಕದಿರುವದೂ ಅತಿ ವಿಚಿತ್ರವಾಗಿದೆ.

ಇದೀಗ ಈ ಪ್ರಶ್ನೆಯನ್ನು ಪ್ರಸ್ತುತವಲ್ಲವೆಂದು ದಿಕ್ಪ್ರದರ್ಶನ ನ್ಯಾಯದಿಂದ ಇಷ್ಟರಲ್ಲಿಯೇ ಬಿಟ್ಟು, ಈತನು ದಾಕ್ಷಿಣಾತ್ಯನೋ ಎಂಬ ಪ್ರಶ್ನೆಯನ್ನು ಕೆರಳಿಸಿ, ಇರಬಹುದೆಂಬ ಅಭಿಪ್ರಾಯವನ್ನು ಮಂಡಿಸುತ್ತ, ಅದನ್ನು ಸಮರ್ಥಿಸುವರೆ ನಮ್ಮ ನೂತನವಾದ ಕಾರಣಗಳನ್ನು ವಾಚಕರ ಮುಂದಿಡುವೆವು. ಕಾತ್ಯಾಯನೀ ಶಬ್ದ ವನ್ನು ಬಾಲಚರಿತದಲ್ಲೀತನು ಕಾತ್ಯಾರ್ಯಯನೀ ಎಂಬ ರೇಫ ವಿಶಿಷ್ಟವಾಗಿಯೇ ಇರುವ ರೂಪವನ್ನೇ ಆದರಿಸುವದು, ಐರಾವತ ಶಬ್ದವನ್ನು ಐರಾವಣವೆಂತಲೇ ಬರೆದಿರುವದೂ, (ಋಗ್ವೇದದಲ್ಲಿಯೂ ಐ ರಾ ವ ತ ಶಬ್ದವು ಒಂದೇ ಸಲ IV. ೧೬-೪ ರಲ್ಲಿ ಬಂದಿರುವದು.) ಇವನು ಕೇರಳೀಯನಾಗಿರಬಹುದೆಂಬ ನಮ್ಮ ಸಂಶಯವನ್ನು ಬಲವತ್ತರಪಡಿಸುತ್ತದೆ. ಇಷ್ಟೇ ಅಲ್ಲ, ಬಾಲಚರಿತ ನಾಟಕದಲ್ಲಿ (ದೇವಧರ ಸಂಪಾದಿತ ನಾಟಕ ಚಕ್ರ, ೫೨೧ನೆಯ ಪುಟ) ಯದಿ, ಕಂಸೋ ವಾ ಭವತು, ಕಂಸಸ್ಯ, ಪಿತಾ, ಉಗ್ರಸೇನೋ, ವಾ, ಭವತು, ಅರ್ಥಾತ್, ಕಂಸನಾಗಲಿ, ಅವನ ಅಪ್ಪನಾಗಲಿ, ಎಂಬ ಪ್ರಯೋಗವನ್ನು ಪರಿಶೀಲಿಸಿದರೆ, ಪ್ರಾಯಶಃ ನಮ್ಮ ಕನ್ನಡ ಅಥವಾ ತಮಿಳು ಭಾಷೆಯ ವಿಶಿಷ್ಟ ವಾದ ಪ್ರಯೋಗವೇ ಎಂದು ಒಡೆದುಕಾಣುತ್ತದೆ. ಆಧುನಿಕ ಹಿಂದೀ ಭಾಷೆ

ಯಲ್ಲೇನೋ ಈ ತರದ ಪ್ರಯೋಗಗಳು ಸಾಕಷ್ಟಿದ್ದರೂ, ಅದನ್ನವರು ನಮ್ಮ ದಾಕ್ಷಿಣಾತ್ಯರಿಂದಲೇ ಕಡ ಪಡಕೊಂಡ ಪ್ರಯೋಗವೆಂದು ಸಮರ್ಥಿಸುವದೇ ಸಹಜ ವೆಂದು ನಮಗನಿಸುತ್ತದೆ. ಇದಂತಿರಲಿ, ಕರ್ಣಭಾರದ ನಾಂದೀಪದ್ಯದಲ್ಲಿ ನಾಲ್ಕು ಪಂಕ್ತಿ ಅಥವಾ ಪಾದಗಳಲ್ಲಿಯೂ ದ್ವಿತೀಯಾಕ್ಷರ ಪ್ರಾಸವು ಕಂಡು ಬರುವದೂ ಸಂಸ್ಕೃತ ಛಂದಸ್ಸುಗಳಲ್ಲಿ ಸಾಧಾರಣವಾಗಿ ಕಾಣದೆ, ಕನ್ನಡ, ತಮಿಳು, ತೆಲುಗು ವೃತ್ತಗಳಲ್ಲಿ ಮಾತ್ರ ಈ ತರದ ಪ್ರಾಸವನ್ನಾದರಿಸುವ ರೂಢಿಯೇ ವಿಶೇಷವಾಗಿರುವದೂ ಇದನ್ನೇ ಸೂಚಿಸುವಂತಿದೆ. ಪುರಂದರ ದಾಸರ ಪದಗಳಲ್ಲಂತೂ ಈ ತರದ ಪ್ರಾಸವೇ ಸರ್ವತ್ರಮಾನ್ಯವಾಗಿದೆ. ಉದಾಹರಣಾರ್ಥವಾಗಿ—

ಗೆಜ್ಜೆಯ ಕಾಲ್ಗಳ ಧ್ವನಿಯನು ತೋರುತ
ಹೆಜ್ಜೆಯ ಮ್ಯಾಲೆ ಹೆಜ್ಜೆಯನಿಕ್ಕುತ ।
ಸಜ್ಜನ ಸಾಧುಪೂಜೆಯ ವೇಳ್ಯಕೆ
ಮಜ್ಜಿಗೆಯೊಳಗಿನ ಬೆಂಣೆಯಂದದಿ ॥

ತಮಿಳು ಛಂದಸ್ಸಿನಲ್ಲಂತೂ ಇದನ್ನೇ ವಿಶೇಷವಾಗಿ ಆದರಿಸಿ ಇದಕ್ಕೆ 'ಎದುಹೈ' ಎಂಬ ಪ್ರತ್ಯೇಕ ಹೆಸರನ್ನೂ ಕಲ್ಪಿಸಿರುವರಂತೆ. ಭಾಸನ ಶ್ಲೋಕವಿದು—

ನರಮೃಗಪತಿವರ್ಷ್ಮಾಲೋಕನ ಭ್ರಾಂತನಾರೀ
ನರದನುಜ ಸುಪರ್ವ ವ್ರಾತಪಾತಾಲ ಲೋಕಃ ।
ಕರಜಕುಲಿಶ ಪಾಲೀಭಿನ್ನ ದೈತ್ಯೇಂದ್ರವಕ್ಷಾಃ
ಸುರರಿಪುಬಲ ಹಂತಾ ಶ್ರೀ ಧರೋಽಸ್ತು ಶ್ರಿಯೇ ವಃ ॥

ಸಾಲದ್ದಕ್ಕೆ, ಭಾಗವತ ಪುರಾಣದ ಕಥೆಯನ್ನೂ ಬಾಲಚರಿತದ ಕಥೆಯನ್ನೂ ಹೋಲಿಸಿದರೆ ಸ್ವಲ್ಪ ಭೇದವು ಕಂಡುಬರುವದಷ್ಟೆ. ಅಂದರೆ ನಮ್ಮ ಪುರಾಣದ ಪ್ರಕಾರ ಶ್ರೀಕೃಷ್ಣನು ಎಂಟನೇ ಗರ್ಭವಾದರೆ, ಭಾಸನ ಕಥೆ ಪ್ರಕಾರ ಏಳನೆಯ ದೀರ್ಘಾಯು, ನಾಟಕದಲ್ಲಿ ಮಧೂಕ ಋಷಿಯ ಶಾಪದಿಂದ ಕಂಸನಿಗೆ ಮರಣವು ಸೂಚಿತವಾದುದು, ಭಾಗವತದ ಕಥೆಯಿಂದ ಅಶರೀರವಾಣಿಯಿಂದಲ್ಲ, ಇತ್ಯಾದಿ ಭಾಸನಕಥೆಯ ಭಾಗಗಳು ಜೈನರ ನೇಮಿನಾಥ ಪುರಾಣದ ಕಥೆಯನ್ನು ಹೋಲುವದನ್ನೂ ಪರಿಶೀಲಿಸಿದಲ್ಲಿ ಈ ಕವಿಯು ದಾಕ್ಷಿಣಾತ್ಯನೇ ಇದ್ದು ಜೈನ

ಮತೀಯನೋ ಅಥವಾ ಜೈನರಾಜರ ಆಶ್ರಯದಲ್ಲಿದ್ದನೋ ಎಂಬ ಇನ್ನೊಂದು ಸಂಶಯವೂ ತಲೆದೋರುವದು. ಸ್ವಪ್ನವಾಸವದತ್ತ ನಾಟಕದಲ್ಲಿ ವಿದೂಷಕನ ಬಾಯಿಯಿಂದ (೪ನೆಯ ಅಂಕದ ಆದಿಯಲ್ಲಿ) ಉತ್ತರ ಕುರುವಾಸವನ್ನು ಸ್ವರ್ಗ ತುಲ್ಯವಾಗಿ ವರ್ಣಿಸುವದೂ, ಬಲರಾಮನಿಗೇ ಅದೇ ನಾಟಕದ ನಾಂದಿಯಲ್ಲಿ ನಮಸ್ಕಾರ ಸಲ್ಲಿಸಿದುದನ್ನೂ ಪರಿಶೀಲಿಸಿದರೆ ಈ ಸಂಶಯಕ್ಕಿನ್ನಷ್ಟು ಪುಷ್ಟಿ ಕೊಟ್ಟಂತಾಗುವುದು. ಆದರೆ ಎಲ್ಲಿಯೂ ಜೈನರನ್ನು ಬಾಯಿಬಿಟ್ಟು ಹೊಗಳದೆ, ಸನಾತನವಾದ ವೈದಿಕ ಧರ್ಮಾವಲಂಬಿಯಾಗಿಯೇ ತೋರುವನು. ಪೈಶಾಚಿಕ ಭಾಷೆಯಲ್ಲಿ ನಿರ್ಮಿತವಾದ ಬೃಹತ್ಕಥೆ–ಇದೇ ಪ್ರಾಯಶಃ ತಮಿಳರ ಪೆರುಂಗತ್ತೈ ಆಗಿರಬಹುದೋ ?–ಯನ್ನ ಇವನು ಕಂಡಿದ್ದರೂ ಇರಬಹುದು, ಅದರ ಆಧಾರ ದಿಂದ ಚಾರುದತ್ತ, ಪ್ರತಿಜ್ಞಾ ಯೌಗಂಧರಾಯಣ, ಸ್ವಪ್ನವಾಸವದತ್ತೆ, ಅವಿಮಾರಕಗಳೆಂಬ ನಾಲ್ಕು ನಾಟಕಗಳನ್ನು ರಚಿಸಿರುವನು. ತಮಿಳಿ ನಲ್ಲಿ ಪ್ರಖ್ಯಾತ ಪಂಡಿತರಾಗಿ ಈ ಶತಮಾನದ ಆದಿಯಲ್ಲಿ ಜೀವಿಸಿದ್ದ ಪೂರ್ಣಲಿಂಗಂಪಿಳ್ಳೆಯೆಂಬವರಂತೂ ಪೈಶಾಚಿಕ ಭಾಷೆಯೇ ತಮಿಳೆಂದೂ, ಭಾಸನ ಕಥೆಯೂ ಇದನ್ನೇ ಸರ್ವಾತ್ಮನಾ ಹೋಲುವದೆಂದೂ ಮುಕ್ತಕಂಠವಾಗಿ ವಾದಿಸಿದ್ದಾರೆ. ಮಹಾಮಹೋಪಾಧ್ಯಾಯ ಸ್ವಾಮಿನಾಥ ಅಯ್ಯರರೆಂಬ ಇನ್ನೊಬ್ಬ ತಮಿಳು ಉದ್ದಾಮ ಪಂಡಿತರೂ (ಇವರೂ ಹತ್ತಿಪ್ಪತ್ತು ವರ್ಷಗಳ ಮುಂಚೆಯೇ ಕಣ್ಮರೆಯಾದದ್ದು) ಇವರ ಅಭಿಪ್ರಾಯ ಅಕ್ಷರಶಃ ಅನುಮೋದಿಸ ದಿದ್ದರೂ, ಭಾಸನ ಕಥೆಗಳಿಗೂ ತಾನು ಎಂದೋ ಕೇಳಿದ್ದ ಪೆರುಂಗತ್ತೈ ಎಂಬದರ ಕೆಲವಂಶಗಳಿಗೂ ಸಾಮ್ಯವನ್ನೆತ್ತಿ ತೋರಿಸಿರುವರೆಂದು ನಮ್ಮ ಗುಂಡಪ್ಪನವರು ಸಂಪಾದಿಸಿದ ಪ್ರತಿಜ್ಞೆ ನಾಟಕದ ಪ್ರಸ್ತಾವನೆಯಲ್ಲಿ ಉದಹರಿಸಿದ್ದಾರೆ. ಅದಂತಿರಲಿ, ಪ್ರಸ್ತುತವಾದ ವಿಷಯಕ್ಕೆ ಬಂದರೆ, ಈ ಆಧಾರಗಳನ್ನೆಲ್ಲಾ ಕ್ರೋಡೀಕರಿಸಿದರೆ ಭಾಸನು ದಾಕ್ಷಿಣಾತ್ಯನಾಗಿರಬಹುದೋ ಎಂಬ ಸಂಶಯವೇ ಬೇರೂರುವಂತಿದೆ. ಪ್ರಾಯಶಃ ರಾಜರ ಆಶ್ರಯಕ್ಕೆ ಉತ್ತರದಲ್ಲಿಯೇ ನೆಲೆಸಿ, ದಕ್ಷಿಣವನ್ನು ಸಂಪೂರ್ಣ ತೊರೆದು, ಅದರ ಹೆಚ್ಚಿನ ಸಂಪರ್ಕವಿಲ್ಲದೆ, ಅವುಗಳ ವರ್ಣನೆ ಅನಾವಶ್ಯಕ (ತನ್ನ ನಾಟಕಗಳಲ್ಲಿ) ಎಂದು ಉಪೇಕ್ಷಿಸಿದನೋ ತಿಳಿಯದಾಗಿದೆ.

೨

ಭಾಸನ ೧೩ ನಾಟಕಗಳಲ್ಲಿ ತೋರಿಬರುವ ಪ್ರಾಚೀನ ಪ್ರಯೋಗಗಳು

೧೯೧೨ ರಿಂದ ೧೯೧೫ರ ವರೆಗೆ ಮಹಾ ಮಹೋಪಾಧ್ಯಾಯ ಗಣಪತಿ ಶಾಸ್ತ್ರಿಗಳು ೧೩ ನಾಟಕಗಳನ್ನು ಅನಂತಶಯನದಲ್ಲಿ ಭಾಸನವೆಂದು ಪ್ರಕಟಿಸಿದರು. ಇವು ಕಾಲಿದಾಸನು ಮಾಲವಿಕಾಗ್ನಿಮಿತ್ರದಲ್ಲಿ ಪ್ರಥಿತಯಶಸ್ಕನೆಂದು ಕೊಂಡಾಡಿದ ಪ್ರಾಚೀನ ಭಾಸನ ನಾಟಕಗಳೋ ಅಥವಾ ಅವುಗಳ ನಾಟಕ ಪ್ರತಿಗಳೋ ಎಂಬ ಸಮಸ್ಯೆಯೊಂದು ಇನ್ನೂ ನಿಷ್ಕರ್ಷಿಸಲಾಗದ ಒಗಟಾಗಿದೆ. ಈ ನಾಟಕಗಳಂತೂ ಅತೀವ ಜನಪ್ರಿಯಗಳಾಗಿ ಭಾರತದೇಶದ ದಕ್ಷಿಣೋತ್ತರ ಸರ್ವಭಾಷೆಗಳಲ್ಲಿ ಮಾತ್ರವಲ್ಲದೆ, ಜರ್ಮನ್, ಫ್ರೆಂಚ್, ಇಟೇಲಿಯನ್, ನೋರ್ವೆಜಿಯನ್, ಆದಿ ಯುರೋಪೀಯ ಭಾಷೆಗಳಲ್ಲಿಯೂ ಪರಿವರ್ತಿತವಾಗಿರುವುದನ್ನೂ ಯೋಚಿಸಿದರೆ ಇವು ಪ್ರಾಚೀನ ಭಾಸನ ನಾಟಕಗಳೇ ಎಂಬ ಸಂಶಯವೇ ಬಲವತ್ತರವಾಗುವದು. ಈಗ ಇವನ ಪ್ರಾಚೀನ ಮತ್ತು ಅಪೂರ್ವ ಪ್ರಯೋಗಗಳ ಆಧಾರದಿಂದ ಇವನು ವಾಲ್ಮೀಕಿ, ವ್ಯಾಸಾದಿ, ಅತಿ ಪ್ರಾಚೀನ ಕವಿಗಳ ಸಾಲಿನವನೆಂದೂ, ಅವರಿಗೆ ಅತಿ ಸಮೀಪವಾದ ಕ್ರಿಸ್ತುಪೂರ್ವ ಎರಡನೆಯ ಶತಮಾನದಲ್ಲಿದ್ದಿರಬಹುದೆಂದೂ ಊಹಿಸಬಹುದಾಗಿದೆ. ಅಭಿನವಗುಪ್ತ ಭಗವತ್ಪಾದರಿಂದ ರಚಿತವಾದ, **'ಅಭಿನವ ಭಾರತೀ'** ಎಂಬ ಭರತನಾಟ್ಯ ಶಾಸ್ತ್ರದ ವ್ಯಾಖ್ಯಾನದಲ್ಲಿ(ಗಾಯಕವಾಡ Oriental Series ನಲ್ಲಿ ಸಂಪಾದಿತ ಪ್ರತಿ Vol. II ಪುಟ ೩೭೦ರಲ್ಲಿ, 'ತ್ರೇತಾಯುಗಂ ತದ್ಧಿ ನ ಮೈಥಿಲೀ ಸಾ' ಎಂದುದಾಹೃತವಾದ ಶ್ಲೋಕವು ನಮ್ಮ ರಾಮಾಯಣ ನಾಟಕಗಳಲ್ಲಿ ತೋರದಿದ್ದರೂ ಇನ್ನೂ ಉಪಲಬ್ಧವಾಗದಿರುವ ಯಾವುದೋ ಒಂದು ನಾಟಕದಲ್ಲಿರಬಹುದಷ್ಟೆ. ಅದಂತಿರಲಿ. ಇದೇ Vol. II ಪುಟ ೩೬೨ರಲ್ಲಿ, ಅಭಿನವ ಗುಪ್ತರ ವ್ಯಾಖ್ಯಾನದಲ್ಲಿ **'ಲೇಶ'** ವೆಂಬುದನ್ನು ಉದಾಹರಿಸುವ ಸಂದರ್ಭದಲ್ಲಿ

'ಅವಿಮಾರಕ'ವೆಂಬ ನಾಟಕವನ್ನುದಾಹರಿಸಿ ಈ ಕೆಳಗಿನ ಸಂವಾದವನ್ನು ನಾವು ಕಾಣುವೆವು.

ಲೇಶೋ ಯಥಾಽವಿಮಾರಕೇ ದ್ವಿತೀಯೇಽಂಕೇ ಧಾತ್ರೀ ನಾಯಕಮಾಹ—

ಧಾತ್ರೀ : ಆರ್ಯ, ಕಿಂ - ಚಿಂತ್ಯತೇ ?

ಅವಿಮಾರಕ : ಭವತಿ, ಶಾಸ್ತ್ರಂ ಚಿಂತ್ಯತೇ ?

ಧಾತ್ರೀ : ಕಿಂ ನಾಮೈತತ್ ಶಾಸ್ತ್ರಂ ಚಿಂತ್ಯತೇ ?

ಅವಿ : ಭವತಿ, ಯೋಗಶಾಸ್ತ್ರಂ ಚಿಂತ್ಯತೇ ?

ಧಾತ್ರೀ : (ಸಸ್ಮಿತಂ) - ಪ್ರತಿಗೃಹೀತಂ. ಮಂಗಲ ವಚನಂ! ಯೋಗ - ಶಾಸ್ತ್ರಮೇವ ಭವತು.

ಅವಿ : ಕೋ ನು ವಾಕ್ಯಾರ್ಥಃ ? ಅನ್ಯದಪ್ಯಭಿಲಾಪವಶಾತ್. ಅನ್ಯಥಾ ಸಂಭಾವಯಾಮಿ—

ಈ ಸಂವಾದವು ದೇವಧರ ಸಂಪಾದಿತವಾದ ಭಾಸನ ನಾಟಕ ಚಕ್ರದಲ್ಲಿ ೧೨೬ನೆಯ ಪುಟದಲ್ಲಿ ಅಕ್ಷರಶಃ ಬರುತ್ತದೆ. ಹೀಗೆಯೇ ೩೬೦ನೆಯ ಪುಟದಲ್ಲಿ ಪ್ರಸಿದ್ಧಿಯನ್ನುದಾಹರಿಸುವ ಸಂದರ್ಭದಲ್ಲಿ ಈ ಕೆಳಗಿನ ಇನ್ನೊಂದು ಸಂವಾದವನ್ನು ನಾವು ಓದುತ್ತೇವೆ. – ಪ್ರಸಿದ್ಧಿಃ ಪ್ರಸಾಧಕೈಃ ಪ್ರಕೃಷ್ಟ ಸಾಧಕೈಃ ಪೂರ್ವಮೇವ ಸಿದ್ಧೈಃ ಯಥಾ ಗದಾಯುದ್ಧೇ. ಬಲದೇವಃ ದುರ್ಯೋಧನಮಾಹ—

ಬಲದೇವ : ಭೀಮಸೇನ ಇದಾನೀಂ, ತವ ಯುದ್ಧವಂಚನಾಮುತ್ಪಾದ್ಯ ಸ್ಥಾಸ್ಯತಿ.

ದುರ್ಯೋಧನ : ಕಿಂ ಚಾಹಂ ಭೀಮಸೇನೇನ ವಂಚಿತಃ ?

ಬಲದೇವ : ಅಥ ಕೇನಭವಾನೇವಂವಿಧಃ ಕೃತಃ ?

ದುರ್ಯೋ : ಶ್ರೂಯತಾಂ.

ಯೇನೇಂದ್ರಸ್ಯ ಸಪಾರಿಜಾತಕತರುರ್ಮಾನೇನ ತುಲ್ಯಂ ಹೃತೋ
ದಿವ್ಯಂ ವರ್ಷಸಹಸ್ರಮರ್ಣವಜಲೇ ಸುಪ್ತಶ್ಚಯೋ ಲೀಲಯಾ।
ದೀಪ್ತಾ್ಯ ಭೀಮಗದಾಂ ಪ್ರವಿಶ್ಯ ಸಹಸಾ ನಿರ್ವ್ಯಾಜಯುದ್ಧಪ್ರಿಯಃ
ತೇನಾಹಂ ಜಗತಾಂ ಪ್ರಿಯೇಣ ಹರಿಣಾ ಮೃತ್ಯೋಃ ಪ್ರತಿಗ್ರಾಹಿತಃ ||

ಈ ಗದಾಯುದ್ಧದಿಂದ ಉದಾಹೃತವಾದ ಸಂವಾದವು ಅಕ್ಷರಶಃ ಭಾಸನ

ಊರುಭಂಗದಲ್ಲಿ ೧೯೮ ಪುಟದಲ್ಲಿ ತೋರುತ್ತದೆ. ೩ನೆಯ ಪಾದದಲ್ಲಿ 'ದೀಪ್ತ್ಯಾ' ಇದರ ಸ್ಥಾನದಲ್ಲಿ ಅಲ್ಲಿ 'ತೀವ್ರಾಂ' ಎಂದೂ ೪ನೆಯ ಪಾದದಲ್ಲಿ 'ಜಗತಃ' ಎಂದು ಏಕವಚನ ಪಾಠವೂ ಮಾತ್ರ ಪಾಠಭೇದ ತೋರುತ್ತದೆ. ಅಭಿನವ ಗುಪ್ತನ ಕಾಲದಲ್ಲಿ ಈ ಪಾಠವೇ ಪ್ರತಿಯಲ್ಲಿದ್ದಿರಬಹುದು. ಇಲ್ಲಿಯ ವಿಶೇಷ ವೆಂದರೆ ಊರುಭಂಗ ನಾಟಕಕ್ಕೆ ಆಗ ಗದಾಯುದ್ಧವೆಂಬ ಪರ್ಯಾಯ ನಾಮವಿತ್ತೋ ಏನೋ, ಇದನ್ನೇ ಕನ್ನಡ ಸಾಹಿತ್ಯದಲ್ಲಿ ರನ್ನನು ಅನುಕರಿಸಿ ಅದೇ ಹೆಸರಿಟ್ಟಿರಬೇಕು ಅದಿರಲಿ, ಇದೇ Vol. IIರ ೩೫೨ನೆಯ ಪುಟದಲ್ಲಿ-

> ಉಪದಿಷ್ಟಂ ಯಥಾಽವಿಮಾರಕೇ ಪ್ರಥಮೇಽಂಕೇ - ರಾಜಾ–
> ಧರ್ಮಃಪ್ರಾಗೇವ ಸಚಿವ ಗತ ಮತಿಃ ಪ್ರೇಕ್ಷಿತವ್ಯಾ ಸ್ವಬುದ್ಧ್ಯಾ
> ಪ್ರಚ್ಛಾದ್ಯೌರಾಗದೋಷ ಮೃದುಪರುಷಗುಣಾ ಕಾಲಯೋಗೇನ
> ಕಾರ್ಯೌಜ್ಞೇಯಂ ಲೋಕಾನುವೃತ್ತಂ ಪರಚರನಯನೈಃ ಮಂಡಲಂ
> ಪ್ರೇಕ್ಷಿತವ್ಯಂ ರಕ್ಷ್ಯೋ ಯತ್ನಾದಿಹಾತ್ಮಾ ರಣಶಿರಸಿ ಪುನಃ ಸೋಽಪಿ
> ನಾವೇಕ್ಷಿತವ್ಯಃ ||

ಈ ಶ್ಲೋಕವೂಕೂಡಾ ಹಾಗೆಯೇ ಭಾಸನ ನಾಟಕ ಚಕ್ರದ ೧೧೭ನೆಯ ಪುಟದಲ್ಲಿ ಬಂದಿದೆ. ಇದೇ ರೀತಿಯಲ್ಲಿ ೧೯೧೯ ನೆಯ ಇಸ್ವಿಯಲ್ಲಿ ಸಂಪಾದಿತ ವಾದ Indian Historical Quarterly ಸಂಚಿಕೆಯಲ್ಲಿ ಪಂಡಿತ ವರ್ಯರಾದ ಶ್ರೀ ವೆಂಕಟ್ರಾಮಶರ್ಮರು **ಶಾಕುಂತಲ ವ್ಯಾಖ್ಯಾ** ಎಂಬ ಅಮುದ್ರಿತವಾದ ಗ್ರಂಥದಲ್ಲಿಯೂ ಈ ನಾಟಕಗಳ ಅನೇಕ ಶ್ಲೋಕಗಳು ಅಕ್ಷರಶಃ ಉದಾಹೃತವಾಗಿದೆಯೆಂದು ಸಾಧಿಸಿರುವರು.

ಇನ್ನು ಇಲ್ಲಿ ಅಭಿನವ ಭಾರತಿಯಿಂದ ಉದಾಹೃತವಾದ ಅವಿಮಾರಕದ ಎರಡನೆಯ ಅಂಕದ ಸಂದರ್ಭವನ್ನೇ ಪರಿಶೀಲಿಸುವಾ. ಅಲ್ಲಿ 'ಯೋಗ ಶಾಸ್ತ್ರಂ ಚಿಂತ್ಯತೇ' ಎಂದಿದೆಯಷ್ಟೆ. ಪ್ರಾಯಶಃ ಆಗ ಮಹರ್ಷಿ ಪತಂಜಲಿ ಪ್ರಣೀತ ವಾದ ಯೋಗಶಾಸ್ತ್ರವಿನ್ನೂ ಪ್ರಚಾರದಲ್ಲಿ ಬಂದಿದ್ದಿಲ್ಲ. ಪತಂಜಲಿಯ ಕಾಲ ಕ್ರಿಸ್ತುಪೂರ್ವ ೧೫೦ ಅಷ್ಟೆ. ಪ್ರತಿಮಾನಾಟಕದಲ್ಲಿ ೫ ನೆಯ ಅಂಕದಲ್ಲಿ (ಪುಟ – ೨೯೬)–ಸಾಂಗೋಪಾಂಗಂ – ವೇದ ಮಧೀಯೇ – ಮಾನವೀಯಂ - ಧರ್ಮಶಾಸ್ತ್ರಂ ಮಾಹೇಶ್ವರಂ ಯೋಗಶಾಸ್ತ್ರಂ ಬಾರ್ಹಸ್ಪತ್ಯ ಮರ್ಥಶಾಸ್ತ್ರಂ, ಮೇಧಾತಿಥೇಃ ನ್ಯಾಯಶಾಸ್ತ್ರಂ, ಪ್ರಾಚೇತಸಂ ಶ್ರಾದ್ಧಕಲ್ಪಂ ಚ - ಎಂಬಲ್ಲಿಯೂ ಪತಂಜಲಿಯ ನಿರ್ದೇಶವೇ ಬಾರದೆ ಮಾಹೇಶ್ವರನೆಂಬ ಶಾಸ್ತ್ರಕಾರನ ಹೆಸರೇ ಬಂದಿದೆ. ಹೀಗೆಯೇ ಬೇರೆ ಶಾಸ್ತ್ರಕಾರರನ್ನುಲ್ಲೇಖಿಸಿದಾಗಲೂ ಈಗ ಉಪಲಬ್ಧ ವಾಗದ ಪ್ರಾಚೀನರ ಹೆಸರುಗಳೇ ಬಂದಿವೆ. ಮಾನವೀಯ ಧರ್ಮಶಾಸ್ತ್ರವೂ

ಈಗಿನ ಮನುಸ್ಮೃತಿಯಾಗಿರಲಾರದು. ಬಾರ್ಹಸ್ಪತ್ಯ ಅರ್ಥಶಾಸ್ತ್ರವೆಂಬುದು ಈಗ Dr. Roma ಎಂಬವರು ಲಾಹೋರಿ ನಲ್ಲಿ ಸಂಪಾದಿಸಿ ಪ್ರಕಟಿಸಿದುದು ಖಂಡಿತವಾಗಿಯೂ ಆಗಿರಲಾರದು.

ಇದೇ ಧೋರಣೆಯಲ್ಲಿ ಬೇರೆ ನಾಟಕಗಳನ್ನೋದುವಾಗ ಪಂಚರಾತ್ರ II. ೪೬ನೆಯ ಶ್ಲೋಕದಲ್ಲಿ - **ಇಷ್ಟಾಪತ್ತ್ಯಾ** ಕಿಂ ತು ದುಃಖೇ ಹಿ ಮಗ್ನಾ ಪಶ್ಯತ್ಯೇನಂ. ದ್ರೌಪದೀತ್ಯಾಹೃತೋಯಂ - ಎಂದಿದೆ. ಇಲ್ಲಿ 'ಇಷ್ಟಾಪತ್ತ್ಯಾ' ಎಂಬ ಪದವನ್ನು 'ಇಷ್ಟಸ್ಯ' ಆಪತ್ತಿಃ ಅರ್ಥಾತ್ ಸಂಭವಃ ಎಂದು ಯೌಗಿಕಾರ್ಥವನ್ನೇ ಹಿಡಿದು ಅರ್ಥ ಹೇಳಬೇಕಷ್ಟೇ ಹೊರತು ತರ್ಕಶಾಸ್ತ್ರದಲ್ಲಿ ಈಗ 'ಕಂಡುಬರುವ ರೂಢವಾದ ಅರ್ಥವು ಖಂಡಿತವಾಗಿಯೂ ಸಮಂಜಸವಾಗಲಾರದು. ಈಗಲಾದರೋ ವಾದದಲ್ಲಿ ಜಾರಿಬಿದ್ದ ಸಂದರ್ಭ, ಎದುರಾಳಿಯಾದವನಿಗೆ ಅನುಕೂಲವಾದ ಪ್ರಸಂಗವೆಂದು ತರ್ಕಶಾಸ್ತ್ರ ಸಮ್ಮತವಾದ ಅರ್ಥವಷ್ಟೆ. ಹೀಗೆಯೇ ಭಾಸನ **'ಮಧ್ಯಮ'** ಎಂಬ ಶಬ್ದವನ್ನು ಪರಿಶೀಲಿಸಿದರೆ ಅಮರ ಕೋಶದಲ್ಲಿ 'ಮಧ್ಯಮಾ' ಎಂಬ ಸ್ತ್ರೀಲಿಂಗ ಎಂಬ ವಿಶಿಷ್ಟ ಶಬ್ದಕ್ಕೆ ಕೊಟ್ಟ ಅರ್ಥವನ್ನೇ ಹೊಂದಿಕೊಂಡು ಪ್ರತಿಪಾದಿಸಬೇಕಾಗುತ್ತದೆ. 'ಸ್ಯಾನ್ಮಧ್ಯಮಾ ದೃಷ್ಟರಜಾಃ' ಎಂದು ಇದ್ದರೆ ಪ್ರಥಮ ರಜೋದರ್ಶನವೆಂದು ಟೀಕಾಕಾರನು ಹೇಳಿದರೂ, ವಾಲ್ಮೀಕ್ಯಾದಿಗಳ ಪ್ರಯೋಗವನ್ನು ಪರಿಶೀಲಿಸಿದರೆ ರಜಸ್ವಲೆಯಾಗುವ ತರುಣಿ ಉತ್ತಮ ನಾಯಿಕೆ-ಮುಟ್ಟುಸ್ನಾನ ನಿಂತುಹೋದ ವಯೋವೃದ್ಧೆಯಾದ ಹೆಂಗಸಲ್ಲ, ಎಂಬ ಅರ್ಥದಲ್ಲಿಯೇ ಈ ಶಬ್ದವನ್ನು ವಾಲ್ಮೀಕಿಯಲ್ಲಿ ನಾವು ಕಾಣುತ್ತೇವೆ. 'ಸುಮಧ್ಯಮಾ' ಅಥವಾ 'ಮಧ್ಯಮಾ' ಎಂಬ ಪದವನ್ನು ಕೈಕೇಯಿ, ಸೀತೆ, ಅಥವಾ ತಾರೆಯರಿಗೆ ಮಾತ್ರ ವಿಶೇಷಿಸಿರುವದನ್ನು ನಾವು ವಾಲ್ಮೀಕಿಯಲ್ಲಿ ಕಾಣುವೆವು. ಕೌಸಲ್ಯಾ ಸುಮಿತ್ರೆಯರಿಗಾದರೋ ಈ ಶಬ್ದವನ್ನು ಪಯೋಗಿಸಲೇ ಇಲ್ಲ. ಇವರಿಬ್ಬರಿಗೆ ಎಂದೋ ಮುಟ್ಟುಸ್ನಾನ ನಿಂತಿತ್ತು. ಅವರಿಗೆ ಮಕ್ಕಳಾಗಿದ್ದರೆ ಅದು ದೈವದತ್ತವಾದ ಪಾಯಸದ ಅನುಗ್ರಹದಿಂದ. ಕೈಕೇಯಿಯಾದರೋ ತನ್ನ ಮಾಧ್ಯಮ ವಯಸ್ಸಿನಿಂದ ವೃದ್ಧರಾಜನಿಗೆ ವಿಷವಾದ ಕಥೆ ನಮಗೆ ಗೊತ್ತಿದೆ. ಈ ಅರ್ಥ ವಾಲ್ಮೀಕಿ, ಭಾಸರಿಗೇನೆ ಮಾತ್ರ ಗೊತ್ತಿದ್ದು, ಅನಂತರ ಕೋಶಗಳಲ್ಲಿಯೂ ಲುಪ್ತವಾದುದು ವಿಚಿತ್ರವಾಗಿದೆ. ಈ 'ಮಧ್ಯಮಾ' ಪದಕ್ಕೆ ಅಪಾರ್ಥವನ್ನು ಮಾಡಿ, ಕೈಕೇಯಿಯನ್ನು ಕೌಸಲ್ಯಾ ಸುಮಿತ್ರೆಯರ ನಡುವಿನಲ್ಲಿ ಸೇರಿಸಿ, ಅವರ ವಯಸ್ಸಿನ ಬದಲಾವಣೆಯನ್ನು ಕೂಡ ನಾವು ಮಾಡಿಬಿಟ್ಟಿದ್ದೇವೆ. ಅವಿಮಾರಕ ನಾಟಕದ II. ೧೧ನೆಯ ಶ್ಲೋಕದಲ್ಲಿ 'ವಯಮಪಿ ಭುಜಾಯುಧ ಪ್ರಧಾನಾಃ' ಎಂದು ಹೇಳುವಾಗ

ಪುಲ್ಲಿಂಗದಲ್ಲಿ ಉಪಯುಕ್ತವಾದ ಮಧ್ಯಮ ಪದದ ಅಪೂರ್ವವಾದ ಅರ್ಥವನ್ನೂ ನಾವು ಕಾಣುತ್ತೇವೆ. ಭಾಸನ ನಾಯಕರೆಲ್ಲರೂ ಈ ತರದ 'ಮಧ್ಯಮ'ರಾಗಿ ಘಟೋತ್ಕಚನಂತೆ - ದರ್ಪೋಪ್ತೋ ಮುಷ್ಟಿಮುದ್ಯಮ್ಯ ತಿಷ್ಠತ್ಯೇಷ ಘಟೋತ್ಕಚಃ। ಉತ್ತಿಷ್ಠತು ಪ್ರಮಾನ್. ಕಶ್ಚಿತ್ ಗಂತುಮಿಚ್ಛೇದ್ಯಮಾಲಯಂ॥ ಎಂದಾರ್ಭಟಿಸುವದನ್ನು ಕೇಳಿ ನಾವು ಚಮತ್ಕೃತರಾಗುತ್ತೇವೆ.

ಆರ್ಯಪುತ್ರವೆಂಬ ಪದವನ್ನು ರಾಜ ಅಥವಾ ಸ್ವಾಮಿಯ ಅರ್ಥದಲ್ಲಿ ಭಟನೆಂಬ ಸೇವಕನು 'ಯದಾಜ್ಞಾಪಯತ್ಯಾರ್ಯಪುತ್ರಃ' ಎಂದು ಬಾಲಚರಿತ Vರಲ್ಲಿ ಉಪಯೋಗಿಸಿರುವನು. ಅಶೋಕನ ಶಿಲಾಶಾಸನಗಳಲ್ಲಿಯೂ ಇದೇ ಅರ್ಥಬಂದಿದೆ. (ಸಿದ್ಧಾಪುರ ಶಿಲಾಶಾಸನ).

ಇನ್ನೊಂದು ಪ್ರಾಚೀನ ಪದವೆಂದರೆ 'ದೇವಾಲಯ'; ಅಮರಕೋಶದಲ್ಲಿ ದೇವಾಲಯವನ್ನು ತ್ರಿದಶಾಲಯ ಅರ್ಥಾತ್ ಸ್ವರ್ಗವೆಂದೇ ಪರಿಗಣಿಸಿರುವರಷ್ಟೆ. ಈಗಲಾದರೋ ದೇವಾಲಯವೆಂದರೆ ದೇವಸ್ಥಾನವೆಂದು ಭೂಮಿಯಲ್ಲಿ ದೇವರಿಗಾಗಿ ಕಟ್ಟಿಸಿದ ಮನೆಯೆಂದರ್ಥ. ಮನುಷ್ಯ ದೇಹವನ್ನು ದೇವಾಲಯವೆಂದು ಪರಿಗಣಿಸಿ ಶ್ರೀ ಶಂಕರಾಚಾರ್ಯರೂ, ವರಾಹ ಮಿಹಿರನು ಬೃಹಜ್ಜಾತಕದ ಮೂವತ್ತೆಂಟನೆಯ ಅಧ್ಯಾಯದಲ್ಲಿ ದೇವಾಲಯದಲ್ಲಿ ಪ್ರತಿಷ್ಠಿಸಿರುವ ಪ್ರತಿಮೆಗಳನ್ನು ಹೇಳುವಾಗಲೂ, ಈ ಶಬ್ದವು ಸ್ವರ್ಗದಿಂದ ಭೂಮಿಗೆ ಆಗಲೇ ಇಳಿದಾಗಿತ್ತೆಂದೂಹಿಸಬೇಕಾಗುತ್ತದಷ್ಟೆ. ಭಾಸನಾದರೋ ಪ್ರಾಚೀನ ಅರ್ಥವನ್ನೇ ಇಟ್ಟುಕೊಂಡು ಪಂಚರಾತ್ರ I. ೪ (ಏವಂ ಲೋಕಮುದಾರುಪೋಹ ಸಕಲಂ ದೇವಾಲಯಂ ತದ್ಗುಣೈಃ) ಉಪಯೋಗಿಸಿರುವನು. ಇವನ 'ಪ್ರತಿಮೆ' ಎಂಬ ನಾಟಕದ ಹೆಸರನ್ನು ಪರಿಶೀಲಿಸಿದಾಗ ವರಾಹಮಿಹಿರನಂತೆ ವಿವಿಧ ದೇವಾಲಯಗಳ ಪ್ರತಿಮೆಗಳನ್ನು ಇವನು ನಿರ್ದೇಶಿಸಿದಂತೆ ಇಲ್ಲ. ಹೀಗೆಯೇ ಅವನ ಪ್ರತಿಮಾಗೃಹ ಪ್ರತಿಜ್ಞಾ ನಾಟಕಗಳಲ್ಲಿ ಬಂದ ಅಗ್ನಿಗೃಹ, ಅದರ ಸುತ್ತಲಿರುವ ದೇವಕುಲ ಇತ್ಯಾದಿ ಪದಗಳನ್ನು ಪರಿಶೀಲಿಸಿದರೆ ಈಗಿನ ದೇವಾಲಯಗಳು ಆಗಲಿನ್ನೂ ಪ್ರಚಾರದಲ್ಲಿ ಬಂದಿದ್ದಿಲ್ಲವೆಂದೇ ಊಹಿಸಬೇಕಾಗುತ್ತದೆ. ಪಂಚರಾತ್ರ ಎಂಬ ನಾಟಕದ ಹೆಸರನ್ನಂತೂ ವಿಮರ್ಶಿಸಿದರೆ ಈಗಿನ ಪಾಂಚರಾತ್ರಾಗಮ ರೀತ್ಯಾ ಪ್ರತಿಷ್ಠಿತಗಳಾದ ಪ್ರತಿಮೆಗಳೂ, ದೇವಾಲಯಗಳೂ ರೂಢಿಯಲ್ಲಿ ಬರುವ ಬಹುಕಾಲದ ಮುಂಚೆಯೇ ಈ ನಾಟಕಗಳು ಪ್ರಚಾರದಲ್ಲಿ ಬಂದಿರಬೇಕಲ್ಲವೇ ?

ಇದೇ ರೀತಿಯಲ್ಲಿ ಭಾಸನ ಭಾಷೆಯನ್ನು ಪರಿಶೀಲಿಸಿದಲ್ಲಿ ಜೀವಂತವಾಗಿ ಬಳಕೆಯಲ್ಲಿದ್ದ ಭಾಷೆಯ ಪ್ರಯೋಗಗಳನ್ನೇ ನಾವು ಕಾಣುತ್ತೇವೆ. ಕಾಲಾನು

ಭಾಗದಲ್ಲಿ ಭಾಷೆಯು ಬಳಕೆಯಿಂದ ತಪ್ಪಿಹೋಗಿ ಅರ್ವಾಚೀನ ಕವಿಗಳಾದ ಭಾರವಿ, ವಿಶಾಖದತ್ತರ ಕಾವ್ಯಗಳಲ್ಲಿ ಜೀವಂತ ಭಾಷೆಯ ಕಳೆಯೇ ತೋರುವುದಿಲ್ಲವೆಂಬುದು ಸಹಜವೇ ಆಗಿದೆಯಷ್ಟೆ. ಈ ಜೀವಂತ ಭಾಷೆಯ ನಿದರ್ಶನವಾಗಿ ಕೆಲವು ಪ್ರಯೋಗಗಳನ್ನು ವಿಚಾರಿಸುವಾ. ಇವುಗಳಲ್ಲಿ **'ಚ'** ಮತ್ತು **'ವಾ'** ಎಂಬ ಸಮುಚ್ಚಾಯಕ ಶಬ್ದಗಳ ಪ್ರಯೋಗವು ಗಮನಾರ್ಹವಾಗಿದೆ. ಕೆಲವು ಉದಾಹರಣೆಗಳು :–

೧ ಯೇ ದುರ್ಬಲಾಶ್ಚ ಕೃಪಣಾಶ್ಚ ನಿರಾಶ್ರಯಾಶ್ಚ ತೃಪ್ತಶ್ಚ ಶರ್ಮ ಮೃಗಯಂತಿ

(ಪಂಚರಾತ್ರ ೧-೩೭)

ಇಲ್ಲಿ ದ್ರೋಣನು ಪಾಂಡವರಿಗೆ ಅವರ ಅರ್ಧರಾಜ್ಯವನ್ನು ಬೇಡುವಾಗ ಅವರ ದೀನಸ್ಥಿತಿಯನ್ನು ಪ್ರತ್ಯೇಕವಾಗಿ ಉಪಯುಕ್ತಗಳಾದ **'ಚ'** ಶಬ್ದಗಳಿಂದ ಸಹಾನುಭೂತಿಯನ್ನು ಹುಟ್ಟಿಸುವರೆ ಒತ್ತಿ ಹೇಳುವಂತಿದೆ.

೨ ವಾ ಶಬ್ದೇನ ಸಾವಶೇಷಮಿವ ತೇ ವಚನಂ.

(ಅಭಿಷೇಕ III.)

ಚ ಶಬ್ದದಿಂದ ನಿನ್ನ ಮಾತಿನಲ್ಲಿ ಏನೋ (ಕಿಲುಬು) ಬಾಕಿ ಇರುವದೇ ?

೩ ವಾಶಬ್ದೇನ ಅವಗತಮನ್ಯದಪ್ಯಸ್ತೀತಿ.

(ಪ್ರತಿಮಾ V.)

ವಾಶಬ್ದದಿಂದ ನಿನ್ನ (ರಾವಣನ)ಮಾತಿನಲ್ಲಿ ಏನೋ ಬಚ್ಚಿಟ್ಟುಕೊಂಡಂತೆ ಇದೆಯಲ್ಲಾ !

ಇದೇ ರೀತಿಯಲ್ಲಿ ಕಾಳಿದಾಸನ ಕೆಲವು ಪ್ರಯೋಗಗಳಲ್ಲಿ ಚಕಾರವು ಸಮಕಾಲಿಕ ಕ್ರಿಯೆಗಳನ್ನು ತೋರಿಸುವದು ಉದಾ–ತೇ ಚ ಪ್ರಾಪುರುದನ್ವಂತಂ ಬುಬುಧೇ ಚಾದಿಪೂರುಷಃ (ರಘುವಂಶ x ೬) ಭಾಸನ ಪ್ರಯೋಗಕ್ಕೆ ಅತೀ ಸದೃಶವಾದ ಪ್ರಯೋಗವೊಂದನ್ನು ಕುಮಾರ ಸಂಭವದಲ್ಲಿ III ೧೨ ತ್ವಂ ಸರ್ವತೋಗಾಮಿ ಚ ಸಾಧಕಂ ಚ ಎಂಬಲ್ಲಿ ಇಂದ್ರನು ಕಾಮನನ್ನು ಒತ್ತಿ ಹೊಗಳಿದ್ದಾಗಿದೆ. ಶತಮಾನಗಳು ದಾಟಿದಾನಂತರ ಭರ್ತೃಹರಿಯ ಕಾಲದಲ್ಲಿ (750A. D.) ಇದೇ ಚಕಾರವು ಅನೇಕಸಲ ಪ್ರಯುಕ್ತವಾದರೂ ಭಾಷೆಯ ಜೀವಂತ ಅವಸ್ಥೆಯ ಚಿಹ್ನೆಯೇನೂ ತೋರುವುದೇ ಇಲ್ಲ. ಉದಾ – 'ಧಿಕ್ತಾಂ ಚ ತಂ ಚ ಮದನಂ ಚ ಇಮಾಂ ಚ ಮ್ಹಾಂ ಚ' ಹೀಗೆಯೇ **'ಕಿಲ'** ಶಬ್ದವೂ ಅನ್ಯಕವಿಗಳಲ್ಲಿ ಸಾಧಾರಣವಾಗಿ ನಿರರ್ಥಕವಾಗಿ ಛಂದಃಪೂರಕವಾಗಿ ಮಾತ್ರ ತೋರಿದರೂ ಭಾಸನಲ್ಲಿ

ಪ್ರತಿಮಾ I ೨೩-ಯತ್ಸೃತೇ ಮಹತಿ ಕ್ಲೇಶೋ ರಾಜ್ಯೇ ಮೇ ನ ಮನೋ ರಥಃ। ವರ್ಷಾಣಿ **'ಕಿಲ'** ವಸ್ತವ್ಯಂ ಚತುರ್ದಶ ವನೇ ತ್ವಯಾ ಅರ್ಥಾತ್ ರಾಜ್ಯವು ಕೈಬಿಟ್ಟು ಹೋದುದಕ್ಕಾಗಿ ಪರಿತಪಿಸದಿದ್ದರೂ, **ಹದಿನಾಲ್ಕು ವರ್ಷ ಕಾಡಿನಲ್ಲಿ**ರುವದು **ಅತಿಕಷ್ಟ**ವಲ್ಲವೇ ? ಎಂಬ ಧ್ವನಿಯೂ ಒಡೆದು ಕಾಣುವುದಿಲ್ಲವೇ ? ಹೀಗೆಯೇ ಪ್ರಾಚೀನ ಪ್ರಾಕೃತ ಭಾಷೆಗೆ ಸಹಜವಾಗಿರುವ 'ಕ್ತ' ಪ್ರತ್ಯಯಾಂತ (past passive participle) ಗಳನ್ನು ಭಾವವಾಚಿಗಳಾಗಿ (root nouns) ಉಪಯೋಗಿಸಿದ್ದನ್ನು ಅಲ್ಲಲ್ಲಿ ಕಾಣುತ್ತೇವೆ. ಉದಾ – ವಿಭ್ರಷ್ಟ ಶಬ್ದವನ್ನು ವಿಭ್ರಂಶ ಶಬ್ದಾರ್ಥದಲ್ಲಿ 'ರಾಜ್ಯವಿಭ್ರಷ್ಟಕೃತ ಸಂತಾಪೇನ ಎಂದು ಪ್ರತಿಮಾ II ದ ವಿಷ್ಕಂಭದಲ್ಲಿ ನಾವು ಕಾಣುತ್ತೇವೆ. ಇವನ ನಾಟಕಗಳಲ್ಲಿ ಮಹಾರಾಷ್ಟ್ರೀ ಪ್ರಾಕೃತವನ್ನೂ ನಾವು ಕಾಣುವದೇ ಇಲ್ಲವೆಂದು ಪ್ರಾಕೃತ ಭಾಷಾಭಿಜ್ಞರು ವಾದಿಸಿರುವರು. ದಂಡಿಯು ಕಾವ್ಯಾದರ್ಶವನ್ನು 'ಪ್ರಕೃಷ್ಟಂ ಪ್ರಾಕೃತಂ ವಿದುಃ' ಎಂದು ೬ ನೆಯ ಶತಮಾನದಲ್ಲಿ ಇದನ್ನು ತುಂಬಾ ಹೊಗಳಿದ್ದಾನೆ. ಇವನಿಗಿಂತಲೂ ಭಾಸನು ಪ್ರಾಚೀನನೆಂದು ಇನ್ನು ಬೇರೆ ಹೇಳಬೇಕೇ ? ಡಾ. ಸುಕ್ಥಂಕರ ರೆಂಬ ಪ್ರಸಿದ್ಧ ವಿಮರ್ಶಕರ ಅಭಿಪ್ರಾಯವು ಹೀಗಿರುವುದು— The prakrit of these dramas revealed in an equally forcible manner a stage of development of middle Indian dialects older than that preserved in the classical drama. It also betrays affinities with the prakrit of the fragments of Asvaghosa's dramas, the sanskrit of the metrical portions of our plays is found to be linked with the language of the epics. (Analecta or collected writings of Dr. Sukthankar.) ಅರ್ಥಾತ್ ಅವರ ಅಭಿಪ್ರಾಯದಲ್ಲಿ ಭಾಸನ ಪ್ರಾಕೃತವು ಅಶ್ವಘೋಷನ ಭಾಷೆಯಷ್ಟೇ ಪ್ರಾಚೀನವಾಗಿರಬೇಕು.

ಇನ್ನು ಕೆಲವು ಅರ್ವಾಚೀನ ಕವಿಗಳಲ್ಲಿ ಸರ್ವಥಾ ಕಾಣದಿರುವ ಅಪೂರ್ವ ಪ್ರಯೋಗಗಳನ್ನು ಗಮನಿಸುವಾ.

೧. ಅಪರಿಚಯಾತ್ತು ನ ಶ್ಲಿಷ್ಯತೇ ಮೇ ಮನಸಿ (ಸ್ವಪ್ನ I.)
(ಅಸಾಧಾರಣವಾದ್ದರಿಂದ ಈ ಉಪಚಾರವು ನನಗೆ ಹಿಡಿಯುವದಿಲ್ಲ.

೨. ಅಕ್ಷೀಣಂ ಮಾಂ ಕುರು (ಪ್ರತಿಜ್ಞಾ IV.) (ನನ್ನ ಪ್ರಾರ್ಥನೆಯನ್ನು ಅಕ್ಷೀಣವಾಗಿ ಮಾಡು ಅಂದರೆ ಪಾಲಿಸು)

೩. ಅಹಂ ತವ ಪ್ರಭಾವೀ ನನು (ಪಂಚರಾತ್ರ I) (ನಿನ್ನ ಮೇಲೆ ಅಧಿಕಾರವು ನನಗಿಲ್ಲವೇ ?)

೪. ನ ಕಶ್ಚಿದ್ಯತ್ನವಾನ ಮಾತ್ಯಃ (ಸ್ವಪ್ನ I) (ಯಾರಾದರೂ ಅವನನ್ನು ಸಂತೈಸಲು) ಹೆಣಗಾಡಲಿಲ್ಲವೇ ?

ಇನ್ನು ಒಂದೆರಡು ಅಪಾಣಿನೀಯ ಪ್ರಯೋಗಗಳನ್ನು ಗಮನಿಸಿದಲ್ಲಿ ಇವನು ಪಾಣಿನಿಯ ಪ್ರಭಾವವು ವ್ಯಾಪ್ತವಾಗಿ ಆದೃತವಾಗುವ ಮುಂಚೆಯೇ – ಅಂದರೆ ಪತಂಜಲಿಗಿಂತಲೂ ಸ್ವಲ್ಪ ಮುಂಚೆಯೇ ಜೀವಿಸಿರಬಹುದೆಂದೂಹಿಸ ಬೇಕಾಗುತ್ತದೆ. ಉದಾ :—

೧. ಪಂಚರಾತ್ರ I : 'ಯದಿ ದಾತವ್ಯೇ ಕಿಮಸ್ಮಾಭಿಃ ಸಹ ಮಂತ್ರಯಸೇ' ಇಲ್ಲಿ 'ಯದಿ' ಶಬ್ದವನ್ನು 'ಸತಿ ಸಪ್ತಮಿ'ಯೊಡನೆ ಸೇರಿಸುವದು ಅಪಾಣಿನೀಯ ಮತ್ತು ಅಪೂರ್ವ.

೨. 'ಮಾ ಖಲು ಮಾ ಖಲು ಸಾಹಸಂ ಕೃತ್ವಾ ಪ್ರವೇಷ್ಟುಂ' ಬಾಲಚರಿತ IV ಇಲ್ಲಿ 'ಮಾ' ಶಬ್ದವು ತುಮುನ್ನಂತದೊಡನೆ ಪ್ರಯುಕ್ತವಾದುದು.

೩. 'ಅಲಮಿದಾನೀಂ ವ್ರಣೇ ಪ್ರಹರ್ತುಂ' – ಪ್ರತಿಮಾ IV – ಇಲ್ಲಿ ಅಲಂ ಶಬ್ದವು ತುಮುನ್ನಂತದೊಡನೆ ಪ್ರಯುಕ್ತವಾದುದು. ಇದಕ್ಕಿಂತಲೂ ವಿಚಿತ್ರವಾಗಿ

೪. ಮಾತೃಣಾಂ 'ಅ ಭಿ ವಾ ದ ನ' ಕ್ರಮಮುಪದೇಷ್ಟುಮಿಚ್ಛಾಮಿ' ಪ್ರತಿಮಾ III.

೫. ಮಮ ಹಸ್ತೇ ನಿಕ್ಷಿಪ್ತಂ ರಾಜ್ಯಂ ಚ ತು ರ್ದ ಶ ವರ್ಷಾಂತೇ ಪ್ರತಿಗ್ರಹೀತುಂ ಇಚ್ಛಾಮಿ – ಇವೆರಡು ಪ್ರ ಯೋ ಗ ಗ ಳೂ ಪಾಣಿನಿ III ೩.೨೩ರ ಪ್ರಕಾರ ಅಶಾಸ್ತ್ರೀಯ - ಇಲ್ಲಿ ಉಪದಿಶ್ಯ ಮಾನಂ, ಪ್ರತಿಗೃಹ್ಯಮಾಣಂ ಎಂದು ತುಮುನ್ನಂತಕ್ಕೆ ಅರ್ಥ ಹೇಳಿದರೆ ಕೇಳುವವನಿಂದ ಅಥವಾ ಸ್ವೀಕರಿಸುವವನಿಂದ ಎಂದು ಅಧ್ಯಾಹಾರವನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ತರದ ಪ್ರಯೋಗವು ಕಾಲಿದಾಸನ ಶಾಕುಂತಲದ II, ೧೫ನೆಯ ಶ್ಲೋಕದಾನಂತರದ ಗದ್ಯದಲ್ಲಿ - ಆಜ್ಞಾ ಪಯಿತುಮಿಚ್ಛಾಮಿ - ಎಂಬಲ್ಲಿ ಮಾತ್ರ ಕಾಣುತ್ತೇವೆ.

ನೀಲಕಂಠ ದೀಕ್ಷಿತರ ಮಾತಿನಲ್ಲಿ ಹೇಳುವುದಾದರೆ ಭಾಸನ ಕಾವ್ಯ ಯುಗಗಳಲ್ಲಿ ವ್ಯಂಜನಾಭೂಯಿಷ್ಠವಾದ ಕೃತಯುಗದಲ್ಲಿದ್ದಿರಬಹುದೆಂದು ಪ್ರತಿ

ಸಾಧಿಸಬಹುದು. (ಕೃತಯುಗ್ಗದಲ್ಲಿ ವಿಷಯ ವಿವೇಚನೆಯಲ್ಲಿ ಉತ್ತಮ ತರದ ಪ್ರತಿಭೆಯಿದ್ದು, ಯಾವತರದ ಕೃತಕತೆ (Artificiality), ಭಾವನ್ಯೂನತೆ (Deterioration in taste or standard), ನಿಯಮಗಳ ಅಂಧಾನುಸರಣೆ (Conventionalism) ಗಳನ್ನೂ ನಾವು ಭಾಸನಲ್ಲಿ ಎಲ್ಲಿಯೂ ಕಾಣಲಾರೆವು. ಇವನ ನಾಟಕಗಳಲ್ಲಿ ಶ್ಲೋಕ ಸಂಖ್ಯೆಯಾದರೂ ಬಹಳ ಕಡಿಮೆ. ಅರ್ವಾಚೀನ ಕವಿಗಳಾದರೆ ಮಾತು ಮಾತಿಗೂ ಶ್ಲೋಕಗಳನ್ನು ತಂದೊಡ್ಡಿ ಕೆಲವು ಕಡೆಗಳಲ್ಲಿ (ಭವಭೂತಿ, ಜಯದೇವನ ಪ್ರಸನ್ನರಾಘವ ಇತ್ಯಾದಿಗಳಲ್ಲಿ) ಆಭಾಸಕ್ಕೂ ಕಾರಣರಾಗುವರು. ನಾಟಕದ ಇಡೀ ಅಂಕದಲ್ಲಿಯೂ ಒಂದೇ ಶ್ಲೋಕವೂ ಕೂಡ ಬಾರದಿರುವ ಅಂಕಗಳೂ ಇವೆ. ಪ್ರಾಯಶಃ ಈ ಭಾಸನು ಪುಷ್ಯಮಿತ್ರಶುಂಗನ ಆಸ್ಥಾನ ಕವಿಯಾಗಿದ್ದು ಅಗ್ನಿಮಿತ್ರನ ಕಾಲದಲ್ಲಿದ್ದ ಕಾಲಿದಾಸನನ್ನು ನೋಡಿದ್ದರೂ ನೋಡಿರಬಹುದೆಂದು ನಮಗೆನ್ನಿಸುತ್ತದೆ. ಕಾಲಿದಾಸನು ಇಪ್ಪತ್ತೈದು ವರುಷದ ತರುಣನಾಗಿದ್ದಾಗ ೬೦ಯಾ ೭೦ವರ್ಷದವನಾಗಿ ಭಾಸನಿದ್ದಿರಬಹುದೋ ತಿಳಿಯದು. ಆಂಗ್ಲ ಕವಿಗಳಲ್ಲಿ Marlowe ಎಂಬ ನಾಟಕಕರ್ತನ ಕೀರ್ತಿಯೂ ಅವನಿಂದ ವಯಸ್ಸಿನಲ್ಲಿ ಸ್ವಲ್ಪ ಚಿಕ್ಕವನಾದರೂ ಅತೀ ಪ್ರಸಿದ್ಧನಾದ Shakespeareನ ಜೊತೆಯಲ್ಲಿ ಹೇಗೆ ಮರೆಸಲ್ಪಟ್ಟಿತೋ ಹಾಗೆಯೇ ಭಾಸನ ಕೀರ್ತಿಯು ಚಂದ್ರನ ಮುಂದೆ ಮಸುಕು ಮಸುಕಾಗಿ ಕಾಲಕ್ರಮೇಣ ಮಾಜಿ ಹೋಗಿರಲೂ ಬಹುದೆಂದು ಊಹಿಸಬಹುದಾಗಿದೆ.

ಇವನ ೧೩ ನಾಟಕಗಳು – ಇವುಗಳನ್ನು ೩ ಗುಂಪಾಗಿ ವಿಂಗಡಿಸಬಹುದು :

ರಾಮನಾಟಕಗಳು	ಭಾರತ ಮತ್ತು ಪ್ರಾಚೀನ ಕೃಷ್ಣನ ಕಥೆಯನ್ನವಲಂಬಿಸಿದುವು		ಬೃಹತ್ಕಥೆಯನ್ನವಲಂಬಿಸಿದುವು
ಪ್ರತಿಮಾ–೭ ಅಂಕಗಳು	ದೂತವಾಕ್ಯ	ಏಕಾಂಕ ನಾಟಕಗಳು	ಅವಿಮಾರಕ ೬ ಅಂಕಗಳು
ಅಭಿಷೇಕ ೬ ”	ದೂತ ಘಟೋತ್ಕಚ		ಪ್ರತಿಜ್ಞಾಯೌಗಂಧರಾಯಣ– ೪ ಅಂಕಗಳು
(ಪಿಷಾರಡಿ ಪ್ರಕಾರ ೬ನೆಯ ಅಂಕದ ವಿಷ್ಕಂಭಕ ಪ್ರತ್ಯೇಕ ಅಂಕವಾದರೆ ೭ ಅಂಕಗಳು)	ಮಧ್ಯಮವ್ಯಾಯೋಗ		ಸ್ವಪ್ನವಾಸವದತ್ತ ೬ ಅಂಕಗಳು
	ಕರ್ಣಭಾರ		ಚಾರುದತ್ತ ೪ ಅಂಕಗಳು
	ಊರುಭಂಗ		
	ಪಂಚರಾತ್ರ–೩ ಅಂಕಗಳು		
(ಯಜ್ಞಫಲ– ೭ ಅಂಕಗಳು ?)	ಬಾಲಚರಿತ–ಕೃಷ್ಣನಕಥೆ ೫ ಅಂಕಗಳು		

ರಾಮ ನಾಟಕಗಳಲ್ಲಿ ಕಡೆಯದಾಗಿ ಸೇರಿಸಿದ ಯಜ್ಞಫಲವೆಂಬುದು ಇತ್ತೀಚೆಗೆ ಕಾಠೇವಾಡದಲ್ಲಿ ಅಚ್ಚಾಗಿದೆ. ಅವರೇನೋ ಅದು ಭಾಸನಿಂದೇ ರಚಿತವಾದುದು ಎಂದು ಪ್ರತಿಪಾದಿಸಿದರೂ ಸಾಹಿತೀ ವಲ್ಲಭರೆಂದು ಪ್ರಖ್ಯಾತ ರಾದ ಶ್ರೀ ಶಿಯಾಳಿ ಸುಂದರಾಚಾರ್ಯರೆಂಬ ಪ್ರಸಿದ್ಧ ಸಾಹಿತಿಗಳೂ ಡಾಕ್ಟರ್ ಕುನ್ಹನ್ ರಾಜರೂ (ಈಗ ಆಂಧ್ರ ಯುನಿವರ್ಸಿಟಿಯಲ್ಲಿ ಪ್ರೋಫೆಸರರಾಗಿದ್ದು ನಿವೃತ್ತರಾಗಿದ್ದಾರೆ.) Hindu ಪತ್ರಿಕೆಯ ಆದಿತ್ಯವಾರದ ವಿದ್ಯಾವಿಷಯಕವಾದ ಪುರವಣಿಯಲ್ಲಿ ಇದು ಭಾಸನದಲ್ಲವೆಂದು ಸಮರ್ಥಿಸಿದ್ದಾರೆ. ಇದನ್ನು ಅನುಮೋದಿಸಬಹುದೆಂದು ತೋರುತ್ತದೆ.

ಈ ನಾಟಕಗಳನ್ನು ಯಾವ ಕ್ರಮದಲ್ಲಿ ಭಾಸನು ಬರೆದಿರಬಹುದೆಂದು ಹೇಳಬಹುದು ? ಪ್ರಾಯಶಃ ಬಾಲಚರಿತವನ್ನು ಮೊದಲು ಬರೆದು ತನ್ನ ಆಶ್ರಯದಾತನಾದ ಪುಷ್ಯಮಿತ್ರನಿಗೆ ಬೃಹದ್ರಥನನ್ನು ಕೊಲ್ಲಲು ಸೂಚನೆಕೊಟ್ಟಿರ ಬಹುದು – ಬಾಲಚರಿತ, ಅವಿಮಾರಕ, ಅಭಿಷೇಕ, (ಪ್ರಾಯಶಃ ಇದನ್ನು ಪುಷ್ಯ ಮಿತ್ರನ ಅಭಿಷೇಕ ಸಮಾರಂಭದಲ್ಲಿ ಮೊದಲಭಿನಯಿಸಿದರೋ ಏನೋ), ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತ ಘಟೋತ್ಕಚ, ಕರ್ಣಭಾರ, ಊರುಭಂಗ, (ಭಾರತ ಯುದ್ಧದ ಕಥಾಕ್ರಮದಲ್ಲಿ), ಪಂಚರಾತ್ರ, ಚಾರುದತ್ತ, ಪ್ರತಿಮಾ, ಪ್ರತಿಜ್ಞಾ ಯೌಗಂಧರಾಯಣ ಮತ್ತು ಸ್ವಪ್ನವಾಸವದತ್ತ. ರಾಜ ಶೇಖರನ 'ಅಗ್ನಿ ಪರೀಕ್ಷೆ'ಯಲ್ಲಿ ದಗ್ಧವಾಗದೆ ಉತ್ತಮವೆಂದು ಪರಿಗಣಿತವಾದ 'ಸ್ವಪ್ನವಾಸವದತ್ತವನ್ನೇ' ಕಡೆಯ ನಾಟಕವೆಂದು ನಾವು ಊಹಿಸುತ್ತೇವೆ. ಡಾಕ್ಟರ್ ಪುಸಾಲ್ಕರ, ಮತ್ತು ಜಡ್ಜ A. S. P. ಅಯ್ಯರ್ ಮಹಾಶಯರಿಬ್ಬರೂ ಚಾರುದತ್ತವು ಕೊನೆಯದಾಗಿರಬಹುದೆಂದು ಊಹಿಸುತ್ತಾರೆ. ಇದು ನಮಗೆ ಸಮ್ಮತವಾಗಿಲ್ಲ. ಅವರಿಬ್ಬರೂ ದೂತವಾಕ್ಯವು ಮೊದಲನೆಯದೆಂದೂಹಿಸುತ್ತಾರೆ. ಆದರೆ ಏಕಾಂಕ ನಾಟಕಗಳಲ್ಲಿ ಭಾಸನ ಪಳಗಿದ ಕೈ, ಆಗಲೇ ತೋರುವದರಿಂದ ಬೇರೆ ಕೆಲವು ನಾಟಕಗಳನ್ನು ಬರೆದಾನಂತರವೇ ಅವುಗಳನ್ನು ಬರೆಯಲಾರಂಭಿಸಿರ ಬಹುದೆಂಬುದೇ ಸಮೀಚೀನವೆಂದು ತೋರುತ್ತದೆ.

೨

ವಾಲ್ಮೀಕಿ ವ್ಯಾಸರೂ, ಭಾಸನೂ

ಪಾಶ್ಚಾತ್ಯ ವಿದ್ವಾಂಸರ ಸಂಶೋಧನೆಗಳಿಂದ ನಮ್ಮ ಆದಿಕಾವ್ಯಗಳಾದ ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣಗಳು ಬಹುಕಾಲದ ಬೆಳವಣಿಗೆಯಾನಂತರ ಈಗಿನ ಸಿದ್ಧಾವಸ್ಥೆಯನ್ನೇ ಪಡೆದಿರಬಹುದೆಂದು ಸಿದ್ಧಾಂತವಾಗಿದೆಯಷ್ಟೆ. ಅರ್ಥಾತ್ ವಾಲ್ಮೀಕಿ ವ್ಯಾಸಾದಿಗಳಿಗಿಂತಲೂ ಪೂರ್ವಿಕರಾದ ಕೆಲವು ಉದ್ದಾಮ ಕವಿಗಳ ಕಾವ್ಯಗಳನ್ನಾಧಾರವಾಗಿಟ್ಟುಕೊಂಡೇ ಈ ಆದಿಕವಿಗಳು ತಮ್ಮ ಕಾವ್ಯಗಳನ್ನು ರಚಿಸಿರಬೇಕು. ಕಾಲಕ್ರಮೇಣ ಇವರೇ ಸರ್ವಾದರಣೀಯರಾದ ನಂತರ ಆ ಪೂರ್ವ ಕವಿಗಳ ನೆನಪೂ ಕೂಡಾ ಬಳಕೆಯಲ್ಲಿ ಹೋಗಿ ಅವರ ಹೆಸರೂ ಕೂಡಾ ಲುಪ್ತವಾಗಿರಬೇಕು. ಆದರೆ ಅತೀ ಪ್ರಾಚೀನರಾನ ಭಾಸ, ಅಶ್ವಘೋಷಾದಿಗಳಿಗೆ ಅವರ ಗ್ರಂಥಗಳೂ, ಹೆಸರುಗಳೂ ಪರಿಚಿತಗಳಾಗಿರಬೇಕೆಂದು ತೋರುತ್ತದೆ. ಅಶ್ವಘೋಷನಾದರೋ ತನ್ನ ಬುದ್ಧ ಚರಿತದ I. ೪೩ನೆಯ ಶ್ಲೋಕದಲ್ಲಿ ಇಂಥಾ ಚ್ಯವನನೆಂಬ ಒಬ್ಬ ಮಹರ್ಷಿಯ ಹೆಸರನ್ನುಲ್ಲೇಖಿಸಿರುವನು – 'ವಾಲ್ಮೀಕಿರಾದೌ ಚ ಸಸರ್ಜ ಪದ್ಯಂ ಜಗ್ರಂಥ ಯನ್ನ ಚ್ಯವನೋ ಮಹರ್ಷಿ!' ಹೀಗೆಯೇ ಮತ್ಸ್ಯ ಪುರಾಣ ೫೩ ಅಧ್ಯಾಯ ೭೧–೭೨ ಶ್ಲೋಕಗಳಲ್ಲಿ ಪ್ರಾಚೀನರಾದ ಬ್ರಹ್ಮ, ನಾರದ ಮಹರ್ಷಿಗಳು ಮೊದಲು ರಾಮೋಪಾಖ್ಯಾನವನ್ನು ರಚಿಸಿದುದನ್ನು ಕಡೆಗೆ ವಾಲ್ಮೀಕಿಯು ಸಂಗ್ರಹಿಸಿದನೆಂದು ಸ್ಪಷ್ಟವಾಗಿದೆ. ಅಂದರೆ ಬ್ರಹ್ಮನು 'ಶತಕೋಟಿ ಪ್ರವಿಸ್ತರ' ಎಂದರೆ ೧೦೦ಕೋಟಿ ಶ್ಲೋಕಗಳುಳ್ಳ ಕಾವ್ಯವನ್ನು ರಚಿಸಿದರೆ, ಅದನ್ನು ನಾರದನು ಮೊದಲು ಕಲಿತು ಸಂಗ್ರಹಿಸಿ, ಅವನಿಂದ ವಾಲ್ಮೀಕಿಯೂ ಅಲ್ಪಾಯುಷಿಗಳಾದ ಮನುಷ್ಯರನ್ನನುಗ್ರಹಿಸುವ ಉತ್ಕಟೇಚ್ಛೆಯಿಂದ ಧರ್ಮಕಾಮಾರ್ಥ ಸಾಧನವಾಗುವಂತೆ ಈಗಿನ ಆದಿಕಾವ್ಯವನ್ನು ರಚಿಸಿದನಂತೆ. ಇದನ್ನೇ ವಾಲ್ಮೀಕಿಯೂ

ತನ್ನ ಕಾವ್ಯದ ಆದಿಯಲ್ಲಿ ವ್ಯಂಗ್ಯಮರ್ಯಾದೆಯಿಂದ ಬ್ರಹ್ಮನಾರದರಿಬ್ಬರೂ ವಾಲ್ಮೀಕಿಯಾಶ್ರಮಕ್ಕೆ ಚಿತ್ತೈಸಿ ರಾಮಾಯಣಕಾವ್ಯವನ್ನು ರಚಿಸಲು ಅವನನ್ನು ಉತ್ಸಾಹಪಡಿಸಿದರೆಂದುಲ್ಲೇಖಪಡಿಸಿರುವನು. ಈ ಮುಂದಿನ ಕೆಲವಧ್ಯಾಯಗಳಲ್ಲಿ ಭಾಸನು ವಾಲ್ಮೀಕಿ, ವ್ಯಾಸ, ಭರತ (ನಾಟ್ಯಶಾಸ್ತ್ರಕರ್ತ), ಕೌಟಿಲ್ಯ, ವಾತ್ಸಾಯನ ಮತ್ತು ಗೌತಮ, ಆಪಸ್ತಂಭ, ಮನು ಮೊದಲಾದ ಅತಿ ಪ್ರಾಚೀನಕಾರರ ಕಾಲಿನವನೂ ಅವುಗಳಿಗೆ ಅತಿ ಸಮೀಪವಾದ ಕಾಲದಲ್ಲಿ ಅಂದರೆ ಕ್ರಿಸ್ತಪೂರ್ವ ೩ನೆಯ ಶತಮಾನದವನಾಗಿರಬಹುದೆಂದು ಅವನ ನಾಟಕಗಳ ಶೈಲಿ ಶಬ್ದ ಇತ್ಯಾದಿಗಳಾಧಾರದಿಂದ ಊಹಿಸಲಾಗಿದೆ.

'ಪಂಚರಾತ್ರ ನಾಟಕದ ಹೆಸರನ್ನೇ ಭಾಸನು ಅಯೋಧ್ಯಾಕಾಂಡ ೬೩ ಅಧ್ಯಾಯ ೧೭ನೆಯ ಶ್ಲೋಕ (ಕುಂಬ ಕೋಣಂ ಸಂಪಾದಿತ ಪ್ರತಿ)ದಿಂದ ಎತ್ತಿಕೊಂಡುದು. ಅಲ್ಲಿ ಹೊಸತಾಗಿ ಬಂದಿರುವ 'ಯಜ್ಞ'ವನ್ನು 'ಪಂಚ ರಾತ್ರಯಜ್ಞ' ವೆಂದು ಕರೆದಾಗ ವಿಶ್ವಾಮಿತ್ರ ಮಹರ್ಷಿಯ 'ದಶರಾತ್ರ ಯಜ್ಞ'ದ ನೆನಪಾಗದಿರದು. ಶಾಕುಂತಲದಲ್ಲಿ II ನೆಯ ಅಂಕದಲ್ಲಿ ದುಷ್ಯಂತನನ್ನು ಋಷಿಗಳು ಕಣ್ವನಿಲ್ಲದಿರುವಾಗ **'ಕತಿಪಯರಾತ್ರ'** ಗಳ ಕಾಲದವರೆಗೆ ತಮ್ಮ ಯಜ್ಞವನ್ನು ಸಂರಕ್ಷಿಸಬೇಕೆಂದು ಪ್ರಾರ್ಥಿಸುವದೂ ಈ ರಾತ್ರ ಯಜ್ಞಗಳ ಸಂಪ್ರದಾಯವನ್ನೇ ಆಗಲೂ ಆದರಿಸುತ್ತಿದ್ದಂತೆ ತೋರುತ್ತದೆ. ಹೀಗೆಯೇ ಇನ್ನೊಂದು ನಾಟಕದಲ್ಲಿ ಶತಕುಂಭ ಎಂಬ ಅಪೂರ್ವವಾದ ಯಜ್ಞದ ವಿಷಯ ಬರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಜನರೆಲ್ಲರೂ ವೈದಿಕ ಧರ್ಮಾಚರಣೆಯಲ್ಲಿ ನಿರತರಾಗಿ ಸದಾಚಾರ ಸಂಪನ್ನರಾಗಿದ್ದರು. ಹಿರಿಯರನ್ನು ಕಂಡಕೂಡಲೇ ಚಿಕ್ಕವರೆಲ್ಲರೂ ನಮಸ್ಕರಿಸುತ್ತಿದ್ದರು. ಕಾಲಕಾಲದಲ್ಲಿ ಸಂಧ್ಯಾದಿವಿಹಿತ ಕರ್ಮ ನೆರವೇರಿಸಿ ಅಶುಚಿಗಳಾದ (ಉದಾ- ಶವವನ್ನು ಮುಟ್ಟಿದ ಕೂಡಲೇ-ನಂದಗೋಪನು ಮೃತಶಿಶು)ವನ್ನು ಮುಟ್ಟಿದ ಕೂಡಲೇ-ಶೀನು ಇತ್ಯಾದಿಗಳು ಬಂದ ಕೂಡಲೇ, ಕಂಣೀರು ಬಂದ ಕೂಡಲೇ (ದ್ರೋಣನು ಪಂಚರಾತ್ರದಲ್ಲಿ) ಉಪಸ್ಪರ್ಶ ಅಥವಾ ಆಚಮನ ಮಾಡುತ್ತಿದ್ದರೆಂದು ಗೊತ್ತಾಗುತ್ತದೆ. ಹೀಗೆಯೇ ಮನುಸ್ಮೃತಿಯ ನಿಯಮದ ಪ್ರಕಾರ ಬ್ರಾಹ್ಮಣನನ್ನು ಯದೃಚ್ಛೆಯಾಗಿ ಕಂಡಲ್ಲಿ ಆತನ ಕುಶಲವನ್ನು ವಿಚಾರಿಸಬೇಕಂತೆ, ಕ್ಷತ್ರಿಯನನ್ನು ಕಂಡರೆ ಅನಾಮಯ ಪ್ರಶ್ನವೆಂದೂ, ವೈಶ್ಯನು ಸಿಕ್ಕಿದರೆ ಕ್ಷೇಮವನ್ನೂ, ಶೂದ್ರನಿಗೆ ಆರೋಗ್ಯವನ್ನೂ ಪ್ರಶ್ನಿಸುವದಂತೆ- 'ಬ್ರಾಹ್ಮಣಂ ಕುಶಲಂ ಪೃಚ್ಛೇತ್ ಕ್ಷತ್ರಬಂಧುಮನಾಮಯಂ ವೈಶ್ಯಂ ಕ್ಷೇಮಂ ಸಮಾಗಮ್ಯ ಶೂದ್ರಮಾರೋಗ್ಯಮೇವಚ ||'

ಈ ನಿಯಮಗಳನ್ನು ಕಾಲಿದಾಸನು ಸರಿಯಾಗಿ ಅನುಸರಿಸಿದರೆ, ಅವನಿಗಿಂತಲೂ, ಅನೇಕ ಶತಮಾನಗಳ ಮುಂಚೆಯೇ ಬಾಳಿದ ವಾಲ್ಮೀಕಿಯು ಈ ನಿಯಮಗಳನ್ನರಿತಂತಿಲ್ಲ. ಬಾಲಕಾಂಡ II- ೫೭ರಲ್ಲಿ ವಾಲ್ಮೀಕಿಯು ಬ್ರಹ್ಮನನ್ನು ಅನಾಮಯಪ್ರಶ್ನ (ಕ್ಷತ್ರಿಯನಿಗೆ ಮಾಡಬೇಕಾದ್ದು)ವನ್ನು ಮಾಡುವನು. ಇನ್ನೊಂದೆಡೆಯಲ್ಲಿ ವಿಶ್ವಾಮಿತ್ರ ದಶರಥರು ಪರಸ್ಪರ ಕುಶಲ ಪ್ರಶ್ನೆಯನ್ನೇ ಮಾಡುವರು. ಇದೇ ರೀತಿಯಲ್ಲಿ ಭಾಸನೂ ಈ ಕುಶಲ ಅನಾಮಯ ಪ್ರಶ್ನೆಗಳನ್ನು ಯಥಾಕ್ರಮವಾಗಿ ಬ್ರಾಹ್ಮಣ ಕ್ಷತ್ರಿಯರಿಗೆ ಮಾಡಿಸುವದಿಲ್ಲ. ದೂತವಾಕ್ಯದಲ್ಲಿ ದುರ್ಯೋಧನನು ಪಾಂಡವರ (ಕ್ಷತ್ರಿಯರ) ಅನಾಮಯಪ್ರಶ್ನ ಮಾಡದೆ ಕುಶಲವನ್ನೇ ವಿಚಾರಿಸುವನು— ಧರ್ಮಾತ್ಮಜೋ ವಾಯುಸುತಃ.... ಸರ್ವೇ .... **ಕುಶಲೋಪಪನ್ನಾಃ**; ಆ ಪ್ರಶ್ನೆಗೆ ಉತ್ತರವನ್ನು ಕೊಡುವ ಸಂದರ್ಭದಲ್ಲಿ ಶ್ರೀಕೃಷ್ಣನು **ಕುಶಲಂ ಅನಾಮಯಂ** ಚ ಪೃಷ್ಟ್ವಾ ಎಂದು ಎರಡನ್ನೂ ಕಲಸಿ ವಿಚಾರಿಸುವನು.

ಮಹಾಭಾರತ ವನಪರ್ವದಲ್ಲಿ ೨೭೪ ಅಧ್ಯಾಯದಿಂದ ೨೯೩ರವರೆಗೆ (ಕುಂಭಕೋಣಂ ಸಂಪಾದಿತ) ರಾಮೋಪಾಖ್ಯಾನವೊಂದಿದೆ. ಈ ಸಂಗ್ರಹಕ್ಕೂ ವಾಲ್ಮೀಕಿಗೂ ಸ್ವಲ್ಪ ವ್ಯತ್ಯಾಸವಿದ್ದಂತೆ ತೋರುತ್ತದೆ. ಇವುಗಳ ಪರಸ್ಪರ ಪೌರ್ವಾಪರ್ಯದ ಗೋಜಿಗೆ ಈಗ ಹೋಗದಿದ್ದರೂ, ಭಾಸನ ಅಭಿಷೇಕ ಪ್ರತಿಮಾ ನಾಟಕಗಳಲ್ಲಿ ಈ ವ್ಯಾಸ ಸಂಗ್ರಹವನ್ನೇ ಉಪಜೀವಿಸಿದಂತಿದೆ. ಇದನ್ನು ಒಂದೇ ಉದಾಹರಣೆಯಿಂದ ಸಮರ್ಥಿಸುವೆವು – ಇಂದ್ರಜಿತು ಸತ್ತಾನಂತರ ಭಾಸನ ರಾವಣನು ಹೊರಗೋಡಿ ಬಂದು ಸೀತೆಯನ್ನೊಂದೇ ಪೆಟ್ಟಿನಿಂದ ತುಂಡರಿಸಲು ಉಪಕ್ರಮಿಸಿದಾಗ ಒಬ್ಬ ಸೇವಕನು ಬಂದು ೫ನೆಯ ಅಂಕದ ಅಂತ್ಯದಲ್ಲಿ ಅವಶ್ಯಂ ಸ್ತ್ರೀವಧೋ ನ ಕರ್ತವ್ಯಃ (ಪುಟ ೩೬೦- ದೇವಧರ) ಎಂದು ತಡೆದಾನಂತರವೇ ರಾಮ ರಾವಣಯುದ್ಧಕ್ಕೆ ಹೊರಡುವುದು. ೨೯೦ನೆಯ ಅಧ್ಯಾಯದಲ್ಲಿಯೂ ೨೭ನೆಯ ಶ್ಲೋಕದಾನಂತರ ಹೀಗಿದೆ- ಶೋಕಮೋಹಾರ್ತಃ- ವೈದೇಹೀಂ ಹಂತುಮುದ್ಯತಃ। ಖಡ್ಗಮಾದಾಯ ದುಷ್ಟಾತ್ಮಾ ಜವೇನಾಭಿಪಪಾತ ಹ॥ ತಂ ದೃಷ್ಟ್ವಾ ತಸ್ಯ ದುರ್ಬುದ್ಧೇಃ ಅವಿಂಧ್ಯಃ ಪಾಪನಿಶ್ಚಯಃ। ಶಮಯಾಮಾಸ ಸಂಕ್ರುದ್ಧಂ ನ ಸ್ತ್ರೀಯಂ ಹಂತುಮರ್ಹಸಿ॥

ಹೀಗೆಯೇ ಬೇರೆ ಸಾಮ್ಯಗಳನ್ನು ವಾಚಕರೇ ಕಂಡುಕೊಳ್ಳಬಹುದು. ಇದಿರಲಿ, ಅಧ್ಯಾತ್ಮ ರಾಮಾಯಣ, ಪದ್ಮ ಪುರಾಣದಲ್ಲಿ ಬರುವ ರಾಮಕಥೆ, ತಮಿಳಿನಲ್ಲಿ ಕಂಬರ್, ಕನ್ನಡದ ತೊರವೆ ಮತ್ತು ಜೈನರ ಪಂಪ ರಾಮಾಯಣ, ಹಿಂದಿಯ ರಾಮ ಚರಿತ ಮಾನಸ, ತೆಲುಗಿನಲ್ಲಿಯ ಭಾಸ್ಕರ 'ರಾಮಾಯಣ–

ಇವೆಲ್ಲಾ ಕಡೆಗಳಲ್ಲಿ ಕೈಕೇಯಿಯು ದಶರಥನ ಹತ್ತಿರ **ವರಗಳೆರಡನ್ನು ಯಾಚಿಸಿ** ರಾಮನನ್ನು ಕಾಡಿಗಟ್ಟಿದರೆ, ಭಾಸನು ರಾಜ್ಯವನ್ನು ಕೈಕೇಯಿಯ ರಾಜ್ಯ ಶುಲ್ಕವೇ, ಅವಳನ್ನು ಮದುವೆಯಾಗುವಾಗ ಅವಳ ಮಗನಿಗೆ ಪಟ್ಟಕಟ್ಟುವರೆ ದಶರಥನು ಒಪ್ಪಿದ್ದನೆಂದು ಒತ್ತಿ ಹೇಳುವನು. ಪ್ರಾಯಶಃ ಇದರಿಂದ ಭಾಸನ ಕಾಲದಲ್ಲಿ ರಾಮನ ಕಥೆಯನ್ನು ಬೇರೆ ಕೆಲವರೂ ವಾಲ್ಮೀಕಿಗಿಂತಲೂ ಬೇರೆ ವಿಧಗಳಲ್ಲಿ ಹೇಳಿದವರಿದ್ದರೆಂದೂ, ವಾಲ್ಮೀಕಿಯು ಪ್ರಮುಖನೆಂದೂ ಪರಿಗಣಿತ ನಾದನಂತರ ಅವೆಲ್ಲವೂ ಲುಪ್ತವಾದುವೆಂದೂಹಿಸಬಹುದಾಗಿದೆ.

ಭಾಸನ ಕೆಲವು ಶಬ್ದಗಳ ಅರ್ಥಗಳು ವಾಲ್ಮೀಕಿಯ ಅರ್ಥಗಳನ್ನು ಅನುಸರಿಸಿದಂತಿವೆ. ಇವುಗಳಲ್ಲಿ 'ಕಲತ್ರಂ' ಎಂಬ ಶಬ್ದವನ್ನು ಕಡೆಗೆ ಬಂದ ಹೆಂಡತಿಯೆಂಬ ಅರ್ಥದಲ್ಲಿ ಕಾಣದೆ 'ರಕ್ಷಣೀಯವಾದ ವಸ್ತು' ಎಂಬ ಅರ್ಥದಲ್ಲಿ ನಾವು ಕಾಣುತ್ತೇವೆ. ಕಿಷ್ಕಿಂಧಾ ೪೫ ಸರ್ಗ, ೨೫ನೆಯ ಶ್ಲೋಕದಲ್ಲಿ 'ಭವಾನ್ ಕಲತ್ರಮಸ್ಮಾಕಂ ಸ್ವಾಮಿಭಾವೇ ವ್ಯವಸ್ಥಿತಃ ಸ್ವಾಮೀ ಕಲತ್ರಂ ಸೈನ್ಯಸ್ಯ ಗತಿರೇಷಾ ಪರಂತಪ || ತಸ್ಮಾತ್ಕಲತ್ರವತ್ ತಾತ ಪರಿಪಾಲ್ಯಃ ಸದಾ ಭವಾನ್' ಎಂಬಲ್ಲಿಯೂ ಸುಂದರ ಕಾಂಡ ೩೭ ಸರ್ಗ ೪೭ನೆಯ ಶ್ಲೋಕ– 'ಕಲತ್ರವತಿ ಸಂದೇಹಃ ತ್ವಯ್ಯಪಿಸ್ಯಾದಸಂಶಯಃ'

ಈ 'ಕಲತ್ರ' ಶಬ್ದವನ್ನು ಭಾಸನ ಪ್ರತಿಜ್ಞೆ I–೪–ಸರ್ವಂ ಹಿ ಸೈನ್ಯಂ ಅನುರಾಗಸ್ಮೃತೇ ಕಲತ್ರಂ – ಹೀಗೆಯೇ ಅವಿಮಾರಕದ 1ನೆಯ ಅಂಕದಲ್ಲಿ– ರಾಜನು – ಇವನಿಗೆ **ಕಲತ್ರ**ವಿದೆಯೋ? ಎಂದು ವಿಚಾರಿಸಿದಾಗ ಭೂತಿಕನೆಂಬ ಮಂತ್ರಿಯು ಕೊಟ್ಟ ಉತ್ತರವಿದು— **ಎಲ್ಲವೂ** ಅಂದರೆ ರಕ್ಷಣೀಯವಾದ ಕುಟುಂಬವಿದೆ – ತಾನಾದರೋ ಸ್ವತಃ ತಾನೇ ರಕ್ಷಿಸಬೇಕಾದ ಹೆಂಡತಿಯನ್ನು ಕಟ್ಟಿಕೊಳ್ಳಲಿಲ್ಲ. ಇದರಿಂದ 'ಕಲತ್ರ'ಶಬ್ದದ ಅರ್ಥದಲ್ಲಿ ಮಾರ್ಪಾಟು ಹೇಗಾಯಿತೆಂಬುದು ಒಡೆದು ಕಾಣುವಂತಿದೆ. ಕೆಲವು ಶಬ್ದಸಾಮ್ಯ – ಅರ್ಥಸಾಮ್ಯಗಳನ್ನು ಇಲ್ಲಿ ಹೋಲಿಸುವರೆ ಕೊಡಲಾಗಿದೆ.

ವಾಲ್ಮೀಕಿ (ಕುಂಭಕೋಣ ಪ್ರತಿ)	**ಭಾಸ (ದೇವಧರ)**
ಚಕ್ಷುಷಾತ್ವಾಂ ನ ಪಶ್ಯಾಮಿಸ್ಮೃತಿರ್ಮಮ ವಿಲುಪ್ಯತೇ **ಅಯೋಧ್ಯಾ–೬೫ ಅ. ೬೫ ಶ್ಲೋಕ.**	ಅಂಗಂ ಮೇ ಸ್ಪೃಶ ಕೌಸಲ್ಯೇ ನ ತ್ವಾಂ ಪಶ್ಯಾಮಿಚಕ್ಷುಷಾ। ರಾಮಂ ಪ್ರತಿ ಗತಾ ಬುದ್ಧಿಃ ಅದ್ಯಾಪಿನ ನಿವರ್ತತೇ ಪ್ರತಿಮಾ II ೧೮
ಅಗ್ರತೋಗಚ್ಛ ಸೌಮಿತ್ರೇ ಸೀತಾತ್ವಾಮನು ಗಚ್ಛತು ಪೃಷ್ಠತೋನುಗಮಿಷ್ಯಾಮಿ ಸೀತಾಂ ತ್ವಾಂಚಾನುಪಾಲಯನ್– **ಅಯೋಧ್ಯಾ ೫೨ ಅ. ೯೬**	ರಾಮಲಕ್ಷ್ಮಣಯೋರ್ಮಧ್ಯೇ ತಿಷ್ಠತು ಅತ್ರಾಪಿ ಮೈಥಿಲೀ–ಪ್ರತಿಮಾ II ೧೫

ವಾಹಿ ವಾತ ಯತಃ ಕಾಂತಾ ತಾಂ ಸ್ಪಷ್ಟ್ವಾ ಮಾಮಪಿ ಸ್ಪೃಶ-ಯುದ್ಧ ಕಾಂಡ ೫ ಅಧ್ಯಾ ೬ ಶ್ಲೋಕ.	ಧನ್ಯಾ: ಖಲು ವನೇ ವಾತಾಃ ತಟಾಕಪರಿವರ್ತಿನಃ। ವಿಚರಂತಂ ವನೇ ರಾಮಂ ಯೇಸ್ಪೃಶಂತಿ ಯಥಾ ಸುಖಂ. ಪ್ರತಿಮಾ II ೧೩.
ವೀರಾ: ಸಂಭಾವಿತಾತ್ಮಾನಃ ನದೈವಂ ಪರ್ಯುಪಾಸತೇ। ದೈವಂ ಪುರುಷ ಕಾರೇಣ ಯ: ಸಮರ್ಥ: ಪ್ರಬಾಧಿ ತುಂ। ನ ದೈವೇನ ವಿಪನ್ನಾರ್ಥ: ಪುರುಷ: ಸೋವಸಿದತಿ. ಅಯೋ ೨೪ ಅ.	ದೈವಂ ಪುರುಷಕಾರೇಣ ವಂಚಯಿ ಷ್ಯಾಮ್ಯಹಂ-ಬಾಲಚರಿತ II ೧೨
ಸಹಚರರಹಿತೇವ ಚಕ್ರವಾಕೀ ಜನಕಸುತಾ ಕೃಪಣಾಂ ದಶಾಂ ಪ್ರಪನ್ನಾ-ಸುಂದರ ೧೬ ಅ. ೩೦	ನೈವೇದಾನೀಂ ತಾದೃಶಾಶ್ಚಕ್ರವಾಕಾ: ಸ್ವಪ್ನ I ೧೬
ಭರ್ತೃನಾಥಾ ಚರಂತಿ ಯಾ ಅಯೋ ೧.೭ ಅ. ೨೪	ಭರ್ತೃನಾಥಾ ಹಿ ನಾರ್ಯ: ಪ್ರತಿಮಾ I ೨೫
ಅಯೋಧ್ಯಾ ಮಟವೀಂ ವಿದ್ಧಿ-ಅಸ್ಮಾಭಿ: ಚ ಪರಿತ್ಯಕ್ತಂ ಪುರಂ ಸಂಪದ್ಯತಾಂ ವನಂ ಅಯೋಧ್ಯಾಪಿ ಭವೇತ್ತಸ್ಯಾರಾಮ ಹೀನಾ ಯಥಾ ವನಂ	ನಾಯೋಧ್ಯಾ ತಂ ವಿನಾಯೋಧ್ಯಾ ಸಾಯೋಧ್ಯಾ ಯತ್ರರಾಘವ :- ಪ್ರತಿಮಾ III ೨೪.

ವಿಶ್ವಾಮಿತ್ರನು ರಾಮುನನ್ನು ಪ್ರೇಮ ಪುರಸ್ಸರವಾಗಿ ಕೌಸಲ್ಯಾ ಸುಪ್ರಜಾ ಎಂದು ಕರೆದರೆ, ಭಾಸನೂ ಕೌಸಲ್ಯಾಮಾತಃ, ಎಂದು ರಾಮ ಲಕ್ಷ್ಮಣನನ್ನು ಕರೆಯುವಂತೆ ಮಾಡುವನು-ಅಚಿರೇಣೈವ ಕಾಲೇನ, ಕಂಪಯನ್ನಿವ ಮೇದಿನೀಂ, ಶಕ್ತಿಃ ಕಾಲಾಂತಕೋಪಮಾ ಇತ್ಯಾದಿ ಪುರಾಣಗಳಲ್ಲಿ ಸಹಜಗಳಾದ ಅರ್ಧ ಶ್ಲೋಕಗಳು ಇವನಲ್ಲಿಯೂ ಸಹಜವಾಗಿ ಬಂದಿವೆಯೆಂದು ಡಾ. ಸುಕ್ಥಂಕರ ಮಹಾಶಯರು ಕಂಡುಹಿಡಿದಿದ್ದಾರೆ. ಇದೇ ರೀತಿಯಲ್ಲಿ ಅಮುಖ್ಯವಾದ ಗದ್ಯ ಭಾಗ ಶ್ರಾವ್ಯವಾದ ಛಂದಸ್ಸಿನಲ್ಲಿ ಬದ್ಧವಾದ ಶ್ಲೋಕಗಳನ್ನು ಸೇರಿಸುವುದು ವಾಲ್ಮೀಕಿಯಲ್ಲಿ ಸಹಜವೆಂದೂ ಅದನ್ನೇ ಭಾಸನು ಪಂಚರಾತ್ರ I ೨೭ರಿಂದ ೮ ಅಂಕಾಂತ್ಯದವರೆಗೂ ಪ್ರತಿಮಾ I ೯ರಿಂದ ೨೮ರ ವರೆಗೂ, ಮಧ್ಯಮ ವ್ಯಾಯೋಗ ೧೨ರಿಂದ ೪೫ರವರೆಗೂ ಅನುಕರಿಸಿರುವನೆಂದೂ ಅವರೇ ತೋರಿಸಿದ್ದಾರೆ. (Unimportant prose is mixed up with fancy metres mostly lyrical, and these are rudi-

mentary attempts at dramatisation not quite emanicipated from the limitation of the epic prototype)

b) **ವೇದವ್ಯಾಸ:**-- 'ಖೋ' ಎಂಬಲ್ಲಿರುವ ತಾಮ್ರ ಶಾಸನದಲ್ಲಿ (೫೩೩. A D.) ಮಹಾಭಾರತವನ್ನಾಗಲೇ ಶತ ಸಾಹಸ್ರೀ ಸಂಹಿತೆಯೆಂದು ಕರೆವಾಗಿದೆ. ಉಪಾಖ್ಯಾನಗಳಿಲ್ಲದೆ ಇದು ಚತುರ್ವಿಂಶತಿ ಸಾಹಸ್ರೀ ಸಂಹಿತೆ ಅಂದರೆ ೨೪,೦೦೦ ಶ್ಲೋಕಗಳು ಮಾತ್ರ ಇದ್ದವಂತೆ. ಹರಿವಂಶವನ್ನು ಬಿಟ್ಟರೆ ಔತ್ತರೇಯ ಪಾಠದಲ್ಲಿ Hopkinsರ ಲೆಕ್ಕದ ಪ್ರಕಾರ ೮೪,೧೨೬ ಶ್ಲೋಕಗಳಿವೆಯಂತೆ. ಕುಂಭಕೋಣಂ ಸಂಪಾದಿತ ಪ್ರತಿಯಲ್ಲಿ ೯೬,೫೭೮ ಶ್ಲೋಕಗಳಿವೆ. ಒಂದು ಲಕ್ಷ ಭರ್ತಿಯಾಗುವರೆ ಒಂದು ಪ್ರತಿಯ ಪ್ರಕಾರ ಸಾಧಾರಣ ೧೬,೦೦೦ ಶ್ಲೋಕ, ಇನ್ನೊಂದರ ಪ್ರಕಾರ ೩೫೦೦ ಶ್ಲೋಕ ಬೇಕು. ಇದರಿಂದ ಪ್ರಾಯಶಃ ಕಾಲಾನುಭಾಗದಲ್ಲಿ ಈ ಶ್ಲೋಕಗಳು ಕಾರಣಾಂತರಗಳಿಂದ ಲುಪ್ತವಾಗಿರಬಹುದೆಂದೂಹಿಸಬಹುದು. ಭಾಸನ ಕಾಲವಲ್ಲಿ ಇವಿಷ್ಟೂ ಲುಪ್ತವಾಗದೆ ಈಗ ಸಿಕ್ಕಿರುವ ಪ್ರತಿಗಿಂತ ಒಂದೆರಡು ಸಂದರ್ಭಗಳಾದರೂ ಹೆಚ್ಚು ಇದ್ದಿರಬಹುದು.

ಮಧ್ಯಮವ್ಯಾಯೋಗದಲ್ಲಿ ಘಟೋತ್ಕಚನು ಬ್ರಾಹ್ಮಣದ್ವೇಷಿಯೆಂದು ಹೇಳುವಂತಿದೆ. ಪಕ್ಕದ ಊರಿಗೆ ಹೊರಟಿದ್ದ ಬ್ರಾಹ್ಮಣ ಕುಟುಂಬವನ್ನು ಮಧ್ಯ ಮಾರ್ಗದಲ್ಲಿ ಅಡ್ಡ ಹಾಕಿ ಒಬ್ಬ ಯುವಕನು ತನ್ನ ಅಮ್ಮನ ಹಸಿವೆಗೆ ಬಲಿಯಾಗಲೇಬೇಕೆಂದು ತನ್ನ ರಾಕ್ಷಸ ವೃತ್ತಿಯನ್ನು ಪ್ರಕಟಿಸುವನಷ್ಟೆ. ಈಗಿನ ಮಹಾಭಾರತದಲ್ಲಿಯೇ ದ್ರೋಣಪರ್ವ ೧೮೧ ಅ - ೨೫, ೨೬, ೨೭ ಶ್ಲೋಕಗಳಲ್ಲಿ ಇವನು ಸತ್ತ ಅನಂತರ ಶ್ರೀಕೃಷ್ಣನು ಪಾಂಡವರನ್ನು ಸಂತೈಸುವಾಗ ಹೇಳಿದ ಮಾತುಗಳಿವು- ಯದಿ ಹ್ಯೇನಂ ನಾಹನಿಷ್ಯತ್ ಕರ್ಣಃ ಶಕ್ತ್ಯಾಮಹಾಮೃಧೇ। ಮಯಾವಧ್ಯೋऽಭವಿಷ್ಯತ್ ಸ ಭೈಮಸೇನಿಃ ಘಟೋತ್ಕಚಃ। ಮಯಾ ನ ನಿಹತಃ ಪೂರ್ವಂ ಏಷ ಯುಷ್ಮತ್ಪ್ರಿಯೇಪ್ಸಯಾ। **ಧರ್ಮಸ್ಯ ಲೋಪ್ತಾ ಪಾಪಾತ್ಮಾ ಯಜ್ಞ ದ್ವೇಷೀ** ಚ ರಾಕ್ಷಸಃ। ಏಷ ಹಿ ಬ್ರಾಹ್ಮಣ **ದ್ವೇಷೀ** ತಸ್ಮಾದೇಷ ನಿಪಾತಿತಃ॥ ಇದನ್ನೋದುವಾಗ "ಘಟೋತ್ಕಚನು ಬ್ರಾಹ್ಮಣರಲ್ಲಿ ವಿಶೇಷ ಅಪಚಾರವನ್ನು ಮಾಡಿದ್ದರಿಂದ ಈ ತರದ ಅವಸಾನದಲ್ಲಿ ವಿಚಿತ್ರವೇನೂ ಇಲ್ಲ"ವೆಂದದ್ದರಿಂದ ಬೇರೆ ಅಪಚಾರಗಳನ್ನು ಮಾಡಿದ್ದಿರಲೇಬೇಕು. ಆದರೆ ಈಗ ಅವುಗಳನ್ನು ಬೇಕಂತಲೇ ತೆಗೆದಿರಬೇಕು. ಇನ್ನು ಇದೇ ನಾಟಕದಲ್ಲಿ ಭೀಮಸೇನನು ತನಗೆ ಮಹೇಶ್ವರ ಪ್ರಸಾದದಿಂದ ದೊರೆತ ಮಾಯಾಪಾಶ ಮಂತ್ರವೊಂದಿದೆಯೆಂದು ಹೇಳುವದನ್ನು ಪರಿಶೀಲಿಸಿದರೆ ಕೌರವರನ್ನು ಗೆಲ್ಲುವ

ಅರ್ಜುನನು ಪಾಶುಪತಾಸ್ತ್ರವನ್ನು ಸಂಪಾದಿಸಿದುದು ಸಾಲದೇನೇ, ಭೀಮಸೇನನೂ ತಪಸ್ಸಿನಿಂದ ಅದೇ ಈಶ್ವರನನ್ನೇ ಪರಿತೋಷಿಸುವಂತೆ ಮಾಡಿ ಅವನಿಂದ ಮಾಯಾಪಾಶನೋಕ್ಷ ಮಂತ್ರವನ್ನು ಪಡೆದಿದ್ದನಂತೆಂದು ತೋರುತ್ತದೆ. ಕಾಲಾನುಭಾಗದಲ್ಲಿ ಈ ಭೀಮನು ತಪಸ್ಸನ್ನು ಬಿಟ್ಟಿರಬಹುದೆಂದು ಎನಿಸುತ್ತದೆ. ಇದೇ ರೀತಿಯಲ್ಲಿ ಪಂಚರಾತ್ರ III. ೧೨ ಕರ್ಣಾಯತೇ ತೇನ ಶರೇ ವಿಮುಕ್ತೇ ವಿಕಂಪಿತಂ ತಸ್ಯಶಿರೋ ಮಯೋಕ್ತಂ – ಗತ್ವಾ ತದಾ ತೇನ ಚ ಬಾಣತುಲ್ಯಂ ಅಪ್ರಾಪ್ತಲಕ್ಷ್ಯಃ ಸ ಶರೋ ಗೃಹೀತಃ.

ಎಂಬ ಶ್ಲೋಕವನ್ನು ಪರಿಶೀಲಿಸಿದಾಗ, ಕೌರವರೂ ಪಾಂಡವರೂ ಬಾಲ್ಯದಲ್ಲಿ ಧನುರ್ವಿದ್ಯಾಭ್ಯಾಸ ಮಾಡುತ್ತಿರುವಾಗ, ದ್ರೋಣಾಚಾರ್ಯರ ಅಸ್ತ್ರಪರೀಕ್ಷೆಯು ಆದಿಪರ್ವದ ಪ್ರಕಾರ ಭಾಸಪಕ್ಷಿಗೆ ಗುರಿಯಿಟ್ಟು ಅರ್ಜುನನು ಹೊಡೆದುದು ಮಾತ್ರವಲ್ಲದೆ, ಇನ್ನೊಂದಿದ್ದಿರಬೇಕೆಂದೂ ಅದರಲ್ಲಿ ಭೀಮಸೇನನು ಗುರುಗಳ ಅತೃಪ್ತಿ ದ್ಯೋತಕವಾದ ಶಿರಃ ಕಂಪನವನ್ನು ತಾಳಲಾರದೆ, ಬಾಣಪ್ರಯೋಗ ಮಾಡಿದ ಮೇಲೂ ಬಾಣಕ್ಕೆ ಸರಿಯಾದ (ಅಥವಾ ಅದಕ್ಕಿಂತಲೂ ಹೆಚ್ಚಾದ) ವೇಗದಿಂದ ಹೋಗಿ, ಗುರಿಯನ್ನು ಮುಟ್ಟುವ ಮೊದಲೇ ಆ ಬಾಣವನ್ನು ಹಿಂದೆಳೆದುಕೊಂಡನಂತೆ! ಈ ಕಥೆಯನ್ನು ರನ್ನನು ಗದಾಯುದ್ಧದಲ್ಲಿ ಆರನೆ ಆಶ್ವಾಸದಲ್ಲಿ ೨೬ನೆಯ ಶ್ಲೋಕದಲ್ಲಿ ಉಪಜೀವಿಸಿದಂತಿದೆ – ಗುರು ಲಕ್ಷ್ಯಸಿದ್ಧಿಯಿಲ್ಲೇನೆ ಪರಿವಂಬಂ ಪರಿದುಪಿಡಿದು ಬೇಗಂ ತರ್ಪಂ | ತಿರೆ ಪವನಜವದೆ ಪವನಜ ಪರಿದಂ ಮಂದಿರದೆಯಲ್ಲಿ ಯಿದಿರುಂ ಬಲೆಯಂ || ಇಲ್ಲಿ ಭೀಮನು ಬಾಣದೊಡನೆಯೇ ಹೋಗಿ ಅದು ಗುರಿಯನ್ನು ಮುಟ್ಟುವ ಮೊದಲೇ ಅದನ್ನು ಹಿಂದೆಳೆಯುವರೆ ಕಾರಣವನ್ನು – ವಾಯುದೇವತೆಯ ಮಗನಿಗೆ ವಾಯುವೇಗವೇನೂ ವಿಚಿತ್ರವಲ್ಲ – ವೆಂದು ಸೂಚಿಸಿದೆ. ಶ್ರೀಮನ್ಮಧ್ವಾಚಾರ್ಯರು ತಮ್ಮ ತಾತ್ಪರ್ಯ ನಿರ್ಣಯ ಗ್ರಂಥದಲ್ಲಿ ವೇದವ್ಯಾಸರ ಸ್ವಂತವಾಕ್ಯಗಳೆಂದು ಉದಾಹರಿಸಿದರೂ, ಆ ವಾಕ್ಯಗಳನ್ನು ನಾವು ಈಗ ಉಪಲಬ್ಧವಾದ ಮಹಾಭಾರತದಲ್ಲಿ ಕಾಣುವುದಿಲ್ಲ. ಇದರಿಂದ ೧೨ನೆಯ ಶತಮಾನದಲ್ಲಿಯೇ ಲಬ್ಧವಾದ ಭಾರತದಲ್ಲಿದ್ದ ಕೆಲವು ಭಾಗಗಳು ಈಗ ಲುಪ್ತವಾಗಿದೆಯೆಂದು ಸಿದ್ಧವಾದಾಗ, ಅವರಿಗಿಂತ ೧೨೦೦ ವರ್ಷಗಳಿಗಿಂತಲೂ ಮುಂಚೆಯೇ ಇದ್ದ ಭಾಸನ ಕಾಲದ ಭಾರತದ ರೂಪವು ಹೇಗಿತ್ತೋ ಎಂಬುದನ್ನು ನಾವು ಊಹಿಸುವುದು ಕಷ್ಟಸಾಧ್ಯವಲ್ಲವೇ ?

ಈಗ ನಮಗೆ ಸಿಕ್ಕಿರುವ ಭಾಗವತ ಪುರಾಣವು ವಿಷ್ಣು ಪುರಾಣಕ್ಕಿಂತಲೂ ಅರ್ವಾಚೀನವೆಂಗೂ ಒಪ್ಪಿದ್ದಾರೆ. ಅದನ್ನು ವ್ಯಾಸರು ಬರೆದ ಪುರಾಣದಿಂದ

ಯಾರೋ ಸಂಗ್ರಹಿಸಿರಬೇಕೆಂಬ ಅಂಶವೇನೋ ನಿರ್ವಿವಾದವಾಗಿದೆ. ಭಾಸನ ಕಾಲದಲ್ಲಿ ಈ ವೇದವ್ಯಾಸ ನಿರ್ಮಿತವಾದ ಭಾಗವತ ಪುರಾಣವು ಉಪಲಬ್ಧವಾಗಿದ್ದಿರಬಹುದೋ ತಿಳಿಯದು. ಈಗಿನ ಭಾಗವತ ಪುರಾಣದಲ್ಲಿ ದೇವಕಿಯ ಎಂಟನೆಯ ಗರ್ಭವು ಶ್ರೀಕೃಷ್ಣನೆಂದಿದ್ದು, ಅಶರೀರವಾಣಿಯು ಆತನ ಅವತಾರವನ್ನು ಕಂಸನಿಗೆ ಸೂಚಿಸಿದರೆ, ಭಾಸನ ಬಾಲಚರಿತದಲ್ಲಿ ಈ ಕೃಷ್ಣನೇ ಏಳನೆಯ ಮಗನೆಂದೂ, ಮಧೂಕ ಋಷಿಯ ಶಾಪದಿಂದ ಕಂಸನು ಸತ್ತನೆಂದೂ ಕಥೆ. ಹೀಗೆಯೇ ಇನ್ನೂ ಕೆಲವು ವೈಷಮ್ಯಗಳಿವೆ. ಭಾಸನು ಕೃಷ್ಣನ ಹಲ್ಲೀಸಕ ನಾಟ್ಯವನ್ನು ವರ್ಣಿಸಿದರೆ ಭಾರತದಲ್ಲಿ ರಾಸಕ್ರೀಡೆಯು ವರ್ಣನೆಯಿದೆ. ಭಾಸನಲ್ಲಿ ಘೋಷಸುಂದರೀ, ವನಮಾಲಾ, ಚಂದ್ರರೇಖಾ, ಮೃಗಾಕ್ಷೀ ಎಂಬಿಷ್ಟೇ ಗೋಪಿಯರು ಬಂದರೆ, ಭಾಗವತದಲ್ಲಿ ಇನ್ನೂ ಅನೇಕ ಗೋಪಿಯರು ಬಂದು, ಜಯದೇವನ ಗೀತಗೋವಿಂದಾದಿ ಅರ್ವಾಚೀನ ಗ್ರಂಥಗಳಲ್ಲಿ ರಾಧೆಯೂ ಬಂದುಬಿಡುವಳು. ಭಾಸನ ಕಥೆಯಾದರೋ ನೇಮಿನಾಥ ಪುರಾಣದ ಜೈನ ಕಥೆಯೊಡನೆಯೂ, ಬೌದ್ಧರ ಘಟ ಜಾತಕದಲ್ಲಿಯ ಕನ್ಹ ಪಂಡಿತನ ಕಥೆಯೊಡನೆಯೂ ಸ್ವಲ್ಪ ಮಟ್ಟಿಗೆ ಸಾಮ್ಯವನ್ನು ತೋರಿಸುತ್ತದೆ.

ಉಪಸಂಹಾರ:– ಆದಿಕಾವ್ಯವನ್ನು ರಚಿಸಿದ ವಾಲ್ಮೀಕಿ, ಮತ್ತು ಪುರಾಣಶ್ರೇಷ್ಠವೆಂದು ಸ್ವೀಕೃತನಾದ ಮಹಾಭಾರತದ ಕರ್ತರಾದ ವ್ಯಾಸಮಹರ್ಷಿಗಳ ಸಾಲಿನವನಾಗಿ ಅವರಿಗಿಂತ ನಾಲ್ಕೈದು ಶತಮಾನಗಳೊಳಗೇನೇ ಭಾಸನೂ ಇದ್ದಿರಬಹುದೆಂದೂಹಿಸಬಹುದಾಗಿದೆ.

೪

ಭರತಮುನಿಯೂ ಭಾಸನೂ

ಚಾರುದತ್ತ, ಪಂಚರಾತ್ರ, ಮಧ್ಯಮವ್ಯಾಯೋಗ, ದೂತ ಘಟೋತ್ಕಚ, ಊರುಭಂಗ ಈ ನಾಟಕಗಳ ಅಂತ್ಯದಲ್ಲಿ ಭರತವಾಕ್ಯವೆಂಬ ಪದವು ತೋರದಿದ್ದರೂ, ಬೇರೆ ಎಂಟು ನಾಟಕಗಳ ಅಂತ್ಯದಲ್ಲಿ ಭರತ ವಾಕ್ಯವೆಂಬ ಪದವೂ ಬೇರೆ ನಾಟಕಗಳಲ್ಲಿರುವಂತೆಯೇ ಬಂದಿದೆ. ಆದರೆ ಇದರಿಂದಲೇ ಭರತನು ಭಾಸನಿಗಿಂತಲೂ ಪ್ರಾಚೀನನೆಂದು ವಾದಿಸಲು ಸಾಧ್ಯವಿಲ್ಲ. ನಾಟಕಗಳ ಹಸ್ತ ಪ್ರತಿಗಳನ್ನು ತಯಾರಿಸಿದವರೇ ಈ ಭರತ ವಾಕ್ಯವೆಂದು ಬರೆಯುವ ಕ್ರಮವನ್ನಾರಂಭಿಸಿರಲೂ ಬಹುದು.

ಲೋಕಸ್ಯ ಚರಿತಂ ನಾಟ್ಯಂ ಎಂಬುದೇ ಭರತ ಮುನಿಯ ನಾಟಕದ ಲಕ್ಷಣವು. ಅರ್ಥಾತ್ ಭರತನು ನಾಟ್ಯಶಾಸ್ತ್ರವನ್ನು ಬರೆದಾಗ ನಾಟಕಗಳಿನ್ನೂ ಲೋಕದ ಚರಿತವನ್ನೇ ಪ್ರತಿಬಿಂಬಿಸುತ್ತಾ ಆದರ್ಶಗಳನ್ನೇ ಚಿತ್ರಿಸುವ ಗೋಜಿಗೆ ಇನ್ನೂ ಬಂದಿದ್ದಿಲ್ಲ. ಭಾಸನ ನಾಟಕಗಳಲ್ಲಿಯೂ ಈ ಸಮಾಜದ ಯಥಾವಸ್ಥಿತವಾದ ಚಿತ್ರಣವನ್ನೇ ನಾವು ಕಾಣುವೆವು. ಇದೇ ಭರತನು ಹೀಗೆ ಹೇಳಿದ್ದರೂ ಸ್ವಲ್ಪ ಮುಂದೆ ಇದನ್ನೇ ಲೊಕೋಪದೇಶ ಜನನಂ ಎಂದು ಮಾರ್ಪಡಿಸಿದಂತಿದೆ. ಭರತನಾನಂತರ ಬಂದ ಸಾಹಿತ್ಯ ವಿವೇಚಕರೂ ನಾಟಕಗಳಲ್ಲಿ ಆದರ್ಶ ಚಿತ್ರಣವೇ ಇರಬೇಕೆಂದು ಸಾಧಿಸಿ ನಮ್ಮ ನಾಟಕಗಳ ಮಟ್ಟವನ್ನೇ ಬದಲಿಸಿಬಿಟ್ಟರು, ಇದಂತಿರಲಿ. ನಾಂದೀ ಸೂತ್ರಧಾರನು ಪೂರ್ವರಂಗವನ್ನು ಮುಗಿಸಿ ಹೋದ ಅನಂತರ ಸ್ಥಾಪಕ ಸೂತ್ರಧಾರನೆಂಬವನಿನ್ನೊಬ್ಬನು ರಂಗದಲ್ಲಿ ಬರುವನೆಂದು ಭರತನು (vi. ೧೫೦ ಕಾವ್ಯಮಾಲಾ ಸಂಪಾದಿತ ಪ್ರತಿಯಲ್ಲಿ) ಹೇಳಿದರೆ ಇದನ್ನೇ ಅನುಮೋದಿಸುವವನಂತೆ ಭಾಸನೂ ಪ್ರಸ್ತಾವನಾ ಪ್ರತಿಸಮಾಪನ ಸೂತ್ರಧಾರಃ ಎಂದು ದೂತಘಟೋತ್ಕಚ ನಾಂದಿಯಲ್ಲಿ ತನ್ನ ಕಾಲ

ದಲ್ಲಿಯೂ ಇಬ್ಬರು ಸೂತ್ರಧಾರರಿದ್ದರೆಂದು ಹೇಳುವನು. ಈ ಸಂದರ್ಭದಲ್ಲಿಯೂ ಭಾಸನ ಮಾತಿನ ಧ್ವನಿಯನ್ನು ಊಹಿಸುವದಾದರೆ, ಪೂರ್ವರಂಗ ಸೂತ್ರಧಾರನ ಅವಶ್ಯಕತೆಯೇ ನಮಗಿಲ್ಲ. ಎರಡನೆಯವನೇ ಸಾಕೆಂದೂ ಭಾಸನೇ ಆ ಕಾಲದಲ್ಲಿ ವಾದಿಸಿದಂತಿದೆ. ಆದ್ದರಿಂದ ಅರ್ವಾಚೀನ ನಾಟಕ ಕರ್ತರೆಲ್ಲರೂ 'ನಾಂದ್ಯಂತೇ ತತಃ ಪ್ರವಿಶತಿ ಸೂತ್ರಧಾರಃ' ಎಂದು ಎರಡನೆಯ ಸೂತ್ರಧಾರನನ್ನೇ ಆದರಿಸುವ ವಾಡಿಕೆಯು ಬಂತು. ಈ ಸಂದರ್ಭದಲ್ಲಿ ಬಾಣನು, 'ಸೂತ್ರಧಾರ ಕೃತಾರಂಭೈಃ ನಾಟಕೈಃ' ಎಂದು ಭಾಸನ ನಾಟಕಗಳಿಗೆ ಕೊಟ್ಟ ವಿಶೇಷಣವನ್ನು ಪರಿಶೀಲಿಸುವದು ಯುಕ್ತವಾಗಿದೆ. ಕರ್ಣಭಾರದ ಪ್ರಸ್ತಾವನೆಯೊಂದನ್ನು ಬಿಟ್ಟು ಉಳಿದ ೧೨ ನಾಟಕಗಳಲ್ಲಿ **'ಸ್ಥಾಪನೆ'** ಎಂಬ **ಪ್ರಸ್ತಾವನೆ**ಯಿದ್ದು ಈ ಸ್ಥಾಪನೆಯು ಅತಿ ಚಿಕ್ಕದಾಗಿ 'ಅಯೇ! ಕಿಂ ನು ಖಲು ಮಯಿ ವಿಜ್ಞಾಪನವ್ಯಗ್ರೇ ಶಬ್ದ ಇವ ಶ್ರೂಯತೇ? ಅಂಗ! ಪಶ್ಯಾಮಿ' ಎಂಬ ಸೂತ್ರಧಾರನ ವಚನದಲ್ಲಿ ಅಂತ್ಯವಾಗುವುವು ಭಾಸನ ನಾಟಕಗಳೆಂದು ಡಾಕ್ಟರ್ ಗಣಪತಿ ಶಾಸ್ತ್ರಿಗಳು ವಾದಿಸಿರುವರು. ಈ ವಾದಸರಣಿಯನ್ನನುಸರಿಸಿದರೆ, ಶಕ್ತಿಭದ್ರನ ಆಶ್ಚರ್ಯಚೂಡಾಮಣಿ, ದಾಮಕ ಪ್ರಹಸನ, ಸುಭದ್ರಾಧನಂಜಯ, ಮತ್ತವಿಲಾಸ ಪ್ರಹಸನ ಇತ್ಯಾದ್ಯನೇಕ ನಾಟಕಗಳೆಲ್ಲಾ ಭಾಸನವೆಂದು ನಾವು ಒಪ್ಪಲೇ ಬೇಕಾಗುವದು. ಅಭಿನವಗುಪ್ತನು ನಾಟ್ಯ ಶಾಸ್ತ್ರದ (ಬರೋಡ ಸಂಪಾದಿತ ಪ್ರತಿ Vol I. P. ೨೫೧) ಲ್ಲಿ ಹೇಳುವ ವಾಕ್ಯವನ್ನೀಸಂದರ್ಭದಲ್ಲಿ ಉದಾಹರಿಸುವದು ಯುಕ್ತವಾಗಿದೆ — 'ದ್ವಿವಿಧಾ ಪ್ರಸ್ತಾವನಾ ಭವತಿ ಪೂರ್ವರಂಗಸ್ಯ ಅಂಗಭೂತಾನ್ಯಸ್ಯ ವಾ। ತತ್ರ ಪೂರ್ವರಂಗೇ ಅಸ್ಯಾಃ ಕವಿಃ ಉದಾಸೀನಃ ಸ್ಥಾಪಕಃ ಏವ ಸ್ವತಂತ್ರೋನಿರ್ಮಾತಾ ತ್ವನ್ಯೋ ವಾ ಕವಿಃ ಧ್ರುವಾಗಾನಾದಾವಪಿ ಪದಂ। ಯದಾಹ ಶ್ರೀಹರ್ಷಃ- ಅತ ಏವ ಹಾಸೋ (ಭಾಸೋ?) ನಾಮ ಕವಿಃ ಕಸ್ಮಿಂಶ್ಚಿನ್ನಾಟಕೇ (ನಲವಿಕ್ರಮೇ?) ದಿವಂ ಯಾತಃ ಚಿತ್ತಜ್ವರೇಣ ಕಲಿಃ ಇತ ಏವ ಅಭಿವರ್ತತೇ? ಅಶಕ್ಯಮಸ್ಯ ಪುರತೋಽವಸ್ಥಾತುಂ....' ಈ ವಾಕ್ಯದ ಪ್ರಕಾರ ಶ್ರೀಹರ್ಷನೆಂಬೊಬ್ಬ ಪ್ರಾಚೀನ ನಾಟ್ಯ ಶಾಸ್ತ್ರ ಟೀಕಾಕಾರನ ಸಾಕ್ಷ್ಯದ ಪ್ರಕಾರ (ರತ್ನಾವಲೀ ಕರ್ತ ಅಥವಾ ನೈಷಧಕಾರನಲ್ಲ) ಭಾಸನು ನಲವಿಕ್ರಮವೆಂಬ ನಾಟಕವನ್ನು ಬರೆದಿದ್ದನೆಂತಲೂ ಆ ನಾಟಕದಲ್ಲಿ ಇತರ ನಾಟಕದಲ್ಲಿರುವಂತೆಯೇ ಪ್ರಸ್ತಾವನೆಯನ್ನೇ (ಸ್ಥಾಪನೆಯನ್ನಲ್ಲ) ಬರೆದಿದ್ದನೆಂತಲೂ ಸಿದ್ಧವಾಯಿತು. ಒಟ್ಟನಲ್ಲಿ ಹೇಳುವುದಾದರೆ ಬಾಣನ **'ಸೂತ್ರಧಾರಕೃ**ತಾರಂಭೈಃ' ನಾಟಕೈಃ ಎಂಬ ಪದಕ್ಕೆ ಭಾಸನ ಪ್ರಸ್ತಾವನಾ ಪ್ರತಿಸಮಾಪನ ಸೂತ್ರಧಾರಃ ಎಂಬ ಅರ್ಥವನ್ನೇ ಹೇಳಿ, ಆತನೊಬ್ಬನೇ ಸಾಕೆಂದು ಪ್ರತಿಪಾದಿಸುವದರಲ್ಲಿ ಭಾಸನೇ ಅಗ್ರಗಣ್ಯನು, ಅವನ ಅನಂತರ ಇದೇ

ಸಂಪ್ರದಾಯವು ಬೇರೂರಿತೆಂದು ಹೇಳುವುದೇ ಸಮಂಜಸವೆಂದು ತೋರುತ್ತದೆ.

ಹೀಗೆಯೇ ಭರತನು ನಾಟ್ಯಶಾಸ್ತ್ರ XVIII ೧೯ ಮತ್ತು ೨೦ (ಕಾವ್ಯ ಮಾಲಾಪ್ರತಿ) ರಲ್ಲಿ ರಂಗದ ಮೇಲೆ ಸಾಯುವದನ್ನೂ ಯುದ್ಧಗಳನ್ನೂ ಪ್ರದರ್ಶಿಸುವದನ್ನು ನಿಷೇಧಿಸಿದುದು ಸಾಕ್ಷಾತ್ ಭರತನ ಕೆಲಸವಲ್ಲ, ಅವನಿಂದ ಮತ್ತೆ ಬಂದವರು ಇದನ್ನೊತ್ತಿ ಸಂಪೂರ್ಣವಾಗಿ ನಿಷೇಧಿಸಿರಬೇಕೆಂದೇ ತೋರುತ್ತದೆ. ಭರತನ ಶ್ಲೋಕಗಳನ್ನು ನೋಡುವಾ –

ನ ಭೇದ್ಯಂ ನಾಪಿ ಚ ಚ್ಛೇದ್ಯಂ ನ ಚಾಪಿ ರುಧಿರಸ್ರುತಿಃ।
ರಂಗೇ ಪ್ರಹರಣಂ ಕಾರ್ಯಂ ನ ಚಾಪಿ ವ್ಯಕ್ತ ಘಾತನಂ॥
ರಾಜ್ಞಾ ಮಾತ್ರೇಣ ಕರ್ತವ್ಯಂ ಶಸ್ತ್ರಾಣಾಂ ಮೋಕ್ಷಣಂ ಬುಧೈಃ।
ಅಥವಾಭಿನಯೋಪೇತಂ ಕುರ್ಯಾಚ್ಛೇದ್ಯಂ ವಿಧಾನತಃ॥

ಭರತನ ಶಬ್ದಗಳನ್ನೇ (ಇಲ್ಲಿ ಎರಡನೆ ಪಂಕ್ತಿಯನ್ನು) ಪರಿಶೀಲಿಸಿದರೆ, "ರಂಗದಲ್ಲಿ ಹೊಡಿಸುವದನ್ನು ಮಾಡಬೇಕು – ಆದರೂ ಎಲ್ಲರಿಗೂ ತಿಳಿಯುವಂತೆ ಕೊಲ್ಲಿಸಬಾರದು (ಅಂದರೆ ಅವ್ಯಕ್ತವಾಗಿ ಕೊಲ್ಲಿಸಬಹುದಷ್ಟೆ.) **'ಮಾತ್ರೇಣ'** ಅಂದರೆ ಸ್ವಲ್ಪ ಮಟ್ಟಿಗೇನೇ ಶಸ್ತ್ರಗಳ ಮೋಕ್ಷಣವು ಮಾಡಲ್ಪಡಬಹುದು. ಅಥವಾ ಚ್ಛೇದ್ಯವನ್ನು ಅಂದರೆ ಆಯುಧಗಳಿಂದ ಕಡಿಯುವುದನ್ನು ಮಾಡುವಂತೆ ಅಭಿನಯವನ್ನು ವಿಧಾನವಾಗಿ ಮಾಡಬೇಕು." ಇದರ ಪ್ರಕಾರವಾದರೆ ಕೆಲವು ಸಣ್ಣ ಪುಟ್ಟ ಯುದ್ಧಗಳನ್ನು ಭರತನು ರಂಗಭೂಮಿಯ ಮೇಲೆ ಪ್ರದರ್ಶಿಸಬಹುದೆಂದು ಒಪ್ಪಿದ್ದನೆಂದು ತೋರುತ್ತದೆ. ಭರತನು ನಾಟ್ಯಶಾಸ್ತ್ರದಲ್ಲಿ ವ್ಯಾಯೋಗ, ಸಮವಕಾರ, ಉತ್ಸೃಷ್ಟಿಕಾಂಕ ಎಂಬ ವೀರರಸ ಪ್ರಧಾನಗಳಾದ ನಾಟಕಭೇದಗಳಲ್ಲಿ ರಂಗಭೂಮಿಯ ಮೇಲೆ ಯುದ್ಧವನ್ನೂ, ಸಾವನ್ನೂ, ಪ್ರದರ್ಶಿಸಲೇಬೇಕಾಗಿತ್ತು. ಈ ಪ್ರಾಚೀನ ವ್ಯಾಯೋಗ ಸಮವಕಾರಗಳು ಈಗ ನಮಗೆ ಸಿಕ್ಕಲಿಲ್ಲವಾದರೂ, ಭಾಸನ ಕೆಲವು ನಾಟಕಗಳಲ್ಲಿ ಸಾವಿನಲ್ಲಿ ಪರ್ಯವಸಾನವಾಗುವ ವೀರರಸ ಸನ್ನಿವೇಶಗಳು ಚಿತ್ರಿತವಾಗಿವೆ. ಪತಂಜಲಿಯ ಸಾಕ್ಷ್ಯದ ಪ್ರಕಾರ ಆತನ ಕಾಲದಲ್ಲಿ ಶೋಭನಿಕರೆಂದು ಪ್ರಸಿದ್ಧರಾದ ನಾಟಕ ಕಂಪನಿಗಳು ರಂಗಭೂಮಿಯಲ್ಲಿ ಕಂಸನು ಸಾಯುವದನ್ನು ನಾಟಕವಾಗಿ ಆಡಿ ತೋರಿಸುತ್ತಿದ್ದರೆಂದು ಗೊತ್ತಾಗುತ್ತದೆ. ಇವನಿಗಿಂತ ಸ್ವಲ್ಪ ಮುಂಚಿನವನಾದ ಭಾಸನೂ ತನ್ನ ನಾಟಕಗಳಲ್ಲಿ ವಾಲಿದುರ್ಯೋಧನರು ಸಾಯುವದನ್ನು ಚಿತ್ರಿಸಿದ್ದಾನೆ. ಭರತನು ಪ್ರತಿಪಾದಿಸಿದ ಹತ್ತು ವಿಧದ ನಾಟಕಗಳಲ್ಲಿ ಅತ್ಯಪೂರ್ವಗಳಾದ ವ್ಯಾಯೋಗ (ಮಧ್ಯಮ ವ್ಯಾಯೋಗ) ಸಮವಕಾರ (ಪಂಚರಾತ್ರ),ಗಳನ್ನ ಸಾಧಾರಣವಾಗಿ,

ಆತನು ವರ್ಣಿಸಿದಂತೆಯೇ ಭಾಸನು ಪ್ರಯೋಗದಲ್ಲಿ ತಂದದ್ದು ಗಮನಾರ್ಹನಾಗಿದ್ದು, ಭರತನ ಅನಂತರ ಬಂದ ನಾಟಕಸ್ವರೂಪ ನಿರ್ಣೇತರು ರಂಗಭೂಮಿಯಲ್ಲಿ ಸಾವನ್ನು ಚಿತ್ರಿಸಲಿಕ್ಕೇ ಕೂಡದೆಂದು ನಿಷೇಧವನ್ನು ಜಾರಿಯಲ್ಲಿ ತಂದಿರುವ ಮುಂಚೆಯೇ ಭಾಸನು ಜೀವಿಸಿರಬೇಕು.

ಇದೇ ನಾಟ್ಯಶಾಸ್ತ್ರದ ಕಾವ್ಯಮಾಲೆ ಪ್ರತಿ XII ೧೭೯ ಶ್ಲೋಕದಲ್ಲಿ ರಾಜರಿಗೂ ದೇವರಿಗೂ ಸಿಂಹಾಸನಗಳನ್ನೂ, ಪುರೋಹಿತರಿಗೆ ಕುರ್ಚಿಗಳನ್ನೂ, ಬ್ರಾಹ್ಮಣರಿಗೆ ಮರದ ಆಸನಗಳನ್ನೂ, (ಮಣೆ?), ಮುಂಡದಿಂದ ಮಾಡಿದ ಆಸನಗಳನ್ನು ರಾಣಿಯರಿಗೂ, ರಾಜಕುಮಾರರಿಗೆ ಜಮುಖಾನಗಳನ್ನೂ, ಕೂಡ್ರಲಿಕ್ಕೆ ಕೊಡಬೇಕೆಂದು ವಿಧಿಸಿದೆ–

ದೇವನಾಂ ನೃಪತೀನಾಂ ಚ ದದ್ಯಾತ್ ಸಿಂಹಾಸನಂದ್ವಿಜಾಃ। ಪುರೋಧಸಾಮಮಾತ್ಯಾನಾಂ ಭವೇದ್ವೇತ್ರಾಸನಂತಥಾ। ಮುಂಡಾಸನಂ ಚ ದಾತವ್ಯಂ ಸೇನಾನೀಯುವರಾಜಯೋಃ ಕಾಷ್ಠಾಸನಂ ಬ್ರಾಹ್ಮಣಾನಾಂ ಕುಮಾರಾಣಾಂ ಕುಥಾಸನಂ॥ ಆದರೆ ದೂತವಾಕ್ಯದಲ್ಲಿ ಭೀಷ್ಮ, ದ್ರೋಣ, ಶಕುನಿ, ವೈಕರ್ಷಣ, ವರ್ಷದೇವರನ್ನು ತನ್ನ ಆಸ್ಥಾನ ಸಭೆಯಲ್ಲಿ ಕೂಡ್ರುವರೆ ನಿಮಂತ್ರಿಸಿದಾಗ, ದ್ರೋಣನಿಗೆ ಕೂರ್ಮಾಸನ, ಭೀಷ್ಮನಿಗೆ ಸಿಂಹಾಸನ, ಶಕುನಿಗೆ ಚರ್ಮಾಸನಗಳನ್ನೂ ತೋರಿಸಿ ಉಳಿದವರನ್ನೆಲ್ಲಾ ಅಲ್ಲಿದ್ದ ವಿವಿಧ ಆಸನಗಳಲ್ಲಿ ಮಂಡಿಸುವರೆ ಹೇಳುವನು. ಆದರೆ ಇದರಿಂದ ಭಾಸನು ಭರತನ ನಿಯಮಗಳನ್ನು ಅರಿತಿದ್ದನೋ ಇಲ್ಲವೋ ತಿಳಿಯಲಾರೆವು.

ಭಾಸ ಭರತರಿಬ್ಬರೂ ವರ್ಣಿಸಿದ, 'ಅಪಭ್ರಂಶು ರಂಡೇದು' ಎಂದು ಗ್ರಾಮ್ಯವಾಗಿ ವರ್ಣಿಸಲು ಯೋಗ್ಯನಾದ ಶಕಾರನೂ, ಅವರ ಪೌರ್ವಾಪರ್ಯವನ್ನು ನಿರ್ಣಯಿಸಲು ಸಾಧಕವಾಗಲಾರನು. ನೋಡಿದರೆ ಜುಗುಪ್ಸೆಯನ್ನು ಹುಟ್ಟಿಸುವ ಅವನ ವಕ್ರಶರೀರ, ವಕ್ರತರವಾದ ಗತಿ, ಉಜ್ವಲವೇಷ, ಲಂಬವಾದ ವಸ್ತ್ರಗಳು, ಉದ್ದವಾದ ಮಾಲೆಗಳು, – ಇವಿಷ್ಟು ಅವನಿಗೆ ಸಹಜವಾಗಿ, ಉದ್ಧತವಾದ ದೃಷ್ಟಿಯಿಂದ ಎಲ್ಲರನ್ನೂ ತೃಣೀಕರಿಸುವನಂತೆ ನಡಿಯುವನೆಂದು ಭರತನ ವರ್ಣನೆ, (XII ೧೪೭–೧೫೦ Baroda ಸಂಪಾದಿತ ಪ್ರತಿ ಪುಟ ೨೧೫) ಶ, ಷ, ಸ ಈ ಮೂರಕ್ಷರಗಳನ್ನೂ ತಪ್ಪಾಗಿ **'ಶ'** ಎಂತಲೇ ಉಚ್ಚರಿಸುವದರಿಂದ ಆತನಿಗೆ ಆ ಹೆಸರಂತೆ. ಸುಲಭವಾಗಿ ಕೋಪಿಸಿಕೊಳ್ಳುವವನೂ, ನಿಮಿತ್ತವಿಲ್ಲದೇನೇ ಪ್ರಸನ್ನನಾಗುವನೆಂದೂ, ನೀತಿಬಾಹಿರನಾದ ಅಧಮನೆಂದೂ ಇವನನ್ನು ವರ್ಣಿಸುವನು. ಅಭಿನವಗುಪ್ತನ ಟೀಕೆಯಲ್ಲಿ ಮಹಾಕವಿಯಾದ ಭೀಮನೆಂಬ ಇನ್ನೊಬ್ಬ ಕವಿಯು ಪ್ರತಿಜ್ಞಾ ಚಾಣಕ್ಯನೆಂಬ ನಾಟಕದಲ್ಲಿ ವಿಂಧ್ಯಕೇತುವೆಂಬ ಶಕಾರನನ್ನು

ವರ್ಣಿಸಿದ್ದಾನೆಂದು ಹೇಳಿದರೂ ಈ ನಾಟಕವು ಉಪಲಬ್ಧವಿಲ್ಲ, ಅದು ಎಂದು ಬರೆಯಲ್ಪಟ್ಟಿದೆಂದೂ ತಿಳಿದಿಲ್ಲ. ಅದಿರಲಿ, ಭಾಸನೂ, (ಅವನನ್ನನುಕರಿಸಿ ಶೂದ್ರಕನೂ) ಈ ಶಕಾರನನ್ನು ವರ್ಣಿಸಿರುವರು. ರಾಜನ ತಂಗಿಯ ಗಂಡ, ತಾನು ಸಂಸ್ಥಾನಕನೆಂದು ಹೆಜ್ಜೆ ಹೆಜ್ಜೆಗೂ ಕೊಚ್ಚಿಕೊಂಡು, ವಸಂತಸೇನೆಯನ್ನು ಕಾಮಿಸುವಾಗಲೂ ಇದೇ ಮಂತ್ರವನ್ನೇ ಜಪಿಸುವನು. ಮೃಚ್ಛಕಟಿಕದಲ್ಲಿ ಇವನನ್ನು ಕಾಣೇಲೀಮಾತಃ ಅಂದರೆ ಮದುವೆಯಾಗದ ಕನ್ಯೆ (ಅರ್ಥಾತ್ ಸೂಳೆ)ಯ ಮಗನೆಂದು ವಿಟನು ಆಗಾಗ್ಯೆ ಕರೆಯುವನು. ಭಾಸನೇ ಮೊತ್ತ ಮೊದಲು ಈ ಶಕಾರನ ಪಾತ್ರವನ್ನು ಸೃಜಿಸಿದನೋ ತಿಳಿಯದು. ಅವನೇ ಸೃಜಿಸಿದ್ದರಂತೂ ಅವನ ಕೀರ್ತಿಯು ಅಪೂರ್ವವೇ ಆಗಿರಬೇಕು. ಚಾರುದತ್ತನ ೧ನೆಯ ಅಂಕದ ೧೬ನೆಯ ಶ್ಲೋಕದಲ್ಲಿ ಇವನ ಶಕಾರನ ವರ್ಣನೆಯು ಹೀಗಿದೆ–
ಅಭಿನಯತಿ ವಚಾಂಸಿ ಸರ್ವಗಾತ್ರೈಃ ಕಿಮಪಿ ಕಿಮಪ್ಯನಪೇಕ್ಷಿತಾರ್ಥಮಾಹ
ಅನುಚಿತಗತಿಃ ಅಪ್ರಗಲ್ಭವಾಕ್ಯಃ ಪುರುಷಮಯಸ್ಯಪಶೋಃ ನವಾವತಾರ.

ಅವಿಮಾರಕದಲ್ಲಿ ಭಾಸನು ನಾಟ್ಯಶಾಸ್ತ್ರವನ್ನುದಾಹರಿಸಿದ್ದರಿಂದ ಕೀತ್ ಎಂಬ ಪಾಶ್ಚಾತ್ಯ ನಾಟ್ಯಶಾಸ್ತ್ರವೇತ್ತರು (Keith-Sanskrit Drama P 292) ಯಾವುದೋ ಒಂದು ನಾಟ್ಯಶಾಸ್ತ್ರವನ್ನು ಇವನು ಕಂಡಿರಬಹುದೆಂದೂಹಿಸುತ್ತಾರೆ. ಇದು ಭರತನೇ ಆಗಿರಬಹುದೆಂದು ಅವರ ಅಭಿಪ್ರಾಯ. ಭಾಸನ ನಾಟಕಗಳಲ್ಲಿ ಬಂದ ಪಾತ್ರಗಳಿಗೆ ಮಹಾರಾಷ್ಟ್ರೀ ಪ್ರಾಕೃತವು ಗೊತ್ತಿಲ್ಲ. ಹಾಗೇ ಭರತನಿಗೂ ಅದರ ಪರಿಚಯವಿದ್ದಂತಿಲ್ಲ. ಆರನೆಯ ಶತಮಾನದಲ್ಲಿದ್ದ ದಂಡಿಯು ತನ್ನ ಕಾವ್ಯಾದರ್ಶದಲ್ಲಿ ಈ ಮಹಾರಾಷ್ಟ್ರೀಯನ್ನು 'ಪ್ರಕೃಷ್ಟಂ ಪ್ರಾಕೃತಂ' ಎಂದು ಹೊಗಳಿರುವನು, ಅದಂತಿರಲಿ. ಕೆಲವು ವಿದ್ವಾಂಸರು ಭಾಸನೇ ಪ್ರಾಚೀನನೆಂದೂ ಅವನು ಇನ್ನೊಂದು ನಾಟ್ಯಶಾಸ್ತ್ರವನ್ನು ರಚಿಸಿದ್ದಾನೆಂದೂ ವಾದಿಸಿರುವರು. ಈ ಸಂದರ್ಭದಲ್ಲಿ ದಾಕ್ಷಿಣಾತ್ಯರಲ್ಲಿ ರಂಗಭೂಮಿಯ ಅಧಿದೇವತೆಯಾದ ಬಲರಾಮನನ್ನು ಸ್ವಪ್ನನಾಟಕದ ನಾಂದಿಯಲ್ಲಿ ಭಾಸನು ಸ್ತುತಿಸಿದುದೂ ಗಮನಾರ್ಹವಾಗಿದೆ.

Calcutta Department of Letters XXV- ಎಂಬ ಕಲ್ಕತ್ತಾ Universityಯವರ ಪತ್ರಿಕೆಯ ೫೬ನೆಯ ಪುಟದಲ್ಲಿ ಶ್ರೀ M. Ghosh ಎಂಬ ಮಹನೀಯರು ಭರತನ ನಾಟ್ಯಶಾಸ್ತ್ರದಲ್ಲಿ ಪ್ರತಿಪಾದಿತವಾಗದಿದ್ದ 'ಎರಡು' ಛಂದಸ್ಸುಗಳನ್ನು ಭಾಸನ ನಾಟಕಗಳಲ್ಲಿ ನಾವು ಕಾಣುವೆವೆಂದು ವಾದಿಸಿರುವರು. ಇವುಗಳಲ್ಲಿ ಇಂದ್ರವಜ್ರಾ ಉಪೇಂದ್ರ ವಜ್ರಾ ಇವೆರಡೂ ಕಲೆತಲ್ಲಿ ಉಪಜಾತಿಯಾಗುವದರಿಂದ ಇವೆರಡನ್ನೂ ಪ್ರತ್ಯೇಕವಾಗಿ

ನಾಟ್ಯಶಾಸ್ತ್ರದಲ್ಲಿ ಭರತನು ವರ್ಣಿಸಿದ್ದರಿಂದ ಭರತನು ಪ್ರತಿಪಾದಿಸದಿರುವ ಛಂದಸ್ಸೆಂದರೆ, 'ಔಪಚ್ಛಂದಸಿಕ' ವೊಂದೇ ಬಾಕಿ ಉಳಿಯುವದು. ಛಂದಸ್ಸುಗಳ ಆಧಾರದಿಂದಲೇ ಪೌರ್ವಾಪರ್ಯವನ್ನು ನಿರ್ಣಯಿಸುವದಾದರೆ, ಅವರ ವಾದ ಸರಣಿಯಿಂದ ಬರುವ ಪೂರ್ವಾಪರತ್ವವನ್ನು ಸ್ವಲ್ಪ ಬದಲಿಸಿ ಹೀಗೆ ಹೇಳಬಹುದೆಂದು ತೋರುವುದು. ಭರತನಿಂದ ಹೆಚ್ಚಿನ ಛಂದಸ್ಸುಗಳು ಭಾಸನಲ್ಲಿ, ಕಾಲಿದಾಸನಲ್ಲಿ ೫ ಹೆಚ್ಚು, ಅಶ್ವಘೋಷನಲ್ಲಿ ೭ ಹೆಚ್ಚು, ಭಟ್ಟಿಯಲ್ಲಿ ೮ ಹೆಚ್ಚು, ಭಾರವಿಯಲ್ಲಿ ೧೦, ಮಾಘನಲ್ಲಿ ೨೨ ಹೆಚ್ಚು ಎಂದು ಸಾಧಿಸಬಹುದೆಂದು ತೋರುತ್ತದೆ. ಈ ವಿದ್ವಾಂಸರ ಪ್ರಕಾರ ಭಾಸನು ಭರತನಿಗಿಂತಲೂ ಸ್ವಲ್ಪ ಅರ್ವಾಚೀನನೇ ಆಗಿರಬೇಕು.

ಇನ್ನು ಇವರಿಬ್ಬರ ದೇವತಾಮಂಡಲಗಳನ್ನು ಪರಸ್ಪರ ಹೋಲಿಸಿ (ಅದೇ ಮಹನೀಯರ ವರ್ಗೀಕರಣವನ್ನು ಅನುಸರಿಸಿ) ವಿವೇಚಿಸುವಾ, ನಾಟ್ಯಶಾಸ್ತ್ರದ ಚೌಖಾಂಬಾ ಸಂಪಾದಿತ ಪ್ರತಿಯನ್ನುಪಯೋಗಿಸಿದೆ.

ಭರತ	ಭಾಸ (ದೇವಧರ)
I ನೀಚ ದೇವತೆಗಳು	
ನಾಗಗಳು– I ೧೦, ೬೩, ಇತ್ಯಾದಿ. II ೮, III ೨೭; IV ೨೫೪, V ೫೧	**ನಾಗಲೋಕ**–ಪಾತಾಳ–ಬಾಲಚರಿತ I ೫ **ಕಾಲಿಯನಾಗ**–ಬಾಲ VI
ಪಕ್ಷಿಗಳು III ೯, ೨೯	**ಪಕ್ಷಿಗಳು**–ಗರುಡ–ವಿಷ್ಣು (ಕೃಷ್ಣನ) ವಾಹನ–ಬಾಲ I ೨೧, ದೂತವಾಕ್ಯ I ೫೩ ಜಟಾಯು–ಪ್ರತಿಮಾ IV ೨೨
ಜಲಚರಗಳು I ೮೮, III ೭; IV ೨೫೩	**ಜಲಚರಗಳು**– ಸಮುದ್ರ ದೇವತೆಯು ಸಾಯುವ ವೀರರ ಕಣ್ಣೆದುರಿಗೆ ಊರು ಭಂಗ ಅಭಿಷೇಕಗಳಲ್ಲಿ ಬರುವದು–ಸೇತುವನ್ನು ಕಟ್ಟುವಾಗ ರಾಮನ ಮುಂದೆ ಬರುವದು.
II ಪಿತ್ರಾದಿ ದೇವತೆಗಳು	
ಪಿತೃಗಳು-III ೨೭; V ೫೨	**ಪಿತೃಗಳು**-ದಶರಥಾದಿಗಳು ಸಾಯುವಾಗ ಕಾಣುವದು–ಪ್ರತಿಮೆ V ಯಲ್ಲಿ ಶ್ರಾದ್ಧ.
ಭೂತಗಳು-I ೮೭; ೯೨; III ೮; IV ೧೧, V ೫೪, XXIII ೩೧೬.	**ಭೂತಗಳು**-ಬಾಲಚರಿತ II ೧೦ ನಭಸ್ಥಳ ನಿವಾಸಿಭೂತ-ದೇವರು
ರಾಕ್ಷಸರು-I•೧೦, V ೪೭, XXIII ೨೧೬	**ರಾಕ್ಷಸರು**-ಬಾಲ ೧, ದೇವಧರಪ್ರ ೫೧೮

ಪಿಶಾಚರು-I ೯೨, III ೨೭, XXIII ೨೧೬	ಪಿಶಾಚರು—ಬಾಲ ೧, ದೇವಧರಪು ೫೧೮
ಯಕ್ಷರು-I ೧೦, III ೮	ಯಕ್ಷರು- ಅವಂತಿಸುಂದರಿಯೆಂಬ ಯಕ್ಷಿಣೀ-ಸ್ವಪ್ನ V ಪು ೪೩ ವಿದ್ಯಾಧರರು-ಅವಿಮಾರಕ IV – ೩ ವಿದ್ಯಾಧರರು ರಾಮರಾವಣ ಯುದ್ಧವನ್ನು ಅಭಿಷೇಕ VI ರಲ್ಲಿ ವರ್ಣಿಸಿರುವರು. ಚಾಂಡಾಲ ಕನ್ಯೆಯರು ಕಂಸನ ದೇಹದೊಳಗೆ ಪ್ರವೇಶಿಸುವರು.
ಅಸುರರು-I ೧೦, ೬೩, III ೮, V ೪೬, XXII ೧೬, XXXIII ೨೧೬	ಅಸುರರು-ಕರ್ಣಭಾರನಾಂದಿಯಲ್ಲಿ ಇವರನ್ನು ಸುರರಿಪು.

III ಅಷ್ಟದಿಕ್ಪಾಲಕರು

ಸೂರ್ಯ-I ೬೨,೮೫, II ೫, III ೨೪	ಸೂರ್ಯನ ಕುದುರೆಗಳು- ಕರ್ಣಭಾರ ೧೯
ಚಂದ್ರ-I ೮೪, II ೫, III ೨೪, V ೫೧	ಅಗ್ನಿಯು ಸೀತೆಯನ್ನು ಅಭಿಷೇಕದಲ್ಲಿ ಹೊರಗೆ ತಂದುದು-ಅವಿಮಾರಕನ ತಂದೆ
ಹುತಾಶನ- ಅಗ್ನಿ III	ಚಂದ್ರ-ಸೋಮ ಪ್ರತಿಮಾ V ೧೭
ಯಮ-I ೯೦, II ೬, III ೨೬, IV ೨೫೩	ಯಮ-ಸೂರ್ಯಪುತ್ರ V ೧೭
ವರುಣ-I ೬ , III ೨೮, IV ೨೫೩	ವರುಣ- ಸಮುದ್ರರಾಜ ಅಭಿಷೇಕದಲ್ಲಿ ರಾಮನಿಗೆ ಪ್ರತ್ಯಕ್ಷನಾದುದು
ಇಂದ್ರ-I ೧೦, II ೪, III ೨೪, IV ೨೫೨	ಇಂದ್ರ-ಶುಕ್ರ-ಪ್ರತಿಮಾ V ೧೭, ಮಧ್ಯಮ ೪೩, ಊರುಭಂಗ ೩೫, ಅಭಿಷೇಕ I ೩, II ೧೮,
ಲೋಕಪಾಲರು-I ೮೫, III ೫, V ೫೦	ದಿಕ್ಪಾಲಕರು-ಈ ಲೋಕಪಾಲರು ೪ ಮಾತ್ರ (ಅಷ್ಟ ಆದದ್ದು ಮತ್ತೆ) ಪ್ರತಿಮಾ V ೧೭

V ದಿವ್ಯರ್ಷಿಗಳು

ಬೃಹಸ್ಪತಿ-III, ೪, XXXIV ೭೯, XXXVI ೫೨	
ನಾರದ-XXXIV ೬೬	ನಾರದ-ಬಾಲ I ಅವಿಮಾರಕ VI ಪು ೧೮೦

VI ಭೂಮಿಯಲ್ಲಿರುವ ಋಷಿಗಳು

ಬಲದೇವ-IV ೨೫೪	ಬಲರಾಮ-ಸ್ವಪ್ನ ೧ ಊರುಭಂಗ

ನಹುಷ–XXXVI ೬೦, ೬೪, ೬೭	ಚಂಡಭಾರ್ಗವ–ಅವಿಮಾರಕ IV ಪು ೧೬೭
ಸನತ್ಕುಮಾರ–III ೩೧	ಮಧೂಕ–ಕಂಸನಿಗೆ ಶಾಪಕೊಟ್ಟವರು ಬಾಲ I

VII ತ್ರಿಮೂರ್ತಿಗಳೂ ಅವರ ಮಕ್ಕಳೂ

ಬ್ರಹ್ಮ–I ೧, ೬೧; III ೪, IV ೧, XXXIII ೨೦೭	ಬ್ರಹ್ಮ– ಮಧ್ಯಮಾ ೪೩
ವಿಷ್ಣು–I ೬೨, IV ೪, ೨೫೧, V ೧೦೦, XXXIII ೨೦೭, ೨೩೪೮	ವಿಷ್ಣು– " , ಬಾಲ III ೧೨
	ಶಿವ–ರುದ್ರ–ಹರ " " ಅಭಿಷೇಕ I ೩
ಶಿವ–I ೧, ೯೩, IV ೬, ೧೬, ೨೪೮ XXXIII ೨೦೭	ಶಕ್ತಿಧರ–ಕಾರ್ತಿಕೇಯ ಪ್ರತಿಜ್ಞಾ II ೨ ಬಾಲ II ೨೨, ಮಧ್ಯಮ ೪೩
ಕಾರ್ತಿಕೇಯ–I ೯೪, III ೪	ಗಣೇಶ–ಪ್ರತಿಜ್ಞಾ–I, III (?)
ಗಣೇಶ–III ೯ (?)	

VIII ಸ್ತ್ರೀ ದೇವತೆಗಳು

ಸರಸ್ವತಿ–III ೫, ೨೫	
ಲಕ್ಷ್ಮೀ– III ೫, ೨೫, VI ೨೫೨	ಲಕ್ಷ್ಮೀ–ಶ್ರೀ–ಕಂಸನರಾಜ್ಯಶ್ರೀ: ಬಾಲ II
ಉಮಾ–ಪಾರ್ವತೀ–ಚಂಡಿಕಾ III ೨೫೧, V ೫೩, IV ೨೪೬	ಉಮಾ–ಪಾರ್ವತೀ–ಪಂಚರಾತ್ರ II ೪೪ ಕಾತ್ಯಾಯಿನೀ–ಕಂಸನ ಮುಂದೆ ತೋರಿದವಳು. ಬಾಲ II ೨೦
ಸಿದ್ಧಿ, ಮೇಧಾ, ಸ್ಮೃತಿ, ಮತಿ III ೫	
ನಿಯತಿ– I ೯೦, III ೬.	

ಈ ಪರಸ್ಪರ ಸಾಮ್ಯದಿಂದ ಇಬ್ಬರ ದೇವತಾಮಂಡಲವೂ ಸಾಧಾರಣವಾಗಿ ಒಂದೇ ಎಂದು ಹೇಳಬಹುದು ಕೆಲವು ದೇವತೆಗಳ ಸುದ್ದಿ ಇನ್ನೊಬ್ಬರಲ್ಲಿಲ್ಲದಿದ್ದರೆ ಅದೇನೋ ಯಾದೃಚ್ಛಿಕವೆಂದೇ ಹೇಳಬಹುದು. ಈ ದೇವತಾಮಂಡಲಗಳಲ್ಲಿ ಗಣಪತಿಯನ್ನು ಸೇರಿಸಿದುದು ಯುಕ್ತವಲ್ಲವೆಂದು ನಾನು Mythic society Journal, New Series Vol XII ಸಂಚಿಕೆಯಲ್ಲಿ ಪ್ರತಿಪಾದಿಸಿದ್ದೇನೆ. ನಾಟ್ಯಶಾಸ್ತ್ರ III ೭ರಲ್ಲಿ ಮಹಾಗ್ರಾಮಣೀ ಶಬ್ದಕ್ಕೆ ಅಭಿನವಗುಪ್ತನೂ ಗಣಪತಿಯೆಂದೇ ಅರ್ಥವನ್ನು ಪ್ರತಿಪಾದಿಸಿದುದೂ, ಪ್ರತಿಜ್ಞಾ ನಾಟಕದಲ್ಲಿ ಬ್ರಹ್ಮಚಾರಿಯೆಂದರೆ ಗಣಪತಿಯೆಂದು ಮಹಾಮಹೋಪಾಧ್ಯಾಯ ಗಣಪತಿಶಾಸ್ತ್ರಿಗಳು ವಾದಿಸಿದುದೂ ಅಸಮಂಜಸವೆಂದೇ ತಿಳಿಯಬೇಕು. ಈ ಗಣಪತಿಗೆ ಸಾಧಾರಣಕ್ರಿಸ್ತಶಿನೆಯಶತಕಕ್ಕಿಂತಲೂ ಪ್ರಾಚೀನ ಸಾಹಿತ್ಯದಲ್ಲಿ ನಿರ್ದೇಶವೇ ಇಲ್ಲವೆಂದೊತ್ತಿ ಹೇಳಬೇಕಾಗಿದೆ.ಇದಕ್ಕಾಗಿಯೇ ಈ ದೇವತೆಯ ಮುಂದೆ ಒಂದು ಪ್ರಶ್ನಾರ್ಥಕ ಚಿಹ್ನೆಯನ್ನು ನಾವು ಸೇರಿಸುವೆವು. ಭಾಸನು

ಗ್ರಹಮಿವ **ಭಗಣೇಶಂ** ರಾಮುಮಾಲೋಕ್ಯ (ಅಭಿಷೇಕ VI ೬, ಹರಿ **ಗಣಪತಿ** ಸೈನ್ಯಂ (ಅಭಿ VI- ೪) ಹರಿವೃಕ್ಷ **ಗಣೇಶ್ವರಂ** (ಅಭಿ I. ೨೩) ಉಪಯೋಗಿಸಿದರೆ ಇಲ್ಲಿ ಯೌಗಿಕಾರ್ಥವೇ ಇಷ್ಟವೆಂದು ಕೂಡಲೇ ನಮಗೆ ಗೊತ್ತಾಗುವದಿಲ್ಲವೇ ?

ಇವನಿಗಿಂತಲೂ ೩ಯಾ ೪ ಶತಮಾನಗಳ ಅನಂತರ ಹದಿನೆಂಟು ಪುರಾಣಗಳಲ್ಲಿ ಶಿವ ವಿಷ್ಣುಗಳ ಪೂಜೆಯನ್ನೇ ಒತ್ತಿ ಹೇಳುವಂತಾಗಿದ್ದರೂ, ಭರತ ಯಾ ಭಾಸನ ಕಾಲದಲ್ಲಿ ಬ್ರಹ್ಮನಿಗೂ ಇವರಿಬ್ಬರಿಗಿದ್ದಷ್ಟೇ ಪ್ರಾಮುಖ್ಯತೆಯಿದ್ದಂತೆ ತೋರುತ್ತದೆ. ಈ ಸಂದರ್ಭದಲ್ಲಿ ಮಧ್ಯಮ ವ್ಯಾಯೋಗದ ೪೩ನೆಯ ಶ್ಲೋಕವು ಗಮನಾರ್ಹವಾಗಿದೆ. ವಿಶ್ವಕರ್ತಾ ಶಿವಃ ಶಕ್ರಃ ವಿಷ್ಣುಃ ಶಕ್ತಿಧರೋ ಯಮಃ । ಏತೇಷು ಕಥ್ಯತಾಂ ಕೇನ ತೇ ಸದೃಶಃ ಪಿತಾ ॥ ಎಂಬಲ್ಲಿ ಬ್ರಹ್ಮನಿಂದಲೇ ದೇವತೆಗಳ ಹೆಸರುಗಳು ಶುರುವಾಗುವುದು ಗಮನಾರ್ಹವಾಗಿದೆ. ಆದರೆ ಆಗಲೇ ಹರಿಹರರು ಇಂದ್ರನನ್ನು ದೇವೇಂದ್ರನನ್ನಾಗಿಸುವರೆ ಪ್ರಯತ್ನಿಸಿ ಕಟ್ಟಕಡೆಗೆ ತಾವೇ ದೇವೋತ್ತಮರಾಗುವ ಕ್ರಮವು ಆರಂಭವಾಗಿತ್ತೋ ಎಂದೂಹಿಸಬೇಕಾಗಿದೆ. ಅಭಿಷೇಕ I – ೩ರಲ್ಲಿಯೇ 'ಇಂದ್ರಂ ಹರಿಹರಾವಿವ' ಎಂದು ಬಂದಿದೆ. ಕಾಲಕ್ರಮೇಣ ರಾಕ್ಷಸರಿಗೆ ಅವಿವೇಕದಿಂದ ಬ್ರಹ್ಮನು ವರಗಳನ್ನು ಕೊಟ್ಟು ದೇವತೆಗಳಿಗೆ ಅಪ್ರಿಯವಲ್ಲದ ತೊಡರುಗಳನ್ನು ತಂದೊಡ್ಡಿ ಅವುಗಳಿಂದ ನಿವಾರಣೆಯನ್ನು ಪ್ರಾರ್ಥಿಸಿದರೆ – 'ವಿಷವೃಕ್ಷೋಪಿ ಸಂವರ್ಧ್ಯ ಸ್ವಯಂ ಚ್ಛೇತ್ತುಮ ಸಾಂಪ್ರತಂ' ಎಂದು ಕೈಸಾಗದಿರುವಾಗ, ಈಶ್ವರನೋ ವಿಷ್ಣುವೋ ಅವರನ್ನು ಆಪತ್ತಿನಿಂದ ಕಾಪಾಡಿದ್ದರಿಂದ ಇವರಿಬ್ಬರೇ ದೇವೋತ್ತಮರೆಂದು ಪೌರಾಣಿಕರು ವಾದಿಸಿದುದು ಸಹಜವೇ ಆಗಿದೆ ಎಂದೆನಿಸುತ್ತದೆ. ಭಾಸನ ನಾಟಕಗಳಲ್ಲಿ ವಿಷ್ಣು ಯಾ ನಾರಾಯಣರ ವಾಮನ, ರಾಮ, ಕೃಷ್ಣ, ನರಸಿಂಹ, ವರಾಹಾವತಾರಗಳ ನಿರ್ದೇಶವು ಮಾತ್ರ ಬಂದಿದ್ದು, ಉಳಿದ ಅವತಾರಗಳನ್ನು ಸೇರಿಸಿ ದಶಾವತಾರಗಳನ್ನು ಪ್ರತಿಪಾದಿಸಿರುದು ೩ ಯಾ ೪ ಶತಮಾನಗಳ ಅನಂತರವೆಂದೇ ಊಹಿಸಬಹುದಾಗಿದೆ. Sri Hazra ಎಂಬ ಮಹನೀಯರು ತಮ್ಮ 'Pouranic customs' – ಪೌರಾಣಿಕ ಸಂಪ್ರದಾಯಗಳೆಂಬ ಪುಸ್ತಕದಲ್ಲಿ ಇದೇ ಅಭಿಪ್ರಾಯವನ್ನು ಸಂಗ್ರಹವಾಗಿ ವಿವರಿಸುವರು– " The Markandeya Purana 54 includes Buddha among the 10 incarnations of Vishnu-Markandeya 4 mentions Avataras beginning with Varaha and ending with Mathura Krisna but does not mention Buddha but mentions Kalki.

Brahma Purana agrees with Markandeya and Harivamsa. The Jayakhya Samhita of about 450 A. D. of the Pancharatra school does not refer to Buddha. The mention of the Buddha in Gita Govinda, The Dasavatara charita of Kshemendra, a hymn of Nammalvar and Saint Sadagopa, Visnu Purana and a Pallava inscription besides Sri Sankara's inclusion show that this avatara was admitted in orthodox circles by the 7th or probably by 550 A. D." ಭಾಸನಾದರೋ ಮತ್ಸ್ಯ, ಕೂರ್ಮ, ಬುದ್ಧಾವತಾರಗಳ ಸುದ್ದಿಯನ್ನೇ ಎತ್ತುವದಿಲ್ಲ. ಪರಶುರಾಮನಿಗೂ ಈ ಗೌರವವು ಅವನ ಕಾಲದಲ್ಲಿ ಲಬ್ಧವಾಗಿದ್ದಿತೋ ಇಲ್ಲವೋ ಎಂಬುದು ಸಂಶಯಾಸ್ಪದವಾಗಿದೆ. ಬಾಲಚರಿತದ ನಾಂದೀ ಶ್ಲೋಕದ ಪ್ರಥಮ ಪಾದದ **'ನಾರಾಯಣ'** –ಶಂಖ ಕ್ಷೀರವಪುಃ ಪುರಾ ಕೃತಯುಗೇ ನಾಮ್ನಾ ತು ನಾರಾಯಣಃ ಎಂಬುದು ಯಾರನ್ನು ನಿರ್ದೇಶಿಸುವದೋ ತಿಳಿಯಲಶಕ್ಯವಾಗಿದೆ. ಆದರೆ ಆಗಲೇ ಅವತಾರ ತತ್ವವನ್ನು ಪೌರಾಣಿಕರು ತಿಳಿದುಕೊಂಡು ವಿಷ್ಣುವು ಪ್ರತಿಯುಗಗಳಲ್ಲಿ ಬೇರೆಬೇರೆ ಅವತಾರಗಳನ್ನು ಸ್ವೀಕರಿಸಿ, ಆತನೇ ರಾವಣನನ್ನು ಕೊಂದವನು, ಆತನೇ ವಿರೋಚನ ಬಲಿಯನ್ನೂ ಕೊಂದವನು ಎಂದು ಬಾಲಚರಿತದ ೧೮ನೆಯ ಶ್ಲೋಕದಲ್ಲಿ ತಿಳಿಸಿದ್ದಾನೆ.

ಬಾಲಚರಿತದ ೧೪ರಲ್ಲಿ ಸುರಾಸುರರಿಗೆ ನಿತ್ಯವೂ ಜಗಳವಾಗುತ್ತಿತ್ತೆಂದು ವರ್ಣಿಸಿದೆ. ದೂತ ಘಟೋತ್ಕಚದ ನಾಂದಿಯಲ್ಲಿ ವಿಷ್ಣುವು ಲೋಕಸಂರಕ್ಷಣಕ್ಕಾಗಿ ಉಪಾಯಶತಗಳನ್ನು ಆಗಾಗ್ಯೆ ಹೂಡುತ್ತಿರುವನೆಂದು ವರ್ಣಿಸಿದ್ದಾನೆ. ಊರುಭಂಗದ ೩೫ನೆಯ ಶ್ಲೋಕದಲ್ಲಿ ಕೃಷ್ಣನಾಗಲೇ ಜಗತ್ತುಗಳ ಪ್ರಿಯನೆಂದುಲ್ಲೇಖಿಸಿದೆ. ಅವನ ಅಷ್ಟಭುಜಗಳನ್ನು ದೂತ ಘಟೋತ್ಕಚ ೮ನೆಯ ಶ್ಲೋಕದಲ್ಲಿ ಹೊಗಳಿ, ಚಕ್ರ, ಶಾರ್ಙ, ಕೌಮೋದಕೀ, ಶಂಖ, ನಂದಕಗಳೆಂಬ ಆಯುಧಗಳನ್ನೂ ಗರುಡನೆಂಬ ವಾಹನವನ್ನೂ, ಬಾಲಚರಿತ, ದೂತವಾಕ್ಯಗಳಲ್ಲಿ ಹೇಳಿದೆ. ಕೃಷ್ಣನ ಶಂಖಕ್ಕೆ ಪಾಂಚಜನ್ಯವೆಂಬ ಹೆಸರಿನ್ನೂ ಬಂದ ಹಾಗಿಲ್ಲ. ಸಾಂದೀಪನಿಯ ಮಗನನ್ನು ನುಂಗಿದ ಮೀನಿನ ಎಲುಬಿನಿಂದ ಇದನ್ನು ಮಾಡಿದ್ದನೆಂಬ ಕಥೆ (ಭಾಗವತ ಪೂರ್ವಾರ್ಧ ೪೫ ಅಧ್ಯಾಯ) ಇನ್ನೂ ಗೊತ್ತಿದ್ದಹಾಗಿಲ್ಲ. ಇದನ್ನು ಕ್ಷೀರಸಮುದ್ರದಿಂದ ವಿಷ್ಣುವೇ ತೆಗೆದುದೆಂದು ಮಾತ್ರ (ಕ್ಷೀರೋದಾದ್ವಿಷ್ಣು

ನಾ ಸ್ವಯಂ ಉದ್ಧೃತಃ –ಬಾಲ I ೨೫) ಎಂದಿಷ್ಟೇ ಇದೆ. ಡಾ. ಭಾಂಡಾರಕರ ಮಹಾಶಯರು ಅವರ Vaishnavaism ಎಂಬ ಆಂಗ್ಲ ಗ್ರಂಥದಲ್ಲಿ ಅಭಿಪ್ರಾಯಪಡುವದೇನೆಂದರೆ:– "ವಾಸುದೇವ ಸಂಕರ್ಷಣಗಳೆಂಬ ಎರಡೇ ವ್ಯೂಹಗಳನ್ನು ಅತೀ ಪ್ರಾಚೀನ inscriptions ಅಂದರೆ ಸಾಧಾರಣ ಕ್ರಿ. ಪೂ. ೧ನೆಯ ಶತಮಾನ ಕಾಲದ ಲ್ಲಿಅರಿತಿರಬಹುದು. ಚತುರ್ವ್ಯೂಹಗಳ ನ್ನಿನ್ನೂ ಪ್ರತಿಪಾದಿಸಿದ್ದಿಲ್ಲ." ಇವರ ಅಭಿಪ್ರಾಯದ ಪ್ರಕಾರ ಭಾಸನ ಪ್ರಸಿದ್ಧ ನಾಟಕದ ಹೆಸರಾದ ಪಂಚರಾತ್ರಕ್ಕೂ ಪಾಂಚರಾತ್ರಾಗಮಕ್ಕೂ ಏನೂ ಸಂಬಂಧವೇ ಇಲ್ಲ. ಸುಮಾರು ೪೫೦ A. D. ಯಲ್ಲಿ ತಾನೇ ಜಯಾಖ್ಯಾ ಸಂಹಿತೆಯೆಂಬ ಅವರ ಆಗಮ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟ ಪಾಂಚರಾತ್ರ ಶಾಸ್ತ್ರದ ಗಂಧಗಾಳಿಯನ್ನೂ ಕೂಡಾ ನಾವು ಭಾಸನಲ್ಲಿ ಕಾಣಲಾರೆವು. ಇಲ್ಲಿಯೇ ಸ್ವಲ್ಪ ಮೊದಲು ಉದಾಹರಿಸಿದ್ದ Calcatta University ಯ Department of Letters ಸಂಚಿಕೆಯಲ್ಲಿ ಬರೆದ ಮಹನೀಯರಾದ M. Ghosh ರು ಭರತ ಮುನಿಯ ಕಾಲದಲ್ಲಿ ಕೃಷ್ಣ ಪೂಜೆಯು ಆರಂಭ ವಾಗಿದ್ದಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಆದರೆ ಈ ಅಭಿಪ್ರಾಯವು ಸಮಂಜಸವಾಗಿಲ್ಲ– ಯಾಕೆಂದರೆ ಅದೇ ಮಹನೀಯರೇ ಸ್ವಲ್ಪ ಮುಂಚೆ ಪುಟ ೧೮೫ರಲ್ಲಿ ಭರತನ ಪ್ರಾಕೃತ ಶ್ಲೋಕಗಳನ್ನುದಾಹರಿಸುವಾಗ ಪ್ರಾಕೃತದಲ್ಲಿ ಕೃಷ್ಣ ಶಬ್ದವು ಕಸ್ಣ, ಯಕ್ಷವು ಜಕ್ಖ ಇತ್ಯಾದಿ ಪರಿಣಮಿಸುತ್ತವೆಂದೂ ಉದಾಹರಿಸಿ ದ್ದಾರೆ. ಈ ಸಂದರ್ಭದಲ್ಲಿ ಕಾವ್ಯ ಮಾಲೆಯ ಪ್ರತಿಯಲ್ಲಿಯೂ ಬರೋಡಾ ಪ್ರತಿಯಲ್ಲಿಯೂ ಉದ್ಧೃತವಾದ ಪಾಠವೇ ಉಷ್ಣಂ ಉಹ್ವಂ ಎಂದಿರುವದು. ಆದರೆ ಬರೋಡಾ ಪ್ರತಿಯ 'ದ' ಹಸ್ತ ಪ್ರತಿಯ ಆದರ್ಶದಲ್ಲಿ (ರಾಮಕೃಷ್ಣ ಕವಿ ಗಳಿಂದ ಸಂಗ್ರಹಿತ) ಕೃಷ್ಣಂ ಕಹ್ವಂ ಎಂಬ ಪಾಠವೇ ಇದೆ. ಇದೇನೋ ಸಂಧಿಗ್ಧ ವಾಗಲಿ, ಇಡೀ ನಾಟ್ಯಶಾಸ್ತ್ರದಲ್ಲಿ ಬೇರೆಲ್ಲಿಯೂ ಕೃಷ್ಣನನ್ನು ಹೆಸರಿಸಿ ಕೂಡಾ ಇರದಿರುವದು ಅತಿ ವಿಚಿತ್ರವಾಗಿದೆ. ವಿಷ್ಣುವನ್ನು ಪದ್ಮನಾಭ, ನಾರಾಯಣ, ಜನಾರ್ದನ, ಸುರೋತ್ತಮನೆಂದು ಕರೆದು, ಮೂರನೆಯ ಅಧ್ಯಾಯದಲ್ಲಿ ಸುರೋ ತ್ತಮವೆಂಬ ಪದವನ್ನು ಶಿವ ಹುತಾಶನರಿಗೂ ವಿಶೇಷಿಸಿದೆ. ಕಾವ್ಯ ಮಾಲೆ ಸಂಪಾದಿತ ಪುಸ್ತಕದ XVI ೭೬ನೆಯ ಶ್ಲೋಕದಲ್ಲಿ–ವಿಷ್ಣುಃ ಸೃಜತಿ ಭೂತಾನಿ; ವಿಷ್ಣುಃ ಸಂಹರತೇ ಪ್ರಜಾಃ। ವಿಷ್ಣು ಪ್ರಸೂತಂ ತ್ರೈಲೋಕ್ಯಂ ವಿಷ್ಣುರ್ಲೋಕಾದಿ ದೈವತಂ– ಎಂದು ಸೃಷ್ಟಿ ಸಂರಕ್ಷಣ ಉಪಸಂಹಾರಗಳನ್ನೆಲ್ಲಾ ಇವನೇ ಮಾಡುವವನೆಂದು ಹೊಗಳಿದ್ದಾನೆ. ಬಲರಾಮನನ್ನು ಪ್ರಾಸಬದ್ಧವಾಗಿ ಅದೇ ಅಧ್ಯಾಯದ ೮೨ನೆಯ ಶ್ಲೋಕದಲ್ಲಿ–ಹಲೀ ಬಲೀ ಲಲೀ ಮಾಲೀ ಶೂಲೀ

ಜಾಲೀ, ಲಿಲೀ ಜಲೀ । ಬಲೋ ಬಲೋಚ್ಚಲೋಲಾಕ್ಷೋ ಮುಸಲೀ ತ್ವಾಭಿರಕ್ಷತು ॥ ಎಂದು ಹೊಗಳಿದ್ದರೂ ಅವನ ತಮ್ಮನಾದ ಕೃಷ್ಣನ ಹೆಸರನ್ನು ಕೂಡಾ ಹೇಳದಿರುವದು ಸೋಜಿಗವೇ ಆಗಿದೆ. ಪ್ರಾಯಶಃ ಈತನು ಶೈವನಾಗಿ, ದಕ್ಷಿಣದಿಂದ ಆಗತಾನೇ ಪ್ರಮುಖನಾಗಿ ಉತ್ತರವನ್ನೂ ಆಕ್ರಮಿಸಲು ಉಪಕ್ರಮಿಸುತ್ತಿದ್ದ ಕೃಷ್ಣನನ್ನು ಬೇಕೆಂತಲೇ ಉದಾಹರಿಸಲಿಲ್ಲವೋ ಎಂಬ ಸಂಶಯವೇ ಬಲವತ್ತರವಾಗುವದು. ದಾಕ್ಷಿಣಾತ್ಯನಾದ ಭಾಸನು-ಇವನಿಗಿಂತಲೂ ೩೦ ಯಾ ೪೦ ವರ್ಷಗಳ ಅನಂತರವೋ ಏನೋ- ಕೃಷ್ಣನನ್ನು ಊರುಭಂಗ ೩೫ರಲ್ಲಿ ಜಗತಃ ಪ್ರಿಯನೆಂದು ಕೊಂಡಾಡಿ, ಬಾಲಚರಿತದಲ್ಲಿ ಅವನಿಗೆ ಪ್ರತ್ಯೇಕವಾಗಿ ನಮಸ್ಕಾರವನ್ನು ಸಲ್ಲಿಸಿದರೆ, ಉತ್ತರ ದೇಶದವನಾದ ಭರತನು ಅವನ ವಿವಿಧ ವಿಭೂತಿಗಳನ್ನು ವರ್ಣಿಸಿ ನಮಸ್ಕಾರಾರ್ಹನಾದ ಈತನ ಹೆಸರನ್ನು ಮಾತ್ರ ಉಲ್ಲೇಖಿಸದೆ ಬಿಟ್ಟನು. ಛಂದೋ ವಿಚಿತ್ಯಧ್ಯಾಯದ ಉದಾಹರಣೆಗಳಲ್ಲಿ ಶಿವನನ್ನು ಮಾತ್ರ ಪೂಜಿಸಿ, ವಿಷ್ಣುವಿಗೂ ಅವನ ಅವತಾರವಾದ ಕೃಷ್ಣನಿಗೂ ನಮಸ್ಕಾರ ಮಾಡುವರೆ ಒಂದು ಶ್ಲೋಕವನ್ನೂ ಮೀಸಲಾಗಿಡದಿರುವದು ಗಮನಾರ್ಹವಾಗಿದೆ. ಬ್ರಹ್ಮಶಿವರನ್ನು ಪೂಜೆಮಾಡಲೇಬೇಕೆಂದು ಪೂರ್ವರಂಗದ ವರ್ಣನೆಯಲ್ಲಿ ಪ್ರತ್ಯೇಕವಾಗಿ ಹೇಳಿದ್ದಾನೆ.

ಪ್ರಾಯಶಃ ಇವರಿಬ್ಬರೂ ಕ್ರಿಸ್ತಪೂರ್ವ ೩ನೆಯ ಶತಮಾನದ (ಆದಿಯಲ್ಲಿ ಭರತ, ಅಂತ್ಯ ಭಾಗದಲ್ಲಿ ಭಾಸ) ಲ್ಲಿದ್ದು, ಭರತನು ಉತ್ತರ ದೇಶದಲ್ಲಿ, ಭಾಸನು ದಕ್ಷಿಣ ದೇಶದಲ್ಲಿದ್ದನೋ ಎಂದು ಊಹಿಸಬಹುದು. ಭಾಸನು ಪತಂಜಲಿಗಿಂತಲೂ ಸ್ವಲ್ಪ ದೊಡ್ಡವನಾಗಿ ೧೫೦ B. C.ಯವರೆಗೂ ಜೀವಿಸಿರಬಹುದು.

೫

ಕೌಟಿಲ್ಯನೂ ಭಾಸನೂ

ಕೌಟಿಲ್ಯನು ಅರ್ಥಶಾಸ್ತ್ರಕಾರನೇ ಆಗಿದ್ದರೂ, ಪ್ರಾಚೀನ ಸ್ಮೃತಿಕಾರರಾದ ಗೌತಮ, ಆಪಸ್ತಂಬ, ಮನು, ಯಾಜ್ಞವಲ್ಕ್ಯರ ಸಾಲಿನವನಾಗಿ ಅವರಷ್ಟೇ ಆದರಣೀಯನಾಗಿದ್ದಾನೆ. ಇವರ ಕಡೆಯಲ್ಲಿ ನಾಟಕ ಕರ್ತನಾದ ಭಾಸನೂ ಬಂದಿದ್ದು, ನಾಟಕ ಕರ್ತನಾಗಿದ್ದರೂ ಇವನು ಸ್ಮೃತಿಗಳನ್ನೆಲ್ಲಾ ಸರಿಯಾಗಿ ಅಭ್ಯಸಿಸಿ, ತನ್ನ ಶೈಲಿಯಲ್ಲಿಯೂ ಅಭಿಪ್ರಾಯಗಳಲ್ಲಿಯೂ ಅವರನ್ನೇ –ಅದರಲ್ಲಿಯೂ ಕೌಟಿಲ್ಯನನ್ನೇ– ಅನುಸರಿಸಿದ್ದನೆಂಬುದು ಒಡೆದು ಕಾಣುವದು. ಇವನ ಕಾಲವೂ ಅವರ ಮಧ್ಯದಲ್ಲಿಯೇ ಇದ್ದು, ಗೌತಮಾಪಸ್ತಂಬರು ಕ್ರಿಸ್ತಪೂರ್ವ ೫ನೆಯ ಶತಮಾನದಲ್ಲಿದ್ದರೆ, ಕೌಟಿಲ್ಯನು ೩ನೆಯ ಶತಮಾನದ ಆದಿಯವನಾಗಿ. ಭಾಸ, ಮನು, ಯಾಜ್ಞವಲ್ಕ್ಯಾದಿಗಳು ಕ್ರಮವಾಗಿ ಮತ್ತೆ ಬಂದಿರಬಹುದೆಂದು ನಾವು ಊಹಿಸಬಹುದಾಗಿದೆ.

ಆಗ ತಾನೇ ಪ್ರಾಚೀನ ಧರ್ಮಶಾಸ್ತ್ರಿಗಳು ಅಭಿವಾದನ ಪ್ರತ್ಯಭಿವಾದನ ವಿಧಿಗಳನ್ನು ಜಾರಿಯಲ್ಲಿ ಬರುವಂತೆ ಮಾಡಿದ್ದರೆಂದು, ತೋರುವದು. ಹೊಸ ಸಾಮಾಜಿಕ ವಿಧಿಗಳನ್ನು ಬಳಕೆಯಲ್ಲಿ ತಂದರೆ ಮೊಟ್ಟ ಮೊದಲು ಅವುಗಳನ್ನು ಪಾಲಿಸುವವರು ತುಂಬಾ ಜನಗಳಿರುವದು ಸಹಜವಷ್ಟೆ ಸಾಧಾರಣ ಇದೇ ಸಮಯದಲ್ಲಿ ಪತಂಜಲಿ ಮಹರ್ಷಿಯೂ ಮಹಾ ಭಾಷ್ಯದಲ್ಲಿ 'ಪ್ರತ್ಯಭಿವಾದೇ ಸ್ತ್ರೀವನ್ಮಾಭೂಮೇತ್ಯಧ್ಯೇಯಂ ವ್ಯಾಕರಣಂ' ಎಂದು ಮೊದಲನೆಯ ಆಹ್ನಿಕದಲ್ಲಿಯೇ ಒತ್ತಿ ಹೇಳಲಿಲ್ಲವೇ? ಅರ್ಥಾತ್ ನಮಸ್ಕರಿಸುವವರು ವಿಧಿ ಪೂರ್ವಕವಾಗಿಯೇ ಗೋತ್ರ ಪ್ರವರ ಶಾಖೆಗಳನ್ನು ಹೇಳಿದ ಅನಂತರ, ಹಿರಿಯರು ಆಶೀರ್ವಾದವನ್ನೇ ವಿಧಿವತ್ತಾಗಿ (ಅಂತ್ಯಸ್ವರವನ್ನು ಉದ್ದಮಾಡಿ ಪ್ಲುತದಲ್ಲಿ ಗಂಡಸರಿಗೆ ಮಾತ್ರ) ಹೇಳದಿದ್ದರೆ ಅವರು ನಿಂದಾಪಾತ್ರರಾಗುತ್ತಿದ್ದರಂತೆ! ಈ

ನಮ್ಮ ನಾಟಕಗಳಲ್ಲಿಯಾದರೋ ದೂತ ಘಟೋತ್ಕಚದಲ್ಲಿ ಅಭಿಮನ್ಯುವನ್ನು ಕೊಂದು ಸಂತುಷ್ಟರಾಗಿ ಬಂದ ದುರ್ಯೋಧನಾದಿಗಳು ಧೃತರಾಷ್ಟ್ರನಿಗೆ ವಿಧಿ ಪೂರ್ವಕವಾಗಿ ನಮಸ್ಕರಿಸುವರಷ್ಟೆ. ಆಗತಾನೇ ಅಭಿಮನ್ಯು ವಧದ ಪ್ರಕಾರವನ್ನು ತಿಳಿದ ಧೃತರಾಷ್ಟ್ರನಿಗೆ ಮಾರನೆಯ ದಿನದ ಸಾಯಂಕಾಲದೊಳಗೆ ಅಭಿಮನ್ಯು ವಧ ಸಂತಪ್ತನಾದ ಅರ್ಜುನನು ಆ ವಧಕ್ಕೆ ನಿಮಿತ್ತನಾದ ಜಯದ್ರಥನನ್ನು ಕೊಂದೇಬಿಡುವೆನೆಂದು ಮಾಡಿದ ಪ್ರತಿಜ್ಞೆಯನ್ನು ಕೇಳಿ ಆಗತಾನೇ ಅತೀ ಕಳವಳಗೊಂಡ ಧೃತರಾಷ್ಟ್ರನು ಆಶೀರ್ವಾದವನ್ನು ಮಾಡದೆ ಬಾಯಿ ಮುಚ್ಚಿ ಕೊಂಡಿರುವ ಸನ್ನಿವೇಶವು ಚಿಕ್ಕವರಾದ ದುರ್ಯೋಧನ, ದುಃಶಾಸನ, ಕರ್ಣ, ಶಕುನಿ ಇವರೆಲ್ಲರನ್ನೂ ದಂಗುಬಡಿಸುವದು. ಆಶೀರ್ವಾದವು ಯಾಕಿಲ್ಲವೆಂದು ಕೇಳಿದ್ದಕ್ಕೆ 'ಗಂಡು **ಮಕ್ಕಳ** ತಪ್ಪಿನಿಂದ **ಮಗಳ** ವೈಧವ್ಯವು ಅನಿವಾರ್ಯವಾಯಿತಲ್ಲಾ' ಎಂದು ಮರುಗುವನು. (ಪು ೪೬೪ ದೇವಧರ) ಇದೇ ರೀತಿಯಲ್ಲಿ ಕರ್ಣಭಾರದಲ್ಲಿ ಹೇಗಾದರೂ ಮೋಸಗೊಳಿಸಿ, ಕವಚಕುಂಡಲಗಳನ್ನು ಹಾರಿಸಿ, ಕೊಲ್ಲಿಸಬೇಕೆಂಬಾಶಯದಿಂದ ಬಂದ ಇಂದ್ರನು, ಪ್ರಮಾದ! ಆಶೀರ್ವದಿಸದಿರುವದೆಂತು ಎಂದು ಯೋಚಿಸಿ ಕೂಡಲೇ ಕೀರ್ತಿಗೆ ಆಶೀರ್ವಚನವನ್ನು ಹೇಳುವ ಉಪಾಯವು ಮನಸ್ಸಿನೊಳಗೆ ಮಿಂಚಿಸಲು, 'ಸೂರ್ಯನಂತೆ, ಚಂದ್ರನಂತೆ, ಹಿಮವಂತನಂತೆ, ಸಾಗರದಂತೆ ನಿನ್ನ **ಕೀರ್ತಿಯು** ಅಜರಾಮರವಾಗಲಿ!' ಎಂದಾಶೀರ್ವದಿಸುವನು. (ಪು ೪೮೬. ದೇವಧರ) ಇದೇ ರೀತಿಯಲ್ಲಿ ಅತ್ತ ಅನಂತರ, ಅಥವಾ ಶೀನು ಬಂದ ಅನಂತರ ಅಥವಾ ಅಶುಚಿಯಾದ ಹೆಣವನ್ನು ಮುಟ್ಟಿದ ಅನಂತರ ಶುದ್ಧಾಚಮನವು-ಧರ್ಮಶಾಸ್ತ್ರಗಳಲ್ಲಿ ಶೌಚವೆಂದು ಕರೆಯಲ್ಪಡುವದು-ಪ್ರತಿಮಾ,ಬಾಲಚರಿತ,ಪಂಚರಾತ್ರಗಳಲ್ಲಿ ಕಂಡುಬರುವುದು. ಇನ್ನು ದೂತವಾಕ್ಯದಲ್ಲಿ ದುರ್ಯೋಧನನು ಕೃಷ್ಣನನ್ನು **ಅಭಾಷ್ಯ**ನೆಂದು ಕರೆಯುವಾಗ ಗೌತಮ ಧರ್ಮ ಸೂತ್ರದ, "ನ ಮ್ಲೇಚ್ಛಾಶುಚ್ಯ ಧಾರ್ಮಿಕೈಃ ಸಹ ಸಂಭಾಷೇತ ಸಂಭಾಷ್ಯ ವಾ ಪುಣ್ಯಕೃತೋ ಮನಸಾ ಧ್ಯಾಯೇತ್ ಬ್ರಾಹ್ಮಣೇನ ವಾ ಸಂಭಾಷೇತ"-ಎಂಬ ನಿಯಮದ ಜ್ಞಾಪಕ ಬಂದೇ ಬರುವುದು. ಕೃಷ್ಣನು ಪೂತನಾದಿ ಹೆಂಗಸರನ್ನೂ, ಕುದುರೆಗಳನ್ನೂ, ಎತ್ತುಗಳನ್ನೂ, ಜಟ್ಟಿಗಳನ್ನೂ ಕೊಂದು ಸ್ಮೃತಿನಿಷಿದ್ಧಗಳಾದ ಕೆಲಸಗಳನ್ನು ಮಾಡಿದವನಲ್ಲವೇ ? ಹೀಗೆಯೇ ಅಭಿಷೇಕ ನಾಟಕದಲ್ಲಿ, ಒಂದನೆಯಾಂಕದಲ್ಲಿ ವಾಲಿಯು, ತಮ್ಮನ ಹೆಂಡತಿಯಾದ ರುಮೆಯ ಮೇಲೆ ಕೈಮಾಡಿ ರಮಿಸುವದು ಮಹಾಪಾತಕವೆಂದು ಸ್ಮೃತಿಗಳಲ್ಲಿ ಪರಿಗಣಿತವಾದುದನ್ನು ನೆನೆದರೆ, "ಜ್ಯೇಷ್ಠೋ ಯವೀಯಸೋ ಭಾರ್ಯಾಂ ಯವೀಯಾನ್ವಾ ಅಗ್ರಜಸಿಯಂ। ಪತಿತೌ ಭವತೋ ಗತ್ವಾ ನಿಯುಕ್ತೌ, ಅಪ್ಯ

ನಾಪದಿ" ಎಂಬ ಮನುವಿನ ಶ್ಲೋಕದ ನೆನಪು ಬಂದೇ ಬರುತ್ತದೆ. ಸಜ್ಜಲಕನು ಕಲಿಯಲಾರಂಭಿಸುವಾಗಲೂ ಶುಚಿರ್ಭೂತನಾಗಿ ದೇವತೆಗಳ ಪೂಜೆಯಿಂದಲೇ ಉಪಕ್ರಮಿಸುವನು. ಈ ಸಂದರ್ಭದಲ್ಲಿ (ಪು ೧೪೧ ದೇವಧರ) ಸ್ತೇಯ ಶಾಸ್ತ್ರದ ಕರ್ತನಾದ ಖರಪಟನಿಗೆ ನಮಸ್ಕಾರವು ಸಲ್ಲಿಸಿದೆ. [ಈ **ಖರಪಟನೇ** ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ **ಖರಪಟ್ಟ** (ಪು ೨೧೯ ಮೈಸೂರು ಪ್ರಥಮ ಮುದ್ರಣ)ನೆಂದು ನಿರ್ದೇಶಿಸಲ್ಪಟ್ಟಿದ್ದಾನೆ. ಬಾಣನೂ ಇವನನ್ನು ಕಾದಂಬರಿಯಲ್ಲಿ ಉಲ್ಲೇಖಿಸಿರುವನು.] ಇದೇ ಸಂದರ್ಭದಲ್ಲಿ ಅವಿಮಾರಕನಿಂದ ಪೂಜಿಸಲ್ಪಟ್ಟ ಬಲಿ, ಶಂಖರ ಮಹಾಕಾಲರೂ ಸ್ತೇಯ ಶಾಸ್ತ್ರವನ್ನು ಪ್ರತಿಪಾದಿಸಿದ ಅನ್ಯ ವಿದ್ವಾಂಸರಾಗಿರಬಹುದು. ಇದಿಷ್ಟೇ ಸಾಲದ್ದಕ್ಕೆ, ಅಲ್ಲಲ್ಲಿ ಕೆಲವು ಶಬ್ದಗಳನ್ನು ಕೋರ್ಟು ವ್ಯವಹಾರ ಸಂಬದ್ಧವಾದ ಅರ್ಥಗಳಲ್ಲಿ ಉಪಯೋಗಿಸುವನು. ಚಾರುದತ್ತದಲ್ಲಿ ಧನಿಕಶಬ್ದವನ್ನು ಸಾಲಗಾರನೆಂಬ ಅರ್ಥದಲ್ಲಿ ಬಳಸಿರುವನು. ಸನ್ನಿಧಾತಾ ಎಂಬ ಪದವನ್ನು ಪಂಚರಾತ್ರ I ೨೨ರಲ್ಲಿ 'ಪುತ್ರಾಪೇಕ್ಷೀ ವಂಚ್ಯತೇ ಸಂನಿಧಾತಾ' ಎಂಬಲ್ಲಿ ಕಡುಲೋಭಿ ಎಂಬ ಅಪೂರ್ವವಾದ ಪ್ರಯೋಗವಿದೆ. ಪ್ರತಿಮಾ I ೧೦ರಲ್ಲಿ 'ಶರೀರಾರ್ಧೇನ ಮೇ ಪೂರ್ವಂ ಆಬದ್ಧಾ ಹಿ ಯತಸ್ತ್ವಯಾ' ಎಂಬಲ್ಲಿ ಶರೀರಾರ್ಧವೆಂದರೆ ಧರ್ಮಶಾಸ್ತ್ರದ ಪ್ರಕಾರ ಗಂಡನ ಶರೀರಾರ್ಧಳಾದ ಹೆಂಡತಿಯೆಂದೇ ಅರ್ಥ ಹೇಳಬೇಕು. ಇದೇ ರೀತಿಯಲ್ಲಿ ನ್ಯಾಸಧನದ ಪವಿತ್ರತೆಯನ್ನು ಭಾಸ ಕಾಲಿದಾಸರಿಬ್ಬರೂ ಸರಿಯಾಗಿ ಅರಿತಿರುವರು. ಕೌಟಿಲ್ಯನು ಇನ್ನಿತರ ಪ್ರಾಚೀನ ಸ್ಮೃತಿಕಾರರೂ ಅದೇ ರೀತಿಯಲ್ಲಿ ಅದೇ ಕಾಲದ ಗ್ರೀಕ್ ಇತಿಹಾಸಜ್ಞರೂ ಈ ನ್ಯಾಸಧನಕ್ಕೆ ತುಂಬಾ ಮರ್ಯಾದೆಯನ್ನು ಸಲ್ಲಿಸಲೇಬೇಕೆಂದೊಪ್ಪುವರು. Megasthenes ಎಂಬ ಗ್ರೀಕ್ ಇತಿಹಾಸಜ್ಞನ ಸಾಕ್ಷ್ಯದ ಪ್ರಕಾರ ಈ ನ್ಯಾಸವಿಷಯಕವಾದ ವ್ಯವಹಾರಗಳೇ ಇದ್ದಿಲ್ಲವಂತೆ. ಈ ನ್ಯಾಸಗಳಿಗೆ ಮುದ್ರೆಗಳೂ ಸಾಕ್ಷ್ಯಗಳೂ ಅವಶ್ಯವೇ ಇದ್ದಿಲ್ಲವಂತೆ. ಆಗಿನ ಕಾಲದ ಹಿಂದೂ ಜನರಲ್ಲಿ ದಾಸರೆಂಬುವವರೇ ಇದ್ದಿಲ್ಲವೆಂದಾತನು ಹೇಳುವಾಗ ನಮಗೆ ಕೌಟಿಲ್ಯನ **"ನ ತ್ವೇವ ಆರ್ಯಸ್ಯ ದಾಸಭಾವಃ"** ಎಂಬ ನೆನಪು ಕೊಡುವಂತಿದೆ. ಆಪಸ್ತಂಬನೂ, ಹೆಂಡತಿಯ, ಮಗಳ ಮತ್ತು ಮಗನ ದಾಸತ್ವವಿರ ಕೂಡದೆಂದು ಪ್ರತಿಪಾದಿಸುವನು. (II ೬, ೧೩, ೧೦, ೧೧) ಮಧ್ಯಮ ವ್ಯಾಯೋಗ ೧೮ನೆಯ ಶ್ಲೋಕದಲ್ಲಿ ಬ್ರಹ್ಮವಾದಿಗಳನ್ನುದಾಹರಿಸುವಾಗ ಈ ಪ್ರಾಚೀನ ಸ್ಮೃತಿಕಾರರನ್ನೇ ನಿರ್ದೇಶಿಸಿಯೇ ಇರಬಹುದು. ನಾರದ ಸ್ಮೃತಿಯಲ್ಲಿ III ೧೨ ಚೋರೈರ್ಹೃತಂ ಜಲೇ ಮಗ್ನಂ ಅಗ್ನಿನಾ ದಗ್ಧಮೇವ ಚ | ನ ದದ್ಯಾದ್ಯದಿ ತಸ್ಮಾತ್ ನ ಸಂಹರತಿ ಕಿಂಚನ || ಅಂದರೆ ಭಾಸನು ನಾರದನ

ಅನಂತರ ಜೀವಿಸಿದ್ದರೆ, ಆತನ ಚಾರುದತ್ತನು ಈ ಕಾನೂನಿನ ಆಧಾರದಿಂದ ವಸಂತಸೇನೆಯ ಆಭರಣಗಳು ಕದ್ದುಹೋದ ಅನಿವಾರ್ಯ ಪ್ರಸಂಗದಲ್ಲಿಯೂ ತನ್ನ ಆರ್ಜವತ್ವವನ್ನು ಕಾಪಾಡಿಕೊಳ್ಳಬಹುದಿತ್ತು. ಅರ್ಥಾತ್, ಈ ನ್ಯಾಸವನ್ನಾದರಿಸುವ ಕ್ರಮವು ನಮ್ಮ ಸ್ಮೃತಿಗಳಿಂದ ಪ್ರಾಯಶಃ ಕಲಿಯುಗದ ಆದಿಯಲ್ಲಿಅಂದರೆ ಕ್ರಿಸ್ತವಿನ ಜನ್ಮಕಾಲದ ಸಮಯದಲ್ಲಿ ಲುಪ್ತವಾಗಿಹೋಯಿತು. ಪ್ರತ್ಯೇಕವಾಗಿ ಈ ನ್ಯಾಸಗಳನ್ನು ಕ್ರಮಪ್ರಕಾರವಾಗಿ ಹಿಂದೆ ಕೊಡಿಸುವರೆ ಪ್ರತ್ಯೇಕ ಕೋರ್ಟುಗಳೂ ಇದ್ದಿರಬೇಕು. ಕೈಕೇಯಿಯು ತನ್ನ ರಾಜ್ಯ ಶುಲ್ಕವೆಂದು ಕೋರ್ಟಿನಲ್ಲಿ ಅರ್ಜಿಹಾಕಿದ ಸಂದರ್ಭದಲ್ಲಿ ದಶರಥನಿಂದ ಮರುತ್ತರವಿಲ್ಲದೇನೇ ರಾಜ್ಯವನ್ನು ಕೊಡಿಸಲಧಿಕಾರವಿದ್ದ ಕೋರ್ಟುಗಳೂ ಆಗಿನ ಕಾಲದಲ್ಲಿ ಇದ್ದಿರಬೇಕೆಂದೇ ಅರ್ಥವಾಗುತ್ತದೆ. ಕಾಲಿದಾಸನೂ ಬರೇ ೨ ಯಾ ೩ ಸ್ಥಳಗಳಲ್ಲಿ ಅತಿ ಸಂಕ್ಷೇಪವಾಗಿ ಉಪಮೆಯೊಳಗೆ ಸೇರಿಸಿ ಈ ನ್ಯಾಸದ ಪ್ರಸ್ತಾಪವನ್ನು ಎತ್ತಿರುವದರಿಂದ ಅವನ ಕಾಲದಲ್ಲಿಯೇ ಇದರ ಮಹತ್ವವು ಸ್ವಲ್ಪ ಕಡಿಮೆಯಾಗಿದ್ದಿತ್ತೋ ಎಂದು ಊಹಿಸಬಹುದೋ ತಿಳಿಯದು. ಭಾಸನಾದರೋ ವಾಸವದತ್ತಾ ಚಾರುದತ್ತ ನಾಟಕಗಳಲ್ಲಿ ನ್ಯಾಸದಿಂದಲೇ ಕಥಾವಸ್ತುವನ್ನಾರಂಭಿಸಿ, ಪ್ರತಿಮಾ ನಾಟಕದಲ್ಲಿಯೂ ಅದಕ್ಕತೀವ ಪ್ರಾಮುಖ್ಯತೆಯನ್ನೂ ಕೊಟ್ಟಿರುವನು. ಕೌಟಿಲ್ಯ ಭಾಸರಿಬ್ಬರೂ ನ್ಯಾಸದ ಪ್ರತ್ಯರ್ಪಣೆಯನ್ನೂ ಅತ್ಯಾವಶ್ಯಕವೆಂದೇ ಚಿತ್ರಿಸಿರುವರು. ಕೌಟಿಲ್ಯನು ಈ ಸಾಕ್ಷಿಗಳನ್ನು **ಉಪದ್ರಷ್ಟೃಗಳು** ಶ್ರೋತೃಗಳು ಅಥವಾ ಪ್ರತ್ಯಕ್ಷದರ್ಶಿಗಳೆಂದು ಕರೆದರೆ, ಪ್ರತಿಮಾ IVರಲ್ಲಿ ಭಾಸನು ಅವರನ್ನು ತ್ರೈಲೋಕ್ಯ ಸಾಕ್ಷಿಗಳೆಂದು ಕರೆದಿರುವನು. ಇಂಥ ವಶಿಷ್ಠ ವಾಮ ದೇವಾದಿಗಳ ಸಮ್ಮುಖದಲ್ಲಿ ಅವರ ಸಂಪೂರ್ಣ ಅನುಗ್ರಹ ಸಮ್ಮತಿಗಳಿಂದ ಕೈಕೇಯಿಯು ರಾಮನಿಗೆ ರಾಜ್ಯವನ್ನು ಪ್ರತ್ಯರ್ಪಿಸಿ ತನ್ನ ನಿರ್ದೋಷತ್ವವನ್ನು ಸ್ಥಾಪಿಸಿಕೊಳ್ಳುವಳು. ಈ ನ್ಯಸ್ತವಾದ ಸೊತ್ತಿಗೆ ಯಾವ ತರದ ಬಡ್ಡಿಯನ್ನೂ ವಿಧಿಸುತ್ತಿದ್ದಿಲ್ಲ. ಅದನ್ನು ಮಧ್ಯರಾತ್ರಿಯಲ್ಲಿ ಕೇಳಿದರೂ ಕೊಟ್ಟೇಬಿಡಬೇಕಾಗಿತ್ತು. ಅದನ್ನು ಕದ್ದುಕೊಂಡು ಹೋದರೂ ಅದರ ಮೌಲ್ಯವನ್ನು ಕೊಟ್ಟೇಬಿಡಬೇಕಾಗಿತ್ತು. ಈ ಸೊತ್ತುಗಳನ್ನು ನ್ಯಾಸವಾಗಿಡುವಾಗಲೂ ಅವುಗಳನ್ನು ಹಿಂದೆ ಸ್ವೀಕರಿಸಿಕೊಳ್ಳುವಾಗಲೂ ಪ್ರಾತ್ಯಯಿಕಾಃ, ಶುಚಯಃ, ಅನುಮತಾಃ ಅಂದರೆ ಲಂಚ ಇತ್ಯಾದಿಗಳನ್ನೆಂದಿಗೂ ಸ್ವೀಕರಿಸದ ಉಭಯಪಕ್ಷರಿಗೂ ಅನುಮತರಾದ ಸಾಕ್ಷಿಗಳಿರಬೇಕೆಂದು ಕೌಟಿಲ್ಯನೂ ಒತ್ತಿ ಹೇಳಿರುವನು. ಸ್ವಪ್ನ ನಾಟಕದಲ್ಲಿಯೂ ಕಟ್ಟಕಡೆಗೆ ವಾಸವದತ್ತೆ ಎಂಬ ನ್ಯಾಸವನ್ನು ಹಿಂದೆ ಸ್ವೀಕರಿಸಿಕೊಳ್ಳುವಾಗ " ಸಾಕ್ಷಿಮನ್ನ್ಯಾಸೋ ನಿರ್ಯಾತಯಿತವ್ಯಃ " (ಪು ೫೪

ದೇವಧರ) ಎಂದು ಕೌಟಿಲ್ಯನ III ೧೨ ಸಾಕ್ಷಿಮತ್ ಅಚ್ಛನ್ನಂ ಕುರ್ಯಾತ್ ಎಂಬ ಮಾತನ್ನೇ ಸ್ವಲ್ಪ ಬದಲಿಸಿ ಹೇಳುವನು. ಈ ಸಂದರ್ಭದಲ್ಲಿ ತಂದೆಯಂತೆ ಲಾಲಿಸಿದ ಕಂಚುಕಿ, ತಾಯಿಯಂತೆ ಸಲಹಿ ಸಾಕಿದ ದಾದಿ (= ಧಾತ್ರೀ) ಯರಿಬ್ಬರನ್ನೂ ಒಂದು ವಿಶೇಷವಾದ ಅಧಿಕರಣವಾಗಿ ಉದಯನನು ವಿಷಯ ಪರಿಜ್ಞಾನವಿಲ್ಲದೆ ನಿಯಮಿಸುವನು. ಅವರು ವಾಸವದತ್ತೆಯ ಗುರುತು ಹಿಡಿದು ದುಃಖಾಂತವಾದ ನಾಟಕವನ್ನು ಸುಖಾಂತವಾಗಿ ಮಾಡಿದುದು ಅತೀವ ಹೃದಯಂಗಮವಾಗಿದೆ.

ಬೌಧಾಯನ, ಗೌತಮ (ಕೌಟಿಲ್ಯನಿಗಿಂತಲೂ ಪ್ರಾಚೀನರು)ಮತ್ತು ಮನು ಎಂಬ ಸ್ಮೃತಿಕಾರರು ಕ್ಷೇತ್ರಜನನ್ನು ದ್ವಾದಶ ವಿಧದ ಪುತ್ರರಲ್ಲಿ ಎರಡನೆಯ ಸ್ಥಾನದಲ್ಲಿಟ್ಟರೆ, ಕೌಟಿಲ್ಯನಾದರೋ ಪುತ್ರಿಕಾ ಪುತ್ರನನ್ನು ಕ್ಷೇತ್ರಜನ ಸ್ಥಾನ ಕ್ಕೇರಿಸಿ, ಕ್ಷೇತ್ರಜನನ್ನು ಮೂರನೆಯ ಸ್ಥಾನಕ್ಕೆ ತಳ್ಳುವನು. ಈ ಸಂದರ್ಭದಲ್ಲಿ ಭಾಸನು ಕೌಟಿಲ್ಯನ ನೇಲ್ಪಂಕ್ತಿಯನ್ನನುಸರಿಸಿ ದುರ್ಯೋಧನನು ಪಾಂಡುವಿನ ಮಕ್ಕಳನ್ನು ಪರಾತ್ಮಜರೆಂದು ಹೀನಯಿಸುತ್ತಾ ಕೌಟಿಲ್ಯನ ಮಾತುಗಳನ್ನೇ ಬಳಸುವಂತಿದೆ. ಕೌಟಿಲ್ಯನು ಸ್ವಯಂಜಾತ ಅಥವಾ ಔರಸ ಮತ್ತು ಪರಜಾತ ಅಥವಾ ಕ್ಷೇತ್ರಜ ಎಂದು ಪ್ರತ್ಯೇಕಿಸುವನು. ಸ್ವಯಂಜಾತಃ ಕೃತಕ್ರಿಯಾಯಾ ಮೌರಸಃ। ತೇನ ತುಲ್ಯಂ ಪುತ್ರಿಕಾ ಪುತ್ರಃ ಸ್ವಗೋತ್ರೇಣ ಅನ್ಯಗೋತ್ರೇಣ ವಾ ನಿಯುಕ್ತೇನ ಕ್ಷೇತ್ರಜಾತಃ ಕ್ಷೇತ್ರಜಃ ಪುತ್ರಃ।.... ಸ್ವಯಂಜಾತಃ ಪಿತೃಬಂಧೂ ನಾಂ ಚ ದಾಯಾದ:। ಪರಜಾತಃ ಸಂಸ್ಕರ್ತುಃ ಏವ ನ ಬಂಧೂನಾಮ್....ಇದೇ ಶಬ್ದಗಳನ್ನೇ ನೆನಪಿನಲ್ಲಿಟ್ಟುಕೊಂಡೇ ಎಂಬಂತೆ ದೂತವಾಕ್ಯ ೧೯ರಲ್ಲಿ ಧರ್ಮಾತ್ಮ ಜೋ ವಾಯು ಸುತಶ್ಚ ಭೀಮೋ ಭ್ರಾತಾರ್ಜುನೋ ಮೇ ತ್ರಿದಶೇಂದ್ರಸೂನುಃ ಯಮೌ ಚ ತಾವಶ್ವಿಸುತೌ ಸರ್ವೇ ಸಭೃತ್ಯಾಃ ಕುಶಲೋಪಪನ್ನಾಃ॥ ಇಲ್ಲಿ ಕೌಟಿಲ್ಯನ ಮಾತಿನ ಪ್ರಕಾರದ ನಂಜು – ಅರ್ಥಾತ್ ಪಾಂಡವರೆಂದು ತಪ್ಪಾಗಿ ಕರೆಯಲ್ಪಡುವವರೆಲ್ಲರೂ ನನ್ನ ಚಿಕ್ಕ ತಂದೆಯ ಮಕ್ಕಳೇ ಅಲ್ಲ. ಅವರೆಲ್ಲರೂ ಆಯಾಯಾ ದೇವತೆಗಳ ಕ್ಷೇತ್ರಜ ಮಕ್ಕಳು, ಅದೇ ದೇವತೆಗಳಿಗೇನೇ ಅವರು ದಾಯಾದ ಮಕ್ಕಳು, ಅಂದರೆ ಅವರಿಗೆ ಪಿತ್ರಾರ್ಜಿತ ಆಸ್ತಿಯೆಂದರೆ ದೇವತೆ ಗಳದ್ದು, ಸರ್ವಥಾ ನನ್ನ ಚಿಕ್ಕ ತಂದೆಯ ಆಸ್ತಿಗೂ ಅವರು ಯೋಗ್ಯರಲ್ಲ, ಅವರ ಶ್ರಾದ್ಧಾದಿಗಳನ್ನೂ ಮಾಡಲವರರ್ಹರಲ್ಲವೆಂಬ ನಂಜನ್ನು ಕಾರುವನು. ಇವನಿಂದ ಅನಂತರ ಬಂದ ಧರ್ಮಶಾಸ್ತ್ರಕಾರರೆಂದರೆ ಹಾರೀತ, ವಸಿಷ್ಠ, ವಿಷ್ಣು, ನಾರದ, ಮತ್ತು ಮನು ಇವರೆಲ್ಲರೂ ಔರಸನಿಗೆ ಒಂದನೆಯ ಸ್ಥಾನ ಕ್ಷೇತ್ರಜನಿಗೆ ಎರಡನೆಯ ಸ್ಥಾನವನ್ನು ಕಲ್ಪಿಸುವರು. ಆದರೆ ಕೌಟಿಲ್ಯನ ನೇಲ್ಪಂಕ್ತಿಯನ್ನನುಸರಿಸಿ

ಯಾಜ್ಞವಲ್ಕ್ಯನೂ ದೇವಲನೂ ಅವನನ್ನು ಮೂರನೆಯ ಸ್ಥಾನಕ್ಕೆ ತಳ್ಳಿ ಪುತ್ರಿಕಾಪುತ್ರನನ್ನೇ ಎರಡನೆಯ ಸ್ಥಾನಕ್ಕೆ ಏರಿಸುವರು. ಇದನ್ನೇ ಭಾಸನೂ ಅನುಸರಿಸಿ – ದೇವಾತ್ಮಜೈಃ ಮನುಷ್ಯಾಣಾಂ ತಥಂ ವಾ ಬಂಧುತಾ ಭವೇತ್- ದೂತವಾಕ್ಯ ೩೦– ಎಂಬುದು ಮತ್ತೆ ಬಂದಸ್ಮೃತಿಕಾರರಿಗೆ ಅತಿಭಯಂಕರವಾಗಿ ಮನುವೂ ಕೂಡಾ. IX ೬೪ ನಿಯೋಗವನ್ನು ಬಾಯಿತುಂಬಾ ನಿಂದಿಸುವನು. ಈ ಸಂದರ್ಭದಲ್ಲಿ ಭಾಸನುಪಯೋಗಿಸಿದ **ಬಂಧುತಾ** ಎಂಬ ಶಬ್ದವು ಸ್ಮೃತಿಗಳಲ್ಲಿ ಅತಿ ಮುಖ್ಯವಾದ ಶಬ್ದವಾಗಿ ಪಿಂಡಾದಿ ಪ್ರಧಾನ ಮಾಡುವರೆ ಅರ್ಹತೆಯನ್ನು ಸೂಚಿಸುವದರಿಂದ ಗಮನಾರ್ಹವಾಗಿದೆ. ವಾದಕ್ಕೋಸ್ಕರ ಹೀಗೆ (ಶಕುನಿ ದುಶ್ಶಾಸನರೆಂಬ ಕುಯುಕ್ತಿಗಳನ್ನು ಮುಂದೂಡುವ ಕೋರ್ಟಿನ ವಕೀಲರ ವಾದದಂತೆ) ಈ ದುರ್ಯೋಧನನು ಪಾಂಡವರನ್ನು ಹಳಿದರೂ, ಈ ದುಷ್ಟಬುದ್ಧಿಗಳೆಲ್ಲಾ ಸತ್ತ ಅನಂತರ, ತೊಡೆಮುರಿದು ಬಿದ್ದಿದ್ದಾಗ ತನ್ನಮಗನಾದ ದುರ್ಜಯನನ್ನು ಯುಧಿಷ್ಠಿರನ ಕ್ಷಾಮಾಪಸವ್ಯಭುಜವನ್ನು ಮುಟ್ಟಿ, ತನ್ನ ಹೆಸರನ್ನು ಹೇಳಿ ಪಿತೃತರ್ಪಣವನ್ನು ಕೊಡಬೇಕು ಮಗನೇ ! ಎಂದು ಹೇಳುವದರಲ್ಲಿ ಒಂದು ವಿಶೇಷ ಕಾರಣವಿದ್ದಂತೆಯೇ ತೋರುವದು. ಅರ್ಥಾತ್ ಅವರು ಕ್ಷೇತ್ರಜ ಪುತ್ರರಾಗಿದ್ದರೂ, ಅವರ ಎರಡನೆಯ ಸ್ಥಾನವನ್ನೂ ಅದರಿಂದ ಲಬ್ಧವಾದ ಪಿತೃತರ್ಪಣಾಧಿಕಾರವನ್ನೂ ಅವರಿನ್ನೂ ಕಳೆದುಕೊಂಡಿದ್ದಿಲ್ಲ. ಆ ಸ್ಥಾನವನ್ನೂ ಅಧಿಕಾರವನ್ನೂ ಅನೇಕ ಸಮಯದ ಅನಂತರ ಬ್ರಹ್ಮಸ್ಮೃತಿಯ ಅನಂತರವೇ ಅವರು ಖಂಡಿತವಾಗಿ ಕಳೆದುಕೊಂಡಿರಬೇಕಲ್ಲವೇ ? ದೂತಘಟೋತ್ಕಚ ೧೬ನೆಯ ಶ್ಲೋಕದಲ್ಲಿ**ಸುತಾ 'ಪುತ್ರ ಶತಾತ್ ವಿಶಿಷ್ಟಾ'** ಎಂದು ಮಗನಿಗಿಂತಲೂ, ಮಗಳನ್ನೇ ಭಾಸನು ಹೊಗಳುವಾಗ ನೈಘಂಟುಕ ಕಾಂಡ III ೩ ರಲ್ಲಿ ಯಾಸ್ಕನು **'ದುಹಿತೃದಾಯಾದ'** ರೆಂದು ಹೇಳಿದನರ ಸಾಲನ್ನು ಸೇರುವಂತಿದೆ. ಕ್ರಿಸ್ತಪೂರ್ವ ೮ ನೆಯ ಶತಮಾನದಲ್ಲಿಯೇ ಯಾಸ್ಕನ ಪ್ರಕಾರ ಈ **'ದುಹಿತೃದಾಯಾದಿ'** ಗಳು ದುಹಿತೃ ಅಥವಾ ಮಗಳೂ ಕೂಡಾ ಮಗನ ಹಾಗೆಯೇ **'ಬಂಧು'**ವಾಗಿ ಪಿಂಡ ಪ್ರದಾನಾರ್ಹಳೆಂದು ವಾದಿಸಿದ್ದರಂತೆ. ಈ ಸಂಪ್ರದಾಯವು ಕಾಲಕ್ರಮೇಣ ನಿಷಿದ್ಧವಾದರೂ ಅದರ ನೆನಪು ಇನ್ನೂ ಭಾಸನ ಕಾಲದಲ್ಲಿಯೂ ಸ್ಮೃತಿಕಾರರಲ್ಲಿ **'ಕೇಚಿತ್ಪಕ್ಷ'**ವಾಗಿಯಾದರೂ ಉಳಿದಿತ್ತೋ ಎಂದು ತೋರುವದು. ಭಾಸನ ಕಾಲದಲ್ಲಿಯೂ ಹೆಂಗಸರಿಗೆ ತಂದೆಯ ಸೊತ್ತಿನಲ್ಲಿ ಅಧಿಕಾರ, ಅವಳಿಗೆ ಪಿಂಡಪ್ರದಾನಾರ್ಹತೆ – ಇವಿನ್ನೂ ಸಂಪೂರ್ಣವಾಗಿ ಲುಪ್ತವಾದಂತೆ ತೋರುವದಿಲ್ಲ. ಅನೇಕ ಶತಮಾನಗಳ ಅನಂತರ ಹರದತ್ತಾ ವಿಜ್ಞಾನೇಶ್ವರಾದಿ ನಿಬಂಧನಕಾರರು ಬಂದ ಅನಂತರ ತಾನೇ ಮಗಳ

ಬಂಧುತ್ವವು ಸಂಪೂರ್ಣವಾಗಿ ನಿರಾಕೃತವಾಯಿತು. ಭಾಸನಾದರೋ ಚಾರುದತ್ತ III ೧೭ರಲ್ಲಿ ಅರ್ಥತಃ ಪುರುಷೋ ನಾರೀ ಯಾ ನಾರೀ ಸಾರ್ಥತಃ ಪುಮಾನ್ = ಹೆಂಗಸು ದುಡ್ಡಿದ್ದರೆ ಗಂಡಸಾಗುವಳೆಂದು ಹೇಳುವಾಗ ಅವಳಿಗೆ ಸೊತ್ತಿನ ಅಧಿಕಾರವಿದ್ದೇ ಇದೆಯೆಂದೊಡೆದು ಕಾಣುವದಿಲ್ಲವೇ ? ಹೀಗೆಯೇ ಅವಳಿಗೆ ಧಾರ್ಮಿಕಾಧಿಕಾರಗಳಲ್ಲಿ ಇನ್ನೂ ಯಾವ ತರದ ನ್ಯೂನತೆಯು ಬಂದಿದ್ದಿಲ್ಲವೆಂಬುದು ಪ್ರತಿಮಾ III ೫ರಲ್ಲಿ ಶೂದ್ರರಿಗೆ ಮಾತ್ರ ಕುಂದು ಕೊರತೆಯಾಗಲೇ ವ್ಯವಹಾರದಲ್ಲಿ ಬಂದಿತ್ತೆಂದು (ವಾರ್ಷಲಸ್ತು ಪ್ರಣಾಮಃ— ಸ್ಯಾತ್ ಅಮಂತ್ರಾರ್ಚಿತ ದೈವತ:—) ಇದರಿಂದ ಹೆಂಗಸರಿಗೆ ಆಗ ಬಂದಿದ್ದಿಲ್ಲವೆಂದೂಹಿಸಬೇಕಾಗಿದೆ. ಚಾರುದತ್ತ ಪ್ರತಿಮಾಗಳಲ್ಲಿ ಹೆಂಗಸರಿಗೇನೇ ಸ್ವಂತವಾಗಿ ಬೇಕಾದಷ್ಟು ಆಸ್ತಿ ಇದ್ದಿರಬಹುದೆಂದು ನಾವು ತಿಳಿಯುತ್ತೇವೆ. ಮರ್ಯಾದೆಯಿಂದ ಕುಟುಂಬಗಳು ತಮ್ಮ ಜೀವನವನ್ನು ನಡೆಸುವ ಹಾದಿಯನ್ನು ಹಿಡಿಂಬೆ, ವಸಂತಸೇನೆಯರಿಗೂ ಸಹ ತೋರಿಸುವನು. ಕೈಕೇಯಿ ಸೀತೆಯರ ಪಾತ್ರಗಳಲ್ಲಿ ರಾಮಾಯಣದಲ್ಲಿ ಬಂದಿರಬಹುದಾದ ಕಳಂಕಗಳನ್ನೂ ಕಥೆಯನ್ನೇ ಅಲ್ಲಲ್ಲಿ ಮಾರ್ಪಡಿಸಿ ಅವರನ್ನು ಪ್ರತಿವಿಧದಲ್ಲಿಯೂ ಆದರ್ಶಸ್ತ್ರೀಯರಂತೆ ಚಿತ್ರಿಸಿರುವನು. ಹೇಗೆ ಮಹಾಭಾರತ ಸ್ತ್ರೀಪರ್ವದಲ್ಲಿ ಹೆಂಗಸರಿಗೂ ಪಿತೃ ತರ್ಪಣಾಧಿಕಾರ, ಸಂಧ್ಯಾವಂದನಾದಿ ನಿತ್ಯ ಕರ್ಮಗಳು ವಿಹಿತವಾಗಿದ್ದವೋ ಹಾಗೆಯೇ ಭಾಸನ ಕಾಲದಲ್ಲಿಯೂ ಧರ್ಮಾಧಿಕಾರದಲ್ಲಿ ಅವಳಿಗೆ ಯಾವ ನ್ಯೂನತೆಯಿನ್ನೂ ಬಂದಿಲ್ಲ,

ಇನ್ನು **ಮಧ್ಯಮ ಸಹೋದರನ** ವಿಚಾರ. ಮಧ್ಯಮ ವ್ಯಾಯೋಗ ನಾಟಕದ ವಸ್ತುವನ್ನು ಐತರೇಯ ಬ್ರಾಹ್ಮಣದ ಕಥೆಯ ಆಧಾರದಿಂದ ನಿರ್ಮಿಸುವದೆಂದು ಸಾರುವದೇ ವಾಡಿಕೆಯಾಗಿದೆ. ಆದರೆ ಗೌತಮ ಧರ್ಮಸೂತ್ರಗಳಲ್ಲಿರುವ ನಿಯಮ ಪ್ರಕಾರ ಏರ್ಪಟ್ಟ ಮಧ್ಯಮ ಸಹೋದರನಿಗೆ ಅನ್ಯಾಯವನ್ನು ದೂರೀಕರಿಸುವರೇ ಈ ಸಾಮಾಜಿಕದೋಷಗಳನ್ನೆತ್ತಿ ತೋರಿಸುವ ನಾಟಕವನ್ನು ಬರೆದಿರಬಹುದೆಂದು ನಮಗನಿಸುತ್ತದೆ. ಆ ಗೌತಮ ನಿಯಮವನ್ನಿಲ್ಲಿ ವಿಸ್ತಾರವಾಗಿ ಉದಾಹರಿಸುವೆವು:— ಊರ್ಧ್ವಂ ಪಿತುಃ ಪುತ್ರಾಃ ರಿಕ್ಥಂ ಭಜೇರನ್ ನಿವೃತ್ತೇ ರಜಸಿ ಮಾತುಃ ಜೀವತಿ ವಾ ಇಚ್ಛತಿ ಸರ್ವಂ ವಾ ಪೂರ್ವಜಸ್ಯ ಇತರಾನ್ ಬಿಭೃಯಾತ್ ಪಿತೃವತ್. ವಿಭಾಗೇತು ಧರ್ಮವೃದ್ಧಿಃ। ವಿಂಶತಿ ಭಾಗೋ ಜ್ಯೇಷ್ಠಸ್ಯ, ಮಿಥುನಮುಭಯತೋ ದನ್ಯುಕ್ತೋ ರಥ ಗೋವೃಷಃ। (ಅಯಂ ಉದ್ಧಾರೋ ಜ್ಯೇಷ್ಠಸ್ಯ ಮಿಥುನಂ ಉಭಯತೋ ದತಃ ಅಶ್ವಾಶ್ವತರ ಗರ್ದಭಾಃ ತೇಷಾಂ ಯಥಾ ಸಂಭವಂ ತನ್ಯತಮಾನಾಂ ಯುಕ್ತಃ ರಥಃ — ಗೋವೃಷಶ್ಚ) **ಕಾಣ ಖೋರ ಕೂಟ ವಂಟಾ** ಮಧ್ಯಮಸ್ಯ ಅನೇಕಾ ಚೇತ್. ಕಾಣ = ಒಂದು

ಕಣ್ಣಿನ, ಖೋರ = ಮುದಿ ; ಖೋಟೆ ಎಂದು ಪಾಠವಿದ್ದಲ್ಲಿ ಒಂದು ಕಾಲಿಲ್ಲದ ; ಕೂಟೆ = ಕೋಡಿಲ್ಲದಿದ್ದ ; ವಂಟ = ಬಾಲವಿಲ್ಲದ-– ಅವಿಷೇಶಿತತ್ವಾತ್ ಗಜಾಶ್ವಾದೀನಾಮಪಿ ಯಥಾಸಂಭವಂ ಪ್ರಷ್ಟವ್ಯದಂ ಇತ್ಯಾದಿ ಅರ್ಥಾತ್ ತಂದೆಯು ಸತ್ತಅನಂತರ ಅಣ್ಣ ತಮ್ಮಂದಿರೆಲ್ಲರೂ ಪಾಲುಮಾಡಿಕೊಳ್ಳುವ ಕ್ರಮ: ಎಲ್ಲವೂ ಹಿರಿಯಣ್ಣನಿಗೇ ಇದ್ದು ಆತನೇ ತಂದೆಯಂತೆ ತಮ್ಮಂದಿರನ್ನು ಕಾಪಾಡ ಬೇಕೆಂಬುದೆಂಬ ಒಂದು ಮತ. ವಿಭಾಗವಾದರೆ ಧರ್ಮವೃದ್ಧಿಯೆಂದು ಇನ್ನೊಂದು ಮತ. ಈ ಮತ ಪ್ರಕಾರ ಹಿರಿಯಣ್ಣನಿಗೇ $\frac{1}{20}$ನೆಯ ಭಾಗವು ಆತನಿಗೇನೇ (ಕೌಟುಂಬಿಕ ಧಾರ್ಮಿಕ ಖರ್ಚುಗಳಿಗೇನೋ) ಹೆಚ್ಚಾಗಿ ಕೊಡಲ್ಪಡ ಬೇಕು. ..ಮತ್ತುಳಿದ ಸೊತ್ತುಗಳ (ಕುದುರೆ, ಕತ್ತೆ, ಎತ್ತು ಇತ್ಯಾದಿ ಪ್ರಾಣಿ ವರ್ಗದಲ್ಲಿ ಉತ್ತಮವಾದುದನ್ನು ಹಿರಿಯಣ್ಣನೂ, ಸಾಧಾರಣವಾದುವುಗಳನ್ನು ಕಿರಿಯವನೂ ಸ್ವೀಕರಿಸಿದ ಅನಂತರ)– ಒಂದು ಕಣ್ಣಿನ, ಮುದಿಯಾದ, ಒಂದು ಕಾಲಿಲ್ಲದ, ಬಾಲವಿಲ್ಲದ, ಕೋಡಿಲ್ಲದ, ಪ್ರಾಣಿಗಳು ಮಧ್ಯಮನ ಪಾಲಿಗೆ ಅಂದರೆ ಇದೇ ಕ್ರಮದಲ್ಲಿ ಮಂಚ ಕುರ್ಚಿ ಇತ್ಯಾದಿಗಳಲ್ಲಿ ಪಾತ್ರೆಗಳಲ್ಲಿ ಅರ್ಧ ಒಡಕಾದವು ಗಳೇ ಇವನಿಗೆ ಬರಬೇಕೆಂದು ಗೌತಮನು ಆಗತಾನೇ ವಿಧಿಸಿದ್ದನು. ಇದಕ್ಕೆ ಕಾರಣವನ್ನು ಹುಡುಕುವರೆ ನಾವು ಹೆಚ್ಚು ಕಷ್ಟಪಡುವುದವಶ್ಯವಿಲ್ಲ. ಮುಂಚೆ ಪ್ರತಿಪಾದಿಸಿದಂತೆ ಪಿಂಡ ಪ್ರದಾನವನ್ನು ಹಿರಿಯನೂ, ಕಿರಿಯನೇ ಮಾಡಿ ತೀರಿಸಿ ದಾಗ ಮಧ್ಯಮ ಸುಮ್ಮನೆ ನೋಡುತ್ತಿರಬೇಕೆಂಬ ಸಂಪ್ರದಾಯವು ರೂಢಿಯಲ್ಲಿ ಬಂದ ಬಳಿಕ ಆತನಿಗೆ ತಂದೆಯ ಸೊತ್ತಿನ ಅಧಿಕಾರವು ಕಮ್ಮಿಯಾದುದು ಸಹಜ ವಲ್ಲವೇ ? ಇದೇ ನ್ಯಾಯವನ್ನನುಸರಿಸಿ ಕೌಟಿಲ್ಯನೂ III ೬ರಲ್ಲಿ 'ಕಾಣಲಿಂಗಾಃ ಮಧ್ಯಮಾಂಶಃ' ಎಂದು ಒಂದು ಕಣ್ಣಿನ ಪ್ರಾಣಿಗಳೆಂದು ದಿಕ್ಪ್ರದರ್ಶನವನ್ನು ಮಾತ್ರ ಮಾಡಿ ಸುಮ್ಮನಾದನು. ಈ ಸಂದರ್ಭದಲ್ಲಿ ಭಾಸನೂ ಜ್ಯೇಷ್ಠನು ಶ್ರೇಷ್ಠ, ಪಿತೃಸಮನೆಂದು ಹೇಳಿ ತಂದೆಯು ಆಪತ್ತಿಗೊಳಗಾದರೆ ಜ್ಯೇಷ್ಠನಿಂದಲೇ **ಸಂತರಣವನ್ನು** ಪಡೆಯಬೇಕೆಂದು ಹೇಳುವಾಗ ಆಗಿನ ಧರ್ಮಶಾಸ್ತ್ರಕಾರರಾದ ಬ್ರಹ್ಮವಾದಿಗಳ ಮತವನ್ನುದಾಹರಿಸುವನು. ಹೀಗೆ ತಂದೆಗೆ ಜ್ಯೇಷ್ಠನಿಂದ ಪರ ಲೋಕ ಸಾಧನ, ತಾಯಿಗಾದರೋ ಹೆಚ್ಚಾಗಿ ಕನಿಷ್ಠನ ಮೇಲೆ ಮಮತೆ, (ಕೆಲವು ಕಡೆಗಳಲ್ಲಿ ಸಂಪಾದನೆಯಿಲ್ಲದೆ ಬಳಲುತ್ತಿರುವವನಲ್ಲಿ– ಆದರೆ ಇನು ವಿಪರೀತವಾದ ಕಡೆಗಳಲ್ಲಿ ಮತ್ತು ಅತೀ ವಿರಳ) ಭಾಸನಾದರೋ ಈ ನಾಟಕ ವನ್ನು ಬರೆದು ಮಧ್ಯಮನಿಗಾದ ಅನ್ಯಾಯವನ್ನೆತ್ತಿ ತೋರಿಸಿದ ಅನಂತರ ಕ್ರಿಸ್ತು ವಿನ ಸಮಕಾಲೀನನಾದ ಯಾಜ್ಞವಲ್ಕ್ಯನು ಧರ್ಮಶಾಸ್ತ್ರದಿಂದ ಈ ಅನ್ಯಾಯ ವನ್ನು ತೊಲಗಿಸುವರೆ, ಜ್ಯೇಷ್ಠ (ಅಂದರೆ ಹಿರಿಯಣ್ಣನಿಗೇನೇ ತಂದೆಯ ಪೂರಾ

ಸೊತ್ತು) ಜ್ಯೇಷ್ಠಾಂಶ (ಅಂದರೆ ಹಿರಿಯಣ್ಣನಿಗೇನೇ $\frac{1}{20}$ರಷ್ಟು ಹೆಚ್ಚಾಗಿ ಕೊಡಿಸುವದು), ಇವಿಷ್ಟನ್ನು ತಪ್ಪಿಸಿ:– ಸರ್ವೇ ವಾಸ್ಯು: **ಸಮಾಂಶಿನ**:– II ೧೬ ಅಥವಾ ವಿಭಜರೇನ್ ಸುತಾಃ ಪಿತ್ರೋರೂರ್ಧ್ವಂ ರಿಕ್ಥಂ ಋಣಂ **ಸಮಂ** ಎಂದು ಸಾಲವನ್ನೂ ಮೂಲವನ್ನೂ ಸರಿಯಾಗಿ ಪಾಲು ಮಾಡಿಕೊಳ್ಳುವ ಕ್ರಮ ವನ್ನು ಜಾರಿಗೆ ತಂದನು. ಇಲ್ಲಿ ಜ್ಯೇಷ್ಠ ಎಂದರೆ ಹಿರಿಯಣ್ಣನಿಗೇನೇ ಪೂರಾ ಸೊತ್ತುಗಳ ಸ್ವಾಮಿತ್ವವೆಂಬ ನಿಯಮವು ಅತೀ ಪ್ರಾಚೀನ ಕಾಲದಲ್ಲಿ ರೋಮ್ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿಯೂ ನೆಲೆನಾಟಿತ್ತು. ಮಹಾಭಾರತ ಕಾಲ ದಲ್ಲಿಯೂ ಇದೇ ರಾಜರಲ್ಲಿದ್ದ ಕ್ರಮವಾಗಿತ್ತು. ಈಗಲೂ ಅರಸುತನದಲ್ಲಿಯೂ ಹಿರೇ ಮಗನಿಗೇ ಪಟ್ಟಕಟ್ಟುವ ಕ್ರಮವಿದೆ. ಭಾರತ ಕಥಾ ಪ್ರಕಾರ ಯುಧಿ ಷ್ಠಿರನೇ ೧೦೫ ಮಕ್ಕಳಿಗೂ ಹಿರಿಯವನಾಗಿ ಭೀಮ ದುರ್ಯೋಧನರಿಬ್ಬರೂ ಒಂದೇ ದಿನದಲ್ಲಿ ಹುಟ್ಟಿದ್ದರೆಂಬ ಕಥೆ. ತನ್ನ ಮಗನಾದ ದುರ್ಯೋಧನನ ಮೇಲಿನ ವ್ಯಾಮೋಹದಿಂದ ಧೃತರಾಷ್ಟ್ರನು ಯುಧಿಷ್ಠಿರನ ಅನಂತರವಾದರೂ ತನ್ನ ಮಗನ ಪಟ್ಟಾಧಿಕಾರವನ್ನೇ ಸಾಧಿಸಬೇಕು, ಭೀಮನಿಂದ ಅವನೇ ಕೆಲವು ಘಂಟೆಗಳಿ ಗಾದರೂ ಮೊದಲು ಹುಟ್ಟಿದ್ದಲ್ಲವೇ ? ಎಂದು ಬಹಳ ಕಷ್ಟಪಟ್ಟು ಆಗಾಗ್ಯೆ ಸಾಧಿಸಲು ಪ್ರಯತ್ನಿಸುತ್ತಿದ್ದುದನ್ನು ಮಹಾಭಾರತದಲ್ಲಿ ನಾವು ಅಲ್ಲಲ್ಲಿ ಕಾಣುತ್ತೇವೆ. ಆದರೆ ಭಾಸನು ಬುದ್ಧಿವಂತಿಕೆಯಿಂದ ದುರ್ಯೋಧನನನ್ನೇ ಜ್ಯೇಷ್ಠನನ್ನಾಗಿ ಮಾಡಿ ಈ ಕಳವಳವನ್ನು ಸಂಪೂರ್ಣ ಧೃತರಾಷ್ಟ್ರನ ಮನಸ್ಸಿ ನಿಂದ ದೂರೀಕರಿಸುವನು. ಭೀಷ್ಮನು ಪಂಚರಾತ್ರ I ೩೭ರಲ್ಲಿ ದುರ್ಯೋಧನ ನೊಡನೆ ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡುವದು ಯುಕ್ತವೆಂದು ವಾದಿಸು ವಾಗ – ಜ್ಯೇಷ್ಠೋ ಭವಾನ್ ಪ್ರಣಯಿನಃ ತ್ವಯಿ ತೇ ಕುಟುಂಬೇ - ಇದು ನಮಗೆ ಗೊತ್ತಾಗುವದು. ಇದರಿಂದ ಭೀಷ್ಮಾದಿಗಳು ಭೀಷ್ಮಪರ್ವ ೪೩ನೆಯ ಅಧ್ಯಾಯ ೪೩ನೆಯ ಶ್ಲೋಕ, (ಕುಂಭಕೋಣ) ಅರ್ಥಸ್ಯ ಪುರುಷೋ ದಾಸ : ದಾಸಸ್ತ್ವರ್ಥೋನ ಕಸ್ಯಚಿತ್ । ಇತಿ ಸತ್ಯಂ ಮಹಾರಾಜ ತೇನ ಬದ್ಧೋಸ್ಮಿ ಕೌರವ್ಯೈಃ ಎಂದು ಕೌರವರ ಉಪ್ಪನ್ನ ತಿಂದದ್ದರಿಂದ ಅವರ ಪಕ್ಷ ಹಿಡಿಯ ಬೇಕಾಯಿತೆಂಬುದನ್ನು ಸಾಧಿಸಬೇಕಾದರೆ, ಭಾಸನ ಭೀಷ್ಮಾದಿಗಳಿಗೆ ಇದಕ್ಕಿಂತಲೂ ಪ್ರಶಸ್ತವಾದ ಧರ್ಮಶಾಸ್ತ್ರದ ಜ್ಯೇಷ್ಠ ಆಧಾರವೇ ದೊರೆತು ಅವರ ಪ್ರವೃತ್ತಿಯು ನಿರ್ದುಷ್ಟವಾಗಿತ್ತು. ಮನುವಿನ (XI ೧೦೫-ಜ್ಯೇಷ್ಠ ಏವ ತು ಗೃಹ್ಣೀಯಾತ್ ಪಿತ್ರ್ಯಂ ಧನಮಶೇಷತಃ) ನಿಯಮದ ಪ್ರಕಾರ ಇಡೀ ಪಿತ್ರಾರ್ಜಿತ ಸೊತ್ತು ಹಿರಿಯಣ್ಣನಿಗೆ ಸಲ್ಲುವದೇ ನ್ಯಾಯವಾಗಿತ್ತು. ಪಾಂಡವರು ಅವನ ಆಶ್ರಯ ವನ್ನು ಬಿಟ್ಟು ಕಾಡಿಗೆ ಹೋಗಿದ್ದರೆ, ಅದು ಅವರ ತಪ್ಪು, ಅದು ಸರ್ವಥಾ

ದುರ್ಯೋಧನನ ತಪ್ಪಲ್ಲವೆಂದೂ ವಾದಿಸಬಹುದಾಗಿತ್ತು. ಈ ಜ್ಯೇಷ್ಠನನ್ನು ಹೊಂದಿಯೇ ತಮ್ಮಂದಿರಿರುವರೆಂಬುದು ಪ್ರಾಚೀನ ಹಿಂದೂ ಸಮಾಜದ ಜೀವಾಳವೇ ಆಗಿತ್ತೆಂಬುದು ಅದೇ ಕಾಲದ ಜಾತಕ ಕಥೆಗಳಲ್ಲಿಯೂ ತೋರುವದು. Cowell ಮಹಾಶಯರ ಜಾತಕ ಕಥೆಗಳ V Vol P ೩೨೬ರಲ್ಲಿ ಬಂದ ಪಾಲೀ ಶ್ಲೋಕದ ಸಂಸ್ಕೃತ ಛಾಯೆಯಿದು: ಮಾತಾ ಪಿತಾ ಚ ಭ್ರಾತಾ ಚ ಭಗಿನೀ ಜ್ಞಾತಿ ಬಾಂದವಾಃ। ಸರ್ವೇ ಜ್ಯೇಷ್ಠಸ್ಯ ತೇ ಭಾರಾ ಏವಂ ಜಾನೀಹಿ ಭಾರತ॥ ಇಲ್ಲಿ ತಂದೆ, ತಾಯಿ, ತಮ್ಮ, ತಂಗಿ, ಜ್ಞಾತಿ, ಬಾಂಧವರೆಲ್ಲರೂ ಜ್ಯೇಷ್ಠನಿಗೆ, **'ಭಾರ'** ಅಂದರೆ ಅವರ ಭಾರವನ್ನಿವನು ಹೊತ್ತೇತೀರಬೇಕೆಂದೂ, ಇವನಿಂಥಲೇ ಅವನ ಸಂರಕ್ಷಣಭರಣಾದಿಗಳೂ ನಡಿಸಲ್ಪಡಬೇಕು. ಇದನ್ನೇ ಆವರಿಸಿಕೊಂಡು ಧೃತರಾಷ್ಟ್ರನೂ ತನ್ನ ಮಗನು ೧೧+೭=೧೮ ಅಕ್ಷೌಹಿಣಿ ಗಳಿಗೂ – ಅರ್ಥಾತ್ ಪಾಂಡವರ ೭ ಅಕ್ಷೌಹಿಣಿಗಳಿಗೂ ಮಹಾರಾಜನೆಂದೇ ಊರು ಭಂಗದ ಅಂತ್ಯದಲ್ಲಿ ೪೦ನೆಯ ಶ್ಲೋಕದ ಅನಂತರ ಕರೆಯುವನು. ಮನುವು XI ೨೧೩ರಲ್ಲಿ 'ಯೋ ಜ್ಯೇಷ್ಠೋ ವಿನಿಕುರ್ವೀತ ಸರ್ವಾನ್ ಭ್ರಾತೃನ್ ಯವೀಯಸಃ। ಸೋಽಜ್ಯೇಷ್ಠಃ ಸ್ಯಾದಭಾಗಶ್ಚ ವಿನಿಯಂತವ್ಯಃ ಚ ರಾಜಭಿಃ॥ ಎಂದು ವಿಧಿಸಿದರೆ, ಭಾಸನು ತನ್ನ ಪ್ರತಿಮಾ I ೧೪ರಲ್ಲಿ ಇದನ್ನೇ ಬದಲಿಸಿ– ನ ಚ ಖಲು ಪರಿಭೋಗ್ಯೈಃ ವಂಚಿತಾಃ ಭ್ರಾತರೋ ಮೇ ಎಂಬಲ್ಲಿ ವಿನಿಕುರ್ವೀತ ಎಂಬ ಪದದ ಅರ್ಥವುಳ್ಳ ವಂಚಿತ ಶಬ್ದವನ್ನೇ ಉಪಯೋಗಿಸುವದು ಗಮನಾರ್ಹ ವಾಗಿದೆ. ಹೀಗೆ ಭಾಸನು ದುರ್ಯೋಧನನನ್ನು ಹಿರಿಯ ಮನೆತನದವನಾದ ಧೃತರಾಷ್ಟ್ರನ ಹಿರಿಯಮಗ, ಇಡೀ ಕುಟುಂಬಕ್ಕೆ ಹಿರಿಯವ, ರಾಜ್ಯಕ್ಕೆ ಆತನೇ ಅರ್ಹ ಎಂಬುದನ್ನು ಬಹಳ ಸುಲಭವಾಗಿ ಸಾಧಿಸಿರುವನು. ಈ ಒಳಗುಟ್ಟನ್ನು ತಿಳಿಯದೆ, ಭಟ್ಟ ನಾರಾಯಣನು ವೇಣೀ ಸಂಹಾರದಲ್ಲಿ, ವಿಶಿಷ್ಯ ರನ್ನನು ಗದಾ ಯುದ್ಧದಲ್ಲಿ ದುರ್ಯೋಧನನ ಮೇಲೆ ನಮ್ಮ ಕನಿಕರವನ್ನು ಹುಟ್ಟಿಸಲು ಪ್ರಯತ್ನಿಸಿದರೂ ಸಫಲವಾಗಲಿಲ್ಲ.

ಅನುಬಂಧ ವಿಚಾರ

ಅನುಬಂಧವೆಂದರೆ ಅಪರಾಧಕ್ಕೆ ಅತೀವ ಸಮೀಪದ ಕಾರಣವಾಗಿ ಅಪರಾಧಿಯನ್ನು ಹೀನ ಕೆಲಸಕ್ಕೆ ಪ್ರೇರಿಸುವ ಬಡತನ ಇತ್ಯಾದಿಗಳೆಂದು ವಿವರಿಸಬಹುದು. ಕರುಣೆಯಿಂದ ತುಳುಕುತ್ತಿರುವ ಧರ್ಮಶಾಸ್ತ್ರಕಾರರು ಈ ಕಾರಣಗಳನ್ನು ಸರಿಯಾಗಿ ವಿವೇಚಿಸಿಯೇ ದಂಡವನ್ನು ವಿಧಿಸಬೇಕೆಂದು ಹೇಳಿರುವರು.

ಗೌತಮನು (ಕ್ರಿ. ಪೂ. ೫ನೆಯ ಶತಮಾನದಲ್ಲಿ) XII ೪೮ರಲ್ಲಿ ಪುರುಷಸ್ಯ **ಅಪರಾಧಾನುಬಂಧ** ವಿಜ್ಞಾನಾತ್ ದಂಡನಿಯೋಗಃ ಎಂದು

ವಿಧಿಸುವಾಗ ಮೊಟ್ಟ ಮೊದಲು ಈ ಶಬ್ದವನ್ನುಪಯೋಗಿಸಿದಂತಿದೆ. ಅರ್ಥಾತ್ ಅವನ ಶಕ್ತಿ, ಅಪರಾಧದಿಂದ ಸಂಭವಿಸಿದ ನಷ್ಟ, ಅದರಿಂದ ಅವನ ಕುಟುಂಬಕ್ಕಾಗುವ ನಷ್ಟ ಭ್ರಷ್ಟಾದಿಗಳನ್ನೆಲ್ಲಾ ಸರಿಯಾಗಿ ನ್ಯಾಯಾಧೀಶನು ಯೋಚಿಸಿಕೊಂಡೇ ತೀರ್ಪನ್ನು ವಿಧಿಸಬೇಕಂತೆ. ಕೌಟಿಲ್ಯನು ಇನ್ನೂ ಸ್ವಲ್ಪ ಮುಂದೆ ಹೋಗಿ (೩ನೆಯ ಶತಮಾನ ಕ್ರಿ. ಪೂ) ಪುರುಷಂ ಚ ಅಪರಾಧಂ ಚ ಕಾರಣಂ ಗುರು ಲಾಘವಂ। ಅನುಬಂಧಂ ತದಾತ್ವಂ ಚ ದೇಶ ಕಾಲೌ ಸಮೀಕ್ಷ್ಯ ಚ ॥ ಎಂದರೆ ಅಪರಾಧದ ಗುರುತ್ವ, ಅಥವಾ ದೊಡ್ಡ ಯಾ ಸಣ್ಣ ಹಾನಿ, ಅದನ್ನಾಚರಿಸಿದ ದೇಶ, ಕಾಲ, ಇತ್ಯಾದಿ ವಾತಾವರಣಗಳನ್ನೆಲ್ಲಾ ನ್ಯಾಯಾಧೀಶನು ಸರಿಯಾಗಿ ಗಮನದಲ್ಲಿಟ್ಟುಕೊಂಡಿರಬೇಕೆಂದೂ ವಿಧಿಸುವನು. ಪ್ರಾಯಶಃ ಇವನಿಂದ ೪೦ ಯಾ ೫೦ ವರ್ಷಕ್ಕೆ ಚಿಕ್ಕವನಾದ ಅಶೋಕನ ಶಿಲಾಸ್ತಂಭದಲ್ಲಿ V Pillar Edict ನಲ್ಲಿಯೂ ಇದೇ **ಅನುಬಂಧ** ಪದವು ಬಂದು, ಅಪರಾಧಿಯು ಊರಿನಲ್ಲಿ ಅವನ ಸ್ಥಾನಮಾನಗಳನ್ನು ಧರ್ಮಾಧಿಕಾರಿಗಳು ಎರಡು ಮೂರು ವರ್ಷಗಳಿಗೊಮ್ಮೆಯಾದರೂ ಕೂಲಂಕಷವಾಗಿ ವಿಚಾರಿಸಿ, ಅವನ ಹೆಂಡತಿ ಮಕ್ಕಳ ದುರ್ದೆಶೆಯನ್ನು ವಿವೇಚಿಸಿ, ಅವನೇ ಮನಃಪೂರ್ವಕವಾಗಿ ಅಪರಾಧವನ್ನು ಮಾಡಿದನೋ ಅಥವಾ ಇನ್ನೊಬ್ಬರಿಂದ ಪ್ರೇರಿತನಾಗಿ ಮಾಡಿದನೋ, ಅವನ ವ್ಯಾಧಿ, ವಯಃಸ್ಥಿತಿ ಇತ್ಯಾದಿಗಳನ್ನೆಲ್ಲಾ ಪರಿಶೀಲಿಸಿ, ನ್ಯಾಯ ಕಂಡಲ್ಲಿ ಅವನನ್ನು ಸೆರೆಯಿಂದ ಬಿಡಲೂಬಹುದೆಂದು ಅನುಬಂಧ ಶಬ್ದಕ್ಕೆ ದೊಡ್ಡ ವ್ಯಾಖ್ಯಾನವನ್ನೇ ಬರೆದಂತಿದೆ. ಮನುಸ್ಮೃತಿಯಲ್ಲಿಯೂ (VII 16, VIII 126) ಈ ಶಬ್ದ ಬಂದಿದೆ. ನಾರದ II 39ರಲ್ಲಿ ಈ ಶಬ್ದಕ್ಕೆ ಇನ್ನೊಂದು ಟೀಕೆಯನ್ನು ಬರೆದಂತಿದೆ— ಯದ್ಬಾಲಃ ಕುರುತೇ ಕಾರ್ಯಮಸ್ವತಂತ್ರಸ್ತಥಾಪಿ ವಾ। ಅಕೃತಂ–ತದಿತಿ ಪ್ರಾಹು: ಧರ್ಮಶಾಸ್ತ್ರವಿದೋ ಜನಾಃ ॥ ಅರ್ಥಾತ್ ಚಿಕ್ಕಹುಡುಗನು ಮಾಡಿದ ಪಾಪವು ಪಾಪವೇ ಅಲ್ಲ, ಹಾಗೆಯೇ ಅಸ್ವತಂತ್ರನಾಗಿ ಇನ್ನೊಬ್ಬರ ಪ್ರೇರಣೆಯಿಂದ ಮಾಡಿದ ಪಾಪವೂ ಪಾಪವಾಗಲಾರದೆಂದೂ ವಿಧಿಸುವನು. ನಾರದನೂ ಪರಿಶಿಷ್ಟದ ೩೮ನೆಯ ಶ್ಲೋಕದಲ್ಲಿಯೂ ಅಪರಾಧಂ ಪರಿಜ್ಞಾಯ ದೇಶಕಾಲೌ ಚ ತತ್ತ್ವತಃ। ಸಾರಾನುಬಂಧಾವಾಲೋಕ್ಯ ದಂಡಾನೇತಾನ್ ಪ್ರಕಲ್ಪಯೇತ್ ॥ ಎಂಬಲ್ಲಿಯೂ ಅಪರಾಧದ ಸಾರವನ್ನೂ, ಅನುಬಂಧವನ್ನೂ ಗಮನಿಸಬೇಕೆಂದೂ ವಿಧಿಸುವನು. ಹೀಗೆಯೇ ಯಾಜ್ಞವಲ್ಕ್ಯರು ಆಚಾರಾಧ್ಯಾಯದಲ್ಲಿ ಜ್ಞಾತ್ವಾಪರಾಧಂ ದೇಶಂ ಚ ಕಾಲಂ ಬಲಂ ಅಥಾಪಿ ವಾ। ವಯಃ ಕರ್ಮ ಚ ವಿತ್ತಂ ಚ ದಂಡಂ ದಂಡ್ಯೇಷು

ಪ್ರಾತಯೇತ್ ॥ ಆದರೆ ಕ್ರಿಸ್ತನ ಅನಂತರ ಬಂದ ಧರ್ಮಶಾಸ್ತ್ರಕಾರರು ಈ ಅನುಬಂಧ ಶಬ್ದವನ್ನು ತಮ್ಮ ನಿಬಂಧಗಳಲ್ಲಿ ಉಪಯೋಗಿಸದಿರುವದು ವಿಚಿತ್ರವಾಗಿದೆ.

ಅದಂತಿರಲಿ, ಈ ಧರ್ಮಶಾಸ್ತ್ರಕಾರರ ಮಧ್ಯದಲ್ಲಿದ್ದು, ಅವರ ಗ್ರಂಥಗಳನ್ನಾಗಾಗ್ಯೆ ಪರಿಶೀಲಿಸುತ್ತಿದ್ದ ಭಾಸನೂ ತನ್ನ ಚಾರುದತ್ತ III ಅಂಕದಲ್ಲಿ ಈ ಅನುಬಂಧ ಶಬ್ದವನ್ನು ಸಾಕ್ಷಾತ್ತಾಗಿ ಪ್ರಯೋಗಿಸದಿದ್ದರೂ ಅದಕ್ಕೆ ಅನುಗುಣವಾದ ಟೀಕೆಯನ್ನೇ ಬರೆದಿರುವಂತಿದೆ. ಸಾಮಾನ್ಯವಾಗಿ ಇವನ ವರ್ಣನೆಗಳು ಉದ್ದುದ್ದವಾಗಿರದೆ ಅತಿ ಸಂಕ್ಷೇಪವಾಗಿಯೇ ಇರುವದೆಂಬುದು ಎಲ್ಲರಿಗೂ ತಿಳಿದ್ದೇ ಇದೆ. ಆದರೂ ಈ ಸಂದರ್ಭದಲ್ಲಿ ದೊಡ್ಡದೊಂದು ಶಾರ್ದೂಲವಿಕ್ರೀಡಿತ ಛಂದಸ್ಸಿನ ಶ್ಲೋಕದಲ್ಲಿ ಚೌರ್ಯವನ್ನು ಹೊಗಳಿದುದನ್ನು ನೋಡಿ ಚಕಿತರಾಗುತ್ತೇವೆ.

ಕಾಮಂ ನೀಚಮಿದಂ ವದಂತು ವಿಬುಧಾಃ ಸುಪ್ತೇಷು ಯದ್ವರ್ತತೇ
ನಿಶ್ವಸ್ತೇಷು ಹಿ ವಂಚನಾ ಪರಿಭವಃ ಶೌರ್ಯಂ ನ ಕಾರ್ಕಶ್ಯತಾ ।
ಸ್ವಾಧೀನಾ ವಚನೀಯತಾಪಿ ತು ವರಂ ಬದ್ಧೋ ನ ಸೇವಾಂಜಲಿ
ರ್ಮಾರ್ಗಶ್ಚೈಷ ನರೇಂದ್ರಸೌಪ್ತಿಕವಧೇ ಪೂರ್ವಂ ಕೃತೋ ದ್ರೌಣಿನಾ ॥

ಇದನ್ನು ಕೆಲವರು ಅತಿನೀಚವೆಂದು ಹಳಿಯುವದೇನೋ ನಿಜ ತನಗಾದರೋ ಈ ಮಾರ್ಗವೇ ಅನಿವಾರ್ಯ, ಇಲ್ಲದಿದ್ದರೆ ಸಮಾಜದ ನಿಂದೆ ಮತ್ತು ಪರದಾಸ್ಯನೇ ತನಗೆ ಗತಿಯಾಗುವದಲ್ಲಾ! ಅಶ್ವತ್ಥಾಮನಂಥ ವೀರಾಧಿವೀರರೂ ಇದನ್ನಾಶ್ರಯಿಸಿದಾಗ, ತಾನೇಕಿದನ್ನಾಶ್ರಯಿಸಬಾರದೆಂದು ಅತಿ ದುಃಖದಿಂದ ತಾನು ಇದಕ್ಕೆ ಪ್ರವರ್ತಿಸಬಹುದೆಂತ ಪರಿತಪಿಸುವನು. ಇಷ್ಟು ಸಮಾಧಾನವನ್ನು ಮನಸ್ಸಿನಲ್ಲಿ ತಂದುಕೊಂಡರೂ ಸದ್ಗೃಹಸ್ಥರನ್ನು ತಾನು ಪೀಡಿಸಬಾರದು, ಯಾರಾದರೂ ಅನ್ಯಾಯದಿಂದ ಸಂಪಾದಿಸಿದ ದುಡ್ಡಿದ್ದರೆ ಅದೇ ಮೇಲಲ್ಲವೇ ಎಂದು–

ಲುಬ್ಧೋಽರ್ಥವಾನ್ ಸಾಧುಜನಾವಮಾನೀ ವಣಿಕ್
ಸ್ವವೃತ್ತಾವತಿ ಕರ್ಕಶಃ
ಯಸ್ತಸ್ಯ ಗೇಹಂ ಯದಿ ನಾನು ಲಪ್ಸ್ಯೇ ಭವಾಮಿ ದುಃಖೋಪ
ಹತೋ ನಚಿತ್ತೇ

ಅರ್ಥಾತ್ ಅತಿಸುಲಭವಾಗಿ ಅನ್ಯಾಯವಾಗಿ ಹೇರಳವಾ ಸಂಪತ್ತನ್ನು ಗಳಿಸಿದವರಿದ್ದರೆ ಅಂಥವರನ್ನೇ ಸುಲಿಯುವದು ಅನ್ಯಾಯವಲ್ಲ

ನಾನು ದುಡ್ಡನ್ನಪೇಕ್ಷಿಸುವದೂ ನನ್ನ ದಯಿತೆಯಾದ ಮದನಿಕೆಯ ನಿಷ್ಕ್ರಯಕ್ಕೆ ಬೇಕಾದಷ್ಟೇ ಹಣಕ್ಕೆ ಅಲ್ಲವೇ ? ಎಂದು ಅತಿ ಶ್ರೀಮಂತ ವರ್ತಕರ ಸಾಲಿನ ದೊಡ್ಡಮನೆಯೊಂದನ್ನು ಪ್ರವೇಶಿಸಲುದ್ಯುಕ್ತನಾಗುವನು. ಮನೆಯನ್ನು ಹೊಕ್ಕ ಅನಂತರ ಯಜಮಾನನ ದಾರಿದ್ರ್ಯವು ಅವನಿಗೆ ಒಡೆದು ಕಾಣುವದು. ಯಾರೋ ಮೊದಲು ಅತಿಶ್ರೀಮಂತನಾದವ ಈಗ ತನ್ನ ಸೊತ್ತನ್ನೆಲ್ಲಾ ಕಳಕೊಂಡು ಮನೆಯನ್ನು ಮಾತ್ರ ಹುಟ್ಟಿದ ಮನೆಯೆಂಬ ಅಭಿಮಾನದಿಂದ ಮಾರದೇ ಇಟ್ಟುಕೊಂಡಂತಿದೆ. ಮನೆಯಲ್ಲಿ ಏನೂ ಇಲ್ಲವೆಂದು ಖಾತ್ರಿಯಾಗಿ ದುರ್ದಶೆಯಲ್ಲಿರುವವನನ್ನು ಪೀಡಿಸುವದನ್ಯಾಯವೆಂದು ನಿರ್ಣಯಿಸಿ ಹೊರಗೆ ಹೊರಡಲನುವಾದಾಗ ವಿದೂಷಕನು ಸ್ವಪ್ನದಲ್ಲಿ–'ಮಿತ್ರನೇ (ಚಾರುದತ್ತನೇ) ಈ ಸುವರ್ಣ ಭಾಂಡವನ್ನು ತೆಗೆದುಕೋ'– ಎಂದು ಹೇಳುವದನ್ನ ಕೇಳಿ ಚಕಿತನಾಗುವನು. ತನ್ನ ಗುಟ್ಟೆಲ್ಲಿ ರಟ್ಟಾದೀತೋ ಎಂದು ಮೊದಲು ಹೆದರಿದ ಕಳ್ಳನು ಸ್ವಪ್ನದಲ್ಲಿಯೇ ಈ ಮಾತುಗಳು ಬಂದುದೆಂದು ನಿರ್ಧರಿಸಿ ಒಂದೆರಡು ನಿಮಿಷ ಅಲ್ಲಿಯೇ ನಿಲ್ಲುವರೆ ನಿರ್ಧರಿಸುವನು. ಆಗ ಮತ್ತೊಮ್ಮೆ ಅದೇ ಮಾತುಗಳು ವಿದೂಷಕನ ಬಾಯಿಯಿಂದ ಬರಲು, ರೋಗಿ ಬಯಸಿದುದೂ ಹಾಲು, ವೈದ್ಯ ಪಥ್ಯ ನಿರ್ಣಯಿಸಿದುದೂ ಹಾಲು ಎಂದು ಮತ್ತೆ ಅಲ್ಲಿಯೇ ನಿಲ್ಲುವನು. ಆಗ ವಿದೂಷಕನು– 'ನೀನು ಸ್ವೀಕರಿಸದಿದ್ದರೆ ನನ್ನ ಬ್ರಾಹ್ಮಣತ್ವದ ಆಣೆಯಿದೆ' ಎಂದು ಹೇಳಿದಾಗ ತಾನೂ ಬ್ರಾಹ್ಮಣನಲ್ಲವೇ ಎಂದು ಮನಸ್ಸಿನಲ್ಲಿ ಸಮಾಧಾನವನ್ನು ತಂದುಕೊಂಡೋ ಎಂಬಂತೆ ವಿದೂಷಕನು 'ತುಭ್ಯಮಹಂ ಸಂಪ್ರದದೇ ನ ಮಮ ನ ಮಮ' ಎಂದು ದಾನಮಂತ್ರಗಳಲ್ಲಿ ಕೇಳಿದಂತೆ ಭಾವಿಸಿಕೊಂಡು– ಇದೋ ! ಸ್ವೀಕರಿಸುವೆನೆಂದು ಬ್ರಾಹ್ಮಣನು ದಾನಸ್ವೀಕಾರ ಮಾಡುವಂತೆ ಆ ಸ್ವರ್ಣಭಾಂಡವನ್ನು ಸ್ವೀಕರಿಸಿ ಹೊರಗೆ ಹೊರಟುಹೋದನು. ಹೋಗುವಾಗಲೂ "ತಾನು ಅನ್ಯಾಯಮಾಡಿದ್ದಾಯಿತಲ್ಲಾ, ನನ್ನ ದಾರಿದ್ರ್ಯಕ್ಕೆ ಧಿಕ್ಕಾರವಿರಲಿ. ನನ್ನ ಯೌವನವು ಆನಂದದಿಂದ ಸಾಗಲಿ ! ಈ ದಾರುಣವಾದ ಕರ್ಮವನ್ನು ನಿಂದಿಸಿಕೊಂಡೇ ಮಾಡಬೇಕಾದುದು ನನ್ನ ವಿಧಿಯಾಯಿತಲ್ಲಾ !" ಎಂದು ಹೇಳುತ್ತಾ ಹೋದನು. ಅವಿಮಾರಕದಲ್ಲಿ ಇಷ್ಟು ಉದ್ದವಾಗಿ ಕಳ್ಳತನವನ್ನು ಹೊಗಳದಿದ್ದರೂ, ಅಲ್ಲಿಯೂ ಕಳ್ಳತನಕ್ಕೆ ತಾನು ಒಳ್ಳೆಯ ಅಭಿಪ್ರಾಯದಿಂದಲೆ ಪ್ರವರ್ತಿಸಿದ್ದರಿಂದ ಅದು ಹೇಯವಲ್ಲವೆಂಬುದೇ ಸಾರಾಂಶವಾಗಿದೆ. ಅದಿರಲಿ. ವಸಂತಸೇನೆಯ ಮನೆಯನ್ನು ಹೊಕ್ಕೊಡನೆಯೇ ಅವನ ಪ್ರಿಯೆಯಾದ ಮದನಿಕೆಯು ನಿಜಾಂಶವನ್ನು ಗೊತ್ತು ಹಚ್ಚಿ, ಚಾರುದತ್ತನ ಮನೆಯಲ್ಲಿ ಕದ್ದ ಆಭರಣಗಳೆಂದು ಅವನಿಂದ ಒಪ್ಪಿಸುವಳು. (ಅವನು ಪರವೂರಿನವನಾದ್ದ

ರಿಂದ ಚಾರುದತ್ತನ ವಿಚಾರವೇ ಅವನಿಗೆ ಗೊತ್ತಿದ್ದಿಲ್ಲ.) ಆಗ ಕೂಡಲೇ ಉದ್ವೇಗದಿಂದ 'ಆ ಮನೆಯಲ್ಲಿ ಕಳವು ಮಾಡುವಾಗ † ಯಾರನ್ನಾದರೂ ಕೊಂದಿಯೋ ? ಗಾಯಪಡಿಸಿದ್ದಿಯೋ ?' ಎಂದವಳು ಕೇಳಲು ಈತನೂ ಅಷ್ಟೇ ಉದ್ವೇಗದಿಂದ– 'ಒಂದು ತಪ್ಪನ್ನಂತೂ ಮಾಡಿದ್ದಾಯಿತು– ಇನ್ನು ಪಾಪಪರಂಪರೆಗಳನ್ನು ಮಾಡಿರಬೇಕೇ?' ಎನ್ನುವನು. ಇದರಿಂದ ನಮಗೆ ಖಚಿತ ವಾಗುವದೇನೆಂದರೆ, ಚಾರುದತ್ತನು ಅವನನ್ನು ಪೋಲೀಸರ ವಶಕ್ಕೊಪ್ಪಿಸಲಾರ ನೆಂಬ ದೃಢವಿಶ್ವಾಸವಿದ್ದಿದ್ದರೆ, ಆ ಕಳ್ಳನೂ ಮದನಿಕೆಯ ನಿಷ್ಕ್ರಯಕ್ಕೆ ಬೇಕಾದಷ್ಟೇ ಆಭರಣಗಳನ್ನಿಟ್ಟುಕೊಂಡು ಉಳಿದವುಗಳನ್ನು ಸಂತೋಷದಿಂದ ಚಾರುದತ್ತನಿಗೇ ಹಿಂದೆಕೊಡುವರೆಯೂ ಒಪ್ಪುತ್ತಿದ್ದನು. ಸಂಗ್ರಹವಾಗಿ ಹೇಳುವು ದಾದರೆ, ಕದ್ದ ಆಭರಣಗಳಿಂದ ತನಗೆ ಹೆಂಡತಿಯು ಬೇಕು. ಪರರ ದಾಸ್ಯ ವೆಂದೆಂದಿಗೂ ಬೇಡ, ಹೀಗೆಯೇ ಸದುದ್ದೇಶಗಳನ್ನಿಟ್ಟುಕೊಂಡು ಕದ್ದರೆ, ಅದು ಕಳ್ಳತನದ ಪಾಪದಿಂದ ಖಂಡಿತವಾಗಿ ಕಳಂಕಿತವಾಗಲಾರದು. ಇದನ್ನೆಲ್ಲಾ ಪರಿಶೀಲಿಸಿದರೆ, ಭಾಸನು, ಕೌಟಿಲ್ಯ, ಅಶೋಕ, ಯಾಜ್ಞವಲ್ಕ್ಯಾದಿ ಸ್ಮೃತಿಕಾರ ರಿಂದ ತುಂಬಾ ಉಪಕೃತನಾಗಿ ಪ್ರಾಯಶಃ ಅವರ ಕಾಲದವನೋ ಅಥವಾ ಅವರಿಗೆ ಅತಿಸಮೀಪದವನೋ ಎಂಬ ಸಂಶಯವು ಬಲವತ್ತರವಾಗುವದು.

ಕಲಿವರ್ಜ್ಯಗಳೆಂದು ನಾವು ಈಗ ಸ್ಮೃತಿಗಳಲ್ಲಿ ಕಾಣುವ ಸಂಪ್ರದಾಯ ಗಳು ಭಾಸನ ಕಾಲದಲ್ಲಿನ್ನೂ ಸಮಾಜದಲ್ಲಿ ವರ್ಜ್ಯಗಳೆಂದು ಪರಿಗಣಿತವಾಗಿದ್ದಿಲ್ಲ ವೆಂದೇ ತೋರುವದು. ಮನುವು 'ಶೂದ್ರಾಂ ಶಯನಮಾರೋಪ್ಯ ಬ್ರಾಹ್ಮಣೋ? ಯಾತ್ಯಧೋಗತಿಂ' ಎಂದು ಸಾರಿದ್ದರೆ ಅದು ಭಾಸನ ಕಾಲದ ಅನಂತರವೇ ಸಮಾಜದಲ್ಲಿ ಆದೃತವಾಗಿರಬೇಕು. ಅವನ ಚಾರುದತ್ತನೆಂಬ ಬ್ರಾಹ್ಮಣನು ವರ್ತಕ ಯಾ ವೈಶ್ಯ ಧರ್ಮವನ್ನು ಅನುಸರಿಸಿ ದುಡ್ಡು ಸಂಪಾದಿಸಿ, ದಾನ ಧರ್ಮ ನಿರತನಾಗಿದ್ದು ಕಟ್ಟಕಡೆಗೆ ವಸಂತಸೇನೆಯೆಂಬ ಶೂದ್ರಳಾದ ವೇಶ್ಯಾ ಸ್ತ್ರೀಯನ್ನು ಪರಿಗ್ರಹಿಸಿದರೆ ಅವನಿಗೇನೂ ಸಮಾಜದಲ್ಲಿ ಗೌರವಕ್ಕೆ ಕಡಿಮೆ ಯಾಗಲಿಲ್ಲ. ಅವನ ಹೆಸರೇ ಚಾರುದತ್ತ. ಅರ್ಥಾತ್ ಸ್ಮೃತಿನಿಯಮ ಪ್ರಕಾರ ಗುಪ್ತ, ದಾಸ, ದತ್ತಾದ್ಯಂತಗಳಾದ ಹೆಸರುಗಳು ವೈಶ್ಯರಿಗೇ ಪ್ರಶಸ್ತ. ಇವನ ಮಧ್ಯಮ ವ್ಯಾಯೋಗದಲ್ಲಿ ಬಂದ ಬ್ರಾಹ್ಮಣನ ಹೆಸರೂ **ಕೇಶವದಾಸ.** ಇದೇ

† ಇಲ್ಲಿ ಕಳವಿಗೆ ಸಾಹಸ ಶಬ್ದ ವಿದೆ. ಕೌಟಿಲ್ಯನು 'ಸಾಹಸಮನ್ವಯವತ್ಪ್ರಸಭಂ ಕರ್ಮ' ಅಂದರೆ ಕದಿಯುವರ ಎದುರಿನಲ್ಲಿಯೇ ಮಾಡಲ್ಪಡುವ ಚೌರ್ಯ. ಮನುವೂ ಇದೇ ಪದಗಳಲ್ಲಿ VIII ೩೨ ಅನ್ವಯನತ್ ಪ್ರಸಭಂಕರ್ಮಕೃತಂ ಎಂದು ಹೇಳುವನು.

ರೀತಿಯಲ್ಲಿ ಅವನ ಕಾಲದಲ್ಲಿನ್ನೂ ಸಾಮಿಷಗಳಾದ ಶ್ರಾದ್ಧಗಳೇ ರೂಢಿಯಲ್ಲಿದ್ದ ವಂತೆ. ಪ್ರತಿಮಾ V ಅಂಕದಲ್ಲಿ ರಾವಣನು ಉದ್ದಾಮ ಶ್ರೋತ್ರಿಯನಾಗಿ ಬಂದು ಶ್ರಾದ್ಧ ಪ್ರಶಸ್ತ ವಸ್ತುಗಳಲ್ಲಿ ಪಶುಗಳಲ್ಲಿ ದನ ಅಥವಾ ಖಡ್ಗಮೃಗವೆಂದು ಸಾಧಿಸುವನು. ಶ್ರಾದ್ಧಕ್ಕೋಸ್ಕರ ದನಗಳನ್ನು ಕೊಲ್ಲುವ ಸಂಪ್ರದಾಯವು ಪ್ರಾಯಃ ಕಲಿಯುಗದಾದಿಯಲ್ಲಿ ವರ್ಜ್ಯವಾಗಿರಬಹುದೆಂದು ಡಾ॰ ಭಂಡಾರಕರರು ಊಹಿಸುತ್ತಾರೆ. ಹೇಗೆಯೋ ಈ ಸ್ಮೃತಿಕಾರರ ಪ್ರಭಾವದಿಂದ ಬ್ರಾಹ್ಮಣರು ಶುದ್ಧ ಸಂಸ್ಕೃತವನ್ನೇ ಎಲ್ಲಾ ಕಡೆಗಳಲ್ಲಿಯೂ ಮಾತನಾಡಬೇಕಾಯಿತು. ಹೆಂಗಸರು ನಾಟಕದಲ್ಲಿ ಪ್ರಾಕೃತವನ್ನೇ ಮಾತನಾಡಬೇಕಾಯಿತು. ಆದರೆ ಭಾಸನ ನಾಟಕಗಳಲ್ಲಿ ಈ ನಿಯಮವು ಇನ್ನೂ ಜಾರಿಗೆ ಬಂದಿರಲಿಲ್ಲ. ಚಾರುದತ್ತದಲ್ಲಿಯ ಸೂತ್ರಧಾರನು ಪ್ರಾಕೃತದಲ್ಲಿಯೇ ಮಾತಾಡುವನು. ಬ್ರಾಹ್ಮಣ ವೇಷದಲ್ಲಿ ಬಂದ ಇಂದ್ರನು ಕರ್ಣಭಾರದಲ್ಲಿ ಪ್ರಾಕೃತದಲ್ಲಿಯೇ ಮಾತನಾಡಿದರೂ ಯಾರು ಚಕಿತರಾಗಲಿಲ್ಲ. ‘ ಊರ್ಜಿತಂ ಕರ್ಮ ’ ಅರ್ಥಾತ್ ಉದಾತ್ತವಾದ ಕರ್ಮವಾಗಿದ್ದಲ್ಲಿ ಬೃಹನ್ನಳೆಯೂ ಪ್ರಾಕೃತವನ್ನು ತೊರೆದು ಸಂಸ್ಕೃತದಲ್ಲಿಯೇ ಮಾತನಾಡಬೇಕಾಗುತ್ತದೆ. ಪತಂಜಲಿಯ ಮಹಾಭಾಷ್ಯದ ಪ್ರಥಮ ಆನನದಲ್ಲಿಯೂ ಇದೇ ತರದ ಸಂದರ್ಭವನ್ನು ನಾವು ಕಾಣುತ್ತೇವೆ. ಅಲ್ಲಿ ಕೆಲವು ಮಹರ್ಷಿಗಳು ಯಜ್ಞಕರ್ಮವನ್ನುಳಿದು ಇತರ ಕಾಲದಲ್ಲಿ ಸಾಧಾರಣವಾಗಿ ಮಾತನಾಡುವಾಗ ‘ ಯದ್ವಾ ನಃ ಭವತು ತದ್ವಾ ನಃ ಭವತುಃ ’ ಎಂಬುದನ್ನು ಅಬದ್ಧವಾಗಿ ‘ ಯರ್ವಾಣಸ್ತರ್ವಾಣಾ ’ ಎಂದು ಹೇಳುತ್ತಿದ್ದುದರಿಂದ ಅವರಿಗೆ ಅದೇ ಹೆಸರಿನಿಂದಲೇ ಕರೆಯುವದೆಂದು ಆಗಿನ ಜನರು ತೀರ್ಮಾನಿಸಿದರಂತೆ ! ಶೋಭನಿಕರೆಂಬ ಆಗಿನ ಕಾಲದ ನಾಟಕ ಕಂಪೆನಿಯವರು ಬಲಿಬಂಧನನ್ನೂ, ಕಂಸವಧವನ್ನೂ ಪ್ರತ್ಯಕ್ಷವಾಗಿ ತೋರಿಸುತ್ತಿದ್ದರೆಂದೂ ಪತಂಜಲಿಯು ಹೇಳಿದಾಗ ಭಾಸನ ಬಾಲಚರಿತಕ್ಕೆ ಆ ಕಂಸವಧವೆಂದು ಇನ್ನೊಂದು ಹೆಸರಿದ್ದಿರಬೇಕೆಂದೂಹಿಸಬಹುದಾಗಿದೆ.

೬

ವಾತ್ಸ್ಯಾಯನನೂ ಭಾಸನೂ

ಕೌಟಿಲ್ಯ ಭಾಸರ ಅನಂತರ ವಾತ್ಸ್ಯಾಯನ, ಇವನ ಅನಂತರ ಕಾಲಿದಾಸ ಅಶ್ವಘೋಷಾಧಿಗಳು ಕ್ರಮವಾಗಿ ಜೀವಿಸಿರಬಹುದೆಂತಲೂಹಿಸಬಹುದಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವು ಅರ್ಥನನ್ನೇ ತ್ರಿವರ್ಗಗಳಲ್ಲಿ ಪ್ರಧಾನವೆಂದು ಪರಿಗಣಿಸಿ– 'ಅರ್ಥ ಮೂಲೌ ಹಿ ಧರ್ಮಕಾಮೌ' ಎಂದು ತನ್ನ ಗ್ರಂಥವನ್ನಾರಂಭಿಸಿದರೆ, ಇವನನ್ನನುಸರಿಸಿಯೇ ವಾತ್ಸ್ಯಾಯನನೂ ತನ್ನ ಅರ್ಥಾನರ್ಥಾನುಬಂಧ ಸಂಶಯವಿಚಾರವೆಂಬ ಆರನೆಯ ಅಧಿಕರಣವನ್ನು ಅರ್ಥದಿಂದಾರಂಭಿಸಿ, ತ್ರಿವರ್ಗಗಳನ್ನು ಅರ್ಥ ಧರ್ಮ ಕಾಮಗಳೆಂದೇ (ಕಾಮದಿಂದಾರಂಭಿಸದೆ) ನಿರ್ದೇಶಿಸುವನು. ಇವನ ಶೈಲಿಯೂ ವಿಷಯ ವಿವೇಚನೆಯೂ ಕೌಟಿಲ್ಯನನ್ನೇ ಅನುಸರಿಸಿದೆ. ಇವರಿಬ್ಬರಿಗೂ ಒಂದೇ ಗೋತ್ರವಾದ್ದರಿಂದ ಒಬ್ಬರೆಯೋ ಏನೋ ಎಂದು ಕೆಲವರು ಊಹಿಸಿರುವರು. ಐಹಿಕ ಸಂಪತ್ತನ್ನು ಸಾಧಿಸುವ ಕ್ರಮವನ್ನು ಕಾಮಸೂತ್ರದಲ್ಲಿ ನಾವು ಕಾಣುತ್ತೇವೆ. ಈ ಕ್ರಮವು ಧರ್ಮ ಸಮ್ಮತವೋ ಅಲ್ಲವೋ ಎಂಬುದರ ಗೋಜಿಗಾತನು ಹೋಗುವದಿಲ್ಲ. ಈತನಿಗೆ ಅವಿಮಾರಕದ ಕಥೆಯು ಗೊತ್ತಿತ್ತು. (ಕಾಶೀ ಸಂಪಾದಿತ ೧೯೨೯ರ ಪ್ರತಿ ಪು ೨೪೫), ಇದೇ ರೀತಿಯಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಭಾಸನ ಪ್ರಭಾವವು ಇವನ ಮೇಲೆ ಪರಿಣಾಮ ಮಾಡಿತ್ತೆಂಬುದನ್ನು ಇಲ್ಲಿ ವಿಚಾರಿಸುವಾ.

ವೇಶ್ಯೆಯೇ ತನ್ನ ಬಾಲ್ಯದಿಂದಲೂ ೬೪ ಕಲೆಗಳನ್ನೂ ಸರಿಯಾಗಿ ಅಭ್ಯಸಿಸಿ ಅವುಗಳನ್ನರಿತವರಿಗೆ ಆಶ್ರಯವನ್ನು ಕೊಡಬಲ್ಲವಳಾದುದರಿಂದ (ಭಾಸನ ವಸಂತಸೇನೆಯಂಥವರು) ವಾತ್ಸ್ಯಾಯನನಿಗೆ ಅವಳಲ್ಲಿರುವ ಪಕ್ಷಪಾತವೆಂದರೆ ಅತಿ ಸಹಜವೇ ಆಗಿದೆ. ಲಜ್ಜಾಶೀಲಳಾದ ಗೃಹಿಣಿಯಾದರೋ ನಾಗರಿಕರಿಗೆ ತುಂಬಾ ತೃಪ್ತಿಯನ್ನುಂಟುಮಾಡುವದು ಸ್ವಲ್ಪ ಕಷ್ಟ. ಆದರೆ ಇವಳಲ್ಲಿ

'ರತಿರ್ವೃತ್ತಿಃ ಚ ಸರ್ಗಾತ್' (VI I I) ಎಂದು ಇವಳನ್ನು ಬಾಯಿ ತುಂಬಾ ಹೊಗಳುವನು. ಇದೇನೋ ಸಹಜವೇ, ಯಾಕೆಂದರೆ ಇವಳಿಗೆ ಸಂಭೋಗದ ಪ್ರತಿಯೊಂದು ವಿಧವೂ ಸಂಪೂರ್ಣ ಅಭ್ಯಸ್ತವಾಗಿದೆ. ಕೌಟಿಲ್ಯನು ಇವಳಿಗೆ ವೃತ್ತಿತೆರಿಗೆಯನ್ನೇರಿಸಿದರೆ (II ೨೭ ರೂಪಾಜೀವಾ=ವೇಶ್ಯಾ ಭೋಗ ದ್ವಯಗುಣಂ ಮಾಸಂ ದದ್ಯುಃ) ಇವನಿಗಂತೂ ಇದು ಸಮ್ಮತವೇ ಅಲ್ಲ. ಇವಳು ರಾಜನ ಪರಿವಾರದವಳಾಗಿ ಅವನಿಗೆ ಛತ್ರಗಳನ್ನು ಹಿಡಿದೋ, ಚಾಮರವನ್ನು ಬೀಸಿಯೋ ಅಥವಾ ಅವನಿಗೆ ತಾಂಬೂಲಕರಂಕವಾಹಿನಿಯಾಗಿಯೋ ಸೇವಿಸ ಬೇಕೆಂದೂ, ಅವನ ಪಾಲಕಿಯೊಡನೆ ಸಂಚರಿಸುವ ಅಧಿಕಾರವನ್ನೂ ಇವಳಿಗೆ ಕೊಡಿಸಬೇಕೆಂದೆನ್ನುವನು. ರಾಜನೊಡನೆ ಇರುವಾಗ ಇವಳು ಕಾಹಿಲೆ ಬಿದ್ದು ಅಂಗವಿಕಲೆಯಾಗಿ ತನ್ನ ಸೇವೆಯನ್ನು ಸಲ್ಲಿಸಲಸಮರ್ಥೆಯಾದರೂ ಇವಳಿಗೆ ಜೀವ ನಾಂಶವದ್ನು ರಾಜನು ಕೊಟ್ಟೇ ತೀರಬೇಕೆಂದು ಹೇಳುವರೆಯೂ ಮರೆಯುವದಿಲ್ಲ. ಅವನ ಸಂಪೂರ್ಣ ಅನುಗ್ರಹಕ್ಕೆ ಪಾತ್ರಳಾಗಿ ಅವನಿಂದ ವಿಶೇಷವಾದ ಲಾಭ ವನ್ನಿವಳು ಪಡೆಯಬೇಕೆಂದೂ ಹೇಳಿ, ಅವಳಿಗೆ ಶೀಲ ಸಂಪನ್ನಳಾಗಿ, ಏಕಚಾರಿಣಿ ಯಾಗಿರಬೇಕೆಂದುಪದೇಶಿಸುವನು. ಒಂದನೆಯ ಅಧ್ಯಾಯದ ಅಂತ್ಯದ ಶ್ಲೋಕ ಗಳು ಗಮನಾರ್ಹವಾಗಿವೆ- ಸದ್ವೃತ್ತಮನುವರ್ತೇತ ನಾಯಕಸ್ಯ ಹಿತೈಷಿಣೀ। ಕುಲಯೋಷಾ ಪುನ ರ್ಭೂರ್ವಾ ವೇಶ್ಯಾ ವಾ ಪ್ಯೇಕಚಾರಿಣೀ॥ ಧರ್ಮಂ ಅರ್ಥಂ ತಥಾ ಕಾಮಂ ಲಭತೇ ಸ್ಥಾನಮೇವ ಚ। ನಿಃಸಪತ್ನಂ ಚ ಭರ್ತಾರಂ ನಾರ್ಯಃಸದ್ವೃತ್ತಮಾಶ್ರಿತಾಃ॥ ವೈಶಿಕಾಧಿಕರಣ (VI. I)ದಲ್ಲಿ ನಾಯ ಕೋತ್ತಮನ ಗುಣಗಳ ಪಟ್ಟಿಯನ್ನು ನೋಡಿದರೆ ಈ ಗುಣಗಳು ಭಾಸನ ನಾಯಕರಾದ ಚಾರುದತ್ತ ಉದಯನಾದಿಗಳ ಗುಣಗಳನ್ನೇ ಪುನಃ ಒಪ್ಪಿಸು ವಂತಿವೆ. ವೇಶ್ಯೆಯನ್ನು ಏಕಚಾರಿಣಿಯಾಗಿ ಜಿತೇಂದ್ರಿಯಳಾಗಿರುವರೆ (VII ೫೭-೫೮ರಲ್ಲಿ) ಉಪದೇಶಿಸುವಾಗ ಭಾಸನ ವಸಂತಸೇನೆಯನ್ನೇ ನೆನಪಿಗೆ ತಂದುಕೊಡುವಂತಿದೆ. ಇದೇ ರೀತಿಯಲ್ಲಿ ಪದ್ಮಾವತೀ ವಾಸವದತ್ತೆಯ ರಿಬ್ಬರಿಗೂ ಒಂದೇ ಗಂಡನ ಸಹವಾಸದಲ್ಲಿ ಅನ್ಯೋನ್ಯ ಪ್ರೇಮದಿಂದಿರುವದನ್ನು ಭಾಸನು ಹೃದಯಂಗಮವಾಗಿ ಚಿತ್ರಿಸಿದರೆ, ವಾತ್ಸ್ಯಾಯನನು ತಾನು ಕಲಿಸಿದ ಮಾರ್ಗವನ್ನನುಸರಿಸುವವಳು ಗಂಡನಿಗೆ ಸಾವಿರ ಹೆಂಡಂದಿರಿದ್ದರೂ ಅವನನ್ನು ತನ್ನ ವಶದಲ್ಲಿಯೇ ಇಟ್ಟುಕೊಳ್ಳಲು ಸಮರ್ಥಳಾಗುವಳೆಂದು ಕೊಚ್ಚಿಕೊಳ್ಳು ವನು. ಇಲ್ಲಿ ಭಾಸನ ವಾಸವದತ್ತೆಯ ತಾಯಿಯನ್ನು 'ಷೋಡಶಾಂತಃಪುರ ಜ್ಯೇಷ್ಠಾ' ಎಂದುದನ್ನೇ ನೆನೆದುಕೊಂಡೇ ವಾತ್ಸ್ಯಾಯನನೂ 'ಸಹಸ್ರಾಂತಃ ಪುರಮಪಿ' ಎಂದು ಹೇಳಿದನೋ ಎಂದು ತೋರುವದು. Calcutta

Department of Letters ಎಂಬ ಪತ್ರಿಕೆಯಲ್ಲಿ ೧೯೨೧ರಲ್ಲಿ H. C. Chakaldar ಎಂಬ ವಿದ್ವಾಂಸರು ವಾತ್ಸ್ಯಾಯನನ ವಿಷಯ ಬರೆಯುವಾಗ ಭಾಸನ ಸಮಾಜವು ವಾತ್ಸ್ಯಾಯನನು ವರ್ಣಿಸಿದುದೇ ಎಂದು ಅಭಿಪ್ರಾಯ ಪಟ್ಟಿರುವರು. ಚಾರುದತ್ತಾದಿ ಭಾಸನ ನಾಯಕರು ವೈಶಿಕ ಕಲೆಯನ್ನು ಅ ತಿದ್ದರೆ ಅದನ್ನು ವಾತ್ಸ್ಯಾಯನನು ಅತಿವಿವರವಾಗಿ ವರ್ಣಿಸಿರುವನು. ಸಾಧಾರಣ ಇದೇ ಸಮಯದಲ್ಲಿ ಬರೆಯಲ್ಪಟ್ಟ ಲಲಿತ ವಿಸ್ತರದಲ್ಲಿ ಬುದ್ಧನು ಸ್ತ್ರೀಪುರುಷ ಲಕ್ಷಣಗಳಲ್ಲಿಯೂ ವೈಶಿಕ ಕಲೆಯಲ್ಲಿಯೂ ನಿಪುಣನಾಗಿ ಇನ್ನೂ ಅನೇಕ ಕಲಾಭಿಜ್ಞನೆಂದೂ ಹೇಳಿದೆ. (ಲಲಿತ ವಿಸ್ತರ Dr. Lefmann ಸಂಪಾದಿತ ಪು. ೧೫೬) ಒಂದೇ ಮಾತಿನಲ್ಲಿ ಹೇಳುವದಾದರೆ ಆಗಿನ ಕಾಲದ ಅತ್ಯುನ್ನತ ನಾಗರಿಕ ಸಮಾಜವೇ ಗಣಿಕೆಯರಿಗೆ ವಿಶೇಷ ಮರ್ಯಾದೆಯನ್ನು ಸಲ್ಲಿಸುತ್ತಿತ್ತು. ಭಾಸನಿಂದ ಒಂದೆರಡು ಶತಮಾನಗಳ ಅನಂತರ ಜೀವಿಸಿದ ಅಶ್ವಘೋಷನ ನಾಟಕಗಳಲ್ಲಿಯೂ ಈ ಗಣಿಕಾಕುಲದ ಪ್ರಾಶಸ್ತ್ಯವು ಪ್ರತಿಬಿಂಬಿತವಾಗಿದೆ. (ಮಹಾನ್ ಖಲು ಆಮೋದಃ ಗಣಿಕಾಕುಲೇ) ೧ನೆಯ ಅಂಕದ ಅಂತ್ಯದಲ್ಲಿ ವಸಂತಸೇನೆಗೆ ಕೊಡಲ್ಪಟ್ಟ ಚಾರುದತ್ತನ ಉತ್ತರೀಯವು ಬಡತನದಲ್ಲಿಯೂ ಅವನ " **ಅನುದಾಸೀನ**ವಾದ **ಯೌವನ**"ವನ್ನು ಒಡೆದು ತೋರಿಸುತ್ತಿತ್ತು. ಮಧ್ಯರಾತ್ರಿಯವರೆಗೂ ಸಂಗೀತ ಕಚೇರಿಗಳಿಗೂ ಹೋಗಿ ಬರುವ ಪದ್ಧತಿಯ ನ್ನಿಟ್ಟುಕೊಂಡಿದ್ದ. ವಾತ್ಸ್ಯಾಯನನ ಕ್ರಮದಲ್ಲಿ ಚಾರುದತ್ತನಲ್ಲಿ ಬೇಕಾದ ಸೌಕರ್ಯಗಳಿತ್ತು. ಕುರಂಗಿಯ ಅರಮನೆಯಲ್ಲಿಯೂ ಉಜ್ಜಯಿನಿಯಲ್ಲಿಯೂ ಮಹಾಸೇನನ ಪ್ರಾಸಾದಗಳಲ್ಲಿಯೂ ಉಪಸ್ನಾನಗಳು (Swimming Pools) ಅಂದರೆ ಶ್ರೀಮಂತರಿಗೆ ಸ್ನಾನ ಮಾಡುವರೆ ಜಲಕ್ರೀಡಾದಿಗಳನ್ನಾಡುವ ಅನುಕೂಲತೆಯುಳ್ಳ ಜಲವಿಹಾರಗಳಿದ್ದುವು. ಅವಿಮಾರಕನು ಕನ್ಯಾಂತಃಪುರವನ್ನು ಹೊಕ್ಕುವ ಮುಂಚೆ ಪಟ್ಟಣದ ರಸ್ತೆಗಳಲ್ಲಿ ಬರುವಾಗ ಜನರೆಲ್ಲರೂ ವಾತ್ಸ್ಯಾಯನನು ಹೇಳಿದ ರೀತಿಯಲ್ಲಿಯೇ 'ನಾಗರಿಕರಾಗಿ ಸುಖಸಂಪಲ್ಲೋಲುಪರಾಗಿದ್ದರು.' ಶೀತಚಂದನ **ನಿಲಯವಾದ ಮಲಯ** ಪರ್ವತದಲ್ಲಿ ವಿದ್ಯಾಧರ ದಂಪತಿಗಳು ಸುಖವಿಹಾರಮಾಡುವ ವಾಡಿಕೆಯನ್ನಿಟ್ಟುಕೊಂಡಿದ್ದರು. ಗ್ರಾಮ್ಯ ಅಥವಾ ನೀಚ ಗುಣಗಳನ್ನು ಪ್ರಕಾಶಿಸದೇನೇ (ರಾಕ್ಷಸರಿಗಿದು ಸಹಜವಾಗಿರಬಹುದೋ ಎಂದು ಹೆದರಿ) ಭೀಮಸೇನನನ್ನು ತನ್ನ ಮನೆಗೆ ಆಮಂತ್ರಿಸಬೇಕೆಂದು ಉಪಾಯವನ್ನು ಹೂಡುವಳು. ತನ್ನ ಗಂಡನ ಮಾತನ್ನು ಅವಳಿನ್ನೂ ಮರೆತಿರಲಿಲ್ಲ. ವಿಶೇಷತೋ ಮತ್ಸಮೀಪೇ ಮಾ ಪ್ರಕಾಶಯ ನೀಚತಾಂ। ಉತ್ತಮಸ್ತ್ರೀ ಗುಣೋಪೇತಾ ಭಜೇಥಾಃ ಪರವರ್ಣಿನಿ ॥ ಈ ಉಪಾಯವೂ ವಾತ್ಸ್ಯಾಯನನ ತಂತ್ರಗಳಂತೆಯೇ

ಇವೆ. ಕಾವೋಪಾಸನೆಯನ್ನು ಸರಿಯಾದ ರೀತಿಯಲ್ಲಿ ಮಾಡಿದ ನವದಂಪತಿಗಳ ಚೊಕ್ಕವಾದ ಮನೆಯು 'ಸ್ವರ್ಗಕ್ಕೆ ಕಿಚ್ಚನ್ನಿಡುವಂತೆ' ತೋರುವದು.

V ನೇ ಅಧಿಕರಣದ ಆರನೆಯ ಪ್ರಕರಣವಾದ ಅಂತಃಪುರಿಕಾವೃತ್ತ ಪ್ರಕರಣವೂ ಆದರ ಮುಂದಿನ ದಾರರಕ್ಷಿಕಾ ಪ್ರಕರಣವೂ ಅವಿಮಾರಕ ಕನ್ಯಾಂತಃಪುರದ ಪ್ರದೇಶವನ್ನು ನಮಗೆ ನೆನಪು ಹುಟ್ಟಿಸುವಂತಿದೆ. ಈ ಅಂತಃಪುರಿಕಾವೃತ್ತ ಪ್ರಕರಣದ ೨ನೆಯ ಸೂತ್ರವು (೨೬೪ನೆಯ ಪುಟ) ಸಾಪಸಾರಂ ತು ಪ್ರಮದವನಾವಗಾಢಂ ವಿಭಕ್ತದೀರ್ಘಕಕ್ಷಂ ಅಲ್ಪ ಪ್ರಮತ್ತ ರಕ್ಷಕಂ ಪ್ರೋಷಿತ ರಾಜಕಂ ಕಾರಣಾನಿ ಸಮೀಕ್ಷ್ಯ ಬಹುಶಃ ಆಹ್ರಿಯಮಾಣಾ:- ಅರ್ಥಬುದ್ಧ್ಯೈ ಕಕ್ಷ್ಯ ಪ್ರವೇಶಂ ಚ ದೃಷ್ಟ್ವಾವ ತಾಭಿರೇವ ವಿಹಿತೋಪಾಯಃ ಪ್ರವಿಶೇತ್- ಪ್ರತ್ಯಕ್ಷವಾಗಿ ಧಾತ್ರಿಯ ಆಮಂತ್ರಣವನ್ನು ಪಡೆದು ಒಳಗೆ ಹೊಕ್ಕಿದ ಅವಿಮಾರಕವನ್ನೇ ನಿರ್ದೇಶಿಸುವಂತಿದೆ. ಹೀಗೆಯೇ ೨೪೬ನೆಯ ಪುಟದಲ್ಲಿ IV. ೪.೧೮ ಲಜ್ಜಾಲುವಾದ ಗೃಹಿಣಿಗೆ ಅವಿಮಾರಕನ ಕಥೆಯನ್ನು ಹೃದಯಂಗಮವಾಗಿ ತಿಳಿಯ ಹೇಳಿದ ಅನಂತರ, ಅವಳು ಮೆಲ್ಲ ಮೆಲ್ಲನೆ ತನ್ನ ಸಖಿಯ ಹತ್ತಿರ ತನ್ನ ದಯಿತನು ಎಲ್ಲಿ ಕೂತಿದ್ದನು, ಎಲ್ಲಿ ನಿದ್ದೆಹೋದನು, ಏನನ್ನು ತಿಂದನು ಇತ್ಯಾದಿಗಳನ್ನು ವಿಚಾರಿಸುವಂತೆ ಚಿತ್ರಿಸುವಾಗ ಸ್ವಪ್ನನಾಟಕದಲ್ಲಿ ಬ್ರಹ್ಮಚಾರಿಯು ವಾಸವದತ್ತೆಯು ಅಗ್ನಿಯೊಳಗೆ ದಗ್ಧವಾದಳೆಂಬ ಸುಳ್ಳು ವೃತ್ತಾಂತವನ್ನು ನಿಜವೆಂದೇ ತಿಳಿದೊಡನೆ ದುಃಖಾಕ್ರಾಂತನಾದ ಉದಯನನು, 'ಇಲ್ಲಿ ನಾನವಳೊಡನೆ ಕುಳಿತಿದ್ದು, ಇಲ್ಲಿ ಅವಳೊಡನೆ ಮಲಗಿದುದು' ಇತ್ಯಾದಿ ಪ್ರಲಪಿಸಿದನೆಂದು ವಾಸವದತ್ತೆಯ ಮುಂದೆಯೇ ತಿಳಿದುವರ ನೆನಪನ್ನುಂಟುಮಾಡದಿರದು. ಯಜ್ಞ, ವಿವಾಹ, ದುಃಖಕಾಲ, ವನದಲ್ಲಿ ಹೆಂಗಸರನ್ನು ನೋಡಿದರೆ ದೋಷವಿಲ್ಲವೆಂದು ಭಾಸನು ಪ್ರತಿಮಾ I. ೨೯ರಲ್ಲಿ ಸೀತಾಮಾತೆಯು ವನ ಪ್ರವೇಶ ಮಾಡುವ ಕಾಲದಲ್ಲಿ ಹೇಳಿದರೆ ವಾತ್ಸ್ಯಾಯನನೂ ಅದನ್ನೇ ಸ್ವಲ್ಪ ಬದಲಿಸಿ III. ೪೩೪ರಲ್ಲಿ 'ಯಜ್ಞೇ ವಿವಾಹೇ ಯಾತ್ರಾಯಾಂ ಉತ್ಸವೇ ವ್ಯಸನೇ ಪ್ರೇಕ್ಷಣ ಕವ್ಯಾಪೃತೇ ಜನೇ ತತ್ರ ತತ್ರ ದೃಷ್ಟೇಂಗಿತಾಕಾರಾಂ ಪರೀಕ್ಷಿತಭಾವಾಂ ಏಕಾಕಿನೀಂ ಉಪಕ್ರಮೇತ' ಸಂದರ್ಭವೇನೋ ಬೇರೆಯಿರಬಹುದು. ಅವಿಮಾರಕದ ೧ನೆಯ ಅಂಕದ ಅಂತ್ಯದಲ್ಲಿ ಮಂತ್ರಿಯು 'ಅನ್ಯಾಪದೇಶೇನ ಗತವಾನಸ್ಮಿ' ಎಂದರೆ, ವಾತ್ಸ್ಯಾಯನನೂ ಇದನ್ನೇ ಇನ್ನೊಂದು ಸಂದರ್ಭದಲ್ಲಿ III. ೧-೧೮ರಲ್ಲಿ 'ಕನ್ಯಾಂಚ ಏಷಾಂ ಅಲಂಕೃತಾಂ ಅನ್ಯಾಪದೇಶೇನ ದರ್ಶಯೇಯುः ಎಂದು ಉಪಯೋಗಿಸುವನು.

ವಾತ್ಸ್ಯಾಯನನು ಕೌಟಿಲ್ಯ ಭಾಸರ ಗ್ರಂಥಗಳನ್ನು ಸರಿಯಾಗಿ ಮನನ ಮಾಡಿ ಭಾಸನಿಂದ ಒಂದು ಶತಮಾನದೊಳಗಾಗಿಯೇ ಜೀವಿಸಿರಬೇಕು. ಶಂಕರಾದಿವೇದಾಂತಾಚಾರ್ಯರ (೭೮೮ A. D.) ಸಮಕಾಲೀನನಾಗಿದ್ದರೆ ಆಗಲೇ ಸಂಸಾರ ಸಾಗರವನ್ನು ದುಃಖಮಯವಾಗಿ ಚಿತ್ರಿಸುತ್ತಿದ್ದನು. ಭಾಸನ ಯುವಕರೆಲ್ಲರೂ ಯೌವನವನ್ನು ಅನುದಾಸೀನ ಮಾಡಿ ಸುಖಲೋಲುಪರಿದ್ದರು. ಮತ್ತು II. ೨ರಲ್ಲಿ ಹೇಳಿದಂತೆ ಅತಿಕಾಮತ್ವವನ್ನು ತೊರೆದು ಸಂಸಾರ ಸುಖಗಳ ಅನ್ವೇಷಣೆಯಲ್ಲಿ ಹಿಂದುಳಿಯದೆ ಜೀವನವನ್ನು ಸಫಲವಾಗಿ ಮಾಡಿ ವೈದಿಕ ಮಾರ್ಗವನ್ನನುಸರಿಸುತ್ತಿದ್ದರು. ಕಾಮಾತ್ಮತಾ ನ ಪ್ರಶಸ್ತಾ ನ ಚೈವೇಹಾಸ್ತ್ಯಕಾಮತಾ | ಕಾಮ್ಯೋ ಹಿ ವೇದಾಧಿಗಮಃ ಕರ್ಮಯೋಗಃ ಚ ವೈದಿಕಃ ಅಂದರೆ ಪ್ರಾಯಶಃ ಈತನು ಬೌದ್ಧಜಾತಕಗಳಿಗೆ ಸಮಕಾಲೀನನಾಗಿ ಕ್ರಿಸ್ತುಪೂರ್ವ ೨ ಯಾ ೩ ಶತಮಾನದವನಿದ್ದಿರಬಹುದು.

೭

ವಿಷ್ಣುಪುರಾಣವೂ ಭಾಸನೂ

ಪುರಾಣರತ್ನವಾದ ವಿಷ್ಣುಪುರಾಣವು II. ೯. ೧೬ರಲ್ಲಿ ಕೃತ್ತಿಕಾದಿಷು ಋಕ್ಷೇಷು ಎಂದು ನಕ್ಷತ್ರಗಳನ್ನು ಕೃತ್ತಿಕೆಯಿಂದಾರಂಭಿಸುವಾಗ ಅಶ್ವಿನಿಯಿಂದ ಆರಂಭಿಸುವ ರೂಢಿಯನ್ನು ತಂದ ವರಾಹಮಿಹಿರನಿಗಿಂತ ಪ್ರಾಚೀನವೆಂದು ಸ್ಪಷ್ಟವಾಗುತ್ತದೆ. ಈ ಪ್ರಾಚೀನ ತಮವಾದ ಪುರಾಣದ ಆಧಾರದಿಂದ ವೈಷ್ಣವಾಚಾರ್ಯರಾದ ರಾಮಾನುಜರು ತಮ್ಮ ವೈಷ್ಣವ ಮತದ ಅತಿಮುಖ್ಯವಾದ ಕೆಲವು ತತ್ತ್ವಗಳನ್ನಾಯ್ದುಕೊಂಡಿದ್ದರೆಂಬುದು ತಿಳಿದೇ ಇದೆ. ಇದು ಪ್ರಾಯಶಃ ಕ್ರಿಸ್ತನ ಅನಂತರ ೩ನೆಯ ಶತಮಾನದಲ್ಲಿ ರಚಿತವಾಗಿರಬಹುದೆಂದೂಹಿಸಬಹುದಾಗಿದೆ. ಭಾಸನು ಇದಕ್ಕಿಂತಲೂ ಪ್ರಾಚೀನನಾಗಿದ್ದಿರಬೇಕೆಂದು ತೋರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಭಾಸನು ತನ್ನ ಮಧ್ಯಮ ನಾಯಕರನ್ನು 'ಭುಜಾಯುಧಪ್ರಧಾನ'ರೆಂದು ಕರೆದು ಅವರನ್ನು ಆಯುಧವಿಲ್ಲದೇನೇ ಬರೇ ಕೈಗಳಿಂದಲೇ ಯುದ್ಧಮಾಡಿಸಿದರೆ, ವಿಷ್ಣುಪುರಾಣ V ೨೩. ೧೭ರಲ್ಲಿ ಕಾಲಯವನನ್ನೂ 'ಬಾಹುಪ್ರಹರಣೋ ನೃಪ' ಎಂದು ವಿಶೇಷಿಸಿದೆ. ಹೀಗೆಯೇ ಬಾಲಚರಿತ IV ೧೨ರಲ್ಲಿ ಶ್ರೀಕೃಷ್ಣನು ಕಾಲಿಯಸರ್ಪಕ್ಕೆ ಹಣೆಯಲ್ಲಿ ಕಾಲಿನ ಚಿಹ್ನೆಯಿದ್ದರೆ ಗರುಡನ ಭಯವಿಲ್ಲವೆಂಬುದನ್ನು 'ಮಮ ಪಾದೇನ ನಾಗೇಂದ್ರ ಚಿಹ್ನಿತಂ ತವ ಮೂರ್ಧನಿ। ಸುಪರ್ಣ ಏವ ದೃಷ್ಟ್ವೇದಮಭಯಂತೇ ಪ್ರದಾಸ್ಯತಿ॥' ಓದುವೆವು. ಬಾಲಚರಿತದ IV ಅಂಕಾಂತ್ಯದಲ್ಲಿ ಅತಿನಿಗೂಢವಾದ ದೇವರಹಸ್ಯವೆಂದು ವರ್ಣಿತವಾದುದನ್ನು ನಾರದನು ವಿಷ್ಣುಪುರಾಣದ V ೧೬-೧೮ರಿಂದ ೨೭ ಶ್ಲೋಕಗಳಲ್ಲಿ ಟೀಕಿಸುವಂತಿದೆ. ಕೃಷ್ಣಜನ್ಮಸಂದರ್ಭದಲ್ಲಿ ದೇವದುಂದುಭಿಗಳು ತಾವಾಗಿಯೇ ಮೊಳಗಿದವೆಂದು ಬಾಲಚರಿತದಲ್ಲಿದ್ದುದನ್ನೇ 'ಮೃದಂಗಾದಿಷು ತೂರ್ಯೇಷು ಪ್ರತಿಷಿದ್ಧೇಷು

ತತ್ಕ್ಷಣಾತ್ | ಖೇ ಸಂಗತಾನ್ಯವಾದ್ಯಂತ ದೇವತೂರ್ಯಾಣ್ಯನೇಕಶಃ ||' ಎಂದು ವಿ. ಪು. V. ೨೦-೫ರಲ್ಲಿ ವರ್ಣಿಸಿದೆ.

ಈ ಸಂದರ್ಭದಲ್ಲಿ ಕೃಷ್ಣಚರಿತದ ಅತೀಪ್ರಾಚೀನ ಆಕರಗಳನ್ನು ನಾವು ಪರಿಶೀಲಿಸಬಹುದು. ಶತಪಥ ಬ್ರಾಹ್ಮಣ XI. V. ೫-೮ರಲ್ಲಿ ಒಂದು ಸರಸ್ಸಿನಿಂದ ಒಂದು ದೊಡ್ಡ ಸರ್ಪವನ್ನೋಡಿಸಿದ ಕಥೆಯನ್ನು ವರ್ಣಿಸುವ ಕಥೆಯನ್ನು ನಾವು ಓದುತ್ತೇವೆ. ಅದರ ಕಥೆಯನ್ನು ಹೀಗೆ ಸಂಗ್ರಹಿಸಬಹುದು :- 'ಕೃಷ್ಣನೊಂದು ದಿನ ಗೋಪರಿಂದೊಡಗೂಡಿ (ಅವನ ಅಣ್ಣ ಬಲರಾಮನಿಲ್ಲದೆ) ವೃಂದಾವನಕ್ಕೆ ಹೋದನು. ಅಲ್ಲಿ ಕಾಲಿಯನೆಂಬ ದೊಡ್ಡ ಸರ್ಪವೂ ಅದರ ಕುಟುಂಬವೂ ವಾಸಿಸಿದ ಒಂದು ದೊಡ್ಡ ಸರೋವರಕ್ಕೆ ಬಂದನು. ಈ ಸರ್ಪಗಳ ವಿಷದಿಂದ ಅನೇಕ ಮೈಲುಗಳವರೆಗೆ ಆ ಸರೋವರದ ನೀರು ಕುಡಿಯಲಸಾಧ್ಯವಾಗಿ ವಿಷಮಯವಾಗಿತ್ತು. ಈ ವಿಷವನ್ನು ಪರಿಹರಿಸುವರೆ ಕೃಷ್ಣನು ಆ ಕೆರೆಯೊಳಗೆ ಹಾರಿದನು. ಸರ್ಪಗಳೆಲ್ಲವೂ ಅವನನ್ನು ಸುತ್ತಿಕೊಂಡರೂ, ಹೇಗೋ ತಪ್ಪಿಸಿಕೊಂಡು ಅವುಗಳಲ್ಲಿ ಮುಖ್ಯಸ್ಥನಾದ ಕಾಳಿಯನ ಫಣೆಯ ಮೇಲೆ ಹತ್ತಿಕೊಂಡು ಜೋರಾಗಿ ಕುಣಿಯಲು ಆ ಸರ್ಪವು ರಕ್ತವನ್ನು ಕಾರಲು ಪ್ರಾರಂಭಿಸಿತು. ಬೇರೆ ಸರ್ಪಗಳಾದರೋ (ಭಾಸನ ಪ್ರಕಾರವೂ ವಿ. ಪು. V. vii. ೪೭ ಮತ್ತು ಭಾಗವತ X ಪೂರ್ವಾರ್ಧ ೧೬-೩೩ರಲ್ಲಿ ಕಾಳಿಯನ ಹೆಂಡಂದಿರು) ಕರುಣೆಯನ್ನು ಯಾಚಿಸಲಾರಂಭಿಸಿದರು. ಕೃಷ್ಣನೂ ಕನಿಕರವುಳ್ಳವನಾಗಿ ಆ ಸರ್ಪವು ಪರಿವಾರ ಸಮೇತವಾಗಿ ಸಮುದ್ರಕ್ಕೆ ಹೋಗಬೇಕೆಂದಾಜ್ಞಾಪಿಸಿದನು. ಗರುಡನಿಂದ ತನಗೆ ಭಯವುಂಟೆಂದು ಕಾಳಿಯನು ನಿವೇದಿಸಲು, ತನ್ನ ಪಾದ ಚಿಹ್ನೆಗಳನ್ನು ಕಂಡು ಗರುಡನು ತಾನಾಗಿಯೇ ಇನ್ನು ಮೇಲೆ ಹಿಂಸಿಸಲಾರನೆಂದು ಅಭಯವನ್ನಿತ್ತು ಕಳುಹಿಸಿದನಂತೆ.' ಬಾಲಚರಿತದ ಶ್ಲೋಕವನ್ನು ಈಗಾಗಲೇ ಉದಾಹರಿಸಿದೆ. ಮಹಾಭಾರತದಲ್ಲಿಯಾದರೋ ಕಾಲಿಯನೆಂಬುದು ಒಂದು ನಾಗವೆಂದು ಹೆಸರುಳ್ಳ ಪರ್ವತವಾಸಿಗಳ ಹೆಸರೇ ಹೊರತು ಸರ್ಪನ ಹೆಸರಲ್ಲ. ಈ ಗುಡ್ಡಗಾಡು ಜನರನ್ನು ಕೃಷ್ಣನು ಗೆದ್ದನೆಂದು ಕಥೆ. (ಆದಿಪರ್ವ ೩೫-೬; ಉದ್ಯೋಗಪರ್ವ ೧೦೩-೯ ; ಸಭಾಪರ್ವ ೫೨-೧೦ ವಾವಿಳ್ಳ ಸಂಪಾದಿತ ತೆಲುಗು ಅಕ್ಷರಗಳಲ್ಲಿ ಮುದ್ರಿತ ಭಾರತ) ಭಾಸನಲ್ಲಿಯಾದರೋ ಕಾಳಿಯ ಸರ್ಪಮರ್ದನದ ಕಥೆಯು ಅತಿಸಂಕ್ಷೇಪವಾಗಿ ಬಂದಿದೆ. ವಿಷ್ಣುಪುರಾಣದಲ್ಲಿಯೂ ಹರಿವಂಶದಲ್ಲಿಯೂ ಈ ಕಥೆಯನ್ನಿನ್ನೂ ಸ್ವಲ್ಪ ವಿಸ್ತರಿಸಿದೆ. ಭಾಗವತದಲ್ಲಿಯಾದರೋ ಇನ್ನಷ್ಟು ವಿಸ್ತರಿಸಿ ಈ ಕಥೆಯನ್ನು ಹೇಳಿದೆ. ಹೀಗೆಯೇ ಗೋವರ್ಧನೋದ್ಧಾರದ ಕಥೆಯನ್ನು ಭಾಸನು ಬಾಲಚರಿತ IV.೧೧ರಲ್ಲಿ '**ಗೋವರ್ಧನೋದ್ಧರಣಂ**'

ಎಂಬ ಒಂದೇ ಶಬ್ದದಲ್ಲಿ ಮುಗಿಸಿರುವನು. ವಿಷ್ಣು ಪುರಾಣ ಹರಿವಂಶಗಳಲ್ಲಿ ಈ ಕತೆಯನ್ನು ವಿಸ್ತರಿಸಿ ವರ್ಣಿಸಿದೆ. ಈ ವಿಸ್ತಾರವೂ ಭಾಗವತ ಪುರಾಣಕ್ಕೆ ಸಾಲದೆ, ಅದರ ಅಂತ್ಯದಲ್ಲಿ ಗರ್ವಭಂಗ, ತೇಜೋಭಂಗಗಳೆರಡೂ ಸಂಭವಿಸಿ ಮರ್ಯಾದೆಯನ್ನು ಕಳಕೊಂಡಿದ್ದರೂ ಹೊರಗೆ ಪ್ರಸನ್ನವದನನಾಗಿ ತಾನೇ ಗೋವಿಂದನೆಂದು ಕೃಷ್ಣನಿಗೆ ಬಿರುದನ್ನು ದಯಪಾಲಿಸಿ, . ಅವನಿಗೆ ಸುರಭಿ (ಕಾಮಧೇನು) ಕ್ಷೀರಾಭಿಷೇಕದಿಂದಲೂ, ಸ್ವರ್ಗಂಗೆಯ ಜಲಗಳಿಂದಲೂ ಅಭಿಷೇಕ ವನ್ನೇ ಮಾಡಿದನೆಂದು ದಶಮಸ್ಕಂಧ ಪೂರ್ವಾರ್ಧ ೨೭ನೆಯ ಅಧ್ಯಾಯದಲ್ಲಿ ಪ್ರತ್ಯೇಕ ಇಂದ್ರಸ್ತುತಿಯೂ ಬಂದಿದೆ. ಈ ಗೋವಿಂದ ಪದವು ಭಾಸನಲ್ಲಿ ಕಾಣುವದಿಲ್ಲ.

ಭಾಗವತ ಪುರಾಣ ಪ್ರಕಾರ ಕಂಸನು ದೇವಕಿಯ ಅಣ್ಣನಾಗಿದ್ದರೆ ಹರಿವಂಶದಲ್ಲಿ ಅವಳು ಕಂಸನ ತಂದೆಯ ತಂಗಿಯೆಂದು ಹೇಳಿದೆ. ವಿ. ಪು. I.೧೬ ರಲ್ಲಿ ದೇವಕಿಯನ್ನು ಕಂಸನು ಲಘುಸ್ವಸಾ ಎಂದು ಹೇಳಿರುವರು. ಈ ಲಘುಸ್ವಸಾ ಎಂಬ ಪದಕ್ಕೆ ತಾಯಿಯ ತಂಗಿಯ ಮಗಳು ಅಥವಾ ತಂದೆಯ ತಂಗಿಯ ಮಗಳೆಂದರ್ಥ ಹೇಳಬೇಕೋ ತಿಳಿಯದು. ಬೌದ್ಧರ ಘಟಜಾತಕದ ಪ್ರಕಾರ ದೇವಗಬ್ಬಾ (ದೇವಕೀ) ಎಂಬವಳು ಭಾಗವತ ಪುರಾಣ ಕಥೆಯಂತೆ ಕಂಸನ ತಂಗಿ. ಆದರೆ ಮಹಭಾರತ ಕಥೆಯ ಪ್ರಕಾರ ದೇವಕಿಯು ಉಗ್ರಸೇನನ ತಮ್ಮ ನಾದ ದೇವಕನ ಮಗಳು. (ಆದಿಪರ್ವ ೬೮–೬೮) ಭಾಸನೂ ಕಂಸನನ್ನು ಕೃಷ್ಣನ ತಾಯಿಯ ತಮ್ಮ (ಗುರೋಃಶ್ಯಾಲಂ ದೂತವಾಕ್ಯ ೨೬) ನೆಂದು ಹೇಳಿರುವನು. ನಾವೆಲ್ಲರೂ ಭಾಗವತ ಪುರಾಣದಂತೆ ಕಂಸ ದೇವಕಿಯರನ್ನು ಅಣ್ಣ ತಂಗಿಯ ರನ್ನಾಗಿ ವರ್ಣಿಸುತ್ತೇವೆ.

ಹರಿವಂಶ, ವಿ.ಪು.ದಲ್ಲಿಯ ಕಥೆಗಳೂ ಎರಡೂ ಸಾಧಾರಣವಾಗಿ ಪರಸ್ಪರ ಹೋಲುವದರಿಂದ ಇವೆರಡೂ ಏಕಕಾಲದಲ್ಲಿ ಬರೆಯಲ್ಪಟ್ಟಿರಬಹುದೆಂದೂಹಿಸ ಬಹುದು. ಇವೆರಡರಲ್ಲಿಯೂ ವಿ. ಪು.ದ ಕಥೆಯು ಸ್ವಲ್ಪ ಸಂಕ್ಷಿಪ್ತವಾಗಿದೆ. ಇವೆರಡರಲ್ಲಿಯೂ ಭಾಸನಲ್ಲಿಯೂ ಗೋಧನವು ಅತಿಪ್ರಿಯವಾಗದೆ. 'ಅಕ್ಷಯೋಽಸ್ತು ಗೋಬ್ರಾಹ್ಮಣಾನಾಂ' ಎಂದು ಭಾಸನ ಕರ್ಣನ ಪ್ರಾರ್ಥನೆ ; ವಿಷ್ಣುಪುರಾಣ, ಹರಿವಂಶದಲ್ಲಿಯೂ ಈ ತರದ ಸಂಪತ್ತು ಪ್ರಾರ್ಥಿತವಾಗಿದೆ. ಈಗಾಗಲೇ ವಿವರಿಸಿ ದಂತೆ ಭಾಸನ **'ದೇವ ರಹಸ್ಯ'** ಕ್ಕೆ ನಾರದನು ವಿ. ಪು.ದಲ್ಲಿ ಟೀಕೆಯನ್ನು ಬರೆದಂತಿದೆ. ಪರಂ **ರಹಸ್ಯಂ** ದೇವಾನಾಂ ಸ ತೇ ಮೃತ್ಯುರ್ಭವಿಷ್ಯತಿ. ಅದೇ ನಾರ ದನು ವಿಷ್ಣುವನ್ನು 'ಮಹದ್ಭೂತಂ–ತತಃ ತೇ ತನ್ಮಹದ್ಭೂತಂ ದಿವ್ಯಂ ಚ ಕಥಯಾಮ್ಯಹಂ, ಎಂದಾಗ ಬಾಲಚರಿತ II. ೧೦. ಭೂತಂ ನಭಸ್ತಲ

ನಿವಾಸಿ' ಎಂಬುದನ್ನು ನೆನಪುಕೊಡುವಂತಿದೆ. (ಬುದ್ಧನನ್ನು ಹೀಗೆಯೇ ಸಾಧಾರಣ ಅದೇ ಸಮಯದಲ್ಲಿ ಮಹದ್ಭೂತಂ ಎಂದು ಕರೆದಿದ್ದರು, ಮಹಾ ಭಾರತ ವಿಷ್ಣು ಸಹಸ್ರನಾಮ ಫಲಶ್ರುತಿಯಲ್ಲಿಯೂ 'ಏಕೋ ವಿಷ್ಣುರ್ಮಹ ದ್ಭೂತಂ ಪೃಥಗ್ಭೂತಾನ್ಯನೇಕಶಃ' ಎಂದು ವರ್ಣಿಸಿರುವರು.) ಇದೇ ಬಾಲಚರಿತ ದಲ್ಲಿ I. ೩. ನಾರದನನ್ನು 'ಕಲಹಪ್ರಿಯಃ'ನೆಂದು ವರ್ಣಿಸಿ ಜಗಳವಿದ್ದರೆ ಮಾತ್ರ ಅವನಿಗೆ ಪ್ರಾಣವಾಯು ಸಂಚರಿಸುವುದೆಂತ 'ನಿತ್ಯಪ್ರಶಾಂತೇ ನ ರಮೇಽಂತರಿಕೇ- ತಂತ್ರೀಃ ಚ ವೈರಾಣಿ ಚ ಘಟ್ಟಯಾಮಿ' ವರ್ಣಿಸಿದುದನ್ನೇ ನೆನಪು ಕೊಡುವಂತೆ-ಹರಿವಂಶದಲ್ಲಿಯೂ ಅವನನ್ನು **ಕೇಲಕಿಲಃ** ಭೇದಶೀಲ ಎಂದು ವರ್ಣಿಸಿ, ಸುಶ್ಲಿಷ್ಟಾನಪಿಲೋಕೇಽಸ್ಮಿನ್ ಭೇದಯನ್ ಲಭತೇ ರತಿಂ|| ಘಟಮಾನೋ ನರೇಂದ್ರಾಣಾಂ ತಂತ್ರ್ಯೈರ್ವೈರಾಣಿ ಚೈವ ಹಿ ಎಂದೂ ವರ್ಣಿಸಿದೆ. ಭಾಗವತದಲ್ಲಿ ಅಶರೀರವಾಕ್ ಕಂಸನ ಮರಣವನ್ನು ಸೂಚಿಸಿದರೆ, ಹರಿವಂಶದಲ್ಲಿ ನಾರದನೇ ಕಂಸನಿಗೆ ದೇವಕಿಯ ಎಂಟನೆಯ ಮಗಸಿಂದ ಮರಣ ವನ್ನು ಸೂಚಿಸಿದ್ದು; ಭಾಸನಾದರೋ ಮಧೂಕಋಷಿಯ ಶಾಪವನ್ನು ತಂದೊಡ್ಡಿ (ಭಾಗವತ ವಿ. ಪು.ದ-ಉದ್ವಾಹಕರ್ಮದ) ಮೆರವಣಿಗೆಯ ಸುದ್ದಿಯನ್ನೆತ್ತುವದೇ ಇಲ್ಲ. ಆವನು ಕೃಷ್ಣನನ್ನು ಏಳನೆಯ ಮಗನಾಗಿ ಮಾಡಿದರೆ, ಪುರಾಣಗಳು ಈ ಏಳನೆಯ ಗರ್ಭವು ಯೋಗ ಮಾಯೆಯಿಂದ ಹೊರಗೆಳೆಯಲ್ಪಟ್ಟು ರೋಹಿ ಣಿಯ ಗರ್ಭಕ್ಕೆ ಸಂಕ್ರಾಂತವಾದುದರಿಂದ ಸಂಕರ್ಷಣನೆಂಬ ಹೆಸರು ಬಲರಾಮ ನಿಗೆ ಬಂತೆನ್ನುವವು. ಹೀಗೆಯೇ ಕಂಸನು ಹರಿವಂಶದಲ್ಲಿ- ಏಷ ಮಾನುಷ್ಯಕೋ ಯತ್ನಃ ಮಾನುಷ್ಯೈರೇವ ಸಾಧ್ಯತೇ | ಶ್ರೂಯತಾಂ ಯೇನ ದೈವಂ ಹಿ ಮದ್ವಿಧೈಃ ಪ್ರತಿಹನ್ಯತೇ....ಎಂಬುದೇ ಸ್ವಲ್ಪ ಬದಲಿಸಿ ಬಾಲ II. ೧ಳ ದೈವಂ ಪುರುಷ ಕಾರೇಣ ವಂಚಯಿಷ್ಯಾಮ್ಯಹಂಧ್ರುವಂ || ಎಂದಿದೆ. ಹರಿವಂಶದಲ್ಲಿ ಇದೇ ಸಂದರ್ಭದಲ್ಲಿ ಮಂತ್ರಗ್ರಾಮೈಃ ಸುವಿಹಿತೈಃ ಓಷಧೈಃ ಚ ಸುಯೋಜಿತೈಃ | ಯತ್ನೇನ ಚಾನುಕೂಲ್ಯೇನ ದೈವಮಪ್ಯನುಲೋಮ್ಯತೇ. ಇದೇ ಅಭಿಪ್ರಾಯ ವನ್ನು ಅನೇಕ ಕಡೆಗಳಲ್ಲಿ ಇಲ್ಲಿ ಕಾಣುತ್ತೇವೆ. ಉದಾಹರಣೆಗೆ IV ೫ ದೇವಕಿಯು ಕಾಲಿಗೆ ಬಿದ್ದು ಕಂಸನು ವ್ಯಾಜದಿಂದ ಕಣ್ಣೀರು ಸುರಿಸುತ್ತಾ (ದುರ್ಗೆಯು ಅವನ ಕೈಯಿಂದ ಹಾರಿಹೋದ ಅನಂತರ) ದೈವಂ ಪುರುಷಕಾರೇಣ ನ ಚಾತಿಕ್ರಾಂತ ವಾನಹಂ ಎಂದು ಹೇಳುವನು. ಹೀಗೆ ೩ಆ ೬ ಳರಲ್ಲಿ ದೈವಂ ಪುರುಷಕಾರೇಣ ಶಕ್ಯಮತಿವರ್ತಿತುಂ | ನಾರದೋಕ್ತಂ ಚ ವಚನಂ ನೂನಂ ಮಹ್ಯಮುಪಸ್ಥಿತಂ || ಹೀಗೆಯೇ ಕೃಷ್ಣ ಜನನಸಂದರ್ಭದಲ್ಲಿ ಭಾಸನು 'ವಾತೋದ್ಭ್ರಾಮ ಭೂಮಿಕಂ ಪೋಲ್ಕಾಪಾತಾ ದೈವತ ಪ್ರತಿಮಾಃಚ ಪ್ರತಿಭಾಸಿತಾಃ ಮತ್ತು ಸಶೈಲೇಂದ್ರಾ

ಕಂಪಿತೇಯಂ ವಸುಂಧರಾ (ಬಾಲ II ೨) ವರ್ಣಿಸಿದರೆ, ಹರಿವಂಶ IV. ೫ ರಲ್ಲಿ ಸಾಧಾರಣ ಇದೇ ಶಬ್ದಗಳಲ್ಲಿ- ಸಾಗರಾಃ ಸಮಕಂಪಂತ ಚೇಲುಃ ಚ ಧರಣೀಧರಾಃ। ಜಜ್ವಲುಃ ಚಾಗ್ನಯಃ ಶಾಂತಾ ಜಾಯಮಾನೇ ಜನಾರ್ಧನೇ। ಇದನ್ನೇ ವರ್ಣಿಸಿದೆ. ಈ ಸಂದರ್ಭದಲ್ಲಿ ನಾವೆಲ್ಲರೂ ಭಾಗವತವನ್ನನುಸರಿಸಿ ಕೃಷ್ಣನ ಜನ್ಮ ನಕ್ಷತ್ರವನ್ನು ರೋಹಿಣಿಯೆಂದರೂ, ವೇದಾಂತ ದೇಶಿಕರು ಯಾದವಾಭ್ಯುದಯನಾಂದಿಯಲ್ಲಿ ಕೃಷ್ಣನನ್ನು **'ಜಯಂತೀ ಸಂಭವಂ ಧಾಮ'** ಎಂದು ಕರೆದಿರುವದನ್ನು ನಾವು ಗಮನಿಸಬೇಕಾಗಿದೆ. ಹರಿವಂಶವೂ ಇದನ್ನು ವರ್ಣಿಸುವಾಗ-ಅಭಿಜಿತ್‌ನಾಮ ನಕ್ಷತ್ರಂ ಜಯಂತೀನಾಮ ಶರ್ವರೀ। ಮುಹೂರ್ತೇ ವಿಜಯೋ ನಾಮ ಜಾಯಮಾನೇ ಜನಾರ್ದನೇ॥ ಅಥರ್ವವೇದ ಕಾಲದಲ್ಲಿ ನಕ್ಷತ್ರಗಳು ೨೮, ಅಭಿಜಿತ್ತೆಂಬ ನಕ್ಷತ್ರವೂ ಆಗ ಪ್ರತ್ಯೇಕವಿತ್ತಂತೆ. ವರಾಹಮಿಹಿರನು ಅಭಿಜಿತ್ತನ್ನು ನಕ್ಷತ್ರಗಳ ಸಾಲಿನಿಂದ ಹೊರದೂಡಿ ನಕ್ಷತ್ರಗಳನ್ನು ಅಶ್ವಿನಿಯಾದಿಯಾಗಿ ಮಾಡಿದನು. ಅವನ ಮುಂಚೆ **ಕೃತ್ತಿಕಾದಿಯಾಗಿ**ದ್ದುವಂತೆ.

ಪಂಚರಾತ್ರದಲ್ಲಿಯೂ ಬಾಲಚರಿತದಲ್ಲಿಯೂ ಗೋಪಹುಡುಗರನ್ನು ಕೂಡಿ ಕೃಷ್ಣನು ಹಲ್ಲೀಸಕ ನೃತ್ಯದಲ್ಲಿ ನಿರತನಾಗಿದ್ದನೆಂದು ವರ್ಣಿಸಿದ್ದಾನಷ್ಟೆ. ಈ ಬಾಲಚರಿತ III ರಲ್ಲಿ ಕೆಲವು ಗೋಪಿಯರೂ ಬಂದರೆ ಅವರ ಹೆಸರು ಘೋಷಸುಂದರೀ, ವನಮಾಲಾ, ಚಂದ್ರರೇಖಾ ಮತ್ತು ಮೃಗಾಕ್ಷೀ ಎಂದಿದ್ದು, ಕೃಷ್ಣಕರ್ಣಾಮೃತ ಅಥವಾ ಗೀತಗೋವಿಂದದಲ್ಲಿ ವರ್ಣಿತವಾದ ರಾಧೆಯೊಡನೆ ರಾಸಕ್ರೀಡೆಯ ಸುದ್ದಿಯೇ ಇಲ್ಲಿ ಬಂದಿಲ್ಲ. ರಾಧೆಯು ಅತ್ಯರ್ವಾಚೀನಗಳಾದ ಈ ಕೃಷ್ಣ ಕರ್ಣಾಮೃತ (೨ನೆಯ ಶತಮಾನ) ಗೀತಗೋವಿಂದ (೧೨ನೆಯ ಶತಮಾನ) ಅಥವಾ ಬ್ರಹ್ಮವೈವರ್ತ ಪುರಾಣದ ಕೃಷ್ಣಜನ್ಮಖಂಡದಲ್ಲಿಯೂ ಬಂದಿರುವಳು. ಪ್ರಾಚೀನಗಳಾದ ವಿಷ್ಣುಪುರಾಣ, ಹರಿವಂಶ, ಭಾಸರಲ್ಲಿ ಈ ಹಲ್ಲೀಸಕವನ್ನೇ ವರ್ಣಿಸಿರುವರು. ಹರಿವಂಶ II. ೨೦ರಲ್ಲಿ ಇವರ ಹೆಸರನ್ನು ಸೂಚಿಸದಿದ್ದರೂ, ಈ ನೃತ್ಯವು ಹಲ್ಲೀಸಕವೆಂಬುದರಲ್ಲಿ ಸಂದೇಹವೇ ಇಲ್ಲ. ಈ ಸಂದರ್ಭದಲ್ಲಿಯೂ ಅಧ್ಯಾಯಾಂತ್ಯದಲ್ಲಿ ಮಾತ್ರ ಹಲ್ಲೀಸಕದ ಹೆಸರು ಬಂದಿದ್ದು ವ್ಯಾಖ್ಯಾತೃವಾದ ನೀಲಕಂಠನು ಮಾತ್ರ ಹಲ್ಲೀಸಕ ರಾಸಕ್ರೀಡೆಗಳನ್ನೂ ಒಂದೇ

ಎಂದು ತಪ್ಪಾಗಿ ವರ್ಣಿಸಿರುವನು.* 'ಏಕಸ್ಯ ಪುಂಸೋ ಬಹುಭಿಃ ಸ್ತ್ರೀಭಿಃ ಕ್ರೀಡನಂ ಸೈವ ರಾಸಕ್ರೀಡಾ ಗೋಪೀನಾಂ ಮಂಡಲೀ ನೃತ್ಯಬಂಧೇ ಹಲ್ಲೀಸಕಂ ವಿದುಃ' ಇದನ್ನು ಹರಿವಂಶ II ೪೯ರಲ್ಲಿ ವರ್ಣಿಸಿದ್ದಾರೆ. ಹರಿವಂಶ ವಿ. ಪು. ಗಳೆರಡರಲ್ಲಿಯೂ ಗೋಪಿಯರೊಡನೆ ಕೃಷ್ಣನು ಆಡಿದ್ದರೂ ಕೃಷ್ಣನ ವಯಸ್ಸು ಏಳು ವರ್ಷ ಎಂದು ಹೇಳಿಲ್ಲ. ಹರಿವಂಶದಲ್ಲಿ ಸಪ್ತವರ್ಷ ಎಂದು ಹೇಳಿದ್ದರೂ ವಿ. ಪು. ದಲ್ಲಿ ಒರ್ಗ ಪೌಗಂಡ ಅರ್ಥಾತ್ ಏಳೇ ಆಗಿತ್ತೆಂದೊತ್ತಿ ಹೇಳಿದ್ದಾರೆ. ಪ್ರಾಯಶಃ ಒಂದೇ ಶಬ್ದಗಳನ್ನೆರಡರಲ್ಲಿಯೂ ಕಾಣುತ್ತೇವೆ. 'ಕೈಶೋರಕಂ ಮಾನಯನ್ ವೈ ಸಹ ತಾಭಿರ್ಮುಮೋದ ಹ. ವಿ. ಪು. ದಲ್ಲಿ V ೧೩–೧೯ರಲ್ಲಿದ್ದರೆ, ಹರಿವಂಶದಲ್ಲಿ 'ಸೋಽಪಿ ಕೈಶೋರಕವಯೋಮಾನಯನ್ಮಧುಸೂದನಃ' II ೨೦-೧೮ ವರ್ಣಿಸಿದೆ. ಎರಡಲ್ಲಿಯೂ ಇದೇ ಶ್ಲೋಕವನ್ನು ಓದುತ್ತೇವೆ– ತಾ ವಾರ್ಯಮಾಣಾಃ ಪತಿಭಿಃ ಮಾತೃಭಿಃ ಭರ್ತೃಭಿಃ ತಥಾ। ಕೃಷ್ಣಂ ಗೋಪಾಂಗನಾ ರಾತ್ರೌ ಮೃಗಯಂತೇ ರತಿಪ್ರಿಯಾಃ॥ ವಿಷ್ಣು ಪುರಾಣದ ಶ್ಲೋಕಗಳು ಗಮನಾರ್ಹವಾಗಿವೆ. ರೇಮೇ ತಾಭಿರಮೇಯಾತ್ಮಾಕ್ಷಪಾಸು ಕ್ಷಪಿತಾಹಿತಃ। ತದ್ಭರ್ತೃಷು ತಥಾ ತಾಸು ಸರ್ವಭೂತೇಶ್ವರೇಶ್ವರಃ। ಆತ್ಮಸ್ವರೂಪರೂಪೋಽಸೌ ವ್ಯಾಪ್ಯ ವಾಯುರಿಹಸ್ಥಿತಃ॥ ಅರ್ಥಾತ್ ಗಾಳಿಯಂತೆ ಸರ್ವವ್ಯಾಪಿಯಾಗಿ ಅಂತರ್ಯಾಮಿಯಾಗಿದ್ದನೆಂದು ಅಲ್ಲಿ ಹೇಳಿದ್ದಾರೆ. ಹರಿವಂಶವು ಈ ಸಂದರ್ಭದಲ್ಲಿ ಗೋಪಿಯರು ಗುಂಪುಗುಂಪಾಗಿ ಅವನ ಗತಿಗಳನ್ನನುಕರಿಸಿದರೆಂತ – ರತ್ಯಂತರಗತಾಃ ರಾತ್ರೌ ಪಿಬಂತಿರಸಲಾಲಸಾಃ ೩೨ನೆಯ ಶ್ಲೋ. ಭಾಗವತದ ಗೋಪಿಕಾ ಗೀತದಲ್ಲಿ ಇದನ್ನೇ ಉಪಜೀವಿಸಿ ಕಸ್ಯಾಶ್ಚಿತ್ ಪೂತನಾಯಂತ್ಯಾ ಕೃಷ್ಣಾಯಂತ್ಯಪಿಬತ್ಸ್ತನಂ। ತೋಕಾಯಿತ್ವಾ ರುದತ್ಯನ್ಯಾ ಪದಾ ಅಹನ್ ಶಕಟಾಯತೀಂ (ಅ. ೩೦.೧೫ರಿಂದ ೨೦ರವರೆಗಿನ ಶ್ಲೋಕಗಳು) ಇದೇ ಭಾಗವತದಲ್ಲಿ ೩೩ನೆಯ ಅಧ್ಯಾಯದಲ್ಲಿ ರಾಸಕ್ರೀಡೆಯೇ ವರ್ಣಿತವಾಗಿದೆ. ಆದರೆ ರಾಧೆಯಿನ್ನೂ ತೋರುವದಿಲ್ಲ. (ಕೆಲವರೇನೋ ಕೃಷ್ಣನಿವಳೊಡನೆಯೇ ಅಂತರ್ಹಿತನಾದುದೆಂದೂ ವರ್ಣಿಸಿದರೂ ಅದು ಸಮಂಜಸವಲ್ಲ.) ಕೆಲವು ಶತಮಾನಗಳು ದಾಟಿದ ಅನಂತರ ಇದಕ್ಕೆ ಅಧ್ಯಾತ್ಮಿಕಾರ್ಥವನ್ನು ಪ್ರಕಲ್ಪಿಸಿ 'ರತ್ಯಂತರಗತಾಃ ರಾತ್ರೌ' ಮತ್ತು 'ರಾಧಾಮಾಧಾಯ ಹೃದಯೇ' ಎಂಬಲ್ಲಿ ಹೃದಯೇ ಎಂಬ ಪದಕ್ಕೆ ಸಾಕ್ಷಾತ್ ವಕ್ಷಸ್ಸು ಅಥವಾ ಎದೆಯ ಮೇಲೆ ಎಂದು ಅರ್ಥವನ್ನು ಕಲ್ಪಿಸಿ ಬ್ರಹ್ಮ ವೈವರ್ತ ಪುರಾಣದ ರಾಸಕ್ರೀಡಾವರ್ಣನವನ್ನು ಮೊದಲು ಜಾರಿಯಲ್ಲಿ ತಂದಿರಬೇಕು. ಪ್ರಾಚೀನಗಳಾದ ಹರಿವಂಶ, ವಿ. ಪುರಾಣಗಳು ಇದನ್ನು ಸಂಕ್ಷೇಪ

* ಸರಸ್ವತೀ ಕಂಠಾಭರಣ–ಪುಟ ೩೦೬–

ವಾಗಿ ವರ್ಣಿಸುವವು. ಭಾಸನಾದರೋ ಇನ್ನಷ್ಟು ಸಂಕ್ಷೇಪವಾಗಿ ವರ್ಣಿಸುವನು.

ಭಾಗವತ ಪುರಾಣದ ಪ್ರಕಾರ ಕೃಷ್ಣನು ಎಂಟನೆಯ ಮಗನಾದರೆ, ಭಾಸನ ಕಥೆಯ ಪ್ರಕಾರ ಇವನು ಏಳನೆಯ ಮಗ (ದೀರ್ಘಾಯು) ಎಂದಿರುವನು. ಬಲರಾಮನಿಗೆ ಸಂಕರ್ಷಣನೆಂಬ ಹೆಸರು ಬಂದಿರುವ ಕಾರಣವೇನೆಂದರೆ, ಆತನನ್ನು ದೇವಕಿಯ ಗರ್ಭದಿಂದ ಹೊರಸೆಳೆದು, ರೋಹಿಣಿಯ ಗರ್ಭದೊಳಗೆ ಇಡಿಸಿದ್ದು. ಹೀಗೆಯೇ ಕಂಸನ ಮರಣದ ಸೂಚನೆಯು ಬಂದುದು ಅಶರೀರ ವಾಕ್ಕಿನಿಂದಲ್ಲ, ಮಧೂಕ ಋಷಿಯ ಶಾಪದಿಂದ. ಈ ಶಾಪವು ಚಂಡಾಲ ಕನ್ಯೆಯರಾದ ಅಲಕ್ಷ್ಮೀ ಕಾಲ ರಾತ್ರಿ, ಮಹಾನಿದ್ರೆ, ಪಿಂಗಾಲಾಕ್ಷಿಯರೊಡನೆ ಕಂಸನ ದೇಹವನ್ನು ಹೊಕ್ಕು ಕಂಸನ ರಾಜಶ್ರೀಯನ್ನು ವಿಷ್ಣುವಿನ ಆಜ್ಞೆಯ ಪ್ರಕಾರ ಹೊರದೂಡುವ ಸಂನಿವೇಶವು ಬೇರೆಲ್ಲಿಯೂ ಕಾಣುವದಿಲ್ಲ. ನೇಮಿನಾಥನ ಅರ್ಧನೇಮಿ ಪುರಾಣದಲ್ಲಿ ಅತಿಮುಕ್ತನೆಂಬ ಋಷಿಯು ಜರಾಸಂಧನ ಎರಡನೆಯ ಮಗಳ ಗಂಡನಾದ ಕಂಸನಿಗೆ ದೇವಕಿಯ ಪುತ್ರನಿಂದ ಮರಣವಾಗುವದೆಂಬ ಶಾಪವನ್ನು ಕೊಡುವನು. ಅಲ್ಲಿಯೂ ದೇವಕಿಗೆ ಮೂರು ಅವಳಿ ಜವಳಿ ಮಕ್ಕಳಾಗಿ ಕಡೇಗೆ ಕೃಷ್ಣನು ಏಳನೆಯ ಮಗನಾದನು. ಇದೇ ರೀತಿಯಲ್ಲಿ ಜೈನಕರ್ಣಪಾರ್ಯನೂ ತನ್ನ ನೇಮಿನಾಥ ಪುರಾಣದಲ್ಲಿ ವರ್ಣಿಸಿರುವನು. ಹರಿವಂಶದಲ್ಲಿಯಾದರೋ ದೇವಕಿಯ ಮೊದಲನೆಯ ಆರು ಮಕ್ಕಳನ್ನು ಕಾಲನೇಮಿಯ ಆರು ಮಕ್ಕಳೇ ಶಾಪದಿಂದ ಹುಟ್ಟಿದವರೆಂದು ಹೇಳಿದೆ. ವಿಷ್ಣು ಪುರಾಣದಲ್ಲಿ ಅವರು ಹಿರಣ್ಯಕಶಿಪುವಿನ ಮಕ್ಕಳೆಂದು ಹೇಳಿದೆ. ಶಾಪವು ಕಾಲರಾತ್ರ್ಯಾದಿ ಚಂಡಾಲಕನ್ಯೆಯರೊಡನೆ ಇವನ ದೇಹವನ್ನು ಹೊಕ್ಕು ರಾಜ್ಯಶ್ರೀಯನ್ನು ಹೊರದೂಡಿಸಿದುದನ್ನು ಜೈನ ರನ್ನನೂ ತನ್ನ ಗದಾಯುದ್ಧ IX 4 ರಲ್ಲಿ ಅಶ್ವತ್ಥಾಮನು ದುರ್ಯೋಧನನ ದೇಹದಿಂದ ರಾಜ್ಯಶ್ರೀಯು ಹೊರಗೆ ಬಂದುದನ್ನು ಕಂಡನೆಂದು ವರ್ಣಿಸುವಾಗ ಅನುಕರಿಸಿದ್ದಾನೆ. ಭಾಸನ ಕಥೆಯ ಪ್ರಕಾರ ಮಧೂಕಋಷಿಯ ಶಾಪದ ಮುಂಚೆ ಕಂಸನಿಗೆ ವಸುದೇವನ ಮೇಲೆ ತುಂಬಾ ಪ್ರೀತಿಯಿತ್ತೆಂದು ಹೇಳಿ, ಮೊದಲೊಮ್ಮೆ ಆತನ ಮಾತಿನ ಪ್ರಕಾರ ನಂದಗೋಪನಿಗೆ ಉಪಕಾರ ಮಾಡಿದ್ದರೂ (ಪ್ರಾಯಶಃ ಕಪ್ಪವನ್ನು ಕಡಿಮೆ ಮಾಡಿಸಿದ್ದನೋ ತಿಳಿಯದು), ಕಾರಣಾಂತರದಿಂದ ಕೆಲವು ಸಮಯದ ಮೇಲೆ ಇದೇ ವಸುದೇವನ ಮಾತಿನಿಂದ ಕಂಸನು ನಂದಗೋಪನಿಗೆ ಎರಡು ಕಾಲುಗಳನ್ನು ಯಾವಾಗಲೂ ಕಟ್ಟಿಸಿಕೊಂಡೇ ಹಾರಿ ಹಾರಿ ತಿರುಗುವಂತೆ ವಿಧಿಸಿಬಿಟ್ಟಿದ್ದನು.

ಆ ಪೂರ್ವೋಪಕಾರದ ನೆನಪನ್ನು ಹುಟ್ಟಿಸುತ್ತ ವಸುದೇವನು ಕೃಷ್ಣ ಶಿಶುವಿನ ಸಂರಕ್ಷಣೆಯನ್ನು ನಂದಗೋಪನಿಗೆ ಸಮರ್ಪಿಸಿದನು.

ಯದ್ಯಸ್ಮಿ ಭವತಃ ಕಿಂಚಿನ್ಮಯಾ ಪೂರ್ವಕೃತಂ ಭವೇತ್ ।
ತಸ್ಯ ಪ್ರತ್ಯುಪಕಾರಸ್ಯ ಕಾಲಸ್ತೇ ಸಮುಪಾಗತಃ ॥ (ಬಾಲ I 26)

ಭಾಸನ ಕಥೆಯ ಪ್ರಕಾರ ಪೂರ್ವದ ಕೃತಜ್ಞತೆಯ ಸ್ಮರಣೆಯುಕ್ಕುತ್ತಾ 'ಕಿಂ ಕಿಂ ಪ್ರತ್ಯುಪಕಾರ ಇತಿ, ಯದಿ ಕಂಸೋವಾ ಭವತು, ತಸ್ಯ ಪಿತಾ ಉಗ್ರಸೇನೋ ವಾ ಭವತು, ಆನಯತು ಭರ್ತಾ ದಾರಕಂ' ಎಂದು ಹೇಳುವನು. ವಿಷ್ಣು ಪುರಾಣದಲ್ಲಿಯಾದರೋ ನಂದಗೋಪಾದಿಗಳು ವಾರ್ಷಿಕ ಕಪ್ಪವನ್ನು ಕಂಸನಿ ಗೊಪ್ಪಿಸಲು ಹೋದಾಗ ವಸುದೇವನು ನಂದಗೋಪನ ಮನೆಯಲ್ಲಿ ಮಕ್ಕಳನ್ನು ಅದಲು ಬದಲು ಮಾಡುವನು. ಭಾಸನ ಕಥೆಯ ಪ್ರಕಾರ ನಂದಗೋಪನ ದೇಹದಲ್ಲಿದ್ದ ಸಂಕಲೆಗಳು ಕೃಷ್ಣ ಶಿಶುವನ್ನೆತ್ತಿದೊಡನೆಯೇ ಮಾಯವಾದುವಂತೆ. ಈ ಕಥೆಗಳು ಭಾಗವತ, ಹರಿವಂಶ, ವಿಷ್ಣು ಪುರಾಣಗಳಲ್ಲಿ ಬರಲೇ ಇಲ್ಲ.

ಈ ಆಧಾರಗಳಿಂದ ಸಿದ್ಧವಾಗುವದೇನೆಂದರೆ-ಭಾಸನ ಆಕರಗ್ರಂಥವು ಈಗ ನಮಗೆ ಉಪಲಬ್ಧವಾಗದ **ಭಾಗವತೇತಿಹಾಸ**ವೆಂದೂಹಿಸಬೇಕಾಗಿದೆ. ಈಗಿನ ಹರಿವಂಶ, ವಿಷ್ಣುಪುರಾಣಗಳಿಗೂ ಅದೇ ಆಕರವಿದ್ದಿರಬಹುದು ಆದರೂ ಅವು ಗಳಲ್ಲಿಲ್ಲದ ಕೆಲವು ಕಥೆಗಳೂ ಭಾಸನಲ್ಲಿ ಬಂದಿರುವದು ಅವನ ಪ್ರಾಚೀನತೆಯನ್ನು ಸೂಚಿಸುವಂತಿದೆ. Cowell ಮಹಾಶಯರು ಸಂಪಾದಿಸಿದ ಘಟ ಜಾತಕ (454)ಕ್ಕೂ ಭಾಸನ ಕತೆಗೂ ಸಾಮ್ಯವಿದೆ. ಹೀಗೆಯೇ ಶಿಲಪ್ಪಧಿಕಾರದಲ್ಲಿ ಬಂದ ಒಂದು ಕಥೆಗೂ ಭಾಸನ ಚಾರುದತ್ತದಲ್ಲಿ (ಮೃಚ್ಛಕಟಿಕದಲ್ಲಿ) ಬಂದ ವಸಂತಸೇನೆಯ ಮಾಹುತನ ಕಥೆಗೂ ಸ್ವಲ್ಪ ಸಾಮ್ಯವೂ ತೋರುತ್ತದೆ.

೮

ಮಹೇಂದ್ರ ವಿಕ್ರಮವರ್ಮನೇ ಭಾಸನೋ ?

ಸುಮಾರು ಕ್ರಿ.ಶ. 600 ರ ಸಮಯದಲ್ಲಿ ಪಟ್ಟವನ್ನೇರಿದ ಮಹೇಂದ್ರ ವಿಕ್ರಮವರ್ಮನ ಚರಿತ್ರೆಯು ಮಾಮಂಡೂರು ಶಾಸನದಲ್ಲಿ ಉಕ್ತವಾಗಿದೆ. ಈತನೇನೋ ಅತಿ ಯಶಸ್ವಿಯಾಗಿಯೇ ಆರಂಭಿಸಿದರೂ ಕ್ರಿ.ಶ.610ರಲ್ಲಿ ಎರಡನೆಯ ಚಾಲುಕ್ಯ ಪುಲಿಕೇಶಿಯಿಂದ ಪರಾಜಿತನಾಗಿ ಕ್ರಿ.ಶ.625ರ ವರೆಗೂ ಆಳುತ್ತಿದ್ದನು. ಈತನ ಇಷ್ಟಾಪೂರ್ತಗಳಿಂದ ಈತನು ಯಶಸ್ವಿಯಾದನು. ದೊಡ್ಡ ದೊಡ್ಡ ಕಲ್ಲು ಬಂಡೆಗಳನ್ನು ಕೊರೆದು ಅವುಗಳೊಳಗೆ ದೇವಾಲಯಗಳನ್ನೂ ಗುಹೆ ಗಳನ್ನೂ ಕಟ್ಟಿಸಿ ಅವನ ತರುವಾಯವೂ ಅನೇಕ ಶತಮಾನಗಳವರೆಗೆ ಬಾಳಿ ಬಂದು ಕೃಷಿಕರಿಗೆ ಸುಮಾರು ಮೈಲುಗಳಸುತ್ತಲೂ ಬಹು ಉಪಯುಕ್ತವಾದ ಚಿತ್ರಮೇಘ ತಟಾಕವೆಂಬ ಸರೋವರವನ್ನು ಕಟ್ಟಿಸಿ ತುಂಬಾ ಪರೋಪಕಾರಿಯಾದನು. ಪ್ರಜೆ ಗಳೆಲ್ಲಾ ಇವನಾಳ್ವಿಕೆಯಲ್ಲಿ ತೃಪ್ತರಾಗಿದ್ದರೆಂಬುದು ಮತ್ತವಿಲಾಸ ಪ್ರಹಸನದ ಭರತ ವಾಕ್ಯದಲ್ಲಿ ಇವನಿಗೆ ಸಲ್ಲಿಸಿದ **'ರಾಜನ್ವಾನ್'** ಎಂಬ ಬಿರುದಿನಿಂದ ತಿಳಿದುಬರುತ್ತದೆ. (ಅಮರಕೋಶದ ಪ್ರಕಾರ ಒಳ್ಳೆಯ ರಾಜನಾದರೆ ಮಾತ್ರ ರಾಜನ್ವಾನ್ ಎಂದೂ, ಇಲ್ಲದಿದ್ದರೆ ಬರೀ ರಾಜವಾನ್ ಎಂದೂ, ಪ್ರಯೋಗಿಸಬೇಕಂತೆ–ಸುರಾಜ್ಞಿ ದೇಶೇ ರಾಜನ್ವಾನ್, ತದನ್ಯತ್ರ ಚ ರಾಜವಾನ್.) ಪರಾಜಿತನಾದನೇನೋ ನಿಜ.ಆದರೂ ಈತನು ಸ್ವತಹ ಕವಿಯಾಗಿ ಕವಿಗಳಿಗಾಶ್ರಯದಾತನಾಗಿ ರಾರಾಜಿಸುತ್ತಿದ್ದನು. ಇವನ 'ಮತ್ತವಿಲಾಸ ಪ್ರಹಸನ'ದ ೩೩ನೆಯ ಶ್ಲೋಕದಲ್ಲಿ ಕಿರಾತಾರ್ಜುನರ ದ್ವೇಷವು ಸ್ನೇಹವಾದಂತೆ ಎಂದು ಹೇಳುವಾಗ ಭಾರವಿಯ ಪರಮ ಸ್ನೇಹಿತನಾಗಿ ದ್ದನೆಂದು ಒಂದು ಕತೆಯೂ ಕರ್ಣಾಕರ್ಣಿಕೆಯಾಗಿ ಬಂದಿದೆ.

ಮತ್ತವಿಲಾಸ ಪ್ರಹಸನ, ಭಗವದಜ್ಜುಕೀಯಗಳೆರಡನ್ನೂ ಈತನೇ ರಚಿಸಿದ ನೆಂದು ಗೊತ್ತಾಗುತ್ತದೆ. ಭಗವದಜ್ಜುಕೀಯವನ್ನು ಕೆಲವರು ಬೋಧಾಯನ

ಪ್ರಣೀತವೆಂದೆನ್ನುವರು. ಆದರೆ ಈ ಬೋಧಾಯನನು ರಾಮಾನುಜ ಭಗವತ್ಪಾದ ದಿಂದ ಉದಾಹೃತನಾದ ವೃತ್ತಿಕಾರ ಬೋಧಾಯನನೋ ಅಥವಾ ಕಲ್ಪಸೂತ್ರಕಾರ ಬೋಧಾಯನನೋ ತಿಳಿಯದು. ಆದರೆ ಇದರ ನಾದೀಂಶ್ಲೋಕದಲ್ಲಿ ರುದ್ರನಿಗೆ ನಮಸ್ಕಾರ ಸಲ್ಲಿಸಿದ್ದರಿಂದ ವಿಷ್ಣುಪಾರಮ್ಯ ಪ್ರಪತ್ತ್ಯಾದಿ ವೈಷ್ಣವ ತತ್ವಗಳನ್ನು ಪ್ರತಿಪಾದಿಸಿದ ವೃತ್ತಿಕಾರ ಬೋಧಾಯನನೂ ಇವನೂ ಒಬ್ಬರೇ ಆಗಿರಲಿಕ್ಕಿಲ್ಲ ವೆಂದೇ ಹೇಳಬೇಕಾಗುತ್ತದೆ. ಈ ಎರಡು ಪ್ರಹಸನಗಳೂ ರಾಜಮಹೇಂದ್ರ ವರ್ಮನಿಂದಲೇ ರಚಿತವಾಗಿರಬಹುದು. ಯಾಕೆಂದರೆ ಇವೆರಡರ ಶೈಲಿಯೂ ಸಾಧಾರಣ ಒಂದೇ ಇದ್ದು, ಹೆಜ್ಜೆ ಹೆಜ್ಜೆಗೂ ಬೌದ್ಧ ತತ್ವಗಳನ್ನು ಹಳಿಯುವ ದನ್ನೇ ನಾವು ಕಾಣುತ್ತೇವೆ. ಎರಡರಲ್ಲಿಯೂ ಭಾಸನ ಶೈಲಿ, ಅಭಿಪ್ರಾಯಗಳು ಮೂಡಿ ಕಾಣುವದರಿಂದ ಅನಂತಶಯನದಲ್ಲಿ ಮುದ್ರಿತಗಳಾದ ಹದಿಮೂರು ನಾಟಕ ಗಳೂ ಇವನಿಂದಲೇ ಬರೆಯಲ್ಪಟ್ಟವೋ ಎಂಬ ಸಂಶಯಕ್ಕೆಡೆಗೊಡುವಂತಿದೆ. ಮುಂದಿನ ಅಧ್ಯಾಯದಲ್ಲಿ ಶಕ್ತಿಭದ್ರನಿಂದ ಇವು ಬರೆಯಲ್ಪಟ್ಟಿರಲಿಕ್ಕೆ ಕಾರಣವೇ ಇಲ್ಲವೆಂಬುದನ್ನು ಶೈಲಿ ಅಭಿಪ್ರಾಯಗಳ ಭೇದದಿಂದ ಸಾಧಿಸಿದ್ದೇವೆ. ಈ ಪ್ರಹ ಸನಗಳಲ್ಲಿ ಕುಡಿದ ಪ್ರಮತ್ತರ ಪ್ರಲಾಪಗಳೇ ಬಂದಿರುವುದರಿಂದ ವೈದಿಕ ಧರ್ಮಾ ವಲಂಬಿಯಾದ ಭಾಸನು ಇವುಗಳನ್ನು ಖಂಡಿತವಾಗಿ ಬರೆದಿರಲಾರನೆಂದೇ ನಿರ್ಧರಿಸ ಬೇಕಾಗಿದೆ. ಬೋಧಾಯನನೇ ಈ ಗ್ರಂಥಕರ್ತನೆಂದು ಹೇಳಿದ ಭಗವದಜ್ಜುಕ ಟೀಕಾಕಾರನು ಈ ಪ್ರಹಸನಕ್ಕೆ ಆಧ್ಯಾತ್ಮಿಕಾರ್ಥವನ್ನು ಪ್ರಕಲ್ಪಿಸಿ (ಪ್ರಭೋದ ಚಂದ್ರೋದಯ ನಾಟಕದಂತೆ) ಯೋಗಶಾಸ್ತ್ರದ ಪ್ರತಿಷ್ಠೆಯೇ ಇದರ ಪರಮೋ ದ್ದೇಶವೆಂದು ವಾದಿಸುವನು. ಇಲ್ಲಿ ಬೌದ್ಧ ತತ್ವಗಳನ್ನು ಸರಿಯಾಗಿ ಅರಿಯದೆ ಶ್ರಮಣಕನಾದ ಶಾಂಡಿಲ್ಯನು ನಿಂದಾಪಾತ್ರನಾಗಿದ್ದು, ಭಾಸನ ಧಾಟಿಯ ಹಾಸ್ಯವು ಸರ್ವತ್ರ ಎದ್ದೇ ತೋರುವದು. ಪ್ರತಿಯೊಂದು ಪುಟದಲ್ಲಿಯೂ ಸಮಾಜೋದ್ಧಾರ ದೃಷ್ಟಿಯಿಂದಲೇ ಈ ಅತ್ಯುದಾತ್ತ ಪ್ರಹಸನವನ್ನು ಬರೆದಿರ ಬೇಕೆಂದು ಖಚಿತವಾಗುತ್ತದೆ.

ಈ ನಾಟಕ ಕರ್ತನು ಭಾಸನ ನಾಟಕಗಳನ್ನು ಆಗಾಗ್ಯೆ ಓದುತ್ತಾ ಅವನ ಶೈಲಿಯಲ್ಲೂ, ಅಭಿಪ್ರಾಯಗಳಲ್ಲಿಯೂ ಅವನನ್ನೇ ಅನುಕರಿಸಿರಬೇಕು. ಮಹೇಂದ್ರ ವಡಿ ಶಾಸನದಲ್ಲಿ ಹೇಳಿದಂತೆ ಮುರಾರಿಗೃಹವೆಂಬ ಗುಹೆಯೊಳಗೆ ದೇವಾಲಯ ವನ್ನು ಕಟ್ಟಿಸಿದಾಗ ಭಾಸನ ಪ್ರತಿಮಾ ಗೃಹವನ್ನು ನೆನೆದುಕೊಂಡಿರಬೇಕು. ಮತ್ತ ವಿಲಾಸದ ಎರಡನೆಯ ಶ್ಲೋಕದ ಅವತಾರಿಕೆಯಾಗಿ ಬಂದ ಪ್ರಿಯಾಖ್ಯಾನಿಕೆಯೆಂಬ ಪದವು ಭಾಸನ ಪ್ರತಿಮಾ ನಾಟಕದ ಒಂದನೆಯ ಅಂಕದಲ್ಲಿ ಬಂದ ಶಬ್ದವೇ ಆಗಿದೆ. ಅಲ್ಲಿ ಸೀತೆಗೆ ರಾಮಪಟ್ಟಾಭಿಷೇಕವನ್ನಿದೇ

ಶಬ್ದದಿಂದ ತಿಳಿಸಿದೆ. ಸುರಾಪಣ ಅಥವಾ ಹೆಂಡದ ಅಂಗಡಿಯನ್ನು ಯಜ್ಞ ಶಾಲೆಗೆ ಹೋಲಿಸಿದಾಗ ಊರುಭಂಗ ನಾಟಕದ ಯುದ್ಧ ಯಜ್ಞದ ರೂಪಕದ (ಆರನೆಯ ಶ್ಲೋಕದ) ನೆನಪು ಬಂದೇ ಬರುವದು. ಶಾಕ್ಯಭಿಕ್ಷುವು ತನ್ನ ಆತ್ಮಗತ ಸಂಭಾಷಣೆಯಲ್ಲಿ ಪರಮ ದಯಾ ಸಮುದ್ರನಾದ ತಥಾಗತನ ಅನುಗ್ರಹದಿಂದ ಭಿಕ್ಷು ಸಂಘಕ್ಕೆಲ್ಲಾ ಸುಖಸಂಪತ್ತುಗಳನ್ನನುಗ್ರಹಿಸಿದ್ದನೆಂದರೆ ಸ್ವಪ್ನ ನಾಟಕದಲ್ಲಿ ವಿದೂಷಕನು ಉದಯನನ ಎರಡನೆಯ ವಿವಾಹದ ಅನಂತರ ತನಗೆ ಉತ್ತರ ಕುರು ವಾಸದ ಸ್ವರ್ಗ ಸುಖವನ್ನೇ ಅನುಭವಿಸಿದನೆಂಬುದರ ನೆನಪಾಗುತ್ತದೆ. ಕಪಾಲಿಯು ಮತ್ತನಾಗಿ ಪ್ರಲಪಿಸಿ ತನ್ನ ಬಿಸಾಡಿ ಹೋದ ಕಪಾಲವನ್ನು ಹುಡುಕಿದರೆ ಯೌಗಂಧರಾಯಣನು ಪ್ರತಿಜ್ಞಾ ನಾಟಕದ ಮೂರನೆಯ ಅಂಕದಲ್ಲಿ ಉನ್ಮತ್ತನಂತೆ ನಟಿಸಿದುದರ ನೆನಪಾಗುತ್ತದೆ. ಪ್ರಸೀದಂತು ಪ್ರಸೀದಂತು ದಾರಕ ಭರ್ತಾರ: ಎಂದು ೨ ನಾಟಕಗಳಲ್ಲಿಯೂ ಹಾಗೆಯೇ ಬಂದಿದೆ. ಚಾರುದತ್ತ ನಾಟಕದ ಶಕಾರ ಪೌರಾಣಿಕ ಕಥೆಗಳನ್ನು ತಪ್ಪು ತಪ್ಪಾಗಿ ವರ್ಣಿಸಿ (ರಾವಣನು ಕುಂತಿಯನ್ನು ಸೆರೆ ಹಿಡಿದಂತೆ) ಅಬದ್ಧ ಕಂತೆಗಳನ್ನು ಸೃಜಿಸಿದರೆ, ಇದರಲ್ಲಿಯ ೧೯ನೆಯ ಶ್ಲೋಕದಲ್ಲಿ ಘಟೋತ್ಕಚನು ಭೀಮನ ಭಾಗಿನೇಯ (ಮಗನಲ್ಲ) ನಾಗುವನು. ಹೀಗೆಯೇ ಭಗವದಜ್ಜುಕೀಯದಲ್ಲೂ ಭಾಸನ ವಾಕ್ಯಗಳಾದ 'ವಿದ್ಯತಾಮೇಷಾ ಕಥಾ, ಈ ಮಾತನ್ನು ಸುಡು!' ಇತ್ಯಾದಿಗಳು ಬಂದಿವೆ; ಆರ್ಯೆ ಎಂಬ ಭಾಸನ ಪ್ರಿಯವಾದ ಶಬ್ದವು ಮೊದಲನೆಯ ಶ್ಲೋಕದಲ್ಲಿಯೇ ಬಂದಿದೆ. ವಸಂತಸೇನೆಯೆಂಬ ಹೆಸರೂ ಭಾಸನ ಚಾರುದತ್ತದಿಂದಲೇ ಬಂದಿದೆ. ನಾಟಕವಸ್ತು, ಅವುಗಳಲ್ಲಿಯ ಹಾಸ್ಯ, ಹೆಸರುಗಳೂ ಕೂಡಾ ಭಾಸನ ರೀತಿಯನ್ನೇ ಅನುಸರಿಸಿವೆ. ಇವನ ಪ್ರಾಸಗಳೂ—4ನೆಯ ಶ್ಲೋಕದಲ್ಲಿ 'ಸಂಕಲ್ಪಿತಮಿಷ್ಟಮಿಷ್ಟತಃ' ಅಥವಾ 17ನೆಯ ಶ್ಲೋಕದಲ್ಲಿ 'ಮಧುಮಾಸಜಾತ ದರ್ಪ ಕಂದರ್ಪ': –ಭಾಸನ ಮೇಲ್ಪಂಕ್ತಿಯನ್ನೇ ಅನುಸರಿಸಿವೆ.

ಚತುರ್ಭಾಣೀ, ಕುಲಶೇಖರನ ತಪತೀ ಸಂವರಣ, ಅಥವಾ ಸುಭದ್ರಾ ಧನಂಜಯ ಇತ್ಯಾದಿ ನಾಟಕಗಳನ್ನು ಭಾಸನವೆಂದು ನಿಷ್ಕಾರಣವಾಗಿ ಊಹಿಸಿದರೆ ಅದಕ್ಕೆ ನಾವು ಹೊಣೆಗಾರರಲ್ಲ. ಅವುಗಳಲ್ಲಿ 'ಅಯೇ! ಕಿಂ ನು ಖಲು ಮಯಿ ವಿಜ್ಞಾಪನ ವ್ಯಗ್ರೇ' ಶಬ್ದ 'ಇವ ಶ್ರೂಯತೇ–ಅಂಗ! ಪಶ್ಯಾಮಿ' ಎಂದು ಅಂತ್ಯವಾಗುವ ಸ್ಥಾಪನೆ ಇರುವದು ಮಾತ್ರ; ಅವು ಭಾಸನ ನಾಟಕಗಳಾಗಲಾರವು. ಅಭಿನವ ಗುಪ್ತನು ನಾಟ್ಯ ಶಾಸ್ತ್ರ (ಬರೋಡಾ ಸಂಪಾದಿತ Vol. I ಪು 251) ದಲ್ಲಿ ಶ್ರೀಹರ್ಷನೆಂಬ ಪ್ರಾಚೀನ ನಾಟ್ಯ ಶಾಸ್ತ್ರ ಟೀಕಾಕಾರನನ್ನುದಾಹರಿಸಿ—

ಯದಾಹ ಶ್ರೀಹರ್ಷಃ ಅತ ಏವ ಹಾಸೋ (ಭಾಸೋ?) ನಾಮ ಕವಿ:— ಕಸ್ಮಿಂಶ್ಚಿನ್ನಾಟಕೇ (ನಲವಿಕ್ರಮೇ?) ದಿವಂ ಯಾತಃ ಚಿತ್ತಜ್ವರೇಣ ಕಲಿಃ ಇತ ಏವಾಭಿವರ್ತತೇ, ಅಶಕ್ಯಮಸ್ಯ ಪುರತೋಽ ವಸ್ಥಾತುಂ....ಎಂದು ಹೇಳುವಾಗ ಭಾಸನ ನಾಟಕವಾದ ನಲವಿಕ್ರಮದಲ್ಲಿ ಬೇರೆ ಸಂಸ್ಕೃತ ನಾಟಕಗಳಂತೆಯೇ ಪ್ರಸ್ತಾವನೆ ಇದ್ದಿತ್ತೆಂದು ಅರ್ಥವಾಗುವದಿಲ್ಲವೇ? ಆದ್ದರಿಂದ ಈ ತರಹ ಸ್ಥಾಪನೆ ಯಿದ್ದ ನಾಟಕಗಳೆಲ್ಲಲ್ಲಾ ಭಾಸಕೃತವೆಂದೂಹಿಸುವದು ಅನರ್ಥಕ್ಕೆ ಕಾರಣವೆಂದು ಸ್ಪಷ್ಟ. ಇನ್ನು ದಾಮಕ ಪ್ರಹಸನವನ್ನು ಪರಿಶೀಲಿಸಬೇಕಾಗಿದೆ. ಈ ಪ್ರಹಸನ ದಲ್ಲಿ ಗ್ರಂಥಕರ್ತನದ್ದೇ ಆಗಿರುವ ವಾಕ್ಯವೊಂದೂ ಇಲ್ಲವೆಂದೇ ಹೇಳಬೇಕಾಗು ತ್ತದೆ. ನಾಂದೀ ಪದ್ಯವೂ (ಸುವರ್ಣ ಪುಷ್ಟೀಂ ಬ್ರಹ್ಮಾಣೀಂ ಬ್ರಹ್ಮಾಣಂ ಚ ಕುಶಧ್ವಜಂ। ಸರ್ವಾಶ್ಚ ದೇವತಾ ವಂದೇ ವಂದೇ ಸರ್ವಾಂಶ್ಚ ತಾಪಸಾನ್॥ ಎಂಬುದು) ಅಕ್ಷರಶಃ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬಂದಿದೆ. 3ನೆಯ ಪಾದದಲ್ಲಿ ಮಾತ್ರ ಅಲ್ಲಿಯ ಪಾಠ "ಸರ್ಪಾಶ್ಚ" ಎಂದು ಅಲ್ಲಿ ಪಕಾರಕ್ಕೆ ಬದಲಾಗಿ ಇಲ್ಲಿ ವಕಾರವಿದೆ. ಇದರ ಅನಂತರ ಕಾಂಪಿಲ್ಯನಗರ ಬ್ರಹ್ಮದತ್ತ ರಾಜರು ಬಂದರೆ ಇವರಿಬ್ಬರೂ ಸ್ವಪ್ನನಾಟಕದ V ಅಂಕದಲ್ಲಿ ವಿದೂಷಕನ ಬಾಯಿಯಲ್ಲಿ ತಪ್ಪು ತಪ್ಪಾಗಿ ಕಾಂಪಿಲ್ಯ ರಾಜ, ಬ್ರಹ್ಮದತ್ತನಗರವೆಂದು ಬಂದವರೇ; ಸ್ವಲ್ಪ ಮುಂದೆ ಆಮಂತ್ರಣ ವಿಪ್ರಲಬ್ಧಃ ಬ್ರಾಹ್ಮಣ:—ಎಂಬುದು ಹಾಗೆಯೇ ಅವಿಮಾರಕ ದಿಂದ ತೆಗೆದುದು, ಸಂಘಚಾರಿಣೋಽನರ್ಥಾಃ ಎಂಬ ಮಾತೂ,ಅನರ್ಥಸಲಿಲಾ ವರ್ತೇ ಎಂಬದೂ ಭರ್ತೃದಾರಿಕಾ ಸುಸ್ನಿಗ್ಧೇನ ಭೋಜನೇನ ಪ್ರತ್ಯುದ್ಗಚ್ಛತಿ, ಎಂಬದೂ ಶೃಣೋಮಿಂ ಎಂಬದೂ ಸ್ವಪ್ನನಾಟಕದಿಂದ ಮತ್ತು ಚಾರುದತ್ತ ದಿಂದ ಹಾಗೆಯೇ ಕದ್ದ ಮಾತುಗಳಾಗಿವೆ. ಇನ್ನು ಕೃಷ್ಣತ್ವಚಂ 'ಗ್ರಂಥಿಮತೀಂ ದಧಾನಾಂ' ಎಂಬುದು ಕುಮಾರ ಸಂಭವದ ಶಿವವರ್ಣನದ ಮಾತೇ ಆಗಿದೆ. ಹೀಗೆಯೇ 'ಪ್ರದೀಪ್ತೋಽಗ್ನಿಃ ಭಾತಿ ಪ್ರಚರತಿ ಹಿ ಧೂಮೋಮುನಿವನಂ ಸಲಿಲ ಮವಗಾಢೋ ಮುನಿಜನಃ (ಸ್ವಪ್ನ I ಅಂಕದ ಕಡೆಯ ಶ್ಲೋಕ) ಹುತ ಜಾತ ವೇದಸಃ ಅನೂಚಾನಾಃ, ಶ್ಲಥಲಂಬಿನೀರ್ಜಟಾಃ, ಮುಕ್ತಾ ಯಜ್ಞೋಪವಿತಾನಿ ಬಿಭ್ರಾಣಾಃ, ಅರಣ್ಯ ಬೀಜಾಂಜಲಿದಾನ ಲಾಲಿತಾಃ ಘಟಸ್ತನ ಪ್ರಸ್ರವಣೈಃ ವರ್ಧಯಂತಿ' ಇತ್ಯಾದಿಗಳು ಕಾಲಿದಾಸನಿಂದ ಕದ್ದವು. ಈ ನಾಟಕದ ಎರಡ ನೆಯ ಸಂದರ್ಭವೆಂದರೆ ಪರಶುರಾಮ ಕರ್ಣರ ಸಂವಾದ—ಇದು ಅಕ್ಷರಶಃ ಭಾಸನ ಕರ್ಣಭಾರದಿಂದ ಸಂಗೃಹೀತವಾಗಿದೆ. 'ಈಶ್ವರಾ:—ಸ್ವಸ್ತಿ ಕುರ್ವಂತು' ಎಂಬದು ಅಭಿಷೇಕ ನಾಟಕದಲ್ಲಿ ಸೀತೆಯ ಪ್ರಾರ್ಥನೆ ಮೂರನೆಯ ಸಂದರ್ಭ ದಲ್ಲಿ ಕೃತ್ತೇ 'ವಜ್ರಮುಖೇನ ನಾಮ ಕೃಮಿಣಾ ದೈವಾನ್ಮಮೋರುದ್ವಯೋ—

ಎಂಬ ಕರ್ಣಭಾರದ ಶ್ಲೋಕವು ಹಾಗೆಯೇ ಬಂದಿದೆ. ಭರತವಾಕ್ಯದ 'ಸರ್ವತ್ರ ಸಂಪದಃ ಸಂತು' ಎಂಬದೂ ಇಲ್ಲಿಯೇ ಬಂದಿದೆ. ಹೀಗೆಯೇ 'ಅನುಕ್ತಗ್ರಾಹಿಣಾಂ' ಎಂದು ವಿಭೀಷಣನ ಉಪದೇಶಗಳನ್ನು ರಾವಣನು ಅಲ್ಲಗಳೆದಾಗ ಉಪಯುಕ್ತ ವಾದ ಶಬ್ದವೂ ಇಲ್ಲಿದೆ. ಇಷ್ಟು ಮಾತ್ರವಲ್ಲ, ಭಗವದಜ್ಜುಕೀಯದ—ಆ ! ಏಷ ದುಷ್ಟಕುಕ್ಕುರಃ ಅಸ್ಮಾತ್ ಆಶ್ರಮಾಭೋಗಾತ್ ವಲ್ಕಲಂ ಗೃಹೀತ್ವಾ ಧಾವತಿ—ಎಂಬ ವಾಕ್ಯವೂ ಇಲ್ಲಿ ಹಾಗೆಯೇ ಬಂದಿದೆ. ಇದಿಷ್ಟು ಶೈಲಿಯ ವಿಚಾರವಾಯಿತು.

ಇನ್ನು ಕಥಾವಸ್ತುವನ್ನು ಸಂಕ್ಷೇಪವಾಗಿ ಸಂಗ್ರಹಿಸುವಾಗ ಕರ್ಣನ ಸೇವಕನಾದ ದಾಮಕನು ರಂಗಭೂಮಿಯ ಮೇಲೆ ಬಂದು ಸ್ವಾಮಿಯಾದ ಕರ್ಣನು ಪರಶುರಾಮನ ಆಶ್ರಮಕ್ಕೆ ಹೊರಡುವ ಸಂದರ್ಭದಲ್ಲಿ 'ಕರ್ಣನ ಮಹತ್ವಾಕಾಂಕ್ಷೆಯನ್ನು ಆಸ್ಥಾನದಲ್ಲಿ ಪ್ರಕಟಿಸಿ ನೊರಡುತನವನ್ನು (ಕುಂಡಲ ಗಳನ್ನು ದಾನಮಾಡುವ ಸಂದರ್ಭದಲ್ಲಿ) ಹಳಿಯುತ್ತಾ ಪ್ರವೇಶಿಸುವನು. ಪರಶುರಾಮನು ಆಶ್ರಮವನ್ನು ವಿವರವಾಗಿ ವರ್ಣಿಸಿ ಹೋಗುವನು. ಪರಶು ರಾಮನೂ ಕರ್ಣನೂ ಪ್ರವೇಶಿಸುವರು. ಕರ್ಣನು ತಾನು ಕ್ಷತ್ರಿಯನಲ್ಲವೆಂದು ಸುಳ್ಳು ಹೇಳಿ ಅಸ್ತ್ರ ಶಿಕ್ಷೆಯನ್ನು ಪಡೆದರೆ ಕಾಲಕ್ರಮೇಣ ಅವನ ಗುಟ್ಟು ರಟ್ಟಾಗಿ ಶಾಪವನ್ನು ಸ್ವೀಕರಿಸುವನು. ಭರತವಾಕ್ಯದಿಂದ ಅಂತ್ಯವಾಗುವದು.

ಶ್ರೀಯುತ ರಾಮಕೃಷ್ಣಕವಿಗಳೇ ಈ ನಾಟಕ ಸಂದರ್ಭವನ್ನು ಸಂಗ್ರಹಿ ಸುವಾಗ ಅದು ಭಾಸ ಮಹೇಂದ್ರವರ್ಮರ ಮಾತುಗಳ ಸಂಕಲನವೆಂದೇ ಧಾರಾಳ ವಾಗಿ ಒಪ್ಪಿರುವರು. ಪರಶುರಾಮ ಕರ್ಣರ ಸಂವಾದವಂತೂ ಕರ್ಣಭಾರ ದಿಂದ ಅಕ್ಷರಶಃ ಬಂದಿದೆ. ಇಷ್ಟು ಮಾತ್ರವಲ್ಲ, ಕಾಲಿದಾಸಾದಿ ಅನ್ಯಕವಿಗಳ ಮಾತೂ ಹಾಗೆಯೇ ಬಂದಿದೆಯೆಂದೂ ತೋರಿಸಿದ್ದೇವೆ. ಮಹೇಂದ್ರ ವಿಕ್ರಮ ವರ್ಮನ ನಾಟಕಗಳನ್ನು ಈ ಮಹನೀಯರು ಕಟುವಾಗಿ ಟೀಕಿಸದಿದ್ದರೂ, ಈ ದಾಮಕ ಪ್ರಹಸನಕ್ಕೆ ಮಾತ್ರ ಭಾಸನ ನಾಟಕಗಳಲ್ಲಿ ಸ್ಥಾನವನ್ನು ಕಲ್ಪಿಸಿ ಕೊಟ್ಟದ್ದು ಅತಿ ವಿಚಿತ್ರವಾಗಿದೆ. ಭಾಸನ 13 ನಾಟಕಗಳಲ್ಲಿರುವ ಅತ್ಯುದಾತ್ತ ವಿಷಯಗಳೂ ಭಾವಗಳೂ ಈ ಪ್ರಹಸನದಲ್ಲಿ ಖಂಡಿತವಾಗಿ ಕಂಡುಬರುವದಿಲ್ಲ ವೆಂಬುದು ಸುಲಭವಾಗಿ ತಿಳಿಯುವ ವಿಷಯವೇ ಆಗಿದೆ.

ಇನ್ನು ತ್ರೈವಿಕ್ರಮವೆಂಬ ನಾಟಕವನ್ನು ಶ್ರೀಯುತ ಕವಿಗಳು ಹೊಗಳಿ ಅದನ್ನು ಭಾಸನ ನಾಟಕಗಳಲ್ಲಿ ಸೇರಿಸಬಹುದೆಂದು ವಾದಿಸುವದೂ ಇಷ್ಟೇ ಶುಷ್ಕವಾಗಿದೆ. ಸೂತ್ರಧಾರನು ಬಲಿಯನ್ನು ನಿಗ್ರಹಿಸುವ ವಾಮನಾವತಾರದ ಚಿತ್ರವೊಂದನ್ನು ನೋಡಿ ಅದನ್ನು ವರ್ಣಿಸುವ ಸಂದರ್ಭ ನಟಿಯು ಇದನ್ನು

ವಿವರವಾಗಿ ವರ್ಣಿಸಬೇಕೆಂದು ಪ್ರಾರ್ಥಿಸಲು ಭಾಸನ ಶೈಲಿಯನ್ನೇ ಅನುಕರಿಸಿ ವರ್ಣಿಸಿರುವನು. ಇಲ್ಲಿಯೂ ಭಾಸನ ಮಾತುಗಳನ್ನೇ ಅಕ್ಷರಶಃ ಕದ್ದಿದ್ದಾನೆಂಬುದು ಓದುವವರಿಗೆ ಸುಲಭವಾಗಿ ತಿಳಿಯುತ್ತದೆ. ಇದೇ ಮಾತನ್ನೇ ಆ ಮಹನೀಯರೇ ಸಂಪಾದಿಸಿ ಪ್ರಕಟಿಸಿದ ಚತುರ್ಭಾಣೀ ಎಂಬ 4 ಭಾಣಗಳಿಗೂ ಅನ್ವಯಿಸಬಹುದು. ಈ ನಾಟಕಗಳಲ್ಲಿ ಬರುವ ಸಂದರ್ಭವೆಂದರೆ ಅತಿ ಹೇಯವಾದ ವೇಶ್ಯಾಸ್ತ್ರೀಯರ ಸಂಪರ್ಕ, ಅವರನ್ನು ಹುಡುಕಿಕೊಂಡು ತಮ್ಮ ತಮ್ಮ ಹೆಂಡತಿಯರನ್ನು ವಂಚಿಸಿದ ವಿಷಯಲಂಪಟರನ್ನೇ ನಾವಿಲ್ಲಿ ಕಾಣುವದು. ಭಾಸನ ನಾಟಕದಲ್ಲಿಯಾದರೋ ವೇಶ್ಯೆಯಾದ ವಸಂತಸೇನೆಯು ಬಂದರೆ ಕಟ್ಟಕಡೇಗೆ ಅವಳೇ ಸ್ವತಃ ಚಾರುದತ್ತನನ್ನು ಮದುವೆಯಾಗಿ ಅವನೊಡನೆ ಆದರ್ಶ ಸತೀಮಣಿಯಾಗಿ ಸಂಸಾರವನ್ನು ಹೂಡುವಳು. ಹಿಡಿಂಬೆಗೂ ಉದಾತ್ತವಾದ ರೀತಿಯಲ್ಲಿ ಗಂಡನಿಗೇನೆ ಆಮಂತ್ರಣ ಕೊಡಿಸಿ ತನ್ನ ಮನೆಗೆ ಕರಸಬೇಕಾಗಿತ್ತು. ಉಭಯಾಭಿಸಾರಿಕೆಯೆಂಬ ಇವುಗಳಲ್ಲೊಂದು ಭಾಣದ 18ನೆಯ ಶ್ಲೋಕದಲ್ಲಿ 'ಯೋಗಾಸ್ತೇ ತರುಣ್ಯೈಃ ಮನೋಭಿಲಷಿತೈಃ ಮೋಕ್ಷೋಪ್ಯ ನಿಷ್ಟಾತ್ ಜನಾತ್' ಎಂಬ ವಾಕ್ಯವು ಅವಿಮಾರಕ II ಅಂಕದ ಯೋಗಶಾಸ್ತ್ರವನ್ನು ನವದಂಪತಿಯರ ಯೋಗವೆಂದು ವರ್ಣಿಸಿದ ಸಂದರ್ಭದ ಅನುಕರಣವೇನೋ ಆಗಿರಬಹುದೇನೋ ನಿಜ. ಆದರೆ ಅದರಲ್ಲಿ ಅಡಕವಾದ ಅತ್ಯುಚ್ಚವಾದ ಹಾಸ್ಯ ಖಂಡಿತವಾಗಿಯೂ ಈ ಭಾಣದಲ್ಲಿ ಕಂಡುಬರುವದೇ ಇಲ್ಲ. ಹೀಗೆಯೇ ಶ್ಯಾಮಿಲಕನ ಪಾದತಾಡಿತಕ ಭಾಣದಲ್ಲಿ ಬಂದ ವೇಶ್ಯಾವಾಟದ ವರ್ಣನೆಯು ಮೃಚ್ಛಕಟಿಕದ ವಸಂತಸೇನೆಯ ಪ್ರಾಸಾದ ವರ್ಣನೆಯನ್ನೇ ಉಪಜೀವಿಸಿಕೊಂಡಿದೆಯೆಂಬುದೇನೋ ನಿರ್ವಿವಾದ.

ಹೆಚ್ಚು ಮಾತುಗಳಿಂದೇನು ? ಒಂದೇ ಮಾತಿನಿಂದ ಹೇಳುವದಾದರೆ, ಭಾಸನ ಅತ್ಯುಚ್ಚಗಳಾದ ಧ್ಯೇಯಗಳು ಖಂಡಿತವಾಗಿ ಈ ತುಚ್ಛ ಪ್ರಹಸನಗಳಲ್ಲಿ ಅಥವಾ ಭಾಣಗಳಲ್ಲಿ ಕಂಡುಬರುವದೇ ಇಲ್ಲ. ಅವುಗಳನ್ನು ಪ್ರಾಚೀನನಾದ ಭಾಸನಿಂದ ಪ್ರಣೀತಗಳೆಂದು ವಾದಿಸುವದೂ ಖಂಡಿತವಾಗಿಯೂ ನ್ಯಾಯಸಮ್ಮತವಲ್ಲವೆಂದು ಸ್ಪಷ್ಟವಾಗಿ ಒಡೆದು ಕಾಣುತ್ತದೆ.

೯

ಭಾಸನು ಶಕ್ತಿಭದ್ರನೋ ?

ಭಗವತ್ಪಾದರಾದ ಶಂಕರಾಚಾರ್ಯರ ಸಮಕಾಲೀನನೆಂದು ಪ್ರಸಿದ್ಧನಾದ ಶಕ್ತಿಭದ್ರನೆಂಬವನು ಆಶ್ಚರ್ಯಚೂಡಾಮಣಿಯೆಂದು ಹೆಸರಾದ ನಾಟಕದ (ಬಾಲ ಮನೋರಮಾ ಸಂಪಾದಿತ) ಕರ್ತನಾಗಿರುವನು. ಈ ನಾಟಕದ ಹಸ್ತಪ್ರತಿಯು ಭಾಸಕೃತಗಳಾದ ಅಭಿಷೇಕ, ಪ್ರತಿಮಾ ನಾಟಕಗಳ ಪ್ರತಿಯೊಡನೆ ಒಂದೇ ಓಲೆ ಗ್ರಂಥದಲ್ಲಿ Oriental Manuscript's Library 12492ನೆಯ ನಂಬರದ್ದಾಗಿ ಕಂಡುಬರುತ್ತದೆ. ಪ್ರಾಯಶಃ ಈ ಕಾರಣದಿಂದಲೆಯೋ ಏನೋ ಈ ಮೂರು ನಾಟಕಗಳೂ ಏಕಕರ್ತೃಕಗಳೆಂದೂಹಿಸಲಾಗಿದೆ. ಪ್ರಾಯಶಃ ಪ್ರಸಿದ್ಧ ಪ್ರಾಚೀನ ಶಿಲ್ಪಶಾಸ್ತ್ರಜ್ಞರಲ್ಲಿ (arcahelogist) ಅಗ್ರಗಣ್ಯರಾದ ಹೀರಾನಂದ ಶಾಸ್ತ್ರಿಗಳೆಂಬ ಮಹನೀಯರು ಮೊಟ್ಟಮೊದಲು ಈ 3 ನಾಟಕಗಳೂ ಶಕ್ತಿಭದ್ರನ ವೆಂದು ಅವುಗಳಿಗೂ ಆಶ್ಚರ್ಯಚೂಡಾಮಣಿಗೂ ಇರುವ ಸಾಮ್ಯದ ಆಧಾರದಿಂದ ಸಾಧಿಸಿ, ಕಡೇಗೆ ಭಾಸನ ಎಲ್ಲಾ ನಾಟಕಗಳೂ ಶಕ್ತಿಭದ್ರ ಕೃತಗಳೇ ಎಂದು ಪ್ರತಿಪಾದಿಸಿದರು. ಅದರ ಅನಂತರ ಪ್ರಸಿದ್ಧ ಪಂಡಿತರುಗಳಾದ ಪಿಷಾರಡಿ, ಕುಪ್ಪುಸ್ವಾಮಿಶಾಸ್ತ್ರಿ ಮೊದಲಾದವರೂ ಇದನ್ನೊಪ್ಪಿಕೊಂಡರು.

Archaeologial Bulletin ಎಂಬ ಪತ್ರಿಕೆಯಲ್ಲಿ ಹೀರಾನಂದರು ಆಶ್ಚರ್ಯಚೂಡಾಮಣಿಗೂ ಅಭಿಷೇಕ ನಾಟಕಕ್ಕೂ ಇರುವ ಸಾಮ್ಯಗಳನ್ನೆತ್ತಿ ತೋರಿಸಿದರು. ಒಂದೆರಡು ಸಾಮ್ಯಗಳಿರುವದೇನೋ ನಿಜ. ಆದರೆ ಅವುಗಳಾ ಧಾರದಿಂದಲೇ ಏಕಕರ್ತೃಕತ್ವವನ್ನು ಸಿದ್ಧಾಂತಿಸುವದು ಅಸಾಧ್ಯ. ಉದಾಹರಣೆ ಗಾಗಿ ಎರಡು ನಾಟಕಗಳಲ್ಲಿಯೂ ಸೀತೆಯ ಎದುರಿನಿಂದ ಯಾರೋ ಒಬ್ಬ ಬಂದಿಯು ಇಂತಿಷ್ಟು ಗಂಟೆಯಾಯಿತೆಂದು ಸಾರಿದ್ದರಿಂದ ರಾವಣನು ಹೋದರೆ, ಅಥವಾ ಒಂದೆರಡು ಶಬ್ದಗಳಲ್ಲಿ ಅಲ್ಲಲ್ಲಿ ಸಾಮ್ಯವನ್ನು ಪ್ರದರ್ಶಿಸಿದರೆ, ಇವು

ಗಳಿಂದಲೇ ಏಕಕತ್ತೃಕತ್ವವನ್ನು ಸಾಧಿಸಿದಂತಾಗಲಿಲ್ಲ. ಅತಿ ಪ್ರಧಾನಗಳಾದ ಸಂದರ್ಭ ಗಳಲ್ಲಿ ಇಬ್ಬರೂ ಹೇಗೆ ಕೈವಾಡಮಾಡಿದ್ದಾರೆಂಬುದನ್ನು ನಾವು ನೋಡಬೇಕು. ಆಶ್ಚರ್ಯಚೂಡಾಮಣಿಯಲ್ಲಿಯಾದರೋ ರಾವಣ, ಮಾರೀಚ, ಶೂರ್ಪಣಖಿ ಯರು ಮಾಯಾ ರಾಮ (ರಾವಣ) ಮಾಯಾ ಮಾರೀಚ, ಮಾಯಾ ಶೂರ್ಪಣಖಿಯರಾಗಿ ಬಂದು, ಮಾಯಾಮೃಗ, ಮಾಯಾಸೀತೆಯೂ ಬಂದು, ಸೀತಾಪರಿಹಾರವು ಅತಿ ಸುಲಭವಾಗಿ ಮಾಡಲ್ಪಟ್ಟಿದೆ. ಪ್ರತಿಮಾ ನಾಟಕದಲ್ಲಿಯಾದರೋ ಭಾಸನು ಶ್ರಾದ್ಧಕಲ್ಪದಲ್ಲಿ ನಿಷ್ಣಾತನಾದ ಶ್ರೋತ್ರಿಯ ರಾವಣ (ಭಟ್ಟನು?) ಬಂದು, ಮೂರನೆಯ ದಿನದ ಪಿತೃಶ್ರಾದ್ಧಕ್ಕೆ ಕಾಂಚನ ಪಾರ್ಶ್ವ ಮೃಗದ ಮಾಂಸವು ಅತಿ ಪ್ರಶಸ್ತವೆಂದು ಕಲ್ಪೋಕ್ತ ಪ್ರಕಾರ ರಾಮನಲ್ಲಿ ಪಿತೃಭಕ್ತಿಯನ್ನು ಮೂಡಿಸಿ, ಆ ಕಾಂಚನ ಪಾರ್ಶ್ವಮೃಗವೇ ಎದುರಿಗೆ ಮಾಯೆ ಯಿಂದ (ಮಾರೀಚ ಮೃಗ) ಬಂದಾಗ ರಾಮನನ್ನು ಬೇಟೆಗಟ್ಟಿ, ಸೀತೆಯನ್ನು ಸುಲಭವಾಗಿ ಜಾರಿಸಿಕೊಂಡು ಪುಷ್ಪಕ ವಿಮಾನದಲ್ಲಿ ಕೂಡ್ರಿಸಿಕೊಂಡು ಹೋಗು ವನೆಂಬ ಕಥಾಸಂವಿಧಾನಕವೇ ಎರಡು ಕಡೆಗಳಲ್ಲಿಯೂ ಅತೀವ ಭಿನ್ನವಾಗಿದೆ. ವಾಲ್ಮೀಕಿಯ ಕಥೆಯ ಪ್ರಕಾರವೂ, ಶಕ್ತಿಭದ್ರನ ಪ್ರಕಾರವೂ ಸೀತೆಯು ಭಂಗಾರದ ಮೃಗದ ಆಶೆಯಿಂದ ರಾಮನನ್ನು ಬೇಟೆಯಾಡಲಿಕ್ಕೆ ಪ್ರೇರಿಸಿದರೆ, ಇಲ್ಲಿ ರಾಮನ ಪಿತೃಭಕ್ತಿಯೇ ಅವನನ್ನಿದಕ್ಕೆ ಪ್ರವರ್ತಿಸಿತೆಂದು ಉಕ್ತವಾಗಿದೆ. ಹೀಗೆಯೇ ಸಣ್ಣ ಪುಟ್ಟ ಸಂವಿಧಾನಗಳಲ್ಲಿಯೂ ವೈವಿಧ್ಯವನ್ನು ನಾವು ಕಾಣುತ್ತೇವೆ. ಭಾಸನಾದರೋ ವಿಭೀಷಣನು ಅಣ್ಣನಿಗೆ ಋಜುವಾಗಿ ಉಪದೇಶಿಸಿ ರಾಕ್ಷಸ ಕುಲದ ನಾಶವನ್ನು ತಪ್ಪಿಸಲು ಪ್ರಯತ್ನಿಸಿದನೆಂದು ಚಿತ್ರಿಸಿರುವನು. ಆಶ್ಚರ್ಯ ಚೂಡಾಮಣಿಯಲ್ಲಿ ಯಾರೋ ಒಬ್ಬ ಅಮಾತ್ಯನು–ರಾವಣನಿಗೂ ಅವನಿಗೂ ಸಂಬಂಧವೇ ಇಲ್ಲವಂತೆ–ರಾಕ್ಷಸಚಕ್ರವರ್ತಿಗೆ ಈ ಉಪದೇಶವನ್ನು ನೀಡಿದನಂತೆ. ಸ್ವತಃ ತಮ್ಮನೇ ಉಪದೇಶಿಸಿರುವದಕ್ಕೂ ಯಾವ ರಕ್ತಸಂಬಂಧವೂ ಇಲ್ಲದ ಅಮಾತ್ಯನು ಉಪದೇಶಿಸುವದಕ್ಕೂ ತುಂಬಾ ಹೆಚ್ಚುಕಡಿಮೆಯಿಲ್ಲವೇ? ಈ ಅಮಾತ್ಯನು ಬಾಯಿಬಿಟ್ಟು ವಿಭೀಷಣನ ಹೆಸರು ಹೇಳಿ ನಿಂದಿಸದಿದ್ದರೂ ಆಪತ್ಕಾಲದಲ್ಲಿ ಅಣ್ಣನ ಸಹವಾಸವನ್ನು ತೊರೆದವನನ್ನು ಮನಸ್ವೀ ನಿಂದಿಸಿಯೇ ತನ್ನ ಉಪದೇಶವನ್ನಾರಂಭಿಸುವನು. ಭಾಸನು ಬೇಕೆಂದೇ ಮಂಡೋದರಿಯನ್ನು ರಂಗಭೂಮಿಯ ಮೇಲೆ ತರುವದೇ ಇಲ್ಲ. ಎಲ್ಲಿಯೋ ಒಂದೆಡೆ ಅಶೋಕವನದ ಸೊಬಗನ್ನು ಬಣ್ಣಿಸುವ ಸಂದರ್ಭದಲ್ಲಿ ಅವಳು ಅತ್ಯಂತ ಪ್ರಿಯಮುಂಡನೆಯಾಗಿ ದ್ದರೂ ಅಶೋಕವನದ ಸಣ್ಣ ಒಂದು ಚಿಗುರನ್ನೂ ಕೂಡಾ ಮುರಿಯದೆ ಅದರ ಸೊಬಗನ್ನೇ ಬಯಸುತ್ತಿದ್ದಳೆಂದು ಹೇಳುವದು ಮಾತ್ರ. (ಅಲ್ಲಿಯೂ ಪ್ರಾಸ

ಪ್ರಿಯನಾಗಿ ಪ್ರಿಯ **ಮಂಡ**ನಾಪಿ.... **ಮಂಡೋ**ದರೀ ಎಂಬ ಪ್ರಾಸಕ್ಕೋಸ್ಕರ ತಿಳಿಸಿದನೋ ತಿಳಿಯದು). ಶಕ್ತಿಭದ್ರನಾದರೋ ಅವಳನ್ನು ಅನೇಕ ಸಲ ರಂಗದ ಮೇಲೆ ತಂದಿದ್ದು ಮಾತ್ರವಲ್ಲದೆ, ವಾಲ್ಮೀಕಿಯ ಪ್ರಕಾರ ತ್ರಿಜಟೆಗೇ ಅಶುಭ ಸೂಚಕ ಸ್ವಪ್ನವಾಗಿದ್ದರೂ ಬೇಕೆಂತಲೇ ಆ ಸ್ವಪ್ನವು ಮಂಡೋದರಿಗೇ ಬಿದ್ದಂತೆಯೇ ಚಿತ್ರಿಸಿರುವನು. ಇದೇನೋ ಪ್ರಶಂಸನೀಯವೇ ನಿಜ, ಆದರೆ ರಾವಣನು ಸೀತೆಯನ್ನು ಕಾಮಿಸಿ ಮರ್ಯಾದಾತಿಕ್ರಮವಾದಾಗ ಮಂಡೋದರಿ ಯನ್ನೇ ನಡುವಿನಲ್ಲಿ ತಂದು ಆಭಾಸಕ್ಕೆ ಕಾರಣನಾಗಿರುವನು. ಹೀಗೆಯೇ ಭಾಸನು ಬೇಕೆಂದೇ ಶೂರ್ಪಣಖಿ, ಮಂಥರೆಯರನ್ನು ರಂಗಭೂಮಿಯ ಮೇಲೆ ತರಲೇ ಇಲ್ಲ. ಮಂಥರೆಯನ್ನೆಲ್ಲಿಯೋ ಒಂದು ಮೂಲೆಯಲ್ಲಿ (ಪ್ರತಿಜ್ಞಾ I 7) ಅವಳ ಹೆಸರನ್ನು ಮಾತ್ರ ಎತ್ತಿ ಬಿಟ್ಟಿರುವನು. ಶಕ್ತಿಭದ್ರನಿಗಾದರೊ ಶೂರ್ಪ ಣಖಿಯಿಲ್ಲದೆ ತನ್ನ ಆಶ್ಚರ್ಯದ ಜೀವಾಳವೇ ಇಲ್ಲವೆಂಬ ಭಯ. ಹೀಗೆಯೇ ಭಾಸನು ಎಲ್ಲಿಯೋ ಒಂದುಕಡೆಯಲ್ಲಿ ರಾವಣನ ೨೦ಕೈಗಳ ಸುದ್ದಿಯನ್ನೆತ್ತಿದರೆ- ವಿಶ್ವಲೋಕ ವಿಜಯ ವಿಖ್ಯಾತ **ವಿಂಶದ್ಬಾಹು** ಶಾಲಿನಿ....ಲಂಕೇಶ್ವರೇ (V ಅಭಿಷೇಕ-14ನೆಯ ಶ್ಲೋಕದ ಅನಂತರ) ಶಕ್ತಿಭದ್ರನು ಪ್ರತಿಯೊಂದು ವಾಕ್ಯ ದಲ್ಲಿಯೂ ರಾವಣನ ಇಪ್ಪತ್ತೂ ಕೈಗಳನ್ನೇ ಒತ್ತಿ ಹೇಳಿದಂತಿದೆ. ಸೀತೆಯೂ ಈ ವಿಷಯವನ್ನು ತನ್ನ ಅಪಹಾರಕ್ಕೆ ಸ್ವಲ್ಪ ಮುಂಚಿತವಾಗಿ ಲಕ್ಷ್ಮಣನೊಡನೆ ಮಾತನಾಡುವಾಗ ಇದನ್ನು ಹೇಳುವಳಂತೆ-ಇದಕ್ಕಿಂತಲೂ ಹೆಚ್ಚಿನ ಅಸೌಚಿತ್ಯ ವಿದ್ದೀತೇ ? ಸಾಲದ್ದಕ್ಕೆ ಮಾಯೆಯಿಂದ ರಾವಣನು ಅಲ್ಲಿಯೇ ಇದ್ದು ಈ ಮಾತ ನ್ನವಳ ಬಾಯಿಯಿಂದಲೇ ಕೇಳಿ ತನ್ನ ಕೆಲಸವರ್ಥವಾಯಿತೆಂದು ಅತಿಸಂತುಷ್ಟ ನಾಗುವನು. ಭಾಸನು ಲಕ್ಷ್ಮಣನನ್ನು ಅಪಹಾರಕಾಲದಲ್ಲಿ ವಸಿಷ್ಠರಲ್ಲಿಗೆ ಕಳುಹಿಸಿ ಆತನ ಸೀತಾಪಚಾರವನ್ನು ಪರಿಹರಿಸಿದರೆ, ಶಕ್ತಿಭದ್ರನಾದರೋ ಅವನನ್ನಲ್ಲಿಯೇ ಇದ್ದಿರುವಂತೆ ಚಿತ್ರಿಸಿ, ಸೀತೆಯಿಂದ ಅವನನ್ನು ಬೈಯಿಸುವನು. (ವಾಲ್ಮೀಕಿಯ ಪ್ರಕಾರವೇ).

ಶಕ್ತಿಭದ್ರನ ಹಾಸ್ಯವೂ ಭಾಸನ ಹಾಸ್ಯದಷ್ಟು ಉದಾತ್ತವೂ ಉಚ್ಚ ಆಗಿಲ್ಲ. ರಾವಣನು ಸೀತೆಯ ಕಾಲಿಗೆ ಬಿದ್ದಾಗ ಸೀತೆಯು ಶಕ್ತಿಭದ್ರ V ಅಂಕದಲ್ಲಿ ಇದು **ಪ್ರಣಿಪಾತ**ವಲ್ಲ **ವಿನಿಪಾತ**ವೆಂದು ಹೇಳುವದು ತುಂಬಾ ಅನುಚಿತವೆಂದು ನಮಗನಿಸುತ್ತದೆ. ಇನ್ನೊಂದು ಕಡೆಯಲ್ಲಿ ಸರ್ವರಾಜರಿಗೂ ಒಬ್ಬಳೇ ಹೆಂಡತಿಯಾದ ಭೂಮಾತೆಯ ಮಗಳಾದ ಸೀತೆಗೆ ಪಾತಿವ್ರತ್ಯದಗೊಡವೆ ಯೆಂದು ರಾವಣನು ಅವಳನ್ನು ಜರೆದುದೂ (V-32) ಅದಷ್ಟು ಸಮಂಜಸ ವಲ್ಲವೆಂದೇ ತೋರುವದು. ಕೆಲವೆಡೆಗಳಲ್ಲೇನೋ ಶಕ್ತಿಭದ್ರನ ಹಾಸ್ಯವೂ

ಶ್ಲಾಘನೀಯವೇ ಆಗಿದೆ. ಉದಾ–ಒಂದೇ ಚಂದ್ರನು ತನ್ನನ್ನೂ ತನ್ನ ಗಂಡನನ್ನೂ ಕಾಣುವನಲ್ಲಾ ಎಂದು ಸೀತೆಯು ದುಃಖೋದ್ಗಾರವನ್ನು (ಹನುಮಂತನು ಅವಳ ಹತ್ತಿರ ಬರುವದಕ್ಕೆ ಸ್ವಲ್ಪ ಮುಂಚಿತವಾಗಿ) ತೆಗೆದಿರುವದು ಮರ್ಮಜನಕವೇ ಆಗಿದೆ.

ಶಕ್ತಿಭದ್ರನೇನೋ ಭಾಸನ ನಾಟಕಗಳನ್ನು ಆ ಮೂಲಾಗ್ರವಾಗಿ ಓದಿದ್ದನೆಂದೊಪ್ಪಲೇಬೇಕು. ರಾಮನು ಕೈಕೇಯಿಯನ್ನು ದೂಷಿಸದೆ, ಅವಳನ್ನು ಹೊಗಳಿದ್ದರೆ ಅದು ಭಾಸನ ಪ್ರಭಾವವೆಂದೇ ಹೇಳಬೇಕು. ತನ್ನ ತಂದೆಯಿಂದ ಅವನು ಜೀವಂತನಾಗಿರುವಾಗಲೇ ರಾಜ್ಯವನ್ನು ಸ್ವೀಕರಿಸಲುದ್ಯುಕ್ತನಾದ ತಾನೇ ನಿಂದಾಸ್ಪದನಾದನೆಂಬ ಮಾತನ್ನು ಶಕ್ತಿಭದ್ರನು ಭಾಸನಿಂದ ಕಲಿತ ಪಾಠವೆಂದೇ ನಿರ್ಧರಿಸಬಹುದು. ಕೈಕೇಯಿಯು ಆ ಪ್ರಕಾರ ನಿಷ್ಠುರವಾಗಿ ವರ್ತಿಸಿದ್ದರೆ, ಅದನ್ನಿಬ್ಬರೂ ವಿಧಿ ವಿಲಾಸವೆಂದೇ ಸಮರ್ಥಿಸುವರು. ಒಂದೇ ಮಾತಿನಲ್ಲಿ ಹೇಳುವದಾದರೆ ಭಾಸನ ಶೈಲಿಯು ಸರಲವಾಗಿ ವ್ಯಂಜನಾಭೂಯಿಷ್ಠವಾದರೆ, ಶಕ್ತಿಭದ್ರನ ಶೈಲಿಯೋ ತುಂಬಾಕ್ಲಿಷ್ಟ, ಕಠಿಣವಾಗಿರುವುದರಿಂದ, ಅವರಿಬ್ಬರನ್ನೂ ಒಬ್ಬನೇ ಆಗಿ ಭಾವಿಸುವದು ತುಂಬಾ ಅನುಚಿತವೆಂದೇ ತೋರುವುದು.

೧೦

ಮಾತಿನಲ್ಲಿ ಅನಾಯಾಸವಾಗಿ ಬರುವ ಮಾರ್ಪಾಡುಗಳು

ಪ್ರತ್ಯುತ್ಪನ್ನ ಮತಿಗಳ ಪ್ರತಿಭೆಯ ಆಧಾರದಿಂದ ಮಾತುಗಳಲ್ಲಿ ಅನಾಯಾಸವಾಗಿಯೂ, ಅಜ್ಞಾತವಾಸವಾಗಿಯೂ ಬಂದ ಮಾರ್ಪಾಡುಗಳು ಈ ನಾಟಕಗಳಲ್ಲಿ ಬೆಳವಣಿಗೆಗೆ ಅತ್ಯಂತ ಉಪಯುಕ್ತವಾಗಿ ಬಂದಿವೆ. ಈ ಸಂದರ್ಭದಲ್ಲಿ ಪೌರಾಣಿಕ ಕತೆಯೊಂದನ್ನು ನಾವು ಜ್ಞಾಪಿಸಿಕೊಳ್ಳಬಹುದು. ಕುಂಭಕರ್ಣನ ತಪಸ್ಸಿಗೆ ಮೆಚ್ಚಿ ಬ್ರಹ್ಮನು ವರಗಳನ್ನು ಕರುಣಿಸಲು ಹೊರಟಾಗ ಹಿರಣ್ಯಕಶಿಪುವಿಗೆ ವರಗಳನ್ನು ಕೊಟ್ಟಂತೆ ಈಗಲೂ ಕೊಡಬಹುದೆಂದು ಹೆದರಿ ದೇವತೆಗಳು ಸರಸ್ವತಿಗೆ ಪ್ರಾರ್ಥಿಸಲು, ಅವಳು ಅವನ ನಾಲಿಗೆಯಲ್ಲಿ ಮಾಯೆಯಿಂದ ಕುಳಿತು, ಇಂದ್ರಪದವಿಯನ್ನು ಪ್ರಾರ್ಥಿಸುವ ಬದಲಾಗಿ ನಿದ್ರಾದೇವಿಯನ್ನು ಪ್ರಾರ್ಥಿಸಿ ಹಾಸ್ಯಕ್ಕೀಡಾದನೆಂಬುದು ಎಲ್ಲರಿಗೂ ಗೊತ್ತೇ ಇದೆ.

ಸ್ವಪ್ನ ನಾಟಕದ V ಅಂಕದಲ್ಲಿ ಉದಯನನು ನಿದ್ರೆಹೋಗುವ ಸ್ವಲ್ಪ ಮುಂಚೆ ಅವನಿಗೆ ಕಥೆ ಹೇಳಲು ಉಪಕ್ರಮಿಸಿದ ವಿದೂಷಕನು 'ಬ್ರಹ್ಮದತ್ತ ನಗರ, ಕಾಂಪಿಲ್ಯನೆಂಬ ರಾಜ'ನೆಂದು ತಿರುಗುಮುರುಗಾಗಿಯೇ ಎಷ್ಟು ಸಲ ಹೇಳಿದರೂ ಸರಿಯಾಗಿ ಹೇಳಲಶಕ್ತನಾಗುವದು ಆ ಸಂದರ್ಭದಲ್ಲಿ ಉದಯನನ ಬೇಸರಕ್ಕೂ ನಿದ್ದೆಗೂ ಕಾರಣವಾಗುವದು. ಚಾರುದತ್ತದಲ್ಲಿ ಶಕಾರನು 'ಶೃಣೋಮಿ, ಗಂಧಂ ಶ್ರವಣಾಭ್ಯಾಂ, ಅಂಧಕಾರಪೂರಿತಾಭ್ಯಾಂ ನಾಸಾಪುಟಾಭ್ಯಾಂ ಸುಷ್ಠು ನ ಪಶ್ಯಾಮಿ (ಗಂಧವನ್ನು **ಕಿವಿ**ಗಳಿಂದ **ಕೇಳು**ವೆನು; ಕತ್ತಲೆ ಕವಿದ ಮೂಗಿನ ಸೊಳ್ಳೆಗಳಿಂದ ಸರಿಯಾಗಿ ನೋಡಲಾಗುವದಿಲ್ಲ), ಎಂಬದೂ ಅಥವಾ ಅದರಲ್ಲಿಯೇ III ಅಂಕದಲ್ಲಿ ಚೋರಂ, ಛಿತ್ತ್ವಾ ಸಂಧಿ: ಪ್ರವಿಷ್ಟ: ಕಳ್ಳನನ್ನು **ಕಡಿದು** ಗೋಡೆಯ ಸಂದೇ ಒಳಹೊಕ್ಕಿತು—ಎಂಬಲ್ಲಿಯೂ ಈ ಮಾತಿನಲ್ಲಿ ಪಲ್ಲಟಗಳು ಪ್ರಯೋಜನವಿಲ್ಲದವು ಎಂದೇ ಹೇಳಬೇಕಾಗುತ್ತದೆ.

ಹೀಗೆಯೇ ಚಾರುದತ್ತದಲ್ಲಿ ಶಕಾರನು ಮಾತುಪಲ್ಲಟಗಳಲ್ಲಿ ರಾಮಾಯಣದ ಕಥಾನಕವನ್ನು ಮಹಾಭಾರತಕ್ಕೆ ಎಳೆದು ಹಾಕಿದರೆ ದುಃಶಾಸನನು ಸೀತೆಯನ್ನೆಳೆದಂತೆ I–22 ಎಂಬುದು ಪ್ರಯೋಜನವಿಲ್ಲವೆಂತ ತೋರಿದರೂ, ಮೃಚ್ಛಕಟಿಕದಲ್ಲಿ ಹೀಗೆ ಅಪಲಾಪಿಸಿದವನು 9ನೆಯ ಅಂಕದಲ್ಲಿ ಚಾರುದತ್ತನೇ ವಸಂತಸೇನೆಯನ್ನು ಕೊಂದನೆಂದು ಫಿರ್ಯಾದು ಮಾಡುವಾಗ ಏನೂ ಗೊತ್ತಿಲ್ಲದಂತೆ ನಟಿಸುವವನ ಬುದ್ಧಿಯು ನಿಜವಾಗಿಯೂ ಕುಶಾಗ್ರವೇ ಆಗಿತ್ತೆಂಬುದು ನಮಗೆ ವೇದ್ಯವೇ ಆಗುತ್ತದೆ.

ಪ್ರತಿಮಾ ನಾಟಕದಲ್ಲಿ ಕೈಕೇಯಿಯ ಬಾಯಿಯಲ್ಲಿನ್ನೊಂದು ಮಾತಿನ ಪಲ್ಲಟವನ್ನು ನಾವು ಕಾಣುತ್ತೇವೆ. ಉದಾತ್ತಳಾದವಳ ನಡತೆಯನ್ನು ಸರಿಯಾಗಿ ವಿವರಿಸುವರೆಯೇ ಭಾಸನು ಈ ನಾಟಕವನ್ನು ಬರೆದಂತಿದೆ. ಈ ಕತೆಯು ಪ್ರಕಾರ ಅವಳು ರಾಜ್ಯಲೋಭದಿಂದ ಪ್ರವರ್ತಿಸಿದುದಲ್ಲವೆಂಬುದೇ ಸ್ಪಷ್ಟವಾಗುತ್ತದೆ. ದಶರಥನು ಕೈಕೇಯಿಯನ್ನು ಮದುವೆಯಾದಾಗ ರಾಜ್ಯಶುಲ್ಕವನ್ನವಳಿಗೆ ಅನುಗ್ರಹಿಸುವದಾಗಿ ಮಾತು ಕೊಟ್ಟಿದ್ದನೆಂಬುದು ರಾ ಮ ನ ಬಾಯಿಯಿಂದಲೇ ಪಾದುಕೆಗಳನ್ನು ಭರತನಿಗೆ ಕೊಟ್ಟು ಸಂತೈಸುವ ಸಂದರ್ಭದಲ್ಲಿ—ಪುರಾ ಭ್ರಾತಃ ಪಿತಾ ನಃ ಮಾತರಂ ತೇ ಸಮುದ್ವಹನ್ ಮಾತಾಮಹೇ ಸಮಾಶ್ರೌಷೀತ್ ರಾಜ್ಯಶುಲ್ಕಮನುತ್ತಮಂ || (ಅಯೋಧ್ಯಾ ಕಾಂಡ 107 ನೆಯ ಸರ್ಗ) ನಮಗೆ ಗೊತ್ತಾಗುತ್ತದೆ. ದಶರಥನಿಗೂ ಸಾಯುನಾಗ ಮಕ್ಕಳು ಹತ್ತಿರವಿರಬಾರದೆಂದೂ ಶಾಪವಿತ್ತಂತೆ ಹೇಗಾದರೂ. ವಿಧಿಯು ರಾಮನನ್ನೂ ದಶರಥನನ್ನೂ ಪ್ರತ್ಯೇಕಿಸಬೇಕಿತ್ತಲ್ಲವೇ ? ಅದಕ್ಕೆ ಸರಿಯಾದ ಸಾಧನವೆಂದರೆ ಕೈಕೇಯಿಯೇ ಎಂದು ತಿಳಿದೇ ಬೇಕೆಂದೇ ರಾಮನನ್ನು ಕಾಡಿಗೆ 14 ದಿನಗಳು ಮಾತ್ರ ಕಳುಹಿಪಬೇಕೆಂದು ಕೈಕೇಯಿಯು ಆ ಶಿ ಸಿ ದ ರೆ, ವಿಧಿಯು **ದಿನ** ಶಬ್ದವನ್ನು ಬದಲಿಸಿ **ವರ್ಷ** ಶಬ್ದವನ್ನಲ್ಲಿ ಅವಳ ಬಾಯಿಯಿಂದ ಉಚ್ಚರಿಸುವ ಹಾಗೆ ಮಾಡಿತಂತೆ !

೧೧

ಭಾಸನ ನಾಟಕಗಳಲ್ಲಿ ಬರುವ ಮಾರ್ಪಾಟುಗಳು

ಆನಂದವರ್ಧನನ ಧ್ವನ್ಯಾಲೋಕದಲ್ಲಿ III 2ನೆಯ ಕಾರಿಕೆಯು ಹೀಗಿದೆ

ಇತಿವೃತ್ತವ ಶಾಯಾತಾಂ ತ್ಯಕ್ತ್ವಾ ನನುಗುಣಾಂ ಸ್ಥಿತಿಂ
ಉತ್ಪ್ರೇಕ್ಷ್ಯೋಽ ಪ್ಯಂತರಾಭೀಷ್ಟರ ಸೋಚಿತ ಕಥೋನ್ನಯಃ ||

ಅಂದರೆ ಪೌರಾಣಿಕ ಕಥೆಗಳಲ್ಲಿ ಅನನುಗುಣಗಳಾದ ಭಾಗಗಳನ್ನು ಸ್ವಲ್ಪ ಮಟ್ಟಿಗೆ ಮಾರ್ಪಡಿಸಿಯಾದರೂ ನಾಯಕನ ಅಥವಾ ಇನ್ನಿತರರ ಸ್ವಭಾವವನ್ನು ಚರಿತವನ್ನೂ ಉದಾತ್ತತರವಾಗಿ ಚಿತ್ರಿಸಬೇಕೆಂದು ಹೇಳಿದುದರ ಮರ್ಮವನ್ನು ಸರಿಯಾಗಿ ಅರಿತವರಲ್ಲಿ ಭಾಸನೂ ಒಬ್ಬನೆಂದು ಹೇಳಬಹುದು.

ರಾಮಾಯಣ ನಾಟಕಗಳಲ್ಲಿ ತೋರ್ಪಡುವ ಮಾರ್ಪಾಟುಗಳು :—

ಈ ನಾಟಕಗಳು ಎರಡೇ, ಪ್ರತಿಮಾ ಮತ್ತು ಅಭಿಷೇಕ. ದಿವಂಗತರಾದ C.R. ಶ್ರೀನಿವಾಸ ಅಯ್ಯಂಗಾರರೆಂಬ ವಿದ್ವಾಂಸರೊಬ್ಬರು ರಾಮಾಯಣದಲ್ಲಿ ಅನೇಕ ಅರ್ಥವಾಗದ ಸಮಸ್ಯೆಗಳಿವೆಯೆಂಬುದನ್ನು ಮೊಟ್ಟಮೊದಲು ಫೆಬ್ರುವರಿ 22, 1931ರಲ್ಲಿ Hindu Illustrated Weekly ಎಂಬ ಸಂಚಿಕೆಯಲ್ಲಿ ಪ್ರತಿಪಾದಿಸಿದರು. ಈ ಮಹನೀಯರು ಪ್ರತಿಪಾದಿಸಿದ ಸಮಸ್ಯೆಗಳಿಗೆ ಭಾಸನ ನಾಟಕಗಳನ್ನೋದಿದರೆ ಕೂಡಲೇ ಸಮಾಧಾನವು ತಾನಾಗಿಯೇ ದೊರಕುವದೆಂದು ನಮಗನ್ನಿಸುತ್ತದೆ. ಆ ಮಹನೀಯರ ಸಮಸ್ಯೆಯನ್ನು ಹೀಗೆ ಸಂಗ್ರಹಿಸಬಹುದು.

ದಶರಥನ ಹೆಂಡಂದಿರ ಹೆಸರುಗಳನ್ನು ಈಗ ನಾವೆಲ್ಲರೂ ಸಾಧಾರಣವಾಗಿ ಕೌಸಲ್ಯಾ ಕೈಕೇಯಿ ಮತ್ತು ಸುಮಿತ್ರೆ ಎಂದೇ ಹೇಳುವದೇ ವಾಡಿಕೆಯಾಗಿದೆ.

ಆದರೇ ಕೈಕೇಯಿಯೇ ಇವಳಲ್ಲಿ ಅತೀ ಚಿಕ್ಕವಳೆಂದು ರಾಮಾಯಣ ಕತೆಯ ಪ್ರಕಾರವೇ ಅವಳ ಮದುವೆಯಾದುದು ಕಟ್ಟಕಡೆಗೇ ಅಂದರೆ ಕೌಸಲ್ಯಾ ಸುಮಿತ್ರೆಯರನ್ನು ಮದುವೆಯಾಗಿ ಅನೇಕ ವರ್ಷಗಳ ಅನಂತರವೆಂದಿದೆ. ಹೀಗೆ ಮಹಾಭಾರತದಲ್ಲಿ ಶಂತನುವು ಸತ್ಯವತಿಯನ್ನು ಮದುವೆಯಾದಾಗ ರಾಜ್ಯವನ್ನವಳ ಮಗನಿಗೇ ಕೊಡುತ್ತೇನೆಂದೊಪ್ಪಿ ಮದುವೆಯಾಗಿದ್ದನೋ, ಹಾಗೆಯೇ ಈ ಸಂದರ್ಭದಲ್ಲಿಯೂ ದಶರಥನು ಕೇಕೆಯ ರಾಜನಿಗೆ ಅವನ ಮಗಳನ್ನು ಮದುವೆಯಾದಾಗ ಆತನ ಮಮ್ಮಗನನ್ನೇ ತನ್ನ ಅನಂತರ ಪಟ್ಟ ಕಟ್ಟುವದಾಗಿ ಮಾತು ಕೊಟ್ಟಿದ್ದನೆಂದು ಅಯೋಧ್ಯಾಕಾಂಡದ 107ನೆಯ ಸರ್ಗದಲ್ಲಿ ಪಾದುಕೆಗಳನ್ನು ಭರತನಿಗೆ ಕರುಣಿಸುವ ಸಂದರ್ಭದಲ್ಲಿ ಹೇಳುವ ಮಾತುಗಳಿಂದ ನಾವು ತಿಳಿಯುತ್ತೇವೆ.

ಹೀಗಿರುವಾಗ ಕೈಕೇಯಿಗೆ ಹೇಗೆ ಎರಡನೆಯ ಸ್ಥಾನ ಲಭಿಸಿತೆಂದು ಯೋಚಿಸಬೇಕಾಗಿದೆ. ಇದಕ್ಕಿರಬಹುದಾದ ಕಾರಣವು ಭಾಸನು ಕೈಕೇಯಿಯನ್ನು 'ಮಧ್ಯಮೆ'ಯೆಂದು ಸ್ತ್ರೀಲಿಂಗದಲ್ಲಿ ನಿರ್ದೇಶಿಸಿದುದೇ ಎಂದು ತೋರುತ್ತದೆ. ಭಾಸನಾದರೋ ಈ ಶಬ್ದವನ್ನು ಪ್ರಾಚೀನಾರ್ಥದಲ್ಲಿ ಉಪಯೋಗಿಸಿದ್ದರೂ ಕೂಡಾ ಕಾಲಾನುಭಾಗದಲ್ಲಿ ಆ ಅರ್ಥವನ್ನು ಜನರು ಮರೆತುಬಿಟ್ಟು ಸುಲಭವಾಗಿಯೂ ಸಹಜವಾಗಿಯೂ ಇದ್ದ ಅರ್ಥಾಂತರವನ್ನು ಕಲ್ಪಿಸಿ ಸುಮಿತ್ರೆಯನ್ನು ಮೂರನೆಯ ಸ್ಥಾನಕ್ಕೆ ಅಟ್ಟರಬೇಕು. ಭಾಸನ ಅರ್ಥವಾದರೊ, ಮದ ತುಂಬಿ ತುಳುಕುವ ಯೌವನಸ್ಥಳಾದ ಪ್ರಮದೆಯೆಂದು ಈ ಅರ್ಥವನ್ನೇ ಅಮರಕೋಶದಲ್ಲಿ 'ಸ್ಯಾನ್ಮಧ್ಯಮಾ ದೃಷ್ಟರಜಾಃ' ಎಂದು ಹೇಳಿದೆ. ವ್ಯಾಖ್ಯಾಕೃತನಾದರೋ ಇದನ್ನು ಪ್ರಥಮರಜೋದರ್ಶನಕ್ಕೆ ಅನ್ವಯಿಸಿದರೆ ಅದೂ ಪ್ರಾಚೀನಾರ್ಥವಲ್ಲವೆಂದೇ ತೋರುವದು. ರಾಮಾಯಣದಲ್ಲಿ ಕೌಸಲ್ಯೆ ಸುಮಿತ್ರೆಯರನ್ನೆಲ್ಲಿಯೂ **ಮಧ್ಯಮಾ** ಅಥವಾ **ಸುಮಧ್ಯಮಾ** ಎಂದು ವಿಶೇಷಿಸದಿರುವದೂ ಇದೇ ಕಾರಣದಿಂದಲೇ ಎಂದು ತೋರುವದು. ಸೀತೆ, ಕೈಕೇಯಿ, ತಾರೆಯರನ್ನು ಮಾತ್ರ ಹೀಗೆ ನಿರ್ದೇಶಿಸಿದುದನ್ನು ನಾವು ಕಾಣುತ್ತೇವೆ. ಈ ಪ್ರಾಚೀನಾರ್ಥವು ಬಳಕೆಯಲ್ಲಿಂದ ಲುಪ್ತವಾದ ಅನಂತರ, ಕೈಕೇಯಿಯೇ ಮಧ್ಯಮದವಳೆಂದು ಅಪಾರ್ಥವನ್ನು ಕಲ್ಪಿಸಿದವರಲ್ಲಿ ಕಾಲಿದಾಸ, ಭವಭೂತ್ಯಾದಿಗಳು ಸೇರಿಕೊಂಡದ್ದರಿಂದ ಎಲ್ಲರೂ ಸುಮಿತ್ರೆಗೆ ಮೂರನೆಯ ರಾಣಿಯೆಂದೇ ಹೇಳಬೇಕಾಗಿ ಬಂತು. ಅಮರಕೋಶಕಾರನಿಗೆ ಈ ಪ್ರಾಚೀನಾರ್ಥವು ಗೊತ್ತಿದ್ದರೂ ಮಾಘನ ಕಾಲದಲ್ಲಿ ಅಥವಾ ಅದಕ್ಕಿಂತಲೂ ಬಹಳ ಮುಂಚೆಯೇ ಇದು ಖಂಡಿತವಾಗಿಯೇ ಮರೆತೇ ಹೋಗಿರಬೇಕೆಂದೇ ಊಹಿಸಬಹುದಾಗಿದೆ.

ಇದರ ವಿಚಾರವಾಯಿತಷ್ಟೆ. ಈಗಲೇ ಹೇಳಿದಂತೆ 107ನೆಯ ಸರ್ಗ 3ನೆಯ ಶ್ಲೋಕ ಅಯೋಧ್ಯಾಕಾಂಡದಲ್ಲಿ ಕೈಕೇಯಿಯ ಮಗನಿಗೇನೇ ರಾಜ್ಯವು ಮದುವೆಯ ಕಾಲದಲ್ಲಿಯೇ ಕೊಡಲ್ಪಡುವದಾಗಿ ತೀರ್ಮಾನವಾಗಿದ್ದರೆ, ಅವಳು ರಾಜ್ಯವನ್ನು ಬೇಡುವ ಕಷ್ಟಕ್ಕೆ ಯಾಕೆ ಕೈ ನೀಡಿದಳು ? ರಾಜ್ಯವು ಭರತನದ್ದೇ ಆಗಿರುವಾಗ ರಾಮನ ತ್ಯಾಗದ ಕತೆಯೆಲ್ಲಿಂದ ಸಮಂಜಸವಾಗುವುದು ? ಹೀಗಿರುವಾಗ ದಶರಥನು ಭರತನನ್ನು ಕೈಕೇಯಿಯ ದೇಶಕ್ಕೆ ಕಳುಹಿಸಿ ಅವನಿಗೆ ರಾಮ ಪಟ್ಟಾಭಿಷೇಕದ ಸಮಾಚಾರವನ್ನು ಕಳಿಸದೆ, ಇರುವುದನ್ನು ನೋಡುವಾಗ ಅವನು ದೊಡ್ಡ ತಪ್ಪುಗಾರನೆಂದೇ ಹೇಳಬೇಕಾಗುತ್ತದೆ. ಕೇಕಯ ದೇಶವು ತುಂಬಾ ದೂರವಿತ್ತೆಂದು ಆ ಸಂದರ್ಭದಲ್ಲಿ ವಾದಿಸಿದುದೂ ಅಪ್ರಶಸ್ತವೆಂದೇ ನಾವು ತಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಕೇಕಯ ವಿದೇಹ ದೇಶಗಳಿಗೆ ಸಮಾಚಾರವನ್ನು ಕಳುಹಿಸದಿರುವದೂ ಗಮನಾರ್ಹವಾಗಿದೆ. ಇಬ್ಬರೂ ಬಹು ದೂರದಲ್ಲಿರುವದರಿಂದಲೂ ಆ ಮುಹೂರ್ತದೊಳಗೆ ಅವರು ಬರಲಸಮರ್ಥರೆಂದೂ, ಪಟ್ಟಾಭಿಷೇಕ ಮುಗಿದ ಅನಂತರ ಅವರು ಸಂತುಷ್ಟರಾದಾರೆಂದೂ ವಾದಿಸುವದು ತೀರಾ ಅಸಮಂಜಸ. ಇದನ್ನು ಸರಿಯಾಗಿ ವಿಚಾರಿಸಿದರೆ, ದಶರಥನು ಬೇಕೆಂದೇ ಅಂದರೆ ರಾಮನು ಪಟ್ಟಾಭಿಷೇಕವನ್ನು ತೀರಿಸಿಯೇ ತನ್ನ ಮಾವನಿಗೆ ಸಮಾಚಾರವನ್ನು ತಿಳಿಸಬೇಕೆಂದಿದ್ದನೆಂದೇ ಒಪ್ಪಬೇಕಲ್ಲವೇ ? ಜನಕ ಮಹಾರಾಜನೂ ಈ ಕೈಕೇಯಿಯ ವಿವಾಹಕ್ಕೆ ಸಾಕ್ಷಿಯಾದುದರಿಂದ (ಪದ್ಮಪುರಾಣದ ಕತೆಯ ಪ್ರಕಾರ) ಆತನು ರಾಮನೇ ತನ್ನ ಅಳಿಯನಾದರೂ ಸಾಕ್ಷಿಯಾದ್ದರಿಂದ ಮದುವೆಯ ಸಂದರ್ಭದಲ್ಲಿ ಒಪ್ಪಿದ ಪ್ರಕಾರ ಭರತನ ಪಟ್ಟಾಭಿಷೇಕ ನಡಿಯಲೇ ಬೇಕೆಂದು ವಾದಿಸಬಹುದೆಂಬ ಭಯವಿದ್ದುದರಿಂದ ಆತನಿಗೂ ಆಮಂತ್ರಣವಿದ್ದಿಲ್ಲವೆಂದೇ ವಾದಿಸಬೇಕಾಗುತ್ತದಲ್ಲವೇ? ಅತಿ ಸಮೀಪದ ಬಂಧುಗಳಿಗೋಸ್ಕರ ಪಟ್ಟಾಭಿಷೇಕವನ್ನೇ ಒಂದೆರಡು ದಿನ ಮುಂದೂಡಿದ್ದರೆ ಏನು ಮುಳುಗಿಹೋಗುತ್ತಿತ್ತು ?

ಇದಂತಿರಲಿ, ರಾಜ್ಯಶುಲ್ಕವನ್ನೇ ದಶರಥನು ಕೈಕೇಯಿಗೆ ವಚನವಿತ್ತ ಪ್ರಕಾರ ಅತಿ ಸುಲಭವಾಗಿ ರಾಜ್ಯವನ್ನು ಭರತನಿಗೇನೇ ಕೊಡಿಸಬಹುದಾಗಿದ್ದಾಗ ಕೈಕೇಯಿಯು ವರಗಳ ವ್ಯಾಜ್ಯದಿಂದ ರಾಮನಿಗೆ ವನ ವಾಸವನ್ನು **ಯಾಚಿಸಿದುದು** ಯಾಕೆಂಬ ಕಾರಣ ತಿಳಿಯುವದಿಲ್ಲ ವಾಲ್ಮೀಕಿಯ ಕತೆಯನ್ನೇ ಅನುಸರಿಸಿ,ಕಾಲಿದಾಸ,ಭಟ್ಟಿ,ಭವಭೂತ್ಯಾದಿ ಸಂಸ್ಕೃತ ಕವಿಗಳೂ, ತೊರವೆ ಮತ್ತು ಪಂಪರಾಮಾಯಣಗಳಲ್ಲಿ ಕನ್ನಡವ ತಮಿಳು ಕವಿಗಳೂ. ಇತ್ಯಾದಿಗಳೆಲ್ಲರೂ ಕೈಕೇಯಿಯು ರಾಜ್ಯವನ್ನು ಯಾಚಿಸಿದಳೆಂದೇ,ಹೇಳುತ್ತಾರೆ. ಭಾಸನೊಬ್ಬನೇ ಪ್ರತಿಮಾ

ನಾಟಕದಲ್ಲಿ ಈ ರಾಜ್ಯಶುಲ್ಕದ ಕತೆಯನ್ನೇ ಎತ್ತಿ ಹೇಳುವದು, ಅವನೊಬ್ಬನ ಕಥೆಯಲ್ಲಿ ಮಾತ್ರ ಈ ರಾಜ್ಯಶುಲ್ಕದ ವಿಚಾರ ಬಂದಿರುವದು ವಿಚಿತ್ರವಾಗಿದೆ. ಅವನ ಕತೆಯ ಪ್ರಕಾರವಾದರೆ ಕೈಕೇಯಿಯನ್ನು ನಾವು ದೂಷಿಸುವರೆ ಸಾಧ್ಯವೇ ಇಲ್ಲ. ವಿಧಿಯೇ ತನ್ನ ಕಾರ್ಯಸಾಧನೆಗಾಗಿ ಕೈಕೇಯಿಯನ್ನು ಆ ರೀತಿಯಲ್ಲಿ ವರ್ತಿಸುವಂತೆ ಮಾಡಿದ್ದು. ಅವಳೇನೋ ಹದಿನಾಲ್ಕೇ ದಿನ ರಾಮನನ್ನು ಕಾಡಿಗೆ ಕಳುಹಿಸಿ, ಸಾಯುವ ಕಾಲದಲ್ಲಿ ಪುತ್ರವಿಯೋಗ ಏರ್ಪಟ್ಟೇ ತೀರಬೇಕಾದ ಶಾಪಕ್ಕೆ ಅನುಗುಣವಾಗಿ ಕೇಳಿಕೊಂಡಿದ್ದರೆ,14 **ದಿನ**ಗಳನ್ನು **ವರ್ಷ**ಗಳೆಂದು ಉಚ್ಚರಿಸುವ ಹಾಗೆ ವಿಧಿವಿಲಾಸವಿದ್ದರೆ ಅದನ್ನು ತಪ್ಪಿಸಲು ಯಾರಿಗೆ ತಾನೇ ಸಾಧ್ಯ? ಇಷ್ಟೇ ಅಲ್ಲ. ದಶರಥನು ಸಾಯುವ ಕಾಲದಲ್ಲಿ ಕೈಕೇಯಿಯನ್ನು ತನ್ನೆಡೆಗೇ ಬರಕೂಡದೆಂದು ಕಟ್ಟಪ್ಪಣೆಯನ್ನು ಮಾಡಿದರೂ ಪಿಟ್ಟೆನ್ನದೆ ದುಃಖವನ್ನೆ ನುಂಗಿಕೊಂಡು ಮೂಲೆಯಲ್ಲಿರುವಳು. ಸಾಲದುದಕ್ಕೆ ಸ್ವತಹ ಮಗನೇ ಸುತ್ತುಮುತ್ತಲಿನವರ ಮಾತನ್ನು ಕೇಳಿ ಅವಳನ್ನೇ ರಾಜ್ಯಲೋಭದಿಂದ ಗಂಡನನ್ನೇ ಕೊಲ್ಲಿಸಿದಾಗಿ ಪಿಶಾಚಿಯೆಂದು ಬೈದು, ಅವಳ ತಲೆಯ ಮೇಲೆಯೇ ಕಿರೀಟವನ್ನಿಡುವರೆ ನಿರ್ದೇಶಿಸಿದರೂ, ಒಳಗಿಂದೊಳಗೇ ದುಃಖದಿಂದ ಕೊರೆದಳೇ ಹೊರತು ತುಟಿಯನ್ನೂ ಕೂಡಾ ಬಿಡಿಸಲಿಲ್ಲ. ಕಟ್ಟಕಡೇಗೆ ದುಃಖವನ್ನು ತಡೆಯಲಾರದೇ ಸುಮಂತ್ರನ ಬಾಯಿಯಿಂದಲೇ ದಶರಥನ ಶಾಪದ ಸುದ್ದಿಯನ್ನು ಮಗನಿಗೆ ಹೇಳಿಸಿ, ರಘುವಂಶದ ಉಚ್ಚವಾದ ಕೀರ್ತಿಯನ್ನು ಅಳಿಯದಿರುವದಕ್ಕೆ ತಾನು ಹೂಡಿದ ಉಪಾಯವನ್ನು ತಿಳಿಯ ಹೇಳುವಳು.

ರಾಮಾಯಣದ ಕತೆಯ ಪ್ರಕಾರ ರಾಮಲಕ್ಷ್ಮಣರೂ ವಲ್ಕಲಧಾರಿಗಳಾಗಿ ಕಾಡಿಗೆ ಹೋಗಬೇಕೆಂದು ಕೈಕೇಯಿಯೇ ಕೇಳಿದ್ದಳಂತೆ. ಸಾಲದುದಕ್ಕೆ ಅವಳ ಮಾತಿನ ಪ್ರಕಾರ ಸೀತೆಯೂ ಈ ನಾರುಬಟ್ಟೆಗಳನ್ನು ಧರಿಸಿಕೊಳ್ಳಬೇಕಂತ ಮುಂಗಮುಷ್ಟಿ ಹಿಡಿದಾಗ, ವಶಿಷ್ಠ ಸುಮಂತ್ರರು ಅವಳಿಗೆ ನ್ಯಾಯ ತಿಳಿಸಿ, ಸ್ವತಹ ದಶರಥನು ಇದೆಂದಿಗೂ ಸಾಧ್ಯವಾಗದ ಮಾತೆಂದು ನಿರಾಕರಿಸಿ, ಒಳಗಿನಿಂದ ಹದಿನಾಲ್ಕು ವರ್ಷಗಳಿಗೆ ಬೇಕಾಗುವಷ್ಟು ಶೀರೆಗಳನ್ನೂ ಆಭರಣಗಳನ್ನೂ ತರಿಸಿ ಅವಳಿಗೆ ಕೊಟ್ಟಿದ್ದನಂತೆ. ಭಾಸನಾದರೋ ನಾರುಮಡಿಗಳು ಕೈಕೇಯಿಯಮುಖಾಂತರ ಬಂದವೇ ಅಲ್ಲ, ಅವಳು ರಂಗಭೂಮಿಯ ಮೇಲೆ ಬರುವದಾದರೂ ಅವಳ ಮಗ ಅವಳ ಪಾಪಕ್ಕೆ ಪ್ರಾಯಶ್ಚಿತ್ತವನ್ನಾಚರಿಸಲು ಸಿದ್ಧನಾಗಿ ಬಂದ ಅನಂತರವೇ ಬರುವದು. ಒಂದನೆಯ ಅಂಕದಲ್ಲಿ ನಾರುಬಟ್ಟೆಗಳು ಯದೃಚ್ಛೆಯಾಗಿ ಬಂದವೆಂದೊತ್ತಿ ಹೇಳುವನು. ಅಂದರೆ ಯಾರೋ ಅವಳ ಸಖಿಯೊಬ್ಬಳು ಎಲ್ಲಿಯೋ ಹೊಸತಾಗಿ ಕೊಂಡುಕೊಂಡ ನಾರುಬಟ್ಟೆಯನ್ನು ಕೈಯಲ್ಲಿ ಹಿಡಕೊಂಡಾಗ

ಸೀತೆಯೇ ಅವಳನ್ನು ನೋಡಿ ತಾನಾಗಿಯೇ ಕುತೂಹಲದಿಂದ ಇದು ತನ್ನ ದೇಹ ಕ್ಕೊಪ್ಪಿತೆಯೆಂಬುದನ್ನು ನೋಡುವರೆ ಅವಳಿಂದ ತಕ್ಕೊಂಡು ಧರಿಸಿದಳಂತೆ! ಅದೇ ಸಂದರ್ಭದಲ್ಲಿ ಅವಳನ್ನು ಬೀಳ್ಕೊಡುವರೆ ರಾಮನು ಅಲ್ಲಿಗೆ ಬಂದಾಗ ಮತ್ತೆರಡು ನಾರು ಬಟ್ಟೆಗಳೂ ಅಪ್ರಾರ್ಥಿತವಾಗಿಯೇ ಬರಲು, ಸೀತಾಲಕ್ಷ್ಮಣ ರೆಲ್ಲರೂ ನಾರುಬಟ್ಟೆಗಳನ್ನೇ ಕುತೂಹಲದಿಂದ ಧರಿಸಿಕೊಂಡು ಹೊರಟದ್ದರಂತೆ! ಹೀಗೆಯೇ ಸುಮಿತ್ರೆಯು ಲಕ್ಷ್ಮಣನಿಗೆ 'ಅಯೋಧ್ಯಾಂ ಅಟವೀಂ ವಿದ್ಧಿ' ಎಂದುಪದೇಶಿಸಿದರೆ ಲಕ್ಷ್ಮಣನು ಅದನ್ನೇ ವೇದಮಂತ್ರವಾಗಿ ಭಾವಿಸಿ ರಾಮನನ್ನು ಹಿಂಬಾಲಿಸಿ ರಾಮನ ಅಯೋಧ್ಯೆಯಾದ ಅಡವಿಗೇ ಹೊರಟದ್ದಂತೆ.

ಹೀಗೆ ಕೈಕೇಯಿಯನ್ನು ದೂಷಣೆಗೆ ಸರ್ವಥಾ ಯೋಗ್ಯಳಲ್ಲವೆಂದು ಚಿತ್ರಿಸಿದಂತೆ, ಸೀತೆಯ ಮೇಲಿರುವ ಕಳಂಕವನ್ನೂ ಭಾಸನು ದೂರೀಕರಿಸಿರುವನು. ವಾಲ್ಮೀಕಿಯ ಕತೆಯ ಪ್ರಕಾರವಾದರೋ ಮಾರೀಚ ಮೃಗವು ಸಾಯುವಾಗ 'ಲಕ್ಷ್ಮಣ, ಸೀತೆ' ಎಂದು ರಾಮನ ಸ್ವರದಲ್ಲಿ ಕೂಗಿ ಕರೆದಾಗ, ಸೀತೆಯು ಅದನ್ನು ರಾಮನ ಆರ್ತಸ್ವರವೆಂದು ನಂಬಿ, ರಾಮನ ಸಹಾಯಕ್ಕೆ ಲಕ್ಷ್ಮಣನು ಹೋಗಬೇಕೆಂದು ಹಟಹಿಡಿದು, ಲಕ್ಷ್ಮಣನು ಆಕ್ಷೇಪಿಸಲು, ಅನ್ಯಾಯವಾಗಿ ಆತನಿಗೆ ಮನಸ್ಸೀ ಬೈಯುವಳಷ್ಟೆ. ಅವಳ ಕೆಟ್ಟ ಮಾತುಗಳನ್ನು ಲಕ್ಷ್ಮಣನು ಕೇಳಲಾಗದೆ, ದಿಕ್ಪಾಲಕರಿಗೂ, ದೇವತೆಗಳಿಗೂ, ಸೀತೆಯನ್ನೊಪ್ಪಿಸಿ ಕಾಪಾಡಿ ರೆಂದು ಪ್ರಾರ್ಥಿಸಿ ಹೊರಟುಹೋಗುವುದನ್ನು ರಾವಣನು ತಿಳಿದು ಮೆಲ್ಲಮೆಲ್ಲನೆ ಒಳಗೆ ಬಂದು ಸೀತೆಯನ್ನು ಅಪಹರಿಸಿದುದು. ಭಾಸನ ಕಥೆಯ ಪ್ರಕಾರ ವಾದರೋ, ಲಕ್ಷ್ಮಣನು ಆ ಸಂದರ್ಭದಲ್ಲಿ ಆಶ್ರಮದಲ್ಲಿಯೆ ಇದ್ದಿದ್ದಿಲ್ಲವಂತೆ. ತೀರ್ಥಯಾತ್ರೆಗಾಗಿ ಅಯೋಧ್ಯೆಯಿಂದ ಆಗತಾನೇ ಬಂದಿದ್ದ ವಶಿಷ್ಠನನ್ನು ಕಾಣುವರೆ ಆಗಲೇ ಲಕ್ಷ್ಮಣನು ಹೋಗಿದ್ದರಿಂದ ಆಶ್ರಮದಲ್ಲಿ ಸೀತಾರಾಮರೇ ಇದ್ದರಂತೆ! ಈ ಸಂದರ್ಭದಲ್ಲಿ ಪ್ರಾಸ್ತವಾದ ಇನ್ನೊಂದು ಬದಲಾವಣೆಯನ್ನೂ ನಾವು ನೋಡುತ್ತೇವೆ. ರಾವಣನು ಅಲ್ಲಿಗೆ ಬಂದದ್ದು ವೈದಿಕ ಕರ್ಮಗಳಲ್ಲಿ ನಿಷ್ಣಾತನಾದ ಶ್ರೋತ್ರಿಯನ ವೇಷದಲ್ಲಿ ಆಗ ರಾಮನೇನೋ ಸೀತೆಯೊಡನೆ ಮಾರನೆಯ ದಿನದ ತಂದೆಯ ಸಾಂವತ್ಸರಿಕ ಶ್ರಾದ್ಧದ ವಿಷಯ ಮಾತನಾಡಿ ಕೊಂಡಿದ್ದನಂತೆ. ಪಿತೃಭಕ್ತಿಯಿಂದ ರಾಮನು ತಂದೆಯ ಶ್ರಾದ್ಧವನ್ನು ಉತ್ತಮ ಮಾಂಸದಿಂದ ಮಾಡಲಸಾಧ್ಯವಾಯಿತಲ್ಲಾ ಎಂದು ಮೊರೆಯಿಡುತ್ತಿರು ವಾಗ ಸೀತೆಯು ಆತನನ್ನು ಸಂತೈಸುವರೆ 'ಭರತನು ಸಂಪತ್ತಿನಿಂದ ಬೇಕಾದಷ್ಟು ಮಾಂಸಗಳನ್ನೊದಗಿಸಿಕೊಂಡು ಅಯೋಧ್ಯೆಯಲ್ಲಿ ಶ್ರಾದ್ಧವನ್ನು ಮಾಡುವನಷ್ಟೆ. ನಮಗಿಲ್ಲಿ ಒದಗುವ ಫಲಮೂಲ ಕಂದಗಳಿಂದಲೇ ಮಾಡುವ' ಎಂದು ಹೇಳು

ವಾಗ ಸರಿಯಾಗಿ ಈ ವೈದಿಕ ಭಟ್ಟರು ಆಶ್ರಮದ್ವಾರದಲ್ಲಿ ಬಂದರಂತೆ. ಅವರನ್ನು ಯಥಾವಿಧಿ ಸತ್ಕರಿಸಿದ ಅನಂತರ ಶ್ರಾದ್ಧದ ಕ್ರಮವನ್ನು ಕಲ್ಪೋಕ್ತವಾಗಿ ವಿವರಿಸ ಹೇಳಲಾಗಿ ಕಾಂಚನ ಪಾರ್ಶ್ವಗಳೆಂಬ ಮೃಗಮಾಂಸದಿಂದ ಮಾಡಿದ ಶ್ರಾದ್ಧವೇ ಪಿತೃಗಳಿಗೆ ಅತಿ ತೃಪ್ತಿಯನ್ನುಂಟುಮಾಡುವದೆಂದು ಹೇಳಿದಾಗ, ಪಿತೃಭಕ್ತಿಯಿಂದ ಉಕ್ಕಿ ರಾಮನು ಆ ಮೃಗಗಳೆಲ್ಲಿವೆಯೆಂದು ವಿಚಾರಿಸಿದಲ್ಲಿ ಅವು ಹಿಮವತ್ಪರ್ವತದಲ್ಲಿದ್ದರೂ ತನ್ನ ಮಹಿಮೆಯಿಂದ ಇಲ್ಲಿಗೇ ಬರುವವೆಂದು ಹೇಳಲು ಸಂತೋಷದಿಂದ ಆಗಲೇ ರಾಮನು ಹೊರಡುವದು. ಸೀತಾಪಹಾರವು ಹೀಗೆ ನಿರರ್ಗಲವಾಗುವದು.

ಅಭಿಷೇಕ ನಾಟಕದಲ್ಲಿಯೂ ಹೀಗಿನ ಬದಲಾವಣೆಗಳಿವೆ. ಹನುಮಂತನು ಲಂಕಾದಹನವನ್ನು ಮಾಡಿ ರಾವಣನನ್ನು ಕಾಣುವ ಸಂದರ್ಭದಲ್ಲಿಯೇ ವಿಭೀಷಣನು ಸೀತೆಯನ್ನೊಪ್ಪಿಸಲುಪದೇಶವನ್ನು ಸಲ್ಲಿಸಿ ತಿರಸ್ಕೃತನಾಗಿ ಆತನು ಹೋದ ಮೇಲಂತೂ ಅದೇ ಉಪದೇಶವನ್ನು ಮುಂದುವರಿಸಿ 'ಪ್ರತಿನಿವಿಷ್ಟ' ಅಣ್ಣನಾದ ರಾವಣನ ಮನಸ್ಸನ್ನು ತಿರುಗಿಸಲಾರದೆ ಜಗಳ ಮಾಡಿ ಅಲ್ಲಿಂದ ಹೊರಟು ರಾಮನನ್ನು ಸೇರುವನು. ರಾಮಾಯಣದಲ್ಲಿಯಾದರೋ ಯುದ್ಧ ಕಾಂಡದ 16ನೆಯ ಸರ್ಗ (ಕುಂಭಕೋಣ ಪ್ರತಿ)ದಲ್ಲಿ ರಾಮನು ಸಮುದ್ರವನ್ನು ದಾಟಿದ **ಅನಂತರವೇ** ವಿಭೀಷಣನು ರಾಮನನ್ನಾಶ್ರಯಿಸಿದುದು. ಭಾಸ ನಾದರೋ ಸಮುದ್ರವನ್ನು ದಾಟುವ ಮುಂಚೆಯೇ ವಿಭೀಷಣನು ಬಂದು ದಿವ್ಯಾಸ್ತ್ರವನ್ನು ಸಮುದ್ರರಾಜನ ಮೇಲೆ ಪ್ರಯೋಗಿಸುವರೆ ಸಲಹೆಯನ್ನೂ ಕೊಟ್ಟದ್ದಾಗಿ (ನಾಲ್ಕನೆಯ ಅಂಕ) ಚಿತ್ರಿಸಿದ್ದಾನೆ. ಭಾಸನ ಕತೆಯ ಪ್ರಕಾರ ವಿಭೀಷಣನು ರಾವಣನ ಹತ್ತಿರ ಮಾತನಾಡುವಾಗ ಇಂದ್ರಜಿತ್ತು ಇರಲಿಲ್ಲ. ಹೀಗಾಗಿ ಇಂದ್ರಜಿತ್ತು ವಾಲ್ಮೀಕಿಯ ಪ್ರಕಾರ ಚಿಕ್ಕಪ್ಪನನ್ನು ಜರೆದ ಸಮಾಚಾರವೇ ಇಲ್ಲಿ ಬಂದಿಲ್ಲ. ಮುಂದಿನ ಅಂಕದಲ್ಲಿ ವಿಭೀಷಣನು ರಾಮನನ್ನಾಶ್ರಯಿಸುವ ಸಂದರ್ಭದಲ್ಲಿ ಮೊದಲು ಬಂದು ಹನುಮಂತನ ಹತ್ತಿರ ತನ್ನಾಗಮನವನ್ನು ರಾಮನಿಗೆ ತಿಳಿಸಬೇಕೆಂದು ಕೇಳಿಕೊಳ್ಳುವನು. ಆಗ ಹನುಮಂತನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ ವಿಭೀಷಣನ ಮಾತನ್ನು ನಂಬಲಾರದವರಾಗಿರುವಾಗ ಹನುಮಂತನೊಬ್ಬನೇ ಅವನನ್ನು ಸ್ವೀಕರಿಸಬಹುದೆಂತ ವಾದಿಸುವದು ನ್ಯಾಯವೇ ಆಗಿದೆ. ಈ ಸಂದರ್ಭದಲ್ಲಿ ಸುಮಂತ್ರನು ತೀರ್ಥಯಾತ್ರೆಗೆ ದಕ್ಷಿಣಕ್ಕೆ ಬಂದವನು (ಭರತನು ಈತನನ್ನು ರಾಮನ ಕ್ಷೇಮ ವಾರ್ತೆ ತಿಳಿಯುವರೆ ಕಳುಹಿಸಿದ್ದನಂತೆ) ಸೀತಾಪಹಾರದ ಸುದ್ದಿಯನ್ನು ಭರತನಿಗೆ ತಿಳಿಸಲು, ಆಗತಾನೇ ಕೈಕೇಯಿಯು ಸುಮಂತ್ರನ ಸಹಾಯದಿಂದ ತನ್ನ ನಿರ್ದೋಷತ್ವವನ್ನು ಸಾಧಿಸಿಕೊಂಡು, ರಾಮನ

ಸಹಾಯಕ್ಕೆ ಸೈನ್ಯವನ್ನು ತಯಾರಿಸಿ, ಅವರೆಲ್ಲರೂ ಹೊರಡಲನುವಾದಾಗ ರಾಮನು ಗೆದ್ದು ಹಿಂದೆ ಬರುತ್ತಿರುವನೆಂಬ ಸಮಾಚಾರವು ಬರುವದು. ಆಗತಾನೆ ಭರತನೂ ತಾಯಂದಿರೂ ಮುನಿಜನ ವನವಾಸದಲ್ಲಿ ರಾಮಸೀತೆ ಲಕ್ಷ್ಮಣರನ್ನು ಕಾಣುವರು. ವಾಲ್ಮೀಕಿಯ ಕಥೆಯ ಪ್ರಕಾರವಾದರೋ ಇವರೆಲ್ಲರೂ ಪಂಚವಟಿಯಲ್ಲಿಯೇ ಅವರನ್ನು ಕಂಡದ್ದು (ದಶರಥನ ಮರಣದನಂತರ). ಆದರೆ ಪಂಚವಟಿಯಲ್ಲವರು ಮಾಡಬೇಕಾಗಿದ್ದ ಕೆಲಸವೇನೂ ಇಲ್ಲದ್ದರಿಂದ ಅವರಾಗ ಬಂದುದು ಅನಾವಶ್ಯಕವೆಂದೇ ತೋರುವದು. ಆದರೆ ಇಲ್ಲಿಯ ಋಷ್ಯಾಶ್ರಮದಲ್ಲಿ ಕೈಕೇಯಿಯೇ ಸ್ವತಹ ಕಿರೀಟವನ್ನು ರಾಮನಿಗೊಪ್ಪಿಸಿ, ಅಭಿಷೇಕವೂ ಆಗಲೇ ನಡೆಯುವದು. ಈ ಮುನಿಜನ ವನವಾಸದ ಅಭಿಷೇಕವೇ ಈಗಲೂ ನೆಲೆಸಿರುತ್ತದೆ–
'ಪ್ರತ್ಯೇಕಂ ಚ ಸತಾಂ ಮನಃ ಜಗಾಮ'–ರಘು XII

೧೨

ಮಹಾಭಾರತ ನಾಟಕಗಳು

ಮಹಾಕವಿ ಭಾಸನಿಂದ ವಿರಚಿತವಾದ ನಾಟಕಗಳಲ್ಲಿ ಮಹಾಭಾರತವನ್ನು ಹೊಂದಿದವು ಐದು–ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತ ಘಟೋತ್ಕಚ, ಕರ್ಣಭಾರ, ಊರುಭಂಗ. ಭ್ರಾತೃವಧೆಯನ್ನು ತಪ್ಪಿಸಿ ಸಂತೋಷದಲ್ಲಿ ಮಂಗಳವಾಗುವದರಿಂದಲೂ, ಮೂರಂಕದ ನಾಟಕವು ಪಂಚರಾತ್ರ ಒಂದೇ ಆಗಿರುವುದರಿಂದಲೂ, ಪಂಚರಾತ್ರವನ್ನು ಪ್ರತ್ಯೇಕಿಸಿದ್ದೇವೆ. ಈ ಮಂಗಳ ಪ್ರಾಪ್ತಿಯ ಚಿಹ್ನೆಯು ಮಹಾಭಾರತದಲ್ಲಿ ದೊರೆಯುವದೇ ಇಲ್ಲ. ಅದಕ್ಕೆ ಭಾಸನ ಸೌಭ್ರಾತ್ರವೇ ಕಾರಣವೆಂದು ಹೇಳಬೇಕಾಗುತ್ತದೆ. ಈ ನಾಟಕಗಳಲ್ಲಿಯೂ ಪ್ರತ್ಯೇಕವಾಗಿ ನಾಟಕೀಯವಾದ ಒಂದೊಂದೇ ಸನ್ನಿವೇಶಗಳನ್ನಾಯ್ದು, ಸುಲಭವಾಗಿ ವಿನೋದ ಭೂಯಿಷ್ಠವಾಗುವಂತೆ ಸಂದರ್ಭಗಳನ್ನು ಜೋಡಿಸಿರುವದರಿಂದ ಠಾಕೂರ, ಮೋಲಿಯರ್ ಇತ್ಯಾದಿಗಳ ಚಿಕ್ಕ ನಾಟಕಗಳೊಡನೆ ಹೋಲಿಸಬಹುದು.

ಇವನ ಒಂದಂಕ ನಾಟಕಗಳನ್ನು ಪರಿಶೀಲಿಸಿದರೆ ಅವನು ಕುರುಪಾಂಡವರ ಯುದ್ಧದ ಅನಾಹುತವನ್ನು ಚೆನ್ನಾಗಿಯೇ ಮನಗಂಡಿದ್ದಾನೆಂದೆನ್ನಬಹುದು. ಪಂಚರಾತ್ರದಲ್ಲಿ ದುರ್ಯೋಧನನನ್ನು ಶಾಂತಿಪ್ರಿಯನಾದ ರಾಜನನ್ನಾಗಿ ಚಿತ್ರಿಸುವಾಗ ಹೇಗೆ ಕರ್ಣ ದುಃಶಾಸನರು ದುರ್ಯೋಧನನ ಮನಸ್ಸಿನ ಮೇಲೆ ತಮ್ಮ ಕೆಟ್ಟ ಪ್ರಭಾವವನ್ನು ಬೀರಿರುವರೆಂಬುದನ್ನು ನಾವು ಕಾಣುತ್ತೇವೆ. ಕುಟಿಲನಾದ ಶಕುನಿಯೂ ತನ್ನ ಕೌಟಿಲ್ಯವನ್ನು ಪ್ರದರ್ಶಿಸುತ್ತಾನೆ. ಭಾಸನ ಮನಸ್ಸಿನಲ್ಲಿದ್ದ ಹಲವಾರು ಭಾವನೆಗಳನ್ನು ಚೆನ್ನಾಗಿ ತಿಳಿದರೇನೇ ನಾವು ಅವನ ನಾಟಕಗಳ ರಸಾಸ್ವಾದನೆ ಮಾಡಬಲ್ಲೆವು. ಪಂಚರಾತ್ರ ಪ್ರಥಮಾಂಕದ 37 ನೆಯ ಶ್ಲೋಕದಲ್ಲಿ ಭಾಸನು ದುರ್ಯೋಧನನನ್ನೇ 105 (ಕೌರವರು 100, ಪಾಂಡವ

ರೈವರು) ಜನ ಸಹೋದರರಲ್ಲಿ ಜ್ಯೇಷ್ಠನೆಂದು ಭಾವಿಸಿದುದಾಗಿ ನಾವು ತಿಳಿಯು ತ್ತೇವೆ. ಇದೇ ಮಹಾಭಾರತದಿಂದ ಅತಿ ಮುಖ್ಯವಾದ ಬದಲಾವಣೆ, ಯುಧಿಷ್ಠಿರನೇ ಜ್ಯೇಷ್ಠ ದುರ್ಯೋಧನ ಭೀಮರೀರ್ವರೂ ಒಂದೇ ದಿನ ಜನಿಸಿ ದ್ದೆಂದೂ ವ್ಯಾಸರ ಕಥೆ. ಅವರ ಪ್ರಕಾರ ಧೃತರಾಷ್ಟ್ರನಿಗೆ ಯಾವಾಗಲೂ ಮನಸ್ಸಿನಲ್ಲಿ ತನ್ನ ಮಗನಿಗೆ ಯುಧಿಷ್ಠಿರನ ನಂತರವಾದರೂ ರಾಜ್ಯಾರ್ಹತೆಯು ಬರಬೇಕೆಂಬುದೊಂದೇ ಚಿಂತೆಯಾಗಿತ್ತು. ಆದಕ್ಕೋಸ್ಕರ ಅವನು ಭೀಮನು ದುರ್ಯೋಧನನು ಹುಟ್ಟಿದ ಕೆಲವು ದಿನಗಳ ಅನಂತರವೇ ಹುಟ್ಟಿದನೆಂಬುದನ್ನಾ ಗಾಗ್ಯೆ ಮಂತ್ರದಂತೆ ಜಪಿಸುತ್ತಿದ್ದನೆಂಬುದು ಅಲ್ಲಲ್ಲಿ ಭಾರತದಲ್ಲಿ ನಮಗೆ ಗೊತ್ತಾ ಗುತ್ತದೆ. ಭಾಸನಿಗಾದರೋ ಧರ್ಮಶಾಸ್ತ್ರಗಳ ನಿಯಮಗಳನ್ನೇ ಪರಿಶೀಲಿಸಿ ಜ್ಯೇಷ್ಠನಿಗೇ ರಾಜ್ಯ ಸಲ್ಲಬೇಕೆಂದು ನಿಯಮವು ಮನದಟ್ಟಾಗಿ ಬಿಟ್ಟಿತ್ತು. ಪ್ರಾಚೀನ ಗ್ರೀಸ್, ರೋಮ್, ಭಾರತ ಇತ್ಯಾದಿ ದೇಶಗಳಲ್ಲಿ ಕುಟುಂಬದ ಹಿರಿಯಣ್ಣನಿಗೇ ಯಾಜಮಾನ್ಯವನ್ನೊಪ್ಪಿಸುವ ರೂಢಿಯಿತ್ತು. ಆತನನ್ನು Pater familias ಎಂದು ಗೌರವಿಸುತ್ತಿದ್ದರು. ಮನುಸ್ಮೃತಿ IX 105. 'ಜ್ಯೇಷ್ಠ ಏವ ತು ಗೃಹ್ಣೀಯಾತ್ ಪಿತ್ರ್ಯಂ ಧನಮಶೇಷತಃ। ಶೇಷಾಸ್ತಮುಪಜೀವೇಯುಃ ಯಥೈವ ಪಿತರಂ ತಥಾ ॥' ಅರ್ಥಾತ್ ಹಿರಿ ಯಣ್ಣನೇ ಕುಟುಂಬದ ಆಸ್ತಿಗೆ ಸರ್ವಾಧಿಕಾರಿ. ಆತನನ್ನೇ ತಮ್ಮಂದಿರೆಲ್ಲಾ ತಂದೆಯಂತೆ ಆದರಿಸಿ ಅವನನ್ನೇ ಹೊಂದಿಕೊಂಡಿರಬೇಕು. ಇದನ್ನು ತಿಳಿದ ಭಾಸನು ಬೇಕೆಂದೇ ಧೃತರಾಷ್ಟ್ರನ ಮನಸ್ಸಿನ ಚಿಂತೆಯನ್ನು ಸಂಪೂರ್ಣವಾಗಿ ಹೋಗಲಾಡಿಸುವರೆ ಮತ್ತು ದುರ್ಯೋಧನನ ಪಾತ್ರವನ್ನು ಉದಾತ್ತವಾಗಿ ಚಿತ್ರಿಸುವರೆ, ದುರ್ಯೋಧನನೇ ಹಿರಿಯಣ್ಣನು, ಯುಧಿಷ್ಠಿರನಿಗಿಂತಲೂ ಅವನೇ ಹಿರಿಯವನು, ಅಣ್ಣನಾದ ಧೃತರಾಷ್ಟ್ರನ ಮಗನಾದ್ದರಿಂದ ಸರ್ವಥಾ ರಾಜ ಪದವಿಗೆ ಯೋಗ್ಯನು, ಪಾಂಡವರು ತಾವೇ ಬೇರೆಯಾಗಿರಬಯಸಿದರೆ ಅದು ದುರ್ಯೋಧನನ ತಪ್ಪಲ್ಲ. ದುರ್ಯೋಧನನೇ ನಿಜವಾಗಿಯೂ ಅಷ್ಟಾದಶ(ಕೌರವರ 11+ ಪಾಂಡವರ 7) ಅಥವಾ 18 ಅಕ್ಷೌಹಿಣಿಗಳಿಗೂ ಅಧಿಪತಿ. (ಹೀಗೆ ಧೃತರಾಷ್ಟ್ರನೇ ಊರು ಭಂಗದಲ್ಲಿ ಮಗನನ್ನು ಕರೆದಿರುವನು). ಇದರಿಂದ ಭೀಷ್ಮ ದ್ರೋಣಾದಿಗಳಿಗೆ ಭೀಷ್ಮಪರ್ವದಲ್ಲಿ ವಾದಿಸಿದಂತೆ 'ಅರ್ಥಸ್ಯ ಪುರುಷೋದಾಸಃ ದಾಸಸ್ತ್ವರ್ಥೋ ನ ಕಸ್ಯಚಿತ್ । ಇತಿ ಸತ್ಯಂ ಮಹಾರಾಜ ಬದ್ಧೋ ಸ್ಮ್ಯರ್ಥೇನ ಕೌರವೈಃ ॥' (43-43 ಕುಂಭಕೋಣಪ್ರತಿ, ಎಂದು ಕೌರವರ ಉಪ್ಪನ್ನ ತಿಂದು ತಾವು ಅವರ ಪಕ್ಷದಲ್ಲಿಯೇ ಯುದ್ಧ ಮಾಡಬೇಕಾಗಿ ಬಂತೆಂದು ಅನಿರ್ವಾಹ ಪಕ್ಷವನ್ನವಲಂಬಿಸುವ ಕಷ್ಟವೇ ಬೇಡ. ಜ್ಯೇಷ್ಠನೇ ದುರ್ಯೋಧನ

ನಾದ್ದರಿಂದ ಅವರೆಲ್ಲರೂ ಅವನನ್ನಾಶ್ರಯಿಸುವದೇ ನ್ಯಾಯಸಮ್ಮತವೇ ಆಗಿಲ್ಲವೆ? ಬೌದ್ಧಜಾತಕವೊಂದರಲ್ಲಿಯೂ (Cowell-vol V ಪು. 320) ಇದೇ ಅಭಿಪ್ರಾಯದ ಶ್ಲೋಕವೊಂದು ಬಂದಿದೆ—ಮಾತಾ ಪಿತಾ ಚ ಭ್ರಾತಾ ಚ ಭಗಿನೀಜ್ಞಾತಿಬಾಂಧವಾಃ । ಸರ್ವೇ ಜ್ಯೇಷ್ಠಸ್ಯ ತೇ ಭಾರಾಃ ಏವಂ ಜಾನೀಹಿ ಭಾರತ ॥ ಅಂದರೆ ಜ್ಯೇಷ್ಠನೇ ಕುಟುಂಬದಲ್ಲಿ ಎಲ್ಲರ ಪೋಷಣೆಯನ್ನು ವಹಿಸಿಯೇ ತೀರಬೇಕು. ಈ ಜ್ಯೇಷ್ಠನು ತನ್ನ ಕರ್ತವ್ಯವನ್ನು ಮಾಡದೆ ತಮ್ಮಂದಿರನ್ನು ತಮ್ಮಷ್ಟಕ್ಕೇ ಬಿಟ್ಟುಬಿಟ್ಟರೆ ನ್ಯಾಯಾಧೀಶರಿಗೆ ಅವನನ್ನು ಜ್ಯೇಷ್ಠ ಪದವಿಯಿಂದ ತಳ್ಳಿಸುವವರೆಗೂ ಅಧಿಕಾರವಿತ್ತಂತೆ. ಯೋ ಜ್ಯೇಷ್ಠೋ ವಿನಿ ಕುರ್ವೀತ ಸರ್ವಾನ್ ಭ್ರಾತೄನ್ ಯವೀಯಸಃ। ಸೋಽ ಜ್ಯೇಷ್ಠಃ ಸ್ಯಾದಭಾಗಶ್ಚ ನಿಯಂತವ್ಯಶ್ಚ ರಾಜಭಿಃ ॥ ಮನು IX 213. ಭಾಸನ ದುರ್ಯೋಧನ ನಾದರೋ ತನ್ನ ಕರ್ತವ್ಯ ನಿಷ್ಠೆಯಲ್ಲಿನ್ನೂ ಒಂದು ಹೆಜ್ಜೆ ಮುಂದುವರಿದು ಧರ್ಮಶಾಸ್ತ್ರ ವಿವೇಚನವನ್ನು ಸಂಪೂರ್ಣವಾಗಿ ಮನಗಂಡವನಂತೆ ತನ್ನ ಚಿಕ್ಕಪ್ಪನಿಗೆ ಋಷಿಶಾಪ ಬಂದುದರಿಂದ ಪಾಂಡವರಿಗೆ ಅವನು ತಂದೆಯೇ ಅಲ್ಲ ವೆಂದೂ ಅವರೆಲ್ಲರೂ ದೇವತೆಗಳ ಪುತ್ರರೆಂದೂ ವಾದಿಸುವನು (ದೂತವಾಕ್ಯ 21 ಶ್ಲೋಕ). ಬಹಿರಂಗದಲ್ಲಿ ಶಕುನ್ಯಾದಿಗಳ ಪ್ರಭಾವದಿಂದಲೋ ಏನೋ ಇಷ್ಟು ನಿಷ್ಠುರನಾಗಿದ್ದರೂ ಅವನ (ಭಾಸನ ದುರ್ಯೋಧನನ) ಅಂತರಂಗ ಕರುಣಾ ಪೂರ್ಣವೇ ಆಗಿತ್ತೆಂಬುದಕ್ಕೆ ಪಂಚರಾತ್ರ III 4ರಲ್ಲಿ ಅಭಿಮನ್ಯುವು ತಮ್ಮ ಪಕ್ಷದಲ್ಲಿ ಹೆಣಗಾಡಿ ಸೆರೆಯಾಳಾದ ಅನಂತರ ಹೇಳಿದ ಮಾತೇ ಸಾಕ್ಷ್ಯವಾಗಿದೆ. ಅಥ ಮ ಮ ಸ ತು ಪುತ್ರಃ ಪಾಂಡವಾನಾಂ ತು ಪಶ್ಚಾತ್ । ಸತಿ ಚ ಕುಲ ವಿರೋಧೇ ನಾಪರಾಧ್ಯಂತಿ ಬಾಲಾಃ ॥ ಅರ್ಥಾತ್ ಅವನು ಪಾಂಡವ ಪುತ್ರ ನಾಗಿದ್ದರೂ ಈ ಮೊದಲು ನನ್ನ ಮಗನೇ ಅಲ್ಲವೇ ? ನಮ್ಮ ನಮ್ಮ ಕುಲ ವಿರೋಧವೆಂಬುದು ದೊಡ್ಡವರ ಮಾತು. ಚಿಕ್ಕ ಹುಡುಗರಾದ್ದದರಲ್ಲಿ ತಪ್ಪೇನಿದೆ? ಹೀಗೆಯೇ ಶಕುನ್ಯಾದಿಗಳೆಲ್ಲರೂ ಸತ್ತ ಅನಂತರ ತಾನೊಬ್ಬನೇ ತೊಡೆ ಮುರಿದು ಬಿದ್ದಾಗ ತನ್ನ ಮಗನನ್ನು ಕುರಿತು ಉಪದೇಶಿಸುವ ವಾಕ್ಯವಂತೂ ನಮ್ಮ ಹೃದಯವನ್ನೇ ಬಿಚ್ಚಿಸುವಂತಿದೆ. "ಸ್ಪೃಷ್ಟ್ವಾ ಚೈವ ಯುಧಿಷ್ಠಿರಸ್ಯ ವಿಪುಲಂ ಕ್ಷೌಮಾಪಸವ್ಯಂ ಭುಜಂ । ದೇಯಂ ಪಾಂಡುಸುತೈಸ್ತ್ವಯಾ ಮಮ ಸಮಂ ನಾಮಾವಸಾನೇ ಜಲಂ" ಅರ್ಥಾತ್ ಆಮರಣೋನ್ಮುಖನಾಗಿದ್ದ ದುರ್ಯೋಧ ನನು ಪಾಂಡವರನ್ನು **ಪರಾತ್ಮಜ**ರೆಂದು ಭಾವಿಸದೆ, ಯುಧಿಷ್ಠಿರನ ನೇತೃತ್ವದಲ್ಲಿ ತನಗೆ ಪಿತೃತರ್ಪಣವನ್ನು ಕೊಡುವರೆ ಮಗನಿಗೆ ಹೇಳುವನು. ಇದೇ ದುರ್ಯೋಧ

ನನು ಅದೇ ಸಂದರ್ಭದಲ್ಲಿ ಪಾಂಡವರನ್ನು ನಾಶಮಾಡಬಾರದೆಂದು ಬಲರಾಮ ನನ್ನು ಅಂಗಲಾಚಿ ಬೇಡುವ ಸನ್ನಿವೇಶವನ್ನು ಕಂಡು ನಾವು ಚಕಿತರಾಗುತ್ತೇವೆ. ಇದು ಮಾತ್ರವಲ್ಲ. ಸ್ವಲ್ಪ ತಡೆದು ಅಶ್ವತ್ಥಾಮನು ಪಾಂಡವರನ್ನು ಕೊಲ್ಲುವೆ ನೆಂದು ಹೇಳುವಾಗಲೂ ದುರ್ಯೋಧನನು ಅದು ಸರ್ವಥಾ ಕೂಡದೆಂದು ನಿಷೇಧಿಸಿಯೇ ಬಿಡುತ್ತಾನೆ. ಪಿಶುನರ ಪ್ರಭಾವಕ್ಕೆ ದುರ್ಯೋಧನನೊಳಗಾಗಿ ಕೆಟ್ಟನೆಂಬುದು ಇದರಿಂದ ಖಚಿತವಾಗುತ್ತದೆ.

ಈ ದುರ್ಯೋಧನನು ಪಂಚರಾತ್ರದ ಆರಂಭದಲ್ಲಿ ಒಂದು ಯಜ್ಞವನ್ನಾ ರಂಭಿಸುವನು. ಈ ಯಜ್ಞದ ಸುದ್ದಿ ಭಾರತದಲ್ಲಿಲ್ಲ. ಪಾಂಡವ ಪಕ್ಷಪಾತಿ ಯಾದ ದ್ರೋಣನ ಮನಸ್ಸನ್ನು ಹೇಗಾದರೂ ಸಂಪೂರ್ಣವಾಗಿ ತನ್ನ ಕಡೆಗೇ ತಿರುಗಿಸಿಕೊಳ್ಳಬೇಕೆಂಬ ಆಶೆಯಿಂದ ಈ ಯಜ್ಞದಲ್ಲಿ ದುರ್ಯೋಧನನು ಪ್ರವೃತ್ತ ನಾದುದು. ಹೆಚ್ಚೇಕೆ? ಉತ್ತರ ಗೋಗ್ರಹಣ, ಉತ್ತರಾವಿವಾಹ ಇವೆರಡು ಸಂದರ್ಭ ಗಳನ್ನು ಬಿಟ್ಟರೆ ಉಳಿದವುಗಳೆಲ್ಲಾ ಭಾಸನ ಕಪೋಲ ಕಲ್ಪಿತಗಳೆಂದೇ ಹೇಳ ಬೇಕಾಗಿದೆ. ಈ ಪಂಚರಾತ್ರ ಯಜ್ಞಾಂತ್ಯದಲ್ಲಿ ದುರ್ಯೋಧನನು ದ್ರೋಣರ ಹತ್ತಿರ ಬಂದು ಅವರು ಹೇಳಿದುದನ್ನು ಗುರುದಕ್ಷಿಣೆಯಾಗಿ ಕೊಡಲಿಚ್ಛಿಸುವೆ ನೆಂದು ಹೇಳಿದಾಗ ಅವರು ಹಿಂದು ಮುಂದೆ ನೋಡದೆ "ಯೇಷಾಂ ಗತಿಃ ಕ್ವಾಪಿ ನಿರಾಶ್ರಯಾಣಾಂ ಸಂವತ್ಸರೈಃ ದ್ವಾದಶಭಿಃ ನ ದೃಷ್ಟಾ | ತೇಷಾಂ ವಿಭಾಗಂ ಕುರು ಪಾಂಡವಾನಾಂ ಏಷಾ ಚ ಭಿಕ್ಷಾ ಮಮದಕ್ಷಿಣಾ ಚ ||" ಪಾಂಡವರಿಗೆ ಅರ್ಧರಾಜ್ಯವನ್ನು ಕೊಡೆಂದು ಕೇಳುವರು. ಆಗ ದುರ್ಯೋಧನನೇನೂ ತೋಚದೆ ಮಾವ ಶಕುನಿಯೊಡನೆ 'ಅವರಿಗೆ ಸಲ್ಲತಕ್ಕ ಪಾಲನ್ನು ಕೊಟ್ಟುಬಿಡಬಾರ ದೇಕೆ ?' ಎಂದಾಲೋಚನೆ ಕೇಳುವನು. ಯಾವದಾದರೂ ಬಂಜೆ ಭೂಮಿ ಯನ್ನೋ ಮರಳು ಪ್ರದೇಶವನ್ನೋ ಹುಡುಕಿ ಅವರಿಗೆ ಕೊಟ್ಟರಾಗದೇ ಎಂದು ಮಾವ, ದುಃಶಾಸನ, ಕರ್ಣರ ಮುಖವನ್ನು ನೋಡಿದಾಗ ಅವರು 'ಪಾಲು ಕೊಡುವ ವಿಷಯ ನಮ್ಮನ್ನು ಸಂಬಂಧಿಸಿದುದಲ್ಲ. ಅದು ನಿನ್ನ ಇಷ್ಟ. ಯುದ್ಧ ದಲ್ಲಿ ನಿನಗೆ ಆಮರಣಾಂತವಾಗಿ ಸಹಾಯಮಾಡುವದು ಮಾತ್ರ ನಮ್ಮ ಕರ್ತವ್ಯ ವೆಂದು ನಮಗೆ ಗೊತ್ತಿದೆ. ಯಾವ ತರದ ಅಪ್ರಯೋಜಕವಾದ ಭೂಮಿ ಯನ್ನು ಪಾಂಡವರಿಗೆ ಕೊಟ್ಟರೂ ಅದನ್ನೇ ಅವರು ಉತ್ತಮೋತ್ತಮವಾದ ಭೂಮಿಯನ್ನಾಗಿ ಮಾರ್ಪಡಿಸಿಯಾರೆಂಬುದನ್ನು ಮಾತ್ರ ಒತ್ತಿ ಹೇಳಬಯಸು ತ್ತೇವಷ್ಟೆ' ಎಂದು ಹೇಳಿ ಸುಮ್ಮನಾಗುವರು. ಚಕ್ರವರ್ತಿಯ ಯಜ್ಞವನ್ನು ನೆರವೇರಿಸುವ ಸಂದರ್ಭದಲ್ಲಿ ಸಾಮಂತರಾಜರೆಲ್ಲರೂ ಕಪ್ಪಕಾಣಿಕೆಯನ್ನು ಸಲ್ಲಿಸಿ ಅಭಿನಂದಿಸುವ ವಾಡಿಕೆ ಆಗಿನ ಕಾಲದಲ್ಲಿತ್ತು. (ಯುಧಿಷ್ಠಿರನ ರಾಜಸೂಯ

ಯಾಗದಲ್ಲಿ ಎಲ್ಲರು ಯುಧಿಷ್ಠಿರನಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸಿದಂತೆ) ಸಾಮಂತ ರಾಜರು ಬಾರದಿದ್ದರೆ ಅಥವಾ ತಮ್ಮ ಪ್ರತಿನಿಧಿಗಳನ್ನಾದರೂ ಕಳುಹಿಸದಿದ್ದರೆ ಅದೂ ಚಕ್ರವರ್ತಿಗೆ ಅಪಮಾನ ಮಾಡಿದಂತೆ ಆಗುತ್ತಿತ್ತು. ಹೀಗಾಗಿ ಶ್ರೀಕೃಷ್ಣನು ಸ್ವತಹ ಬಾರದೆ ತನ್ನ ಅಳಿಯನಾದ ಅಭಿಮನ್ಯುವನ್ನು ಕಳುಹಿಸಿದ್ದನಂತೆ. ಉಳಿದ ರಾಜರೆಲ್ಲರೂ ತಾವೇ ಸ್ವತಹ ಬಾರದಿದ್ದರೂ ತಮ್ಮ ತಮ್ಮ ಪ್ರತಿನಿಧಿಗಳನ್ನು ಕಪ್ಪಕಾಣಿಕೆಗಳೊಡನೆ ಕಳುಹಿಸಿ ದುರ್ಯೋಧನನನ್ನು ಅಭಿನಂದಿಸಿದಾಗ, ವಿರಾಟರಾಜನು ಮಾತ್ರ ಯಾರನ್ನು ಕಳುಹಿಸದೇನೇ ಇದ್ದದ್ದು ಅವಮಾನ ಮಾಡಿದಂತೆ ಟೀಕಿಸಲ್ಪಡುತ್ತಿತ್ತು. ಅವನು ಯಾಕೆ ಬರಲಿಲ್ಲವೆಂದೊಂದುಕಡೆ ಜಿಜ್ಞಾಸೆ; ಇನ್ನೊಂದೆಡೆ ದುರ್ಯೋಧನನು ತಾನು ದ್ರೋಣನಿಗೆ ಹೇಗೆ ಗುರುದಕ್ಷಿಣೆಯನ್ನು ಸಲ್ಲಿಸಲಿ ಎಂದು ಯೋಚಿಸುತ್ತಿರುವಾಗ ಥಟ್ಟನೆ ಶಕುನಿ ಪಾಂಡವರ ಕುರುಹು 5 ದಿನಗಳೊಳಗೆ ತಿಳಿದುಬಂದರೆ ತಾನೇ ಅವರಿಗೆ ಅರ್ಧರಾಜ್ಯವನ್ನು ಕೊಡಬಹುದಷ್ಟೆ (ಅಂದರೆ ಅವರು ಅಜ್ಞಾತವಾಸದ ಅವಧಿ ಮುಗಿಯದೆ 5 ರಾತ್ರಿಗಳೊಳಗಾಗಿ ತಮ್ಮ ಪರಿಚಯವನ್ನು ಕೊಡಲಾರದೆಂದವನಿಗೆ ಧೈರ್ಯ) ಎಂದು ಹೇಳಿದುದನ್ನೊಪ್ಪಿ ಗುರುದಕ್ಷಿಣೆಯನ್ನು ಸಲ್ಲಿಸಿಯೂ ಸಲ್ಲಿಸದಂತಾಗಬಹುದೆಂದು ದುರ್ಯೋಧನಸಂತೋಷದಿಂದ ಉಬ್ಬಲಾರಂಭಿಸಿದನು. ಆಗತಾನೇ ವಿರಾಟನ ದೂತನು ಬಂದು ತನ್ನ ರಾಜನು ಬಾರದಿರುವದಕ್ಕೆ ವಿರಾಟನ ಸೇನಾಧಿಪತಿಯಾದ ಕೀಚಕನನ್ನೂ ಅವನ ನೂರು ಮಂದಿ ತಮ್ಮಂದಿರಾದ ಉಪಕೀಚಕರನ್ನೂ ಯಾರೋ ಕೊಂದುಹಾಕಿ ರಾಜ್ಯದಲ್ಲಿ ದೊಡ್ಡದೊಂದು ಗಲಭೆಯೆದ್ದುದರಿಂದ ಅವರಲ್ಲಿಂದ ಪ್ರತಿನಿಧಿಗಳಾರೂ ಬರಲಾಗದೇಹೋಯಿತೆಂದೂ ವಿವರಿಸುವನು. ಇದನ್ನು ಕೇಳಿದೊಡನೆ ಭೀಷ್ಮನು ಭೀಮನ ಕೆಲಸವೆಂದೇ ನಿರ್ಧರಿಸಿ ದ್ರೋಣಾಚಾರ್ಯರ ಕಿವಿಯಲ್ಲಿ—"ಐದು ರಾತ್ರಿಯ ಅಭಿಸಂಧಿಯನ್ನೊಪ್ಪಿಕೊಳ್ಳಿ. ಪಾಂಡವರು ವಿರಾಟ ನಗರದಲ್ಲಿಯೇ ಇರುವಂತಿದೆ" ಎಂದು ಹುರಿದುಂಬಿಸುವನು. ದ್ರೋಣನು ಹಾಗೆಯೇ ಒಪ್ಪಿ, ಕರ್ಣ ಶಕುನ್ಯಾದಿಗಳೂ ತಲೆದೂಗಲು, ಭೀಷ್ಮನಪ್ಪಣೆಯಲ್ಲಿಯೇ ಸಿಲ್ಲಿಸದೆ ವಿರಾಟನು ಪ್ರತಿನಿಧಿಗಳನ್ನು ಕಳುಹಿಸದೆ ಚಕ್ರವರ್ತಿಯನ್ನವಮಾನಿಸಿದ್ದಾಯಿತೆಂದು ವಾದಿಸಿ, ಅವನ ಗೋಗ್ರಹಣಕ್ಕೆ ಆಗಲೇ ಹೊರಡಬೇಕೆಂದು ಹಟ ತೊಡುವನು. ಇದಕ್ಕೆಲ್ಲರೂ ಸಮ್ಮತಿಸಲು, ಅಭಿಮನ್ಯುವನ್ನು ಕರೆದುಕೊಂಡು ಭೀಷ್ಮಾದಿಗಳ ನೇತೃತ್ವದಲ್ಲಿ ಎಲ್ಲರೂ ವಿರಾಟನ ಗೋಗಳನ್ನೆಲ್ಲಾ ಅಪಹರಿಸಲು ಹೊರಟರೆಂಬಲ್ಲಿಗೆ ಮೊದಲನೆಯಂಕದ ಕಥೆಯು ಮುಗಿಯುವದು.

ಎರಡನೆ ಅಂಕದ ಕಥೆಯು ಆರಂಭವಾಗುವಾಗ ಉತ್ತರನ ಸಾರಥ್ಯದಲ್ಲಿ ಬೃಹನ್ನಳೆಯು (=ಅರ್ಜುನನು) ಗೋಗಳನ್ನು ರಕ್ಷಿಸುವುದಕ್ಕೋಸ್ಕರ ಹೊರಟ ನೆಂದು ತಿಳಿಯುತ್ತೇವೆ. ಅರ್ಜುನನು ಮೊದಲು ಶ್ಮಶಾನದಲ್ಲಿದ್ದ ತನ್ನ ಗಾಂಡೀವ ವನ್ನು ತೆಗೆದುಕೊಂಡು, ಉತ್ತರನನ್ನು ಹೇಗಾದರೂ ಮಾಡಿ ಬಹಳ ಕಷ್ಟದಿಂದ ಸಾರಥ್ಯಕ್ಕೆ ನಿಯಮಿಸಿಕೊಂಡು, ಭೀಷ್ಮಾದಿಗಳನ್ನೆಲ್ಲಾ ಗೆದ್ದು, ಅಪಹರಿಸಲ್ಪಟ್ಟ ಧನಗಳನ್ನು ಬಿಡಿಸಿಕೊಂಡು ಬರುತ್ತಾನೆ. ಉತ್ತರನೇ ಆಪದ್ರಕ್ಷಕನೆಂದೆಲ್ಲರೂ ಚಕಿತರಾಗಿದ್ದಾಗ, ಇನ್ನೊಂದೆಡೆ ಭೀಮಸೇನನು ವಲಲಭಟ್ಟನ ವೇಷದಲ್ಲಿ ಬರೀ ಕೈಗಳಿಂದಲೇ ಕೌರವರ ಸೈನ್ಯಗಳನ್ನೆಲ್ಲಾ ಹಣ್ಣುಮಾಡಿ, ಅಭಿಮನ್ಯುವಿನ ರಥ ವನ್ನಪ್ಪಳಿಸಿ (ಅಭಿಮನ್ಯುವಿಗೆ ತನ್ನ ದೊಡ್ಡಪ್ಪನೆಂದು ಸಂದೇಹ ಕೂಡಾ ಇರಲಿಲ್ಲ) ಅಭಿಮನ್ಯುವನ್ನು ದೊಡ್ಡ ಹದ್ದು ಮೀನಿನ ಕುಕ್ಕೆಯೊಳಗಿನ ಮೀನನ್ನೆತ್ತುವಂತೆ ಎತ್ತಿ, ಅವನನ್ನು ಸೆರೆಹಿಡಿದುಕೊಂಡು ವಿರಾಟನಗರ ಪ್ರವೇಶಮಾಡುವನು. ಹಾದಿಯಲ್ಲಿ ದಿಗ್ಭ್ರಮೆಯಾಗಿದ್ದ ಅಭಿಮನ್ಯುವನ್ನು ಏಕವಚನದಲ್ಲಿ ಸಂಬೋಧಿಸಿ, (ನೀಚರಾದವರು ಹೀಗೆ ಉತ್ತಮರಾದವರನ್ನು ಸಂಬೋಧಿಸುವಷ್ಟು ಹೀನಯಿಸು ವದು ಮತ್ತೊಂದಿಲ್ಲ.) ಕೃಷ್ಣನನ್ನೂ ಸುಭದ್ರೆಯನ್ನೂ ಏಕವಚನದಲ್ಲಿಯೇ ವಿಚಾರಿಸಿ, ಅವರ ಕುಶಲ ಪ್ರಶ್ನವನ್ನು ಮಾಡಲು, ಕೋಪದಿಂದ ಕುದಿಯುವ ಅಭಿಮನ್ಯುವು ಉತ್ತರವನ್ನು ಕೊಡದೇ ಸುಮ್ಮನಿದ್ದುಬಿಡುವನು. ಮೊದಲೇ ಸಭೆಯನ್ನು ಪ್ರವೇಶಿಸಿದ ಉತ್ತರನು ತನ್ನನ್ನೆಲ್ಲರೂ ಕೌರವನನ್ನು ಗೆದ್ದವನೆಂದಭಿ ನಂದಿಸಲು ನಾಚಿಕೆಯಿಂದ ಬೃಹನ್ನಲಾ ವೇಷದಲ್ಲಿದ್ದವನೇ ಗಾಂಡೀವವನ್ನು ಧರಿಸಿ ಕೌರವರನ್ನು ಗೆದ್ದ ಅರ್ಜುನನೆಂದು ವಿವರಿಸುವನು. ಆಗಲೇ ಅಭಿಮನ್ಯು ವನ್ನೆತ್ತಿ ಭೀಮನೂ ಪ್ರವೇಶಿಸಲು, ಅವನು ಉದ್ಧಟನಾಗಿ ಬ್ರಾಹ್ಮಣವೇಷ ಧಾರಿಯಾದ ಯುಧಿಷ್ಠಿರನನ್ನು ಮಾತ್ರ ವಂದಿಸಿ, ಸುಮ್ಮನಾಗುವನು. ಎಲ್ಲರೂ ವಿಸ್ಮಯಾವಿಷ್ಟರಾಗಿದ್ದಾಗ ಉತ್ತರನು ಅರ್ಜುನನನ್ನು ಮಾತ್ರ ಸಭೆಯವರಿಗೆ ಪ್ರಶಂಸಿಸಲು, ಅರ್ಜುನನು ಯುಧಿಷ್ಠಿರ ಭೀಮರ ಪರಿಚಯವನ್ನು ಮಾಡಿ ಕೊಡುವನು. ವಿರಾಟನು ತನ್ನ ಸ್ಥಾನಮಾನಗಳನ್ನು ಕಾಪಾಡಿಕೊಟ್ಟ ಅರ್ಜುನ ನಿಗೆ ವಿಜಯಶುಲ್ಕವಾಗಿ ಮಗಳಾದ ಉತ್ತರೆಯನ್ನು ಸ್ವೀಕರಿಸಬೇಕೆಂದು ಕೃತಜ್ಞತೆ ಯಿಂದ ತುಳುಕುತ್ತಾ ಬೇಡಿಕೊಳ್ಳುವನು. ಅರ್ಜುನನು ಅಭಿಮನ್ಯುವನ್ನಾಗಲೇ ಅಲ್ಲಿಯೇ ಕಂಡು ಅವನಿಗೋಸ್ಕರವಾಗಿ ಸೊಸೆಯಾಗಿ ಪರಿಗ್ರಹಿಸುವದಾಗಿ ಒಪ್ಪುವನು. ವಿವಾಹವೆಲ್ಲಿ ನೆರವೇರಬೇಕೆಂಬ ಪ್ರಶ್ನೆಯು ಮೂಡಲು ಉತ್ತರ ನನ್ನು ಯುಧಿಷ್ಠಿರನು ಕೌರವರಿಗೆ ದೂತನಾಗಿ ಕಳುಹಿಸಿ, ಅವರ ಮುಖಾಂತರವೇ

ಈ ಉತ್ತರವು ದೊರಕಲಿ ಎಂದು ಸಲಹೆಯನ್ನು ಕೊಡುವನು. ಇದೀಗ ಎರಡ ನೆಯ ಅಂಕದ ಕಥೆ.

ಇನ್ನು ಹಸ್ತಿನಾವತಿಯಲ್ಲಿ ಪ್ರಾಣಾಪತ್ತಿಗೆ ಸಿಕ್ಕಿದ್ದ ಭೀಷ್ಮ ದ್ರೋಣಾದಿಗಳು ಹೇಗೋ ಬದುಕಿದೆವೆಂದು ಅಸ್ತವ್ಯಸ್ತವಾಗಿ ಓಡಿಬಂದ ಅನಂತರ ಪ್ರಧಾನ ಜನರ ವರದಿಯನ್ನು ಕಂಡಾಗ, ಅಭಿಮನ್ಯುವನ್ನೊಬ್ಬನನ್ನಲ್ಲಿಯೇ ಬಿಟ್ಟು ಬರ ಬೇಕಾಯಿತಲ್ಲಾ ಎಂದು ಉದ್ಗಾರ ತೆಗೆದರು. ಆಗ ತಾನೇ ವಿಷಯವನ್ನರಿತು ದುರ್ಯೋಧನನು 'ಅಭಿಮನ್ಯು ನಮ್ಮ ಕಡೆಯಿಂದ ಹೋಗಿದ್ದರಿಂದಲೂ, ಒಂದು ಕುಟುಂಬದಲ್ಲಿ ದೊಡ್ಡವರ ಜಗಳವಿದ್ದರೂ, ಚಿಕ್ಕ ಮಕ್ಕಳ ತಪ್ಪಿಲ್ಲದ್ದರಿಂದಲೂ, ಅವನು ಈಗ ನನ್ನ ಮಗನಲ್ಲವೇ ? ಅವನನ್ನು ಸೆರೆಹಿಡಿಯಲು ಬಿಟ್ಟ ನಮ್ಮ ಮೇಲೆ ಧಿಕ್ಕಾರವಿರಲಿ !' ಎಂದು ಅಳುವನು. ಕರ್ಣ ಶಕುನಿಗಳು 'ಅವನು ನಮ್ಮ ವೈರಿಯಾದ ಅರ್ಜುನನ ಮಗನಲ್ಲವೇ' ಎಂದು ಎಷ್ಟು ಸಂತೈಸಿದರೂ ಅವನ ದುಃಖವು ಶಾಂತವಾಗುವುದಿಲ್ಲ. ಹೀಗೆ ಒಂದು ಕಡೆ ಮಾತು ಸಾಗಿದಾಗ ಅವರಲ್ಲಿಯೇ ಕೆಲವರು 'ಅರ್ಜುನನ ಬಾಣಗಳಿಂದಲ್ಲವೇ ನಾವು ಬೆದರಿ ಓಡಿದ್ದು' ಅಂದಾಗ ಶಕುನಿಯು 'ಏನು ! ಎಲ್ಲಿ ಕಂಡರೂ ಸಾಹಸ ಕಾರ್ಯವನ್ನು ಮಾಡುವವರೆಂದರೆ ನಿಮ್ಮ ಅಭಿಪ್ರಾಯದ ಪ್ರಕಾರ ಪಾಂಡವರೆಂದೇ ತೋರು ತ್ತದೊ?' ಎಂದವರನ್ನು ಹಳಿಯಲಾರಂಭಿಸಿದನು. ಆಗ ಸೈನಿಕನೊಬ್ಬನು ಅರ್ಜುನನ ನಾಮಾಂಕಿತವಾದ ಬಾಣವನ್ನು ತೋರಿಸಲು, ಅದರಲ್ಲಿಯ ಅಕ್ಷರ ವನ್ನು ಮುದುಕನಾದ ಭೀಷ್ಮನು ಸ್ವತಹಾ ಓದಿದರೂ ಏನೂ ತಿಳಿಯದವನಂತೆ 'ಅಪ್ಪಾ ಶಕುನಿಯೇ ! ನನ್ನ ಕಣ್ಣಿಗೆ ಸರಿಯಾಗಿ ಕಾಣದು, ಸ್ವಲ್ಪ ಓದು' ಎಂದು ಕೊಡಲು ಅಲ್ಲಿಯೂ ಅರ್ಜುನನ ಹೆಸರನ್ನೇ ಕಂಡು ಜುಗುಪ್ಸೆಯಿಂದ ಅದನ್ನು ಬಿಸಾಡುವನು. ಆದರೂ ಅಡಿಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬ ಗಾದೆಯಂತೆ ಇನ್ನೊಬ್ಬ ಅರ್ಜುನನೆಂಬ ಹೆಸರಿನವನಿರಬಾರದೇಕೆಂದು ವಾದಿಸುವಾಗ ಸರಿಯಾಗಿ ಉತ್ತರನು ಪ್ರವೇಶಿಸುವನು. ಆಗ ಅವನು ವಿರಾಟನ ದೂತನಿರ ಬಹುದೆಂದು ಯೋಚಿಸುವಾಗ ಆತನೇ ತಾನು ಯುಧಿಷ್ಠಿರನ ದೂತನೆಂದೂ, ಉತ್ತರೆಯ ವಿವಾಹವು ಹಸ್ತಿನಾವತಿಯಲ್ಲಿ ನಡೆಸುವದೋ,ವಿರಾಟನಗರದಲ್ಲಿಯೋ ಎಂದು ಆ ಧರ್ಮರಾಜನು ಕೇಳಿದುದಾಗಿ ತಿಳಿಸುವನು. ಶಕುನಿಯೇ ಮೊದ ಲಾದವರು 'ಅಲ್ಲಿಯೇ ನಡೆಯಲಿ' ಎಂದು ಕೂಗಿದರೂ, ದ್ರೋಣನು 'ಪಾಂಡವರ ಕುರುಹು ಐದು ರಾತ್ರಿಯೊಳಗೆ ತಿಳಿದು ಬಂತಲ್ಲಾ ! ಇನ್ನು ಅವರಿಗೆ ಅರ್ಧರಾಜ್ಯ ವನ್ನು ಕೊಡುವುದರಲ್ಲೇನು ಅಭ್ಯಂತರ'ಎಂದು ಗುರುದಕ್ಷಿಣೆಯನ್ನು ಯಾಚಿಸಲು

ದುರ್ಯೋಧನನು ಸಂತೋಷದಿಂದ ಕೊಟ್ಟೆನೆಂದೇ ಹೇಳಿ ಯುದ್ಧವನ್ನೇ ನಿಲ್ಲಿಸಿ ಬಿಡುವನು.

ಇನ್ನು ಐದು ಏಕಾಂಕ ನಾಟಕಗಳ ವಿಚಾರ. ಅವು ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತ ಘಟೋತ್ಕಚ, ಕರ್ಣಭಾರ ಮತ್ತು ಊರು ಭಂಗಗಳೆಂದು ಕ್ರಮದಲ್ಲಿ ಬಂದಿವೆ. ಇವುಗಳಲ್ಲಿ ದೂತವಾಕ್ಯ, ಕರ್ಣಭಾರ, ಊರುಭಂಗಗಳಿಗೆ ಸ್ವಲ್ಪ ಮಟ್ಟಿಗೆ ಭಾರತದ ಹಿನ್ನೆಲೆಯಿದ್ದರೂ ಅವುಗಳಲ್ಲಿ ಸಂನಿವೇಶಗಳೆಲ್ಲವೂ ನೂತನಗಳಾಗಿಯೇ ತೋರುತ್ತವೆ. ಮಧ್ಯಮ ವ್ಯಾಯೋಗ, ದೂತ ಘಟೋತ್ಕಚಗಳೆರಡರಲ್ಲಿಯ ಸನ್ನಿವೇಶಗಳಂತೂ ಪೂರಾ ಭಾಸನ ಕಪೋಲ ಕಲ್ಪಿತಗಳೇ.

ಮಧ್ಯಮ ವ್ಯಾಯೋಗದಲ್ಲಿ ತಮ್ಮಂದಿರಲ್ಲಿ ಮಧ್ಯಮನಾಗಿದ್ದವನಿಗೆ ಗೌತಮಾದಿ ಧರ್ಮಶಾಸ್ತ್ರಕಾರರು ಮಾಡಿದ ಅನ್ಯಾಯವನ್ನು ಎತ್ತಿ ತೋರಿಸು ವಂತಿದೆ. ಗೌತಮನ ಸೂತ್ರದ ಪ್ರಕಾರ ಹಿರಿಯಣ್ಣನು ಪಿತ್ರಾರ್ಜಿತ ಸೊತ್ತು ಗಳಲ್ಲಿ ಉತ್ತಮವಾದುವುಗಳನ್ನೆಲ್ಲಾ ಸ್ವೀಕರಿಸಿದ ನಂತರವೂ, ಕನಿಷ್ಠನುಳಿದ ವಸ್ತುಗಳಲ್ಲಿ ತನಗೆ ಬೇಕಾದವುಗಳನ್ನೆಲ್ಲಾ ಸ್ವೀಕರಿಸಿ, ಆಮೇಲೆ ಯಾವುದಕ್ಕೂ ಬೇಡವಾದ ಸಾಮಾನುಗಳನ್ನೆಂದರೆ ಬಾಲವಿಲ್ಲದ, ಕೋಡಿಲ್ಲದ, ಒಂದು ಕಣ್ಣಿಲ್ಲದ ಎತ್ತುಗಳನ್ನೋ ಇವುಗಳ ಸದೃಶಗಳಾದವುಗಳನ್ನೊ ಮಧ್ಯಮನು ಸ್ವೀಕರಿಸಿ ಕೊಂಡೇ ತೃಪ್ತನಾಗಬೇಕೆಂದು ವಿಧಿಸುವುದು ನ್ಯಾಯವೇ ಅಲ್ಲ ಎಂದು ಇದನ್ನು ನಿಂದಿಸುವನು. ಇಲ್ಲಿ ಭೀಮನೂ ಕುಂತಿಯ ಮಕ್ಕಳಲ್ಲಿ ಮಧ್ಯಮ, ಅವನ ಮಗ ಘಟೋತ್ಕಚ ಅಪ್ಪನ ಅನುಗ್ರಹದಿಂದ ಮಧ್ಯಮ, ಬ್ರಾಹ್ಮಣಪುತ್ರರಲ್ಲಿ ಮಧ್ಯಮ. ಹೀಗೆ ಮೂರು ಮಧ್ಯಮರು ಇಲ್ಲಿ ಸೇರಿ ನೂತನವಾದ ಒಂದು ಸನ್ನಿವೇಶವನ್ನೇ ಸೃಷ್ಟಿಸಿದಂತಿದೆ. ಇಲ್ಲಿ ಇನ್ನೊಂದು ವಿಶೇಷವೆಂದರೆ ಘಟೋತ್ಕಚನು ತಂದೆ ಯೆಂದು ತಿಳಿಯದೆ ಅವನೊಡನೆ ಹೋರಾಡಿ, ಅವನನ್ನೇ ತಾಯಿಯ ಪಾರಣೆ ಗಾಗಿ ತಾಯಿಯ ಹತ್ತಿರ ಕರೆದುಕೊಂಡು ಹೋದಾಗ ಸಂತೋಷದಿಂದ ತುಳುಕು ತ್ತಿದ್ದ ತಾಯಿಯು ತಾನೇ ಅವನ ಕಾಲಿಗೆರಗಿ ಮಗನನ್ನು ಎರಗುವಂತೆ ಆಜ್ಞಾಪಿಸಿ ದಾಗ, ಸಂತುಷ್ಟನಾದ ಭೀಮನು ಇನ್ನು ಮುಂದೆ ಬರಲಿರುವ ಯುದ್ಧದಲ್ಲಿ ಕುರುವಂಶದಾವಾಗ್ನಿಯಾದಾನೆಂದು ಘಟೋತ್ಕಚನನ್ನು ಆಲಂಗಿಸುವನು. ಭೀಮನ ಆಜ್ಞೆಯ ಪ್ರಕಾರ, ಗ್ರಾಮ್ಯವಾಗಿ ಸಂಭೋಗಕ್ಕೆ ಆಮಂತ್ರಿಸದೆ, ಹಿಡಿಂ ಬೆಯ ಆಮಂತ್ರಣವು ಅತಿ ಚಮತ್ಕಾರಜನಕವಾಗಿದೆ. ಇದೀಗ ಭೀಮನ ಆಜ್ಞೆ—ವಿಶೇಷತೋ ಮತ್ಸಮೀಪೇ ಮಾ ಪ್ರಕಾಶಯ ನೀಚತಾಂ। ಉತ್ತಮ ಸ್ತ್ರೀಗುಣೋಪೇತಾ ಭಜೇಥಾಃ ವರವರ್ಣಿನಿ ॥

ಇನ್ನು ದೂತ ಘಟೋತ್ಕಚದಲ್ಲಿ ಘಟೋತ್ಕಚನನ್ನು ಇನ್ನೂ ಹೃದಯಂಗಮವಾಗಿ ಚಿತ್ರಿಸಿಯದೆ. ಸಂಶಪ್ತಕ ವಧದಲ್ಲಿ ಬದ್ಧಮನಸ್ಕನಾಗಿ ಬಹುದೂರ ಅರ್ಜುನನು ಹೋಗಿದ್ದಾಗ, ಅಭಿಮನ್ಯುವನ್ನು ಅನೇಕ ಕೌರವ ಮಹಾರಥರೂ ಸೇರಿ, ಅವನ ಸಹಾಯಕ್ಕೆ ಬರುತ್ತಿದ್ದ ಭೀಮಸೇನನನ್ನು ಜಯದ್ರಥನೇ (ಈಶ್ವರ ಪ್ರಸಾದದಿಂದ) ತಡೆದು, ಏಕಾಕಿಯಾದ ಶಿಶುವನ್ನು ಅನ್ಯಾಯವಾಗಿ ದೊಡ್ಡವರೆಲ್ಲರೂ ಸೇರಿ ಕೊಂದ ಕಥೆಯೇನೋ ಮಹಾಭಾರತದ್ದೇ ಆಗಿದೆ. ಕಡೇಗೆ ವೃತ್ತಾಂತವು ತಿಳಿದ ಅನಂತರ 'ಮಾರನೆಯದಿನ ಅಸ್ತಮಾನದೊಳಗಾಗಿ ಜಯದ್ರಥನನ್ನು ಕೊಲ್ಲುವೆನು, ಇಲ್ಲದಿದ್ದರೆ ಅಗ್ನಿಪ್ರವೇಶಮಾಡಿ ಸಾಯುವೆನು' ಎಂಬ ಅರ್ಜುನನ ಘೋರಪ್ರತಿಜ್ಞೆಯೂ ಅದರ ಫಲವಾಗಿ ಜಯದ್ರಥನು ಮಡಿದುದೂ ಹಾಗೆಯೇ ಇಲ್ಲಿ ಬಂದಿವೆ. ಆದರೆ ಇದರೆಡೆಯಲ್ಲಿ ಶ್ರೀಕೃಷ್ಣನು ಘಟೋತ್ಕಚನನ್ನು ತನ್ನ ದೂತನನ್ನಾಗಿ ಕಳುಹಿಸಿ 'ಇನ್ನಾದರೂ ವೈರಬುದ್ಧಿಯನ್ನು ಬಿಟ್ಟು ಅಣ್ಣ, ತಮ್ಮಂದಿರೆಲ್ಲಾ ಒಂದಾದರೆ ಕ್ಷೇಮವಲ್ಲವೇ ? ಇಲ್ಲದಿದ್ದರೆ ಅರ್ಜುನನು ನಾಳೆಯ ರಣರಂಗದಲ್ಲಿ ಎಲ್ಲಾ ಕ್ಷತ್ರಿಯರನ್ನೂ ಯಮಪುರಿಗಟ್ಟುವನು' ಎಂದು ಸಂದೇಶವನ್ನು ಸಾರುವನು. ಘಟೋತ್ಕಚನು ಕೌರವ ಶಿಬಿರಕ್ಕೆ ಬಂದಾಗ ಅಭಿಮನ್ಯು ವಧದಿಂದ ಹಿಂತಿರುಗಿ ಬಂದ ದುರ್ಯೋಧನ ದುಃಶಾಸನ ಕರ್ಣರು ಧೃತರಾಷ್ಟ್ರನ ಹತ್ತಿರ ಜಂಭಕೊಚ್ಚಿಕೊಳ್ಳುವರೆ ಬಂದಿದ್ದು ಆತನಿಗೆ ನಮಸ್ಕಾರ ಮಾಡಿದರು. ಆಗ ತಾನೇ ಅರ್ಜುನನ ಪ್ರತಿಜ್ಞೆಯ ವೃತ್ತಾಂತವನ್ನು ಕೇಳಿದ್ದ ಪ್ರಜ್ಞಾಚಕ್ಷುವಾದ ಮುದುಕನು ಮಗಳೊಡನೆ ಮಾರನೆಯದಿನ ಅವಳ ಗಂಡನ ವಧವನ್ನು ತಪ್ಪಿಸಲಸಾಧ್ಯವೆಂದು ಮರುಗುತ್ತಿದ್ದ ಧೃತರಾಷ್ಟ್ರನು ಆಶೀರ್ವಾದವನ್ನುಚ್ಚರಿಸದಿರಲು ಒಂದೇ ಸವನೆ ಎಲ್ಲರೂ 'ಏನಿದು ? ಆಶೀರ್ವದಿಸುವುದಿಲ್ಲವೆ ?' ಎಂದು ಕೇಳಿದಾಗ "ನಾಳಿನ ಯುದ್ಧದಲ್ಲಿ ನಿಮಗೆಲ್ಲರಿಗೂ ಮರಣವೇ ನಿಶ್ಚಯವೆಂದಿರುವಾಗ ಆಶೀರ್ವದಿಸಿ 'ಏನು ಪ್ರಯೋಜನ !'" ಎಂದುತ್ತರಿಸುವನು. ಗರ್ವದಿಂದ ದುರ್ಯೋಧನನು ತಮ್ಮವರ ಹೆಮ್ಮೆಯನ್ನು ಕೊಚ್ಚಲು, ಧೃತರಾಷ್ಟ್ರನು ಇಂದ್ರನಿಂದ ಅಪಹೃತವಾದ ಕವಚವುಳ್ಳ ಕರ್ಣನನ್ನು ಅರ್ಧರಥ, ಹೆಜ್ಜೆಹೆಜ್ಜೆಗೂ ತಪ್ಪನ್ನು ಮಾಡುವವನೆಂದು ಹಳಿದು, ಅವನಿಗೆ ಅರ್ಜುನನಂತೆ, ಅಗ್ನಿ, ಇಂದ್ರ, ರುದ್ರರು ಅಸ್ತ್ರಗಳನ್ನು ಕರುಣಿಸಿದ್ದರೆ ಅವನಷ್ಟೇ ಬಲಾಢ್ಯನಾಗುತ್ತಿದ್ದನೋ ಎಂದು ಅಲ್ಲಗಳೆಯುವನು. ಆಗ ಅವರೆಲ್ಲರೂ ಸೇರಿ ಪಾಂಡವರನ್ನು ಹೊಗಳಿ ನಮ್ಮನ್ನಲ್ಲಗಳೆಯುವುದೇ ನಿಮಗೆ ವೇದಮಂತ್ರವೆಂದು ಹೇಳುವುದಕ್ಕೆ ಸರಿಯಾಗಿ ಘಟೋತ್ಕಚನೂ ಅಲ್ಲಿ ಪ್ರವೇಶಿಸುವನು. ಕೃಷ್ಣನ ಸಂದೇಶವನ್ನು ಹೇಳುವರೆ ಎಂದು ಆರಂಭಿಸುವಾಗ ಅಜ್ಜನಿದ್ದುದನ್ನು ನೋಡಿ ಮೊದಲು ತನ್ನ ದೊಡ್ಡ ತಂದೆ

ಮೊದಲಾಗಿ ಪಾಂಡವರ ನಮಸ್ಕಾರವನ್ನು ಅವನಿಗೆ ಸಲ್ಲಿಸಿ ಸಂದೇಶವನ್ನರುಹು ವನು. ಆ ಸಂದರ್ಭದಲ್ಲಿ ಅರ್ಜುನನನ್ನು ಹೊಗಳಿದಾಗ ಇವನನ್ನು ಹಳಿಯಲಾ ರಂಭಿಸುವರು. ಆಗ 'ನಿನ್ನನ್ನು ದೂತನಾದ್ದರಿಂದ ಹೀಗೆ ಬಿಡುವೆ'ಎಂದು ಹೇಳಿ ದಾಗ ಕ್ರುದ್ಧನಾಗಿ, ದೂತನಲ್ಲ. ಈ ತಕ್ಷಣದಲ್ಲಿಯೇ ನಿಮ್ಮನ್ನೆಲ್ಲರನ್ನೂ ಯಮ ಪುರಿಗೆ ಅಟ್ಟಿಬಿಡುವೆನೆಂದು ಹೇಳಲು 'ನಿನ್ನ ರಾಕ್ಷಸ ಸ್ವಭಾವವನ್ನೇ ನೀನು ಪ್ರಕಟಿಸುವೆ'ಯೆಂದು ಜರೆಯುವನು. ಅದನ್ನೂ ಸಹಿಸಲಾರದೆ, 'ನಿದ್ರೆ ಹೋಗು ತ್ತಿದ್ದ ತಮ್ಮಂದಿರನ್ನು ಅರಗಿನ ಮನೆಯಲ್ಲಿ ನಾವು ಸುಡಲಿಲ್ಲ, ತಮ್ಮನ ಹೆಂಡತಿಯ ಕೇಶವಸ್ತ್ರಗಳನ್ನು ನಾವು ಎಳೆಯಲಿಲ್ಲ. ಅಭಿಮನ್ಯುವಿನಂತಹ ಶಿಶುಗಳನ್ನು ನಾವು ಕೊಲ್ಲಲಿಲ್ಲ. ನಾವೇನೋ ರಾಕ್ಷಸರು ಹೌದು. ಆದರೆ ನಮ್ಮ ಪ್ರತಿ ಯೊಂದು ಕೆಲಸದಲ್ಲಿಯೂ ಕರುಣೆಯಿಂದಲೇ ಆಚರಿಸಿದ್ದೇವೆ. ಈಗ ನೀವೆಲ್ಲರೂ ಸೇರಿ ಬಂದರೂ ನಿಮ್ಮೆಲ್ಲರನ್ನೂ ಬರೀ ಮುಷ್ಟಿ ಪ್ರಹಾರಗಳಿಂದಲೇ ಯಮಪುರಿ ಗಟ್ಟುತ್ತೇನೆ' ಎಂದಾರ್ಭಟಿಸಲು, ಮುದುಕನಾದ ಧೃತರಾಷ್ಟ್ರನು 'ಸಾಹಸವನ್ನು ನಿಲ್ಲಿಸು. ನನ್ನ ಮಾತನ್ನು ಮನ್ನಿಸು' ಎಂದು ಹೇಳಲು ಸುಮ್ಮನಾಗುವನು. ಆಗ ದುರ್ಯೋಧನಾದಿಗಳು 'ನಿನ್ನ ಮಾತಿಗೆ ತಕ್ಕ ಉತ್ತರವನ್ನು ನಾವು ಯುದ್ಧ ರಂಗದಲ್ಲಿ ಕೊಡುವೆವು.' ಎಂದು ಗರ್ಜಿಸಲು, ಕೃಷ್ಣನ ಕಡೆಯ ಸಂದೇಶವೆಂದು ದೂತ ಘಟೋತ್ಕಚನು ಅವರೆಲ್ಲರನ್ನೂ "ಧರ್ಮವನ್ನಾಚರಿಸಿ, ಅಣ್ಣ ತಮ್ಮ ಎಂಬ ಭಾವನೆಯಿಟ್ಟು ಕೆಲಸ ಮಾಡಿರಿ. ನಾಳೆ ಸೂರ್ಯನ ಕಿರಣಗಳೊಡನೆಯೇ ಯಮನು ಬರುವನೆಂ"ದೆಚ್ಚರಿಸಿ ತೆರಳುವನು.

ಇನ್ನುಳಿದವೆಂದರೆ ದೂತವಾಕ್ಯ, ಕರ್ಣಭಾರ,ಊರುಭಂಗವೆಂಬ ಭಾರತದ ಹಿನ್ನೆಲೆ ಸ್ವಲ್ಪಮಟ್ಟಿಗೆ ಉಳ್ಳವುಗಳು. ದೂತವಾಕ್ಯದಲ್ಲಿ ಉದ್ಯೋಗ ಪರ್ವದ ಕಥೆಯೇ ಬಂದರೂ ಭಾಸನ ಪಳಗಿದ ಕೈ ಇಲ್ಲಿ ತೋರುವುದು. ದುರ್ಯೋಧ ನನು ಕುರುವೃದ್ಧರೊಡನೆ ಸಭೆಯಲ್ಲಿ ಕುಳಿತಿರುವಾಗ ಪುರುಷೋತ್ತಮ ನಾರಾಯಣ ದೌತ್ಯಕ್ಕೆ ಬಂದಿರುವುದಾಗಿ ಕಂಚುಕಿಯು ಹೇಳಲು ಸಂಕ್ರುದ್ಧನಾದ ದುರ್ಯೋಧನನು ಗೊಲ್ಲರ ಜಾತಿಯ ಕಂಸಭೃತ್ಯನನ್ನು ಪುರುಷೋತ್ತಮನೆಂದು ಕರೆದುದಕ್ಕಾಗಿ ನಿಂದಿಸುವನು ಆಗ ಅವನು ತನ್ನ ಮಾತನ್ನೇ ತಿದ್ದಿಕೊಂಡು ಪದ್ಮನಾಭನು ಬಂದಿರುವನೆಂದು ಹೇಳಿದ ಅನಂತರ ಯಾರಾದರೂ ಆತನ ಪ್ರವೇಶ ಕಾಲದಲ್ಲಿ ಎದ್ದು ನಿಂತರೆ ದಂಡಿಸುವೆನೆಂದು ಗದರಿಸಿ, ದ್ರೌಪದೀ ವಸ್ತ್ರಾಪ ಹರಣದ ಚಿತ್ರವನ್ನು ತರಿಸಿ, ಅದನ್ನೆದುರು ಬಿಡಿಸಿಕೊಂಡು ಅದರಲ್ಲೇ ಮಗ್ನನಾ ಗಿರುವೆನೆಂದು ನಟಿಸುತ್ತಾ ಕುಳಿತಿರುವಾಗ ಶ್ರೀಕೃಷ್ಣನೇ ಪ್ರವೇಶಿಸಲು ಎಲ್ಲರೂ ದಿವ್ಯಮಂಗಳ ವಿಗ್ರಹವನ್ನು ನೋಡಿ ಸಂಭ್ರಾಂತರಾಗಿ, ವಿಧಿಸಿದ ದಂಡವನ್ನು

ಮರೆತು ಎದ್ದು ನಿಲ್ಲಲು 'ಏನು, ನೀನೊಬ್ಬನೆ ಕುಳಿತಿರುವೆಯಲ್ಲಾ ? ಏನಿದು ?' ಎಂದು ವಿಚಾರಿಸಿವನು. ಆಗ ದುರ್ಯೋಧನನೂ ಚಕಿತನಾಗಿ ಬೀಳುವನು. ಕೂಡಲೇ ಚಿತ್ರಪಟದ ರಮಣೀರತ್ನವನ್ನು ಕಂಡು 'ಓಹೋ ! ಬುದ್ಧಿಯಿಲ್ಲ. ಸ್ವಜನಾವಮಾನವನ್ನು ಬಹಿರಂಗವಾಗಿ ಪ್ರಕಟಿಸುತ್ತೀಯಲ್ಲ!' ಎಂದು ಹೇಳಿ 'ಛೆ! ಇದನ್ನು ಕೂಡಲೇ ತಕ್ಕೊಂಡು ಹೋಗಿರಿ' ಎಂದು ತಾನೇ ಆಜ್ಞೆಮಾಡುವನು. ದುರ್ಯೋಧನನು ಚಾಚೂ ಎನ್ನದೆ ಇರುವಾಗ ಕೃಷ್ಣನು ಪಾಂಡವರು ಅವರ ಕುಶಲ ಪ್ರಶ್ನೆಮಾಡಿರುವದಾಗಿ ತಿಳಿಸುವನು. ದುರ್ಯೋಧನನಾದರೋ ಕೃತಕ ಸಂತೋಷವನ್ನು ವ್ಯಕ್ತಪಡಿಸಿ **ದೇವತಾತ್ಮಜರ** ಕುಶಲವನ್ನು ವಿಚಾರಿಸುವನು. ಇದರ ವಂಜನ್ನು ತಿಳಿದೂ ಕೃಷ್ಣನು ತಿಳಿಯದಂತೆ 'ನೀವು ನಮೂದಿಸಿದ ಅವಧಿಯು ತೀರಿತಷ್ಟೆ. ಅವರೆಲ್ಲ ತುಂಬಾ ದುಃಖಕ್ಕೆ ಪಾತ್ರರಾಗಿದ್ದಾರೆ. ಇನ್ನಾದರೂ ಅವರ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲನ್ನು ಅವರಿಗೆ ಕೊಡಬಹುದಲ್ಲವೆ ?' ಎಂದು ಕೇಳುವನು. ಆಗ ದುರ್ಯೋಧನನು ಕೋಪದಿಂದ ಅವರೆಲ್ಲರೂ ನನ್ನ ಚಿಕ್ಕಪ್ಪನ ಮಕ್ಕಳಲ್ಲ. ಆಯಾಯ ದೇವತೆಗಳ ಮಕ್ಕಳಷ್ಟೆ. ಆದ್ದರಿಂದ ಅವರೆಲ್ಲರೂ ಚಿಕ್ಕ ತಂದೆಯ ಆಸ್ತಿಯಲ್ಲಿ ಹಕ್ಕನ್ನೇ ಕಳಕೊಂಡಿದ್ದಾರೆ' ಎನ್ನಲು 'ನಿನ್ನ ತಂದೆಯಾದ ಧೃತರಾಷ್ಟ್ರನೇ ವಿಚಿತ್ರವೀರ್ಯನು ಸತ್ತುಹೋದ ಅನಂತರ ವೇದವ್ಯಾಸರಿಂದ ಜನಿಸಿದ ಮೇಲೆ ನಿನ್ನ ತಂದೆಗೆ ಯಾವ ತರದ ಅಧಿಕಾರ ಬಂತು ? ಅದಿರಲಿ ನೀವೆಲ್ಲರೂ ಅಣ್ಣತಮ್ಮಂದಿರೂ ಪರಸ್ಪರ ವೈಷಮ್ಯಗಳನ್ನೆಲ್ಲಾ ಮರೆತು ಸಂತೋಷದಿಂದಿರುವುದೇ ನ್ಯಾಯವಲ್ಲವೇ ?' ಎಂದು ಹೇಳಿದುದು ಸರ್ವಥಾ ಸಮ್ಮತವಾಗದೆ, 'ರಾಜ್ಯವನ್ನು ಭಿಕ್ಷೆ ಬೇಡಿದಂತೆ ಬೇಡುವ ರಿವಾಜು ಎಲ್ಲಿಯೂ ಇಲ್ಲ. ಸಾಹಸವನ್ನು ತೋರಿ ಬೇಕಾದರೆ ಅವರು ರಾಜ್ಯವನ್ನು ಸಂಪಾದಿಸಿಕೊಳ್ಳಲಿ' ಎಂದು ಒಂದು ಸ್ವಲ್ಪ ಭೂಮಿಯನ್ನಾದರೂ ಯುದ್ಧವಿಲ್ಲದೆ ಕೊಡಲು ನಿರಾಕರಿಸುವನು. ಆಗ ಶ್ರೀಕೃಷ್ಣನು ನಿಲ್ಲುವುದು ವ್ಯರ್ಥವೆಂದು ಹೊರಡಲು ಅನುವಾದಾಗ, ದುರ್ಯೋಧನನು 'ಕೃಷ್ಣನನ್ನು ಬಂಧಿಸಿದರೆ ಪಾಂಡವರ ಕಣ್ಣೇ ಹೋದಂತಾಗಿ ಇಡೀ ಭೂಮಿಯು ನಿರಾಯಾಸವಾಗಿ ತನ್ನ ವಶಕ್ಕೇ ಬಂದುಬಿಡುವುದು' ಎಂದಾಲೋಚಿಸಿ, 'ಕೃಷ್ಣನನ್ನು ಕಟ್ಟಿ ಸೆರೆಹಿಡಿಯಿರಿ' ಎಂದಾಜ್ಞಾಪಿಸಲು, ಅವನನ್ನು ಕಟ್ಟುವರೆ ಉಪಯೋಗಿಸಿದ ಹಗ್ಗಗಳೆಲ್ಲಾ ತಮ್ಮ ತಮ್ಮ ದೇಹಗಳನ್ನು ಕಟ್ಟಿದ್ದರಿಂದ ಅವರೆಲ್ಲರೂ ವಿಫಲಪ್ರಯತ್ನರಾಗಲು ತಾನೇ ಅವನನ್ನು ಬಂಧಿಸಲು ಆಯುಧಗಳನ್ನು ತರುವೆನೆಂದು ದುರ್ಯೋಧನನೇ ಹೊರಗೆ ಹೋಗುವನು. ಆಗಲೇ ಸಮಾಚಾರವನ್ನು ತಿಳಿದು, ಧೃತರಾಷ್ಟ್ರನು ಓಡಿಬಂದು ಕೃಷ್ಣನ ಪಾದಕಮಲಗಳಲ್ಲಿ ನಮಸ್ಕರಿಸಿ ಬೀಳ್ಕೊಡುವನು. ಇಲ್ಲಿ ಕೃಷ್ಣನ ಆಯುಧಗಳಾದ ಶಂಖ,

ಚಕ್ರ, ಗದಾಪದ್ಮಗಳೂ, ಗರುಡನೂ ಒಂದೊಂದಾಗಿ ಆವಿರ್ಭವಿಸಿ, ಏನೂ ಕೆಲಸಮಾಡದೆ, ಕೂಡಲೇ ಹಿಂದಿರುಗಿದುದೂ ತೀರಾ ಅನುಚಿತ. ಅದನ್ನು ಯಾರೋ ಮತ್ತೆ ಸೇರಿಸಿರಬೇಕೆಂದೂಹಿಸಿ ಉಪೇಕ್ಷಿಸಲಾಗಿದೆ.

ಕರ್ಣಭಾರ: ಭಾರವೆಂಬ ಶಬ್ದವನ್ನು ಇಲ್ಲಿ ಪ್ರಾಚೀನಾರ್ಥದಲ್ಲಿ ಬೌದ್ಧ ಜಾತಕಗಳಲ್ಲಿ (ಮಾತಾ ಪಿತಾ ಚ ಭ್ರಾತಾ ಚ ಭಗಿನೀಜ್ಞಾತಿಬಾಂಧವಾಃ | ಸರ್ವೇ ಜ್ಯೇಷ್ಠಸ್ಯ ತೇ ಭಾರಾಃ ಏವಂ ಜಾನೀಹಿ ಭಾರತ ||) ಉಪಯೋಗಿಸಿದಂತೆ ಉಪಯೋಗಿಸಿದೆ ಎಂದು ಈ ಮುಂಚೆಯೇ ಸೂಚಿಸಿದ್ದೇವೆ. ಎಂದರೆ ಹೇಗೆ ಜ್ಯೇಷ್ಠ ಅಥವಾ ಹಿರಿಯಣ್ಣನ ತಲೆಯಲ್ಲಿ ತಮ್ಮಂದಿರ ಭರಣದ ಚಿಂತೆಯೇ ತುಂಬಿರುವಂತೆ ಕರ್ಣನ ತಲೆಯಲ್ಲಿಯೂ ವಿಶೇಷ ಚಿಂತೆಗಳು ಬೇರೂರಿದ್ದುವೆಂದು ಸೂಚಿಸುವಂತಿದೆ. ನಿರ್ಭಾಗ್ಯ ಕರ್ಣನು ತಾಯಿಯ ಪೋಷಣೆಯಿಲ್ಲದೆ ತಾನು ಅನ್ಯರಲ್ಲಿ ಬೆಳೆಯಬೇಕಾಯಿತೆಂಬುದನ್ನು ಆಗ ಸ್ವಲ್ಪ ಮುಂಚೆ ತಾನೇ ಅರಿತಿದ್ದನು; ತಾನೂ ಕುಂತೀಪುತ್ರ, ತಮ್ಮಂದಿರನ್ನು ಕೊಲ್ಲುವುದು ಹೇಗೆಂದು ಯೋಚಿಸಿ ಯುದ್ಧಕ್ಕೆ ಹೊರಡುವಾಗ ತನ್ನ ದುರ್ಭಾಗ್ಯದ ಕಂತೆಗಳನ್ನೊಂದೊಂದಾಗಿ ಶಲ್ಯನ ಹತ್ತಿರ ಹೇಳಲಾರಂಭಿಸುವನು. ಭಾರತದ ಶಲ್ಯನಾದರೋ ಹೆಜ್ಜೆ ಹೆಜ್ಜೆಗೆ ಇವನನ್ನು ಬೈದು ಹಳಿಯುತ್ತಿದ್ದರೆ ಇಲ್ಲಿ ಶಲ್ಯನು ಆಬಷ್ಟು ಇವನಿಗೆ ಪ್ರೋತ್ಸಾಹಕೊಟ್ಟು ಉತ್ತೇಜಿಸುವರೆ ಪ್ರಯತ್ನಿಸುವನು. ಇವನ ದುಃಖವನ್ನು ಕೇಳಿ ತಾನೂ ಸಮದುಃಖನಾಗಿ ಮರುಗುವನು. ಇವನಿಗೆ ಪರಶುರಾಮನಿಂದ ಶಸ್ತ್ರಾಭ್ಯಾಸವಾಯಿತೆಂಬ ಕಥೆಯನ್ನು ಆತನಿಂದ ಬಂದ ಶಾಪದ ಕಥೆಯನ್ನು ಕೇಳಿ ತುಂಬಾ ಮರುಗುವನು. ಆಗಲೇ ವಿಧಿಯು ಇವನ ಭಾರಗಳ ರಾಶಿಯನ್ನು ಹೆಚ್ಚು ಮಾಡುವ ಉದ್ದೇಶವಾಗಿ ಇಂದ್ರನನ್ನು ಭಿಕ್ಷುಕನ ವೇಷದಲ್ಲಿ ಕಳುಹಿಸುವುದು. ಭಾರತದ ಕಥೆಯು ಪ್ರಕಾರವಾದರೋ ಸೂರ್ಯನು (ಇವನ ತಂದೆಯು) ಆಗಲೇ ಅಂದರೆ ಅರಣ್ಯಪರ್ವದ 311ನೆಯ ಅಧ್ಯಾಯ (ಕುಂಭಕೋಣಸಂಪಾದಿತಂ)ದಲ್ಲಿ ಬಂದು ಇಂದ್ರನು ಬಂದಾನೆಂಬ ಪೂರ್ವ ಸೂಚನೆಯನ್ನು ಕೊಟ್ಟಿದ್ದನು. ಆದರೆ ಇಲ್ಲಿ ಯಾವ ಪೂರ್ವ ಸೂಚನೆಯಿಲ್ಲದೆ ಕರ್ಣನು ಅರ್ಜುನನೊಡನೆ ಯುದ್ಧಕ್ಕೆಂದು ಹೊರಡುವಾಗಲೇ ಅಪಶಕುನವಾಗಿ ಏಕಬ್ರಾಹ್ಮಣನು ಮಹತ್ತರವಾದ ಭಿಕ್ಷೆಯನ್ನಾಶಿಸುತ್ತಾ ಬಂದಿರುವನು. 'ಬ್ರಾಹ್ಮಣೋತ್ತಮನೇ, ನಿನಗೇನನ್ನು ಕೊಡಲಿ, ಆನೆಗಳನ್ನೋ, ಕುದುರೆಗಳನ್ನೋ, ಗೋವುಗಳನ್ನೋ ಅಥವಾ ಭೂಮಿಯನ್ನೋ' ಎಂದು ಯಾವ ವಸ್ತುಗಳ ನಿರ್ದೇಶವನ್ನು ಮಾಡಿದರೂ ಅವ್ಯಾವುವೂ ಬೇಡವೆಂದು ನಿರಾಕರಿಸಲು, ತನ್ನ ತಲೆಯನ್ನೇ

ಬೇಕಾದರೂ ಕೊಡುವೆನೆನ್ನಲು ಅದನ್ನೂ ಬೇಡವೆನ್ನಲು ಹಾಗಾದರೇನು ? ನನಗೆ ಜನ್ಮಸಹಜವಾದ ಕವಚಕುಂಡಲಗಳನ್ನು ಕೇಳಿದರೂ ಕೊಡಲು ತಯಾರಿದ್ದೇನೆಂದು ಹೇಳಿದ ಕೂಡಲೇ, ಹಾಗಾದರೆ ಕೊಡು ಎಂದು ಅವುಗಳನ್ನೇ ಕೇಳಲು, ಶಲ್ಯನಿದರಲ್ಲೇನೋ ಕೃತ್ರಿಮವಿದೆ, ಕೊಡಬಾರದೆಂದು ನಿರಾಕರಿಸಲು ಎರಡನೆಸಲ ಆಲೋಚಿಸದೆ ಕತ್ತರಿಸಿ ಕೊಟ್ಟೇಬಿಡುವನು. ಆಗ ಅವನು ಹೋದ ಅನಂತರ ನಿಜವು ಹೊಳೆದು ಶಲ್ಯನು 'ಇಂದ್ರನೇ ಬಂದು ನಿನ್ನನ್ನು ವಂಚಿಸಿದನಲ್ಲ ?'[1] ಎಂದಾಗ 'ಸರಿ ! ಇಂದ್ರನೇ ನನ್ನಿಂದ ಬೇಡಿದನೆಂಬ ಕೀರ್ತಿಯೇ ನನ್ನ ಪಾಲಿಗೆ ಬಂತಲ್ಲಾ !' ಎಂದು ಸಂತೋಷಿಸುವನು. ಆಗ ದೇವದೂತನೊಬ್ಬನು ಬಂದು ಇವನ ಸಂಶಯವನ್ನು ನಿವಾರಿಸುವರೆಯೋ ಎಂಬಂತೆ, 'ಈ ಶಕ್ತಿಯನ್ನು ಸುಪ್ರೀತನಾದ ಇಂದ್ರನು ನಿನಗೆ ಕರುಣಿಸಿರುವನು. ಸ್ವೀಕರಿಸುವವನಾಗು' ಎಂದು ಹೇಳಲು, ಕರ್ಣನು, 'ಧಿಕ್! ದಾನಕೊಟ್ಟುದಕ್ಕೆ ಬದಲಾಗಿ ನಾನೇನೂ ಸ್ವೀಕರಿಸುವ ವಾಡಿಕೆಯಿಲ್ಲ. ನಿಷ್ಕಾಮನಾಗಿ ನಾನು ದಾನವನ್ನು ಮಾಡುವುದು' ಎನ್ನಲಾಗಿ ದೇವದೂತನು 'ಬ್ರಾಹ್ಮಣನ ಮಾತನ್ನು ತಿರಸ್ಕರಿಸಲಾಗದೆ'ಂದು(ಇಂದ್ರನು ಬ್ರಾಹ್ಮಣ ವೇಷದಲ್ಲಿ ಬಂದಿದ್ದನಲ್ಲವೆ ?) ಹೇಳಿದಾಗ ಅದನ್ನು ಸ್ವೀಕರಿಸುವನು. ಇದನ್ನು ಹಿಡಕೊಂಡು ದುಗುಡದ ಭಾರದಿಂದ ಕರಗಿದವನಾಗಿ, ಅಪಶಕುನಗಳನ್ನೇ ಯೋಚಿಸುತ್ತ, ಅರ್ಧಶಕ್ತಿಯೇ ಹೋದಂತವನಾಗಿ ಕರ್ಣನು ಯುದ್ಧಕ್ಕೆ ಹೊರಟನೆಂಬುದೇ ಇದರ ಕಥೆ. ಈ ಶಕ್ತಿಯನ್ನವನು ಭಾರತದ ಕಥೆಯ ಪ್ರಕಾರವಾದರೆ ಯುದ್ಧದ ಮೊದಲೇ ಸ್ವೀಕರಿಸಿದ್ದು. ಘಟೋತ್ಕಚನ ಮೇಲಾಗಲೇ ಪ್ರಯೋಗಿಸಿದ್ದನೆಂದು ಪೂರ್ವ ಕಥೆ. ಇಲ್ಲಿಯಾದರೋ ಅಲ್ಲಿದ್ದ ಪ್ರಕಾರ ಕರ್ಣಕುಂಡಲಗಳನ್ನು ಕೊಟ್ಟರೆ ಪ್ರತಿಯಾಗಿ ಏನನ್ನು ಕೊಡುವೆಯೆಂದು ಕರ್ಣನೇ ಕೇಳಿ ತನ್ನ ದಾನಶೂರತ್ವವನ್ನು ಕಳಕೊಂಡ ವಿಚಾರ ಬರುವುದೇ ಇಲ್ಲ.

ಊರುಭಂಗ : ಇದನ್ನು ಅಭಿನವಗುಪ್ತನ ಕಾಲದಲ್ಲಿ ಗದಾಯುದ್ಧವೆಂದು ಕರೆದಿದ್ದರೆಂದು ತೋರುತ್ತದೆ. ಅದನ್ನೇ ಅನುಸರಿಸಿ ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧನಾದ ರನ್ನನು ಅದೇ ಹೆಸರಿನಿಂದ ಗದಾಯುದ್ಧವನ್ನು ಬರೆದನು. ಅದರಲ್ಲಿ ಭಾಸನಿಂದಲೂ ಭಟ್ಟನಾರಾಯಣನಿಂದಲೂ ಅನೇಕ ಅಭಿಪ್ರಾಯಗಳನ್ನು ಹಾಗೆಯೇ ಬಳಸಿಕೊಂಡನು. ಪಂಚರಾತ್ರದಲ್ಲಿ 'ಕರ್ಣಾಯತೇ, ತೇನ ಶರೇ

---

1 ಹೀಗೆಯೇ ಭಾಗವತ X ಉತ್ತರಾರ್ಧ 72 ಅಧ್ಯಾಯ 27ನೆಯ ಶ್ಲೋಕದಲ್ಲಿ ಜರಾಸಂಧನೂ ತಿಳಿದೇ ಬ್ರಾಹ್ಮಣ ವೇಷದಲ್ಲಿದ್ದ ಕೃಷ್ಣ ಭೀಮಾರ್ಜುನರಿಗೆ—'ಹೇ ವಿಪ್ರಾಃ! ವ್ರಿಯತಾಂ ಕಾಮಃ ದದಾತವ್ಯಾತ್ಮ ಶಿರೋಽಪಿವಃ' ಎಂದು ಇಲ್ಲಿಯ ಮಾತನ್ನೇ ಸ್ವಲ್ಪ ಬದಲಾಯಿಸಿ (ಇಲ್ಲಿ ತೇನ ಹಿ ಮಚ್ಛಿರೋ ದದಾಮಿ) ಎಂದು ಹೇಳಿದನು.

ವಿಮುಕ್ತೇ' ಎಂಬ ಶ್ಲೋಕವನ್ನೇ ಉಪಜೀವಿಸಿ VIನೆಯ ಆಶ್ವಾಸದಲ್ಲಿ 'ಗುರು ಲಕ್ಷ್ಯಸಿದ್ಧಿಯಿಲ್ಲೆನೆಂ' ಎಂದು ಬರೆದಿರುವನು.

ತೊಡೆ ಮುರಿದು ಬಿದ್ದ ದುರ್ಯೋಧನನನ್ನು ತಕ್ಕೊಂಡುದು ಭಾರತದ ಕಥೆಯಿಂದ. ಆದರೆ ಅಲ್ಲಿ ಅಶ್ವತ್ಥಾಮನು ಮಾತ್ರ ಇವನ ಸಮೀಪಕ್ಕೆ ಬಂದು 'ನಿನ್ನ ವೈರಿಗಳನಿನ್ನಾದರೂ ಕೊಲ್ಲದೇ ಬಿಡೆನು' ಎಂದು ಆಶ್ವಾಸವಿತ್ತು, ರಾತ್ರಿಯಲ್ಲಿ ಹೊರಟು ನಿದ್ರಿಸುತ್ತಿದ್ದ ಪಾಂಡವ ಶಿಶುಗಳನ್ನು ಕೊಂದನೆಂದು ಮಾತ್ರ ನಾವು ಓದುತ್ತೇವೆ. ಧೃತರಾಷ್ಟ್ರನು ಅಲ್ಲಿ ಬರುವುದು ಪಾಂಡವರನ್ನು ಕಂಡು ಹೊಟ್ಟೆಯಲ್ಲಿ ದೊಡ್ಡ ಹೊಟ್ಟೆಕಿಚ್ಚನ್ನಿಟ್ಟುಕೊಂಡು ಎದುರಿಗೆ ಮಾತ್ರ ಅವರನ್ನು ಅಭಿನಂದಿಸುವಂತೆ ನಟಿಸುತ್ತಾ. ಅವನ ಅಂತರ್ಯವನ್ನು ತಿಳಿದ ಶ್ರೀಕೃಷ್ಣನು ಬೇಕೆಂದೇ ಭೀಮನ ಬದಲು ಭೀಮಸೇನನ ಕಬ್ಬಿಣ ಪ್ರತಿಮೆಯನ್ನು ಇಡಿಸಿ ಅದನ್ನಪ್ಪುವಂತೆ ಮಾಡಿದ್ದು. ಗಾಂಧಾರಿಯೂ ಈ ಸಂದರ್ಭದಲ್ಲಿ ಕಣ್ಣುಗಳ ವಸ್ತ್ರಗಳ ಎಡೆಯಿಂದಲೇ ಯುಧಿಷ್ಠಿರನ ಕಾಲು ಬೆರಳುಗಳನ್ನು ನೋಡಿ ಅವುಗಳನ್ನು ಕಪ್ಪಾಗುವಂತೆ ಮಾಡಿದಳಂತೆ! ಇಲ್ಲಿಯಾದರೋ ಅವರೂ ಅವನ ಹೆಂಡಂದಿರೂ ಮಗನೂ ರಣರಂಗದಲ್ಲಿ ಬಿದ್ದವನನ್ನು ನೋಡಲಿಕ್ಕೆಂದು ಬಂದು ಅಳುವ ಹೃದಯವನ್ನು ಕರಗಿಸುವ ಸಂದರ್ಭವನ್ನು ಚಿತ್ರಿಸಲಾಗಿದೆ. ಭವಭೂತಿಯ ಕರುಣಾರಸವು ಕಲ್ಲುಗಳನ್ನು ಕರಗಿಸುವ ಶಕ್ತಿಯನ್ನು ಪಡೆದಿದ್ದರೆ, ಅದಕ್ಕೇ ಆಧಾರವಾಗಿರುವ ಈ ಸಂದರ್ಭವು ಅದಕ್ಕಿಂತಲೂ ಹೆಚ್ಚು ಕರುಣಾಜನಕವಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಶೂದ್ರಕನ ಮೃಚ್ಛಕಟಿಕದಲ್ಲಿಯೂ ತಂದೆ (ಚಾರುದತ್ತ) ಮಗ ರೋಹಸೇನ ಕಲೆತಾಗ ಇಷ್ಟು ಜೋರಾಗಿ ಕರುಣಾರಸ ಚಿತ್ರಣವಿಲ್ಲವೆಂದೂ ಹೇಳಬಹುದು.

ಭಾರತದ ಕಥೆಯ ಪ್ರಕಾರ ಭೀಮಸೇನನು ದುರ್ಯೋಧನನ ತಲೆಯನ್ನು ತನ್ನ ಕಾಲಿನಿಂದೊದೆದದ್ದೂ ಅಲ್ಲದೆ ಅವನನ್ನು ಪಶುವೆಂದು ಕರೆದಿದ್ದರೆ, ಇಲ್ಲಿ ಆತರಹದ ಅಶ್ಲೀಲಕೃತ್ಯಗಳನ್ನೆಂದೂ ಮಾಡಿಲ್ಲ. ಮಾಡಿದ್ದೊಂದು ತಪ್ಪೆಂದರೆ, ನಾಭಿಯಿಂದ ಕೆಳಗೆ ಹೊಡೆದುದಷ್ಟೆ! ಅಲ್ಲಿಯೂ ಕೂಡ ಶಾಪವಿದ್ದ ಕಾರಣ ದೈವವೇ ಆತನನ್ನಾರೀತಿ ಮಾಡಿಸಿತೆಂದೇ ಹೇಳಬೇಕೆಂದು ಭಾಸನ ಆಶಯ. ಇಂತಹ ದುರ್ಯೋಧನನು ತೊಡೆ ಮುರಿದು ಬಿದ್ದಿದ್ದಾಗ ಬಲರಾಮನೇ ತನ್ನ ಹಲಾಯುಧವನ್ನು ಭೀಮಸೇನನ ಮೇಲೆ ಅಪ್ಪಳಿಸಿಬಿಡುವೆನೆಂದುದ್ಯುಕ್ತನಾದಾಗ, ದುರ್ಯೋಧನನು ಬಿದ್ದಲ್ಲಿಂದಲೇ, 'ಗುರುಗಳೇ, ಹಾಗೆಂದಿಗೂ ಮಾಡಬೇಡಿರಿ. ನಾನೇನೋ ಸಾಮ್ರಾಜ್ಯದ ಫಲವನ್ನನುಭವಿಸಿದ್ದಾಯಿತು. ನನ್ನನ್ನು ಭೀಮ

ಸೇನನಲ್ಲ ಕೊಂದದ್ದು, ಜಗತ್ತುಗಳಿಗೆ ಪ್ರಿಯನಾದ ಕೃಷ್ಣನೇ ನನ್ನನ್ನು ಮೃತ್ಯುವಿಗೆ ತುತ್ತಾಗಿಸಿದ್ದು'ಎನ್ನುವನು. ಆಗತಾನೇ ಮುದುಕರಾದ ಕುರುಡರಾದ ಧೃತರಾಷ್ಟ್ರ ಗಾಂಧಾರಿಯರನ್ನೂ ತನ್ನ ತಾಯಂದಿರನ್ನೂ (ಇಲ್ಲಿ ಭಾಸನ ಪ್ರಕಾರ ದುರ್ಜಯ ನೆಂಬ ಮಗ ದುರ್ಯೋಧನನಿಗೆ–ಲಕ್ಷ್ಮಣನಲ್ಲ ! ಮಾಲವಿ ಪೌರವಿಯೆಂಬ ಇಬ್ಬರು ಹೆಂಡಂದಿರು, ಭಾನುಮತಿಯ ಸುದ್ದಿಯಿಲ್ಲ) ಕರಕೊಂಡು ದುರ್ಜಯನು ಅಪ್ಪ ನನ್ನು ಹುಡುಕಿಕೊಂಡು ಅಲ್ಲಿಗೆ ಬರುವನು. ಧೃತರಾಷ್ಟ್ರನು ಹತ್ತಿರ ಬಂದ ಕೂಡಲೇ ಅವನಿಗೆ ನಮಸ್ಕಾರಮಾಡುವ ಶಕ್ತಿಯನ್ನು ಭೀಮಸೇನನು ನೀಗಿಸಿದನಲ್ಲ ಎಂದೇ ವ್ಯಸನ, ತನ್ನ ತೊಡೆಮುರಿದು ಉಂಟಾದ ನೋವಿನಮೇಲೆ ಅವನ ಗಮ ನವೇ ಇಲ್ಲ. ಧೃತರಾಷ್ಟ್ರನಿಗೆ ಮಗನು ಕೊಟ್ಟ ಪಿತೃತರ್ಪಣವನ್ನು ಸ್ವೀಕರಿಸಲಿಕ್ಕಿಲ್ಲ ವೆಂದು ವ್ಯಸನ. ಮಗನಾದ ದುರ್ಜಯನು ತೊಡೆಯ ಮೇಲೆ ಕುಳಿತು ಅಭ್ಯಾಸವಾದ್ದರಿಂದ ಅಲ್ಲಿಯೇ ಕೂಡ್ರಬೇಕೆಂದು ಹಟ ತೊಡಲು, ತಂದೆಯು ದುಃಖದಿಂದ ಇನ್ನು ನೀನು ಅಲ್ಲಿ ಕೂಡ್ರಲಾರೆ ಎನ್ನಲು ಅದರ ಅರ್ಥ ತಿಳಿಯದೆ 'ಅಪ್ಪಾ ಎಲ್ಲಿಗೆ ಹೊರಟಿರುವೆ?'ಎಂದು ಕೇಳಲು ಕಣ್ಣೀರು ತುಂಬಿ 'ನೂರುಮಂದಿ ತಮ್ಮಂದಿರಿದ್ದಲ್ಲಿಗೆ ಹೊರಟಿರುವೆ' ಎಂದುತ್ತರಿಸುವನು. ಮಗನು ತನ್ನನ್ನೂ ಅಲ್ಲಿಗೆ ಕರಕೊಂಡು ಹೋಗಬಾರದೇ ಎಂದು ಅಂಗಲಾಚಿ ಬೇಡಲು, ಮಗನೇ ಭೀಮಸೇನನನ್ನು ಪ್ರಾರ್ಥಿಸಿದರೆ ನಿನ್ನ ಇಚ್ಛೆಯು ನೆರವೇರಬಹುದೆನ್ನುವಾಗ ನಮ್ಮೆಲ್ಲರ ಕಣ್ಣಿನಲ್ಲಿಯೂ ನೀರು ಬರುತ್ತದೆ. ಮಗನು ಅದರ ಅರ್ಥವನ್ನು ತಿಳಿಯದೆ ತನ್ನ ತಾತ, ಅಜ್ಜಿ, ತಾಯಂದಿರು ಬಂದಿರುವರೆಂದೆನ್ನುವನು. ಆಗ ಧೃತರಾಷ್ಟ್ರಾದಿಗಳೆಲ್ಲರೂ ಬಂದು ದುರ್ಯೋಧನನನ್ನು ಸಮಾಪಿಸುವರು. ಧೃತ ರಾಷ್ಟ್ರನು ಪರಿತಪಿಸುವಾಗ ತಾನು ವೈರಿಗಳಿಗೆ ಬೆನ್ನು ತೋರಿಸದೆ ಸತ್ತೆನೆಂದು ಹೆಮ್ಮೆಪಡಬೇಕಾಗಿರುವಾಗ ಮರುಗುವುದು ನ್ಯಾಯವಿಲ್ಲವೆಂದು ತಂದೆಯನ್ನು ಸಂತೈಸಲು ಪ್ರಯತ್ನಿಸಿ, ನಮಸ್ಕಾರ ಮಾಡಲು ಎದ್ದು, ಬೀಳುವನು. ಇನ್ನೊಂದು ಜನ್ಮದಲ್ಲಿಯೂ ನೀನೇ ತಾಯಿಯಾಗಬೇಕೆಂದು ತಾಯಿಯನ್ನೂ ಪ್ರಾರ್ಥಿಸಿ ಮಾತಿನಿಂದಲೇ ನಮಸ್ಕರಿಸುವನು. ಯುದ್ಧದಲ್ಲಿ ವೈರಿಗಳಿಗೆ ಬೆನ್ನು ತೋರಿಸದೆ ಸಾರ್ವಭೌಮನಾಗಿ ವೇದೋಕ್ತಗಳಾದ ಯಜ್ಞಗಳನ್ನು ವಿಧಿಪೂರ್ವಕ ಮಾಡಿ ತಾನು ಸಾಯುವುದರಿಂದ ತನಗೋಸ್ಕರ ದುಃಖಿಸಬಾರದೆಂದು ಹೆಂಡಂದಿರನ್ನು ಸಂತೈಸುವನು. ಮಗನನ್ನು ಪ್ರತ್ಯೇಕವಾಗಿ ಯುಧಿಷ್ಠಿರನ ಅಪಸವ್ಯವಾದ ಭುಜವನ್ನು ಮುಟ್ಟಿ ತನ್ನ ಹೆಸರನ್ನು ಹೇಳಿ ತರ್ಪಣವನ್ನು ಬಿಡುವರೆ ಕಲಿತು ಕೊಳ್ಳಬೇಕಪ್ಪಾ, ಎಂದು ತಿಳಿಸುವನು. ಇದನ್ನೆಲ್ಲಾ ಮರೆಯಲ್ಲಿ ನಿಂತು ಕೇಳು ತ್ತಿದ್ದ ಬಲದೇವನು 'ಅಯ್ಯೋ ! ವೈರವು ಪಶ್ಚಾತ್ತಾಪವಾಗಿ ಮಾರ್ಪಟ್ಟಿತಲ್ಲಾ !'

ಎಂದು ಮರುಗುವನು. ಆಗ ತಾನೇ ಅಶ್ವತ್ಥಾಮನು ಅಧ್ವರ್ಯುವಿಲ್ಲದ ಅಶ್ವಮೇಧವನ್ನು ಪ್ರವೇಶಿಸುವಂತೆ ಯುದ್ಧಯಜ್ಞದಲ್ಲಿ ತನ್ನ ಭಾಗವನ್ನು ವಹಿಸಲು ಬಂದು ತಾನೇ ಕೃಷ್ಣಾರ್ಜುನರನ್ನೂ ಇನ್ನಿತರರನ್ನೂ ಕೊಲ್ಲುವುದಕ್ಕಾಗಿ ಹೊರಟಿರುವೆನೆಂದೂ ತಿಳಿಸುವನು. ಆಗ ದುರ್ಯೋಧನನು 'ಅಯ್ಯೋ! ಕರ್ಣ ಭೀಷ್ಮಾದಿಗಳೆಲ್ಲರೂ ಸತ್ತಾಯಿತು. ನನ್ನ ತಮ್ಮಂದಿರೆಲ್ಲಾ ಸ್ವರ್ಗವನ್ನು ಹೊಂದಿದ್ದಾಯಿತು! ನಾನೂ ಅಲ್ಲಿಗೆ ಹೊರಟಿರುವೆನಾದುದರಿಂದ ಇನ್ನಾದರೂ ಧನುಸ್ಸನ್ನು ಬಿಡು ಗುರುಪುತ್ರನೇ' ಎಂದು ಪ್ರಾರ್ಥಿಸುವನು. ಆಗ ಅಶ್ವತ್ಥಾಮನು ಬೆರಗಾಗಿ 'ಭೀಮಸೇನನು ನಿನ್ನ ತೊಡೆಗಳನ್ನು ಮುರಿದಾಗ ನಿನ್ನ ದರ್ಪವನ್ನು ಮುರಿದನೇ?' ಎನಲು 'ಅವರಿಗೆ ನಾನು ಅಪಕಾರ ಮಾಡಿ, ದ್ಯೂತದಲ್ಲಿ ವಂಚಿಸಿ, ದ್ರೌಪದಿಯ ವಸ್ತ್ರಾಪಹಾರ ಮಾಡಿಸಿ, ಅಭಿಮನ್ಯುವನ್ನು ಕೊಲ್ಲಿಸಿದುದಕ್ಕೆ ಅವರೇನೋ ಸ್ವಲ್ಪ ಮಟ್ಟಿಗೆ ಪ್ರತೀಕಾರ ಮಾಡಿದಂತಾಯಿತಲ್ಲವೆ?' ಎಂದು ಸಾಧಿಸಿದರೂ ಅದನ್ನು ಕೇಳದೆ ತಾನು ಪ್ರತಿಜ್ಞೆಮಾಡಿದ್ದಾಯಿತಲ್ಲವೇ ಎಂದು ಅಶ್ವತ್ಥಾಮನೇ ಹೊರಟುಬಿಟ್ಟ. ಹೊರಡುವಾಗ ಅಶ್ವತ್ಥಾಮನು ದುರ್ಜಯನಿಗೆ ಪಟ್ಟಕಟ್ಟಿದುದನ್ನು ಧೃತರಾಷ್ಟ್ರ ಬಲರಾಮರೂ ನೋಡುವರು. ಆಗಲೇ ದುರ್ಯೋಧನನ ಪ್ರಾಣವೂ ಹೊರಡಲನುವಾಗಲು, ಶಂತನು ಮೊದಲಾದ ತನ್ನ ಅಜ್ಜಂದಿರು ಅವನಿಗೆ ಕಾಣಿಸಿಕೊಳ್ಳುವರು. 'ಅಭಿಮನ್ಯುವೂ ಇಂದ್ರನ ಕೈಹಿಡಕೊಂಡು ಬರುವಂತಿದೆ. ಊರ್ವಶ್ಯಾದಿಗಳೂ ಬಂದು ಕರೆಯುವಂತಿದೆಯಲ್ಲಾ! ಸಹಸ್ರಹಂಸ ಪ್ರಯುಕ್ತವಾದ ವಿಮಾನವೂ ನನ್ನನ್ನು ಕರೆದೊಯ್ಯಲು ಬಂದಿರುವುದಲ್ಲಾ!' ಎಂದು ಹೇಳಿ ಮತ್ತೆ ಆ ವಿಮಾನದಲ್ಲಿ ಕುಳಿತು—ಅಶ್ವತ್ಥಾಮ ಬಲದೇವರೂ ನೋಡುತ್ತಿದ್ದಂತೆ,—ತಂದೆ ತಾಯಂದಿನೂ ಕೇಳುತ್ತಿದ್ದಂತೆ—ದುರ್ಯೋಧನನು ವೀರಸ್ವರ್ಗವನ್ನೇರಿದನು. ಆಗ ಧೃತರಾಷ್ಟ್ರನು ಪುತ್ರವಿಯೋಗವನ್ನು ತಾಳಲಾರದೆ ರಾಜ್ಯವನ್ನು ತೊರೆದು ಪುಣ್ಯ ತಪೋವನಗಳಿಗೆ ಹೊರಟುಹೋಗುವನು. (ಭಾರತದ ಕಥೆಯ ಪ್ರಕಾರ ಅನೇಕ ದಿನಗಳವರೆಗೆ ಯುಧಿಷ್ಠಿರನೊಡನೆ ಇದ್ದು ಕಡೆಗೆ ವಿದುರನ ಮಾತಿನಿಂದ ಯಾರಿಗೂ ತಿಳಿಯದಂತೆಯೇ ಕಾಡಿಗೆ ಹೊರಟನೆಂದಿದೆ. ಅಶ್ವತ್ಥಾಮನೂ ಸೌಪ್ತಿಕ ವಧಕ್ಕೆ ಹೊರಟನು. ಬಲದೇವನೂ ಭರತವಾಕ್ಯದಲ್ಲಿ ವೈರಿಗಳನ್ನೆಲ್ಲಾ ಗೆದ್ದ ರಾಜನು ಭೂಮಿಯಲ್ಲಿ ಎಲ್ಲರೂ ಕ್ಷೇಮವಾಗಿರುವಂತೆ ಪಾಲಿಸಲೆಂದು ಪ್ರಾರ್ಥಿಸಿ ಹೋಗುವನು.

ಬಾಲಚರಿತದ ಕಥೆಯೆಂದರೆ ಕಂಸವಧದ ಕತೆ. ಪತಂಜಲಿಯು ತನ್ನ ಕಾಲದಲ್ಲಿ ಶೋಭನಿಕರು ಕಂಸನನ್ನು ಪ್ರತ್ಯಕ್ಷವಾಗಿ ಕೊಲ್ಲುತ್ತಿದ್ದರೆಂದುದಾಹರಿಸಿ

ದಾಗ ಇದನ್ನೇ ನಿರ್ದೇಶಿಸಿರಬೇಕೆಂದು ಹೇಳಬೇಕು. ಇದರ ಕಥೆಗೂ ಈಗ ಉಪಲಬ್ಧವಿರುವ ಭಾಗವತ ಪುರಾಣಕ್ಕೂ ಹೆಚ್ಚಿನ ಭೇದವಿಲ್ಲದಿದ್ದರೂ ಒಂದೆರಡು ಭೇದಗಳನ್ನಾಗಲೇ ವಿವರಿಸಿ ಭಾಸನ ಕಾಲದಲ್ಲಿ ಈಗ ನಮಗೆ ಸಿಕ್ಕಿರುವ ಭಾಗವತ ಪುರಾಣವು ಇದ್ದಿರಲಾರದು. ಆತನ ಕಾಲದಲ್ಲಿ ಇದಕ್ಕಿಂತಲೂ ಪ್ರಾಚೀನವಾದ ಭಾಗವತವೆಂಬ ಆದಿಕಾವ್ಯವೇ ಇನ್ನೊಂದಿರಬೇಕೆಂದೂಹಿಸಿದ್ದೇವೆ. ಹರಿವಂಶ ವಿ. ಪು. ಗಳಿಗಿಂತಲೂ ಭಾಸನು ಪ್ರಾಚೀನನಿರಬಹುದೆಂತಲೂ ಊಹಿಸಲಾಗಿದೆ. ಪ್ರಾಯಶಃ ಈ ನಾಟಕವನ್ನೋದಿಯೇ ಪುಷ್ಯಮಿತ್ರನಿಗೆ ತನ್ನ ಸ್ವಾಮಿಯಾದ ಬೃಹದ್ರಥನನ್ನು ಕೊಲ್ಲುವರೆ ಸ್ಫೂರ್ತಿಯು ದೊರಕಿರಲೂಬಹುದು. ಈ ನಾಟಕದ ಎರಡನೆಯ ಅಂಕದಲ್ಲಿ ಕಂಸನಿಗೆ ಅನೇಕ ಅಪಶಕುನವುಂಟಾಗಿ, ಮಧೂಕಋಷಿಶಾಪವು ಚಂಡಾಲಕನ್ಯೆಯರೊಡನೆ ಇವನ ದೇಹವನ್ನು ಪ್ರವೇಶಿಸಿ ಅವನ ರಾಜಶ್ರೀಯನ್ನು ಹೊರಗೆ ತಳ್ಳಿದಂತೆಯೇ ಅವನಿಗೆ ಭಾಸವಾದ ದೃಶ್ಯವು ಅತೀವ ಭಯಂಕರವಾಗಿ ಅತ್ಯದ್ಭುತವಾಗಿ ಸಾಹಿತ್ಯೇತಿಹಾಸದಲ್ಲಿ ಅನ್ಯಾದೃಶವಾಗಿದೆ.

ಇಲ್ಲಿಯ 'ಸೋಽಹಂ ಯಮಸ್ಯ ಭಯದೋ' ಎಂಬ II 3ನೆಯ ಶ್ಲೋಕಕ್ಕೆ ವಿಷ್ಣುಪುರಾಣ V 46–7 ವ್ಯಾಖ್ಯಾನದಂತಿದೆ. ಕಿಂ ನ ದೃಷ್ಟೋಽಸ್ ಮರಪತಿಃ ಮಯಾ ಸಂಯೋಗಮೇತ್ಯಸಃ । ಪೃಷ್ಠೇನೈವವಹನ್ ಬಾಣಾನ ಪಗಚ್ಛನ್ನ ವಕ್ಷಸಾ । ಮದ್ರಾಷ್ಟ್ರೇ ವಾರಿತಾ ವೃಷ್ಟಿಃ ಯದಾ ಶಕ್ರೇಣ ಕಿಂತದಾ । ಮದ್ಬಾಣ ಭಿನ್ನೈಃ ಜಲದೈಃ ಅಪೋಮುಕ್ತಾ ಯಥೇಪ್ಸಿತಾಃ ॥

೧೩

ಬೃಹತ್ಕಥೆಯನ್ನವಲಂಬಿಸಿದ ನಾಟಕಗಳು

ಇನ್ನುಳಿದವು ಚಾರುದತ್ತ, ಅವಿಮಾರಕ, ಪ್ರತಿಜ್ಞಾ ಯೌಗಂಧರಾಯಣ, ಸ್ವಪ್ನವಾಸವದತ್ತ. ಚಾರುದತ್ತ ನಾಟಕವೇ ಪ್ರಾಚೀನವೋ ಮೃಚ್ಛಕಟಿಕವನ್ನೇ ಸಂಗ್ರಹಿಸಿ ಚಾರುದತ್ತವನ್ನಾಗಿ ಮಾಡಿದರೋ ಎಂಬುದೇ ದೊಡ್ಡ ಸಮಸ್ಯೆಯಾಗಿಬಿಟ್ಟಿದೆ. ಇದನ್ನೇ ಅಭಿನವಗುಪ್ತನು ದರಿದ್ರ ಚಾರುದತ್ತವೆಂದು ಉದಾಹರಿಸಿದ್ದು. ಈ ಚಾರುದತ್ತ ನಾಟಕದ 4 ಅಂಕಗಳಲ್ಲಿ 55 ಶ್ಲೋಕಗಳು ಮಾತ್ರ ಇದ್ದು, 3ನೆಯ ಅಂಕದಲ್ಲಿ ಒಂದು ಶ್ಲೋಕವೂ ಇಲ್ಲದಿರುವುದು ವಿಚಿತ್ರವಾಗಿದೆ. ಭಟ್ಟನಾರಾಯಣ, ಭವಭೂತ್ಯಾದಿ ಅರ್ವಾಚೀನ ನಾಟಕಗಳಲ್ಲಿ ಮಾತಿಗೊಂದು ಶ್ಲೋಕಗಳಂತೆ ಬರುವುದನ್ನು ನೋಡುವಾಗ ಈ ನಾಟಕದ ಪ್ರಾಚೀನತೆಯು ತಾನಾಗಿಯೇ ತೋರುವುದು. ಮೃಚ್ಛಕಟಿಕದಲ್ಲಿ ಮೊದಲಿನ ನಾಲ್ಕು ಅಂಕಗಳಲ್ಲಿ ಪ್ರಾಯಶಃ ಇವೇ ವಾಕ್ಯಗಳೂ ಶ್ಲೋಕಗಳೂ ಬಂದಿದ್ದರೂ, ಅಲ್ಲಿ 143 ಶ್ಲೋಕಗಳಿರುವುದೂ, ಭಾಸನ ಶೈಲಿಯು ವ್ಯಂಗ್ಯ ಮರ್ಯಾದೆಯಿಂದ ಅತಿ ಸಂಕ್ಷಿಪ್ತವಾಗಿದ್ದು ಶೂದ್ರಕನ ಅದೇನಾಲ್ಕು ಅಂಕಗಳೇ ಭಾಸನ ಸಾಧಾರಣ ಎರಡರಷ್ಟಿರುವುದೂ ಗಮನಾರ್ಹವಾಗಿವೆ. ಚಾರುದತ್ತ ನಾಟಕದಲ್ಲಿ ನಾಂದೀ ಭರತವಾಕ್ಯಗಳಿಲ್ಲದಿರುವುದು, ಸೂತ್ರಧಾರನು ಪ್ರಾಕೃತದಲ್ಲಿಯೇ ಮಾತನಾಡುವುದು ಸಂಸ್ಕೃತನಾಟಕಗಳಲ್ಲಿ ಅಪೂರ್ವವಾಗಿವೆ. ಕರ್ಣಭಾರದಲ್ಲಿ ಬ್ರಾಹ್ಮಣರು ಪಾಕೃತದಲ್ಲಿ ಮಾತನಾಡುವುದನ್ನೂ ಗಮನಿಸಿದರೆ, ಪ್ರಾಯಶಃ ನಾಟಕಗಳಲ್ಲಿ ಬ್ರಾಹ್ಮಣರು ಸಂಸ್ಕೃತವನ್ನೇ ಮಾತನಾಡಬೇಕೆಂಬ ನಿಯಮವು ಬರುವುದಕ್ಕಿಂತ ಮುಂಚೆಯೇ ಈ ನಾಟಕವನ್ನು ಬರೆದಿರಬೇಕೆಂದೂಹಿಸುವರೆ ಕಾರಣವಾಗುತ್ತದೆ.

ಮೃಚ್ಛಕಟಿಕದಿಂದ ರಾಜಕೀಯ ವಿಷಯಗಳನ್ನೂ, ಕೋರ್ಟು ವ್ಯವಹಾರವನ್ನು ತಳ್ಳಿ ಚಾರುದತ್ತವನ್ನು ಸಂಗ್ರಹಿಸಿದರೆಂಬುದನ್ನು ವಿಚಾರಿಸೋಣ.

ರೋಹಸೇನನ ಸುದ್ದಿಯಿದ್ದದ್ದನ್ನು ಇಲ್ಲಿ ಬೇಕಂತಲೇ ಬಿಟ್ಟದ್ದಾರಂತೆ. ಹೀಗೆಯೇ ಸಂಗ್ರಹಿಸಿದ್ದರಿಂದಲೇ '**ಪ್ರವೇಶ್ಯತಾಂ**' ಎಂಬ ಣಿಜಂತ ಪ್ರಯೋಗವನ್ನು ಮೃಚ್ಛಕಟಿಕದಲ್ಲಿ ರೋಹಸೇನನಿದ್ದಿದ್ದರಿಂದ ಸಾಧು, ಚಾರುದತ್ತದಲ್ಲಿ ರೋಹಸೇನ ನಿಲ್ಲದಿರುವಾಗಲೂ ಅದೇ ಣಿಜಂತವನ್ನಿಟ್ಟಿರುವುದು ವ್ಯಾಕರಣ ರೀತ್ಯಾ ಅಸಾಧು ವೆಂತೂ ದೇವಧರ ಮಹಾಶಯರು ವಾದಿಸಿರುವರು. ಆಗಿನ ಕಾಲದಲ್ಲಿ ಹೀಗೆ ಉಪಯೋಗಿಸುವುದೇನೂ ಅಸಾಧುವಾಗಿದ್ದಿಲ್ಲವೆಂಬುದನ್ನು ಕೆಲವು ಉದಾಹರಣೆ ಗಳಿಂದ ಸಾಧಿಸಬಹುದಾಗಿದೆ. ಪ್ರತಿಮಾ IV 12 ಶ್ಲೋಕದ ಅನಂತರದಲ್ಲಿ ಭರತನು ಬಂದಿರುವನೆಂದ ತಿಳಿದು ಕೂಡಲೇ ರಾಮನು ಲಕ್ಷ್ಮಣನಿಗೆ ಅವನನ್ನು ಕರಕ್ಕೊಂಡು ಬಾ ಎನ್ನುವಾಗ 'ಸತ್ಕೃತ್ಯ ಶೀಘ್ರಂ ಪ್ರವೇಶ್ಯತಾಂ ಕುಮಾರಃ' ಎಂಬ ಲ್ಲಿಯೂ ಇದೇ ತರದ ಣಿಜಂತ ಪ್ರಯೋಗವು ಬಂದಿದೆ. ಕಾದಂಬರಿಯಲ್ಲಿ ಬಾಣನೂ, ಇಂದ್ರಾಯುಧವನ್ನು ಕರೆದುಕೊಡು ಬಾ ಎಂದು ಹೇಳುವರೆ, '**ಪ್ರವೇಶ್ಯತಾಂ** ಇಂದ್ರಾಯುಧಃ' ಎಂದೇ ಹೇಳಿರುವನು. ರೋಹಸೇನನನ್ನೆತ್ತಿ ಕೊಂಡು ಬಂದಂತೆ, ಈ ಕುದುರೆಯನ್ನು ಅಥವಾ ಭರತನನ್ನೂ ಎತ್ತಿಕೊಂಡು ಬರಬೇಕೆಂಬ ಅರ್ಥವನ್ನು ಯಾರೂ ಸ್ವೀಕರಿಸುವುದಿಲ್ಲ. ಸಾಲದ್ದಕ್ಕೆ ಎರಡನೆಯ ಅಂಕದಲ್ಲಿ ಸಂವಾಹಕನು ವಸಂತಸೇನೆಯ ಹತ್ತಿಗ ತನಗೊಂದು ಕೆಲಸಕೊಡ ಬೇಕೆಂದು ಪ್ರಾರ್ಥಿಸಿ ಅವಳು ನಿರಾಕರಿಸಿ ಚಾರುದತ್ತನಂತಹ ಸ್ವಾಮಿಯೇ ನಿನಗೆ ದೊರಕಬೇಕು ಅಥವಾ ಪುನರ್ದರ್ಶನವಿರಲಿ ಎಂದಾಶಿಸಿದರೆ, ಚಾರುದತ್ತ ಕರ್ತನಿಗೆ ಮೃಚ್ಛಕಟಿಕದ ಪರಿಚಯುವಿದ್ದೇ ತೀರಬೇಕೆಂದೂ ಇವರು ವಾದಿಸಿರು ವರು. ಈ ಸಂದರ್ಭದಲ್ಲಿ ಬೀಳ್ಕೊಡುವಾಗ ಎಲ್ಲರೂ ಪುನರ್ದರ್ಶನವನ್ನಾಶಿಸು ವುದು ಸಹಜವೆಂದೇ ನಮ್ಮ ಉತ್ತರ. ವಸಂತಸೇನೆಯು ಚಾರುದತ್ತನಂಥ ಸ್ವಾಮಿ ಯನ್ನೇ ಆಶ್ರಯಿಸೆಂದರೆ ಅದಕ್ಕೆ ಕಾರಣವೇ ಬೇರೆಯಾಗಿರಲೂಬಹುದು. ಚಾರುದತ್ತನಿಗಿಲ್ಲದ ಸಂವಾಹಕತನವು ತನಗೇಕೆ ಎಂದು ನಿರಾಕರಿಸಬಹುದು. ಅಥವಾ ಚಾರುದತ್ತನಿಗೇ ಪುನಃ ಐಶ್ವರ್ಯವು ಬರಲಿ ಅಂತ ಅವಳು ಪ್ರಾರ್ಥಿಸಿರಲೂ ಬಹುದು. ಮೃಚ್ಛಕಟಿಕ 1ನೆಯ ಅಂಕದಲ್ಲಿ 51ನೆಯ ಶ್ಲೋಕದ ಅನಂತರ ಶಕಾರನು ಹೋಗುವಾಗ 'ಅಧಿಕರಣೇ ವ್ಯವಹಾರಂ ವಿನಾ ಲಘು ನಿರ್ಯಾತ ಯಿತಃ' ಎಂಬುದನ್ನು ಮರೆಮಾಚಿ; 'ದಾರುಣಃ ಕ್ಷೋಭೋ ಭವಿಷ್ಯತಿ' ಎಂದು ಮಾತ್ರ ಬೆದರಿಸಿದರೆ ಅಲ್ಲಿ ಕೋರ್ಟು ವ್ಯವಹಾರದ ಸುದ್ದಿ ಏಕೆ ಬಂದಿದೆಯೋ ಎಂದು ತಿಳಿಯದು. ಮೃಚ್ಛಕಟಿಕದ ಚೇಟನು ಚಾರುದತ್ತನಲ್ಲಿಲ್ಲದಿದ್ದರೆ ಅವನನ್ನು ಬೇಕೆಂತಲೇ ಬಿಟ್ಟರೆಂದು ಯಾಕೆ ತಾನೇ ಊಹಿಸಬೇಕು ? ಭಾಸನಿಗೆ ಅವನಿಂದ ಏನೂ ವಿಶೇಷ ಪ್ರಯೋಜನವಿಲ್ಲದಿರುವಾಗ ಅವನನ್ನುಪಯೋಗಿಸ

ದಿದ್ದರೆ ಅದು ಅವನ ತಪ್ಪೇ ? ರಾಜಕೀಯ ಹಿನ್ನೆಲೆಯನ್ನು ಬಿಟ್ಟುಬಿಟ್ಟಿರುವುದೂ ಗಮನಕವೆಂದು ವಾದಿಸುವರು. ಆದರೆ ಚಾರುದತ್ತವನ್ನೇ ಓದಿದರೆ ಅದರ ಮಟ್ಟಿಗೆ ಅದು ಸಂಪೂರ್ಣವಾಗಿದೆಯೆಂತಲೇ ಒಪ್ಪಬೇಕು. ಮೃಚ್ಛಕಟಿಕದ ಕೆಲವು ಸಮಸ್ಯೆಗಳನ್ನು ಚಾರುದತ್ತದಲ್ಲಿ ಬೇಕೆಂತಲೇ ಇದರಲ್ಲಿ ಬಿಟ್ಟಿರುವರೆಂತ ವಾದಿಸಿದರೆ ಈ ಚಾರುದತ್ತದಲ್ಲಿ ಬಂದಿರುವ ಕೆಲವು ಶ್ಲೋಕಗಳನ್ನು ಮೃಚ್ಛಕಟಿಕ ದಲ್ಲಿ ಬಿಟ್ಟಿದ್ದನ್ನು ನಾವು ಕಾಣುವುದಿಲ್ಲವೆ ? ಈ ತರದ ಒಂದು ಶ್ಲೋಕವೆಂದರೆ 'ತಥಾ ವಿಭವಮಂದಃ ಅಪಿ ಜನ್ಮಭೂಮಿವ್ಯಪೇಕ್ಷಯಾ | ಗೃಹಂ ವಿಕ್ರಯ ಕಾಲೇsಪಿ **ನೀಲಸ್ನೇಹೇನ** ರಕ್ಷತಿ ||' ಇಲ್ಲಿ ನೀಲಸ್ನೇಹವೆಂಬ ಪದವು ಮೃಚ್ಛ ಕಟಿಕದ ಕರ್ತನಿಗೆ ಅರ್ಥವಾಗದೆ ಆ ಶ್ಲೋಕವನ್ನೇ ಬಿಟ್ಟನೆಂದೇ ಹೇಳಬೇಕಾಗಿದೆ. ಅಮರಕೋಶದಲ್ಲಿ ಈ ಶಬ್ದವಿಲ್ಲದೆ, ಹೆಚ್ಚು ಬಳಕೆಯಲ್ಲಿಲ್ಲದ ಯಾದವ ಕೋಶ ದಲ್ಲಿಯೇ ಇದರ ಅರ್ಥವನ್ನು ನಾವು ಹುಡುಕಬೇಕು ಅಲ್ಲಿ ತಾನೇ 'ನೀಲೀರಾಗಃ ಸ್ಥಿರ ಪ್ರೇಮಾ' ಎಂಬ ಅರ್ಥವು ಕೊಡಲ್ಪಟ್ಟಿದೆ. ಹೀಗೆಯೇ 'ಕರ್ತವ್ಯಕರಸ್ತ್ರೀ ಕೃತಸಂಕೇತ ಇವ ಶಾಕ್ಯಶ್ರಮಣಕಃ' ಎಂಬ ಶಬ್ದವನ್ನು ಮೃಚ್ಛಕಟಿಕದಲ್ಲಿ ಅರ್ಥ ವಾಗದೆ ಬಿಟ್ಟಿದ್ದಾರೆ. ಹೀಗೆಯೇ ಸಮುದ್ರಪತ್ತನ ಸಾರಭೂತಃ, ಕಲ್ಯವರ್ತ, ವರಂಡಲಂಬಕ ಇತ್ಯಾದಿ ಪದಗಳ ಸುದ್ದಿಯೇ ಮೃಚ್ಛಕಟಿಕದಲ್ಲಿ ಕಾಣುವುದು ಇಲ್ಲ. ಪ್ರಾಯಶಃ ಅವುಗಳನ್ನು ಕಾಲಿದಾಸ, ಭವಭೂತಿ, ಬಾಣಾದಿ ಕ್ರಿಸ್ತ ಶಕದ ಅನಂತರ ಬಂದ ಕಾವ್ಯಗಳಲ್ಲಿ ನಾವು ಕಾಣುವುದಿಲ್ಲವೆಂದರೂ ತಪ್ಪಾಗ ದೆಂದು ತೋರುತ್ತದೆ. ಇದರಲ್ಲಿ ಸಮುದ್ರಪತ್ತನ ಎಂಬ ಶಬ್ದವನ್ನು ದೇವಧರ ಮಹಾಶಯರೇ ಎತ್ತಿ ತೋರಿಸಿ ತಮಗರ್ಥವಾಗುವುದಿಲ್ಲವೆಂದೊಪ್ಪಿದ್ದಾರೆ. ಈ ಶಬ್ದಗಳನ್ನು ದಿಕ್ಪ್ರದರ್ಶನ ನ್ಯಾಯದಿಂದ ಮಾತ್ರ ಎತ್ತಿತೋರಿಸಿದ್ದು, ಈ ತರದ ಇನ್ನೂ ಅನೇಕ ಅರ್ಥವಾಗದ ಶಬ್ದಗಳನ್ನು ಚಾರುದತ್ತದಿಂದ ಬಿಟ್ಟಂತೆ ತೋರುತ್ತದೆ. ಚಾರುದತ್ತದಲ್ಲಿ ತಿಥಿಗಣನದಲ್ಲಿ ತಪ್ಪಾಗಿ ಮೃಚ್ಛಕಟಿಕದಲ್ಲಿ ಅದು ಸರಿಪಡಿಸಿದೆಯಾದರೆ ಇದಕ್ಕೂ ಇದೇ ಕಾರಣವೇ ಅನ್ವಯಿಸುತ್ತದೆ. ಕಡೇಗೆ ಬರೆದ ಮೃಚ್ಛಕಟಿಕದಲ್ಲಿ ಈ ತಪ್ಪನ್ನು ಬೇಕೆಂದೇ ತಿದ್ದಿದ್ದಾರೆಂದೇ ಊಹಿಸಬೇಕು. ಹೀಗೆಯೇ ವಸಂತಸೇನೆಯ ಸಪ್ತಭೂಮಿಕಾ ಪ್ರಾಸಾದವನ್ನು ನಾಲ್ಕೇ ಪಂಕ್ತಿಗಳಲ್ಲಿ ಭಾಸನು ವರ್ಣಿಸಿದ್ದರೆ, ಅಲ್ಲಿಯೂ ಇದನ್ನೇ ಕಾರಣ ವಾಗಿಟ್ಟುಕೊಂಡರೆ ಎಲ್ಲಾ ಸರಿಹೋಗುವುದಿಲ್ಲವೇ ?

ಇನ್ನು ಸಂಗ್ರಹವಾಗಿ ಚಾರುದತ್ತನ ಕಥೆ. ದುಷ್ಟ ಚಾಳಿಗಳಿಲ್ಲದೆ, ಕರ್ಣನಂತೆ ದಾನಶೂರನಾಗಿ ಸಂಪತ್ತನ್ನೆಲ್ಲಾ ಕಳಕೊಂಡ ಉತ್ತಮ ಬ್ರಾಹ್ಮಣ ವರ್ತಕನಾದ ಚಾರುದತ್ತನೊಬ್ಬನು ಶ್ರೀಮಂತರ ವಾಡೆಯಲ್ಲಿ ಪುರಾತನವಾದ

ಮನೆಯಲ್ಲಿ ವಾಸವಾಗಿದ್ದನು. ಅದೇ ಊರಿನಲ್ಲಿದ್ದ ಶ್ರೀಮಂತ ವೇಶ್ಯೆಯಾದ ವಸಂತಸೇನೆಯು ಹುಟ್ಟಿದ್ದು ವೇಶ್ಯೆಯರ ಕುಲದಲ್ಲಿಯಾದರೂ ಸುಖಸಂಪತ್ತು ಬಯಸದೆ ಇವನ ಗುಣಗಳಿಗೋಸ್ಕರ ಇವನಲ್ಲಿಯೇ ಅನುರಕ್ತಳಾಗಿದ್ದಳು. ರಾಜನ ಹೆಂಡತಿಯ ತಮ್ಮನಾದ ಶಕಾರನೆಂಬುವನೂ ಇವಳಲ್ಲಿ ಅನುರಕ್ತನಾಗಿದ್ದರೂ, ಇವಳು ಅವನನ್ನು ಕಣ್ಣೆತ್ತಿ ಕೂಡಾ ನೋಡುತ್ತಿರಲಿಲ್ಲ. ತೋರಿಕೆಯಮಟ್ಟಿಗಾದರೂ ಇವನು ಅತಿ ಮೂರ್ಖನಂತಿದ್ದು, ತಾನು ಶ್ರೀಮಂತನ ಪುತ್ರನಾದ್ದರಿಂದಲೂ ಅವಳು ತನ್ನನ್ನು ವರಿಸಲೇಬೇಕೆಂತ ಇವನು ವಾದಿಸುತ್ತಿದ್ದನು. ಅವಳು ಇವನನ್ನು ಕಾಮಿಸದಿರಲು ಅತೀವ ಕುಪಿತನಾಗಿ ಅವಳನ್ನು ಹೇಗಾದರೂ ವಶಪಡಿಸಿಕೊಳ್ಳಬೇಕೆಂದು ಹಾತೊರೆಯುತ್ತಿದ್ದನು. ಒಂದು ದಿನ ಸಾಯಂಕಾಲ ಅಕಸ್ಮಾತ್ ಅವಳೊಬ್ಬಳೇ ಬೀದಿಯೊಂದರಲ್ಲಿ ಹೋಗುತ್ತಿರುವುದನ್ನು ಕಂಡು, ತಾನೂ ತನ್ನ ಸೇವಕನಾದ ವಿಟನು—ಇಬ್ಬರೂ ಸೇರಿಕೊಂಡು ಇವಳನ್ನಡ್ಡಕಟ್ಟಿದರು. ಸಂರಕ್ಷಕರಾರೂ ಇಲ್ಲದಿದ್ದರೂ ಧೈರ್ಯಗುಂದದೆ ವಸಂತಸೇನೆಯು ಇವರನ್ನು ನಿರಾಕರಿಸಿಯೇ ಬಿಟ್ಟಳು. ತಾವಿಬ್ಬರಿದ್ದೇವೆಂದು ಧೈರ್ಯದಿಂದ ಅವಳನ್ನಡ್ಡಗಟ್ಟುವಾಗ ಅವಳು ದಿಕ್ಕುತೋಚದೆ ಕಳವಳಕ್ಕೊಳಗಾದಳು. ಆದರೆ ಕತ್ತಲೆಯಲ್ಲಿ ಅವಳು ದುಃಖಪಡುವಾಗ ವಿಟನು ಮೆಲ್ಲಗೆ ಅವಳ ಹೂಗಳೂ ಘಲ್ಘಲ್ ಎನ್ನುವ ನೂಪುರಗಳೂ ಅವಳಿಲ್ಲಿರುವಳೆಂದು ಸೂಚಿಸುವುವೆಂದು ಹೇಳಿದುದರಿಂದ, ಮೆಲ್ಲನೆ ಅವನ್ನು ಕಳಚಿಬಿಟ್ಟಳು. ಆದರೂ ಎಲ್ಲಿ ಹೊಕ್ಕುವುದೆಂದು ಪರಿತಪಿಸುತ್ತಿರುವಾಗ ಮೂರ್ಖನಾದ ಶಕಾರನು ಪಕ್ಕದಲ್ಲಿಯೇ ಎಡಭಾಗದಲ್ಲಿರುವ ಚಾರುದತ್ತನ ಮನೆಯೊಳಗೆ ಹೊಕ್ಕಬಹುದೋ ಏನೋ ಎಂದು ಹೇಳಿದುದನ್ನು ಕೇಳಿ, ಅದೇ ಸಮಯದಲ್ಲಿ ಅದೇ ಮನೆ ಬಾಗಿಲು ತೆರೆಯಲು, ಸಮಯ ಸಾಧಿಸಿ ಹೊರಗೆ ಬರುವವಳ ಕೈಯ್ಯಲ್ಲಿದ್ದ ದೀಪವನ್ನು ನಂದಿಸಿ ಒಳಗೆ ಹೊಕ್ಕಿಬಿಟ್ಟಳು. ಆಗತಾನೇ ಚಾರುದತ್ತನ ಸ್ನೇಹಿತನಾದ ಬ್ರಾಹ್ಮಣ ಮೈತ್ರೇಯನೂ ಮನೆಯ ಕೆಲಸದವಳಾದ ರದನಿಕೆಯೂ ನಾಲ್ಕು ಬೀದಿಗಳು ಕೂಡುವಲ್ಲಿ ಮಾತೃದೇವತೆಗಳಿಗೆ ಪೂಜೆ ಮಾಡುವರೆ ಪೂಜಾದ್ರವ್ಯಗಳನ್ನು ಹಿಡಕೊಂಡು ಹೊರಗೆ ಬರುತ್ತಿದ್ದರು. ಆಗ ದೀಪವು ಫಕ್ಕನೆ ನಂದಿಹೋಗಲು ಗಾಳಿಯಿಂದಲೇ ಹೀಗಾಗಿರಬಹುದೆಂದು ನಂಬಿ ದೀಪವನ್ನು ಪುನಃ ಹಚ್ಚಿಕೊಂಡು ಬರುವರೆ ಬ್ರಾಹ್ಮಣನು ಒಳಗೆ ಹೋದನು. ಆಗತಾನೇ ವೇಶ್ಯೆಯು ಒಳಗೆ ಹೊಕ್ಕಳು, ರದನಿಕೆಯೊಬ್ಬಳೇ ಹೊರಗುಳಿದಳು. ಕತ್ತಲಲ್ಲಿ ಶಕಾರನು ಇದನ್ನು ತಿಳಿಯದೆ ಅವಳ ಕೂದಲನ್ನು ಹಿಡಿದು ಅವಳನ್ನು ಬಲಾತ್ಕರಿಸಲು, ಅವಳು ಕಂಗೆಟ್ಟು ಹತಾಶಳಾಗಿ ಅಳಲಾರಂಭಿಸಿದಳು. ಇಷ್ಟರಲ್ಲಿ ಒಳಗಿನಿಂದ ದೀಪವನ್ನು ತಂದ

ಬ್ರಾಹ್ಮಣನು ಹೊರಗೆ ಬಂದು 'ಇದೇನನಾಚಾರ'ವೆಂದು ಗದರಿಸಲು, ಶಕಾರನು ಹೆದರಿದರೂ ಹೆದರದವನಂತೆ ನಟಿಸುತ್ತಾ 'ನಾನು ಅಭಿಸರಿಸುತ್ತಿದ್ದ ಈ ಸೂಳೆಯು (ನನ್ನ) ಅಲಂಕಾರಗಳೊಡನೆ ಇಲ್ಲಿ ಹೊಕ್ಕಳು. ನಾಳೆಯೊಳಗೆ ಆವಳನ್ನು ನನ್ನಲ್ಲಿಗೆ ಕಳುಹಿಸದಿದ್ದರೆ ಅನರ್ಥಕ್ಕೆ ಕಾರಣವಾದೀತು' ಎಂದು ಗದರಿಸಿ, ಅವರಿಬ್ಬರೂ ಆದಷ್ಟು ಬೇಗನೆ ಓಡಿಹೋದರು. ಈ ಸಂದರ್ಭದಲ್ಲಿ ಒಳಗೆ ಹೋದ ವಸಂತಸೇನೆಯನ್ನು ಚಾರುದತ್ತನು ಕತ್ತಲೆಯಲ್ಲಿ ರದನಿಕೆಯೆಂದೇ ತಿಳಿದು ತನ್ನ ಉತ್ತರೀಯವನ್ನು ತರಹೇಳಿದಾಗ ಅವಳೇನೋ ಅದನ್ನೆತ್ತಿದ್ದರೂ ಅದರ ಪರಿಮಳವನ್ನಾಘ್ರಾಣಿಸುವುದರಲ್ಲಿಯೇ ನಿರತಳಾಗಿ, ಸುಮ್ಮನಿದ್ದಳು. ಇದನ್ನು ಕಂಡು ಬೆರಗಾಗಿ ಚಾರುದತ್ತನು ವಿಷಯ ಜಿಜ್ಞಾಸೆಯಲ್ಲಿದ್ದಾಗ ಮೈತ್ರೇಯನೂ ರದನಿಕೆಯೂ ಒಳಗೆ ಬಂದರು. ಆಗತಾನೇ ನಿಜಾಂಶವು ಹೊಳೆಯಲು, ಧೈರ್ಯ ದಿಂದ ವಸಂತಸೇನೆಯು ಇನ್ನೊಂದು ಸಲ ಅಲ್ಲಿಗೆ ಬರಲು ಅನುಕೂಲವಾಗು ವಂತೆ ತನ್ನ ಅಲಂಕರಣಗಳನ್ನು ಅವನಲ್ಲಿ ನ್ಯಾಸವಾಗಿಟ್ಟು 'ಈ ಹಾಳು ಆಭರಣಗಳಿಗೋಸ್ಕರ ಪಾಪಿಷ್ಠರು ನನ್ನನ್ನು ಅನುಸರಿಸುತ್ತಿರುವರು' ಎಂದು ಬೇಡುವಳು. ರಸಿಕನಾದ ಚಾರುದತ್ತನೂ ರೋಗಿ ಬಯಸಿದ್ದೂ ಹಾಲು ವೈದ್ಯ ಹೇಳಿದ್ದೂ ಹಾಲೆಂದು ಒಳಗಿಂದೊಳಗೆ ಸಂತುಷ್ಟನಾಗಿ ಒಪ್ಪಿದನು. ಮೈತ್ರೇಯನ ಜೊತೆಗೆ ಇವಳು ತನ್ನ ಮನೆಗೆ ಹೊರಟುಹೋಗುವಳೆಂಬಲ್ಲಿಗೆ ಮೊದಲನೆಯಂಕವು ಮುಗಿಯಿತು.

ಎರಡನೆಯ ಅಂಕದಲ್ಲಿ ವಸಂತಸೇನೆಯು ತನ್ನ ಮನೆಯಲ್ಲಿಯೇ ಚಾರುದತ್ತನನ್ನೇ ಯೋಚಿಸಿಕೊಂಡು ಹೇಗೆ ಅವನಲ್ಲಿಗೆ ಪುನಃ ಹೋದೇನೆಂದು ಆಲೋಚಿಸುತ್ತಿರುವಾಗ ಅವಳ ಸಖಿಯೊಬ್ಬಳು ಇವಳಿಂದಲೇ ಅವಳ ಅನುರಾಗದ ಸುದ್ದಿಯನ್ನು ಬಾಯಿಬಿಡಿಸುವಳು. ಆಗ ಅಕಸ್ಮಾತ್ತಾಗಿ ಅಲ್ಲಿ ನಡೆದ ಕೆಲವು ಘಟನೆಗಳಿಂದ ಅವಳ ಅನುರಾಗಕ್ಕೆ ಬೇರೂರಿ ಬಂದಂತಾಯಿತು. ಚಾರುದತ್ತನು ಶ್ರೀಮಂತನಾಗಿದ್ದಾಗ ಅವನ ಅಂಗಾಂಗಗಳನ್ನು ಸಂವಾಹಿಸುತ್ತಿದ್ದ ಸಂಬಳದ ಆಳೊಬ್ಬನು ಈಗ ಕೆಲಸವಿಲ್ಲದೆ ಜೂಜಾಟಾದಿ ಕೆಟ್ಟ ಚಾಳಿಗಳನ್ನಾರಂಭಿಸಿ, ಆಗ ತಾನೇ ಜೂಜಾಟದಲ್ಲಿ ಸೋಲಿಸಲ್ಪಟ್ಟು ಹತ್ತು ನಿಷ್ಕಗಳನ್ನು ಕೊಡಲಾಗದೆ ತಪ್ಪಿಸಿಕೊಳ್ಳುವರೆ ಓಡಿಹೋಗುತ್ತಿದ್ದವನು ಗಾಬರಿಯಿಂದ ಇವಳ ಮನೆಗೆ ಹೊಕ್ಕನು. ಅವನನ್ನು ಸಂತೈಸಿ ಅವನ ದುಃಖಕಾರಣವನ್ನು ತಿಳಿದು, ತನ್ನದೇ ಬಂಗಾರದ ಬಳೆಗಳನ್ನು ಸಭಿಕನಿಗೆ ಕೊಡಿಸಿ,ಸೂಳೆಯು ಅವನನ್ನು ಕಾಪಾಡಿದಳು. ಆ ಸಂವಾಹಕನು ಕೃತಜ್ಞತೆಯಿಂದ 'ನಿಮ್ಮಲ್ಲಿಯೇ ಕೆಲಸಕ್ಕೆ ನಾನು ನಿಲ್ಲಲೇ?' ಎಂದು ಪ್ರಾರ್ಥಿಸಿದಾಗ ಚಾರುದತ್ತನ ದೇಹಕ್ಕಿಲ್ಲದ ಸುಖವು ತನಗೆ ಯಾಕೆಂಬ

ಆಶಯದಿಂದಲೋ ಏನೋ 'ಅವನಿಗೆ ಪುನಃ ಇದೇ ಸುಖವು ಬಂದಾಗ ಅವನನ್ನೇ ಆಶ್ರಯಿಸುವಂತೆ' ಎಂದು ಹೇಳಲು ಅವನು ನಿರಾಶನಾಗಿ ಅತ್ತ ಹೋದುದೇ ತಡ, ಈ ವಸಂತಸೇನೆಯ ಮಾವುತನು ತನ್ನ ಪರಾಕ್ರಮದಿಂದ ತಾನು ಆನೆಯ ಸೊಂಡಿಲಿಂದ ಒಬ್ಬ ಸನ್ಯಾಸಿಯನ್ನು ರಕ್ಷಿಸಿದೆನೆಂದೂ ಆ ಧೈರ್ಯದ ಕೆಲಸವನ್ನು ಕಂಡು ಸಂತುಷ್ಟರಾದ ಪ್ರೇಕ್ಷಕರಲ್ಲೊಬ್ಬ ಮಹಾತ್ಮರು ತನಗೊಂದು ಇನಾಮನ್ನು ಕೊಡುವರೆಂದು ಬಂಗಾರದ ಬಳೆಗಳಿರುವಲ್ಲಿ ಕೈಯಾಡಿಸಿ, ಏನನ್ನೂ ಕಾಣದೆ ಕೊನೆಗೆ ಮೈಮೇಲೆ ಹೊದ್ದುಕೊಂಡ ಉತ್ತರೀಯವನ್ನೇ ಕರುಣಿಸಿದರೆಂದು ಹೇಳುವಾಗ, ವಸಂತಸೇನೆಯು ಕುತೂಹಲದಿಂದ ಯಾರದ್ದು, ತೋರಿಸೆಂದು ಕೇಳಲು, ಅಲ್ಲಿಂದಲೇ ಬೀದಿಯಲ್ಲಿ ಉತ್ತರೀಯವಿಲ್ಲದೆ ನಡೆದುಹೋಗುತ್ತಿದ್ದ ಚಾರುದತ್ತನನ್ನು ಕಂಡು ಇನ್ನಷ್ಟಾನಂದದಿಂದ ಉಬ್ಬುವಳು. ಆ ಉತ್ತರೀಯವನ್ನು ಅವನಿಂದ ಕಸಕೊಂಡು ಅದನ್ನು ತಾನೇ ಧರಿಸಿಕೊಳ್ಳುವಳು. ಇಲ್ಲಿ ಎರಡನೆಯ ಅಂಕವು ಮುಗಿಯುವುದು. ಮೂರನೆಯ ಅಂಕದಲ್ಲಿ ಚಾರುದತ್ತನು ನಡುರಾತ್ರಿಯಲ್ಲಿ ಸಂಗೀತ ಕಚೇರಿಯಿಂದ ಹಿಂದಕ್ಕೆ ಬಂದು ಮಲಗಿದ ಅನಂತರ ಕಳ್ಳನೊಬ್ಬನು ಆ ಸೂಳೆಯು ಒತ್ತೆಯಿಟ್ಟ ಚಿನ್ನಾಭರಣಗಳನ್ನು ಕದ್ದುಕೊಂಡು ಹೋಗುವನು. ದೈವವಶಾತ್ ಕದ್ದವನು ನಿಜವಾದ ಕಳ್ಳನಲ್ಲ ಅವನು ಪರದೇಶದ ಒಬ್ಬ ಬ್ರಾಹ್ಮಣ, ವಸಂತಸೇನೆಯ ದಾಸಿಯಾದ ಮದನಿಕೆಯಲ್ಲಿ ಅನುರಕ್ತನಾಗಿ ಅವಳನ್ನು ಪ್ರಾರ್ಥಿಸಿದಲ್ಲಿ ಅವಳಿಗೆ ತಕ್ಕ ಬೆಲೆಯನ್ನು ಕೊಟ್ಟರೆ ಅವಳನ್ನು ಒಪ್ಪಿಸಲೊಪ್ಪಿಸಿದ್ದಳು. ಅವಳನ್ನು ಕೊಂಡುಕೊಳ್ಳುವರೆ ಹಣವನ್ನು ಕದ್ದಾದರೂ ಸಂಪಾದಿಸಿಯೇ ತೀರಬೇಕೆಂಬ ಸಂಕಲ್ಪದಿಂದ ಆ ಶ್ರೇಷ್ಠ ವರ್ತಕರ ಉತ್ತಮವಾದ ಮನೆಯ ವಿಶ್ವಾಸದಿಂದ ಅಲ್ಲಿ ಬೇಕಾದಷ್ಟು ಧನ ಸಿಕ್ಕೀತೆಂಬಾಶಯದಿಂದ ಹೊಕ್ಕುದೇನೋ ನಿಜ. ಆದರೆ ಮನೆಯೋ ಚಾರುದತ್ತನದಾಗಿ ವಿಭವಶೂನ್ಯವಾಗಿತ್ತು. ಸರಿ. ಇಲ್ಲಿ ಹೊಕ್ಕು ನಮ್ಮಂತೆಯೇ ಆಪತ್ತಿಗೀಡಾಗಿದ್ದವರನ್ನು ನಾವು ಪೀಡಿಸುವುದುಚಿತಲ್ಲವೆಂದೇ ಹೊರಡಲುದ್ಯುಕ್ತನಾದಾಗ ಮೈತ್ರೇಯನು ನಿದ್ರೆಯಲ್ಲಿಯೇ 'ಎಲಾಮಿತ್ರನೇ, ಈ ಸ್ವರ್ಣಭಾಂಡವನ್ನು ಸ್ವೀಕರಿಸು' ಎಂದು ಹೇಳಿದನು. ಇದನ್ನು ಕೇಳಿ, 'ಓಹೋ! ನಮ್ಮ ಗುಟ್ಟು ರಟ್ಟಾಯಿತೋ' ಎಂದು ಸಂಶಯದಿಂದ ಕಳ್ಳನು ಸ್ವಲ್ಪ ಹೊತ್ತು ನಿಂತು ಇದು ನಿದ್ದೆಯ ಸ್ವಪ್ನದ ಮಾತೇ ಎಂದು ನಿರ್ಧರಿಸಿಕೊಂಡನು. ಆಗ ಪುನಃ 'ಸ್ವೀಕರಿಸು ಮಿತ್ರಾ!' ಎಂದು ಹೇಳಿದಾಗ ಕೈನೀಡಿ ಕಳ್ಳನು 'ಪ್ರತಿಗ್ರಹಿಸುವೆ'ನೆಂದು ಅದನ್ನು ದಾನವೆಂದೇ ಪರಿಗ್ರಹಿಸಿ ಹೊರಟು ಹೋಗುವನು. ಇತ್ತ ಚಾರುದತ್ತನ ಮನೆಯಲ್ಲಿ ಬೆಳಗಾತ ಕಳುವಾದ ಸಮಾಚಾರವು ತಿಳಿದೊಡನೆ ಚಾರುದತ್ತನು

'ತಾನೇ ಸೂಳೆಯ ಆಭರಣವನ್ನು ಬೇಕಂತಲೇ ಬಚ್ಚಿಟ್ಟು, ಈಗ ಕಳ್ಳರು ಅದನ್ನು ದೋಚಿಕೊಂಡು ಹೋದರೆಂದು ಸುಳ್ಳು ಸಮಾಚಾರವನ್ನು ಪ್ರಕಟಿಸಿರುವನು ಎಂದು ಜನರೆಲ್ಲಾ ತನ್ನನ್ನು ಹಿಯ್ಯಾಳಿಸಿಯಾರಲ್ಲಾ ! ಏನು ಮಾಡಲಿ' ಎಂದು ಪರಿತಪಿಸುತ್ತಿದ್ದನು. ಅದನ್ನು ಕೇಳಿ ಚಾರುದತ್ತನ ಬ್ರಾಹ್ಮಣ ಹೆಂಡತಿಯು ತನಗೆ ಸ್ತ್ರೀಧನವಾಗಿ ತನ್ನಪ್ಪನ ಮನೆಯಿಂದ ಬಂದ ಲಕ್ಷಗಟ್ಟಲೆ ಬೆಲೆ ಬಾಳುವ ರತ್ನಹಾರವನ್ನು ಮೈತ್ರೇಯನನ್ನು ಕರೆದು ಧಾರೆಯೆರೆದು ದಾನವಾಗಿ ಕೊಟ್ಟಳು. ಇದನ್ನು ತಿಳಿದು ಚಾರುದತ್ತನು 'ಮಿತ್ರನೆ ! ಇದನ್ನು ಚಾರುದತ್ತನು ನೀನು ಕೊಟ್ಟು ಹೋದ ಆಭರಣಗಳಿಗೆ ಬದಲಾಗಿ ಕಳುಹಿಸಿರುವನು ಎಂದು ಹೇಳಿ ಅವಳಲ್ಲಿ ಸಮರ್ಪಿಸು' ಎಂದು ಮೈತ್ರೇಯನನ್ನು ಕಳುಹಿಸುವನು. ಇಲ್ಲಿ ಮೂರನೆಯ ಅಂಕವು ಮುಗಿಯುವುದು. ನಾಲ್ಕನೆಯ ಅಂಕದಲ್ಲಿ ಮೈತ್ರೇಯನು ಅಲ್ಲಿಗೆ ಬರುವ ಮುಂಚೆಯೇ ಕಳ್ಳನು ವಸಂತಸೇನೆಯ ಮನೆಗೆ ಹೋಗಿ ತನ್ನ ಪ್ರಿಯೆಯಾದ ಮದನಿಕೆಗೆ ಕದ್ದ ಆಭರಣಗಳನ್ನು ತೋರಿಸಿದಾಗ ಅವಳಿಗೆ ಸತ್ಯವು ಹೊಳೆಯಲು ಚಾರುದತ್ತನೇ ಈ ಆಭರಣಗಳನ್ನು ತನ್ನ ಮೂಲಕ ಹಿಂದೆ ಕಳುಹಿಸಿರುವೆನೆಂದು ಸುಳ್ಳು ಹೇಳಿಸುತ್ತಿರುವಳು. ಇವರ ಸರಸ ಸಲ್ಲಾಪದಲ್ಲಿ ಏನೋ ರಹಸ್ಯವಿರಬೇಕೆಂದು ಊಹಿಸಿ ಅವರಿಗೆ ತಿಳಿಯದಂತೆ ವಸಂತಸೇನೆಯೇ ಉಪ್ಪರಿಗೆಯ ಮೇಲಿಂದಲೇ ಎಲ್ಲವನ್ನು ಕೇಳಿದ್ದರೂ ಏನೂ ತಿಳಿಯದಂತೆ ನಟಿಸುತ್ತಾ ತನ್ನ ಸೇವಕಿಯಾದ ಮದನಿಕೆಯು ಇವನನ್ನು ಅವಳ ಸನ್ನಿಧಾನಕ್ಕೆ ಕರಕೊಂಡು ಬಂದ ಅನಂತರ ಚಾರುದತ್ತನ **ಸಂದೇಶವನ್ನು** ಕೇಳುವಳು. ಕೂಡಲೇ ಅವನೊಡನೆ ಪ್ರತಿಸಂದೇಶವನ್ನು ಕಳುಹಿಸುವುದಾಗಿ ಹೇಳಲು ಅವನು ಅಪ್ರತಿಭನಾಗಿ ಸುಮ್ಮನಿರುವನು ; ಹಾಗಾದರೆ ನೀನು ಅಲ್ಲಿಗೆ ಹೋಗಿ ಕದ್ದು ತಂದ ಒಡವೆಗಳೆಂದೇ ತೀರ್ಮಾನಿಸಬೇಕಲ್ಲವೇ ?' ಎನ್ನಲು ಅವನಿಗೆ ಉತ್ತರ ಕೊಡಲು ಬಾಯಿಯೇ ಬರುವುದಿಲ್ಲ. ಆಗ ವಸಂತಸೇನೆಯು ತನ್ನ ಆಭರಣಗಳನ್ನೇ ಮದನಿಕೆಗೆ ಉಡುಗೊರೆಯಾಗಿ ಕೊಟ್ಟು ಅವಳಿಗೆ ಮದುವೆಗೆಂತ ಹೊಸ ಸೀರೆಗಳನ್ನು ಕೊಟ್ಟು ಅವರಿಬ್ಬರನ್ನೂ ತನ್ನ ಸುಂದರವಾದ ಕೋಚು ಬಂಡಿಯಲ್ಲಿ ಕುಳ್ಳಿರಿಸಿ, ಆಯುರಾರೋಗ್ಯ ಸಂಪತ್ತನ್ನು ಹರಸಿ, ಗಂಡಹೆಂಡಿರಾಗಿ ಸುಖವಾಗಿ ಬಾಳಿರೆಂದು ಕಳುಹಿಸುವಳು. ಅವರು ಹೋದುದೇ ತಡ. ಮೈತ್ರೇಯನು 'ನಿನ್ನ ಒಡವೆಗಳನ್ನು ಜೂಜಾಡಿ ಕಳದಾಯಿತು. ಅವುಗಳ ಕ್ರಯವೆಷ್ಟು ? ಅವುಗಳಿಗೆ ಬದಲಾಗಿ ಈ ಮುತ್ತಿನ ಹಾರವನ್ನು ಚಾರುದತ್ತನು ಕಳುಹಿಸಿರುವನು' ಎಂದು ಚಾರುದತ್ತನ ಸಂದೇಶವನ್ನು ಹೇಳಲು, ಇವಳ ಅನುರಾಗವು ದ್ವಿಗುಣವಾಗಿ ತಾನೇ ಬಂದು ಆ ಒಡವೆಗಳ ಕ್ರಯವನ್ನು ಹೇಳುವರೆ ಹೊರಡುವೆನೆಂದು

ಹೇಳಿ ಅಮೃತಾಂಕನಾಟಕವಾಯಿತೆಂದು ಹೇಳಿ ತಾನೂ ಮದುವಣಗಿತ್ತಿಯಂತೆ ಹೊಸ ಸೀರೆ ಆಭರಣಗಳನ್ನು ತೊಟ್ಟು ಚಾರುದತ್ತನ ಹೆಂಡತಿಯಾಗಲು ಹೊರಡುವಳು.

ಈ ನಾಟಕವನ್ನೋದಿಯೇ ವಾತ್ಸ್ಯಾಯನನಿಗೆ ಚಾರುದತ್ತನಂತಹ ನಾಗರಿಕರನ್ನೂ, ವಸಂತಸೇನೆಯಂಥ ವೇಶ್ಯೆಯರನ್ನೂ ವರ್ಣಿಸುವರೆ ಸ್ಫೂರ್ತಿ ದೊರೆಯಿತೆಂದೂಹಿಸಬಹುದಾಗಿದೆ.

ಅವಿಮಾರಕ ನಾಟಕವು ಇವನ ಪ್ರಾಚೀನ ಕೃತಿಯಾಗಿರಬಹುದು. ಅದರಲ್ಲಿ ಅವನ ಕೌಶಲವು ಪ್ರತಿಬಿಂಬಿತವಾಗಲೇ ಇಲ್ಲ. ನಾಟಕೀಯತೆಯನ್ನು ಪ್ರದರ್ಶಿಸಲಾರದೆ ಮೊದಲೊಂದು ಸಲ ವಿದ್ಯಾಧರನ ಮಾಯೆಯ ಉಂಗುರದ ಸಹಾಯದಿಂದ ನಾಟಕವನ್ನು ಪೂರೈಸುವರೆ ಪ್ರಯತ್ನಿಸಿ, ಅದರಲ್ಲಿಯೂ ಸಫಲನಾಗದೆ ನಾರದರ ಸಹಾಯದಿಂದ—ಹೀಗೆ ಅನೇಕ ದೈವಿಕ ಮಾಯೆಯಿಂದಲೇ 'ನಾಟಕ'ವನ್ನು ಪೂರ್ತಿಗೊಳಿಸುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ, ಇದನ್ನು ಪೌರಾಣಿಕಕಥೆ (Fairy tale) ಎಂದು ಕರೆಯುವುದರಲ್ಲಿಯೇ ಹೆಚ್ಚಿನ ಔಚಿತ್ಯವಿದೆ. ಆದ್ದರಿಂದ ಈ ನಾಟಕದ ಕಥೆಯನ್ನಿಲ್ಲಿ ಸಂಗ್ರಹಿಸಲಿಲ್ಲ.

ಇನ್ನುಳಿದುವೆಂದರೆ ಪ್ರತಿಜ್ಞಾ ಯೌಗಂಧರಾಯಣ, ಮತ್ತು ಸ್ವಪ್ನವಾಸವದತ್ತವೆಂಬ ಉದಯನನ ಕಥೆಯನ್ನು ಪ್ರತಿಪಾದಿಸುವ ನಾಟಕಗಳು. ರಾಜಶೇಖರನ ಸಾಕ್ಷ್ಯದ ಪ್ರಕಾರ—ಭಾಸನ ನಾಟಕಚಕ್ರೇಽಸ್ಮಿನ್ ಛೇಕೈಃ ಕ್ಷಿಪ್ತೇ ಪರೀಕ್ಷಿತುಂ | ಸ್ವಪ್ನವಾಸವದತ್ತಸ್ಯ ದಾಹಕೋಽ ಭೂತ್ ನ ಪಾವಕಃ || —ಸ್ವಪ್ನವಾಸವದತ್ತವೊಂದೇ ವಿದ್ವಜ್ಜನರ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣವಾಗಿ ಹೊರಬಂತಂತೆ. ಕೆಲವರು ಇವೆರಡನ್ನೂ ಒಂದು ದೊಡ್ಡ ಹತ್ತಂಕದ ಪ್ರಕರಣವೆಂದೇ ಭಾವಿಸುವರು. ಕಥಾವಸ್ತುವು ಕೂಡಾ ಪ್ರತಿಜ್ಞೆಯ 4 ಅಂಕಗಳು ಮುಗಿದ ಅನಂತರವೇ ಸ್ವಪ್ನವಾಸವದತ್ತದ ಅಂಕಗಳ ಕಥೆಯು ಪ್ರಾರಂಭವಾಗುವುದು.

ಮಹಾಭಾರತದಲ್ಲಿ ಭೀಷ್ಮರಿಗೆಷ್ಟು ಪ್ರಾಶಸ್ತ್ಯವೋ ಅಷ್ಟೇ ಪ್ರಾಮುಖ್ಯ ಇವನ ಯೌಗಂಧರಾಯಣನಿಗೆ. ಈ ಎರಡು ನಾಟಕಗಳಲ್ಲಿ ಭಾರತದಲ್ಲಿ ಭೀಷ್ಮರ ಪ್ರತಿಜ್ಞೆ — ಇಲ್ಲಿ ಯೌಗಂಧರಾಯಣನ ಮೊದಲನೆಯ ಪ್ರತಿಜ್ಞೆ I 16. ಮೋಚಯಾಮಿ ನ ರಾಜಾನಂ ನಾಸ್ಮಿ ಯೌಗಂಧರಾಯಣಃ ಎರಡನೆಯ ಪ್ರತಿಜ್ಞೆ ಮತ್ತು ನಾಹರಾಮಿ ನೃಪಂ ಚೈವ ನಾಸ್ಮಿ ಯೌಗಂಧರಾಯಣಃ, ಅಂದರೆ ಉದಯನನ್ನು ಸೆರೆಯಿಂದ ಬಿಡಿಸಬಿದ್ದರೆ ತಾನು ತನ್ನ ಹೆಸರನ್ನೇ ಕಿತ್ತು ಹಾಕುವೆನೆಂದು ಪ್ರತಿಜ್ಞೆ. ಇಲ್ಲಿಯ ಇನ್ನೊಂದು ವಿಶೇಷವೆಂದರೆ, ಇಡೀ ನಾಟಕದಲ್ಲಿ ಉದಯ

ನನು ರಂಗಭೂಮಿಯ ಮೇಲೆಯೇ ಬರುವುದಿಲ್ಲ. ಕಥಾವಸ್ತುವು ಮಾತ್ರ ಇವನನ್ನೇ ಸಂಬಂಧಿಸಿದ್ದು. ಮೊದಲನೆಯ ಅಂಕದಲ್ಲಿ ಅವನ ವೈರಿಯಾದ ಮಹಾಸೇನನೇ ಅವನನ್ನು ಹೊಗಳಿ ತನ್ನ ಅಳಿಯನಾಗಿ ಇಚ್ಛಿಸಿದುದು (ಭಾರತ ದಲ್ಲಿ ದ್ರುಪದನು ಅರ್ಜುನನನ್ನು ಬಯಸಿದಂತೆ). ಇನ್ನುಳಿದ ಎರಡಂಕಗಳಲ್ಲಿ ಉದಯನನನ್ನೇ ಬಿಡಿಸಿದ ಕಥೆ. ಎರಡು ರಾಜರೂ – ಉದಯನ, ಮಹಾ ಸೇನರೂ – ಎರಡು ಮಂತ್ರಿಗಳೂ–ಯೌಗಂಧರಾಯಣ ಭರತರೋಹಕರೂ – ಒಬ್ಬರನ್ನೊಬ್ಬರು ಎದುರಿಸಿ ಪ್ರತಿಸ್ಪರ್ಧಿಸಿದ ಕಥೆ. ಮುದ್ರಾರಾಕ್ಷಸವೊಂದನ್ನು ಬಿಟ್ಟರೆ, ಇಡೀ ಸಂಸ್ಕೃತ ನಾಟಕಗಳಲ್ಲಿಷ್ಟು ಸ್ಫೂರ್ತಿಯುಕ್ತವಾದ ನಾಟಕವೇ ಇಲ್ಲ. ಆ ಮುದ್ರಾರಾಕ್ಷಸಕ್ಕೂ ಮೇಲ್ಪಂಕ್ತಿಯನ್ನು ಹಾಕಿಕೊಟ್ಟದ್ದೂ ಇದೇ.

ಎಲ್ಲಾ ರಾಜರಿಂದಲೂ ಕಪ್ಪವನ್ನು ಪಡೆದು ಮಹಾಸೇನನೆಂಬ ಚಕ್ರ ವರ್ತಿಯು ಕೌಶಾಂಬೀಶನಾದ ಉದಯನನನ್ನು ಮಾತ್ರ ಗೆಲ್ಲಲಾರದೆ, ಅವನು ಪಾಂಡವರ ವಂಶದವನಾದ್ದರಿಂದಲೂ, ಗಂಧರ್ವವಿದ್ಯೆ ನಿಪುಣನಾಗಿಯೂ ಸ್ಪೃಹಿಣೀಯ ಗುಣಗಳುಳ್ಳವನಾದ್ದರಿಂದಲೂ, ಅವನನ್ನು ಕನ್ಯಾರತ್ನದಿಂದಲಾದರೂ ಬಗ್ಗಿಸಬೇಕೆಂದು ಹಾತೊರೆಯುತ್ತಿದ್ದನು. ಯೌಗಂಧರಾಯಣನೆಂಬ ಮಂತ್ರಿಯ ಸಾಹಸಗಳಿಂದ ಮಹಾಸೇನನ ಪ್ರಯತ್ನಗಳೆಲ್ಲಾ ವಿಫಲವಾಗುತ್ತಿದ್ದುವು. ಆದರೂ ಉದಯನನಿಗೆ ಮದ್ದಾನೆಗಳನ್ನು ಹಿಡಿಯುವ ಹುಚ್ಚು ವಿಪರೀತವಿದೆ ಯೆಂದು ಹೇಗೋ ತಿಳಿದು, ತನ್ನ ಮತ್ತು ಉದಯನನ ರಾಜ್ಯಗಳ ಎಲ್ಲೆಯ ಬಳಿ ಕಾಡಿನೊಳಗೊಂದು ಕೃತ್ರಿಮ ಆನೆಯೊಂದನ್ನು ನಿಲ್ಲಿಸಿ, ಅದರೊಳಗೆ 100 ಸೈನಿಕರನ್ನಿಟ್ಟು, ಯಂತ್ರದ ಸಹಾಯದಿಂದ ಅದನ್ನು ಮೆಲ್ಲನೆ ನಡೆಯುವಂತೆ ಏರ್ಪಾಡುಮಾಡಿ 'ನೀಲಕುವಲಯತನು'ವೆಂಬ ಪ್ರಸಿದ್ಧ ಆನೆಯಿದೆಯೆಂಬ ಸುಳ್ಳು ಸುದ್ದಿಯನ್ನು ಹರಡಿಸಿದನು. ಈ ವಾರ್ತೆಯನ್ನು ತಿಳಿದಿದ್ದೇ ತಡ. ಉದಯನನು ಅದನ್ನು ಬೇಟೆಯಾಡುವುದಕ್ಕೆ ಹೊರಟೇ ಬಿಟ್ಟನು. ಯೌಗಂಧರಾಯಣನೇನೋ ರಾಜನನ್ನು ತಡೆದುಹಾಕುವರೆ ಪ್ರಯತ್ನಮಾಡಿದನೇನೋ ನಿಜ. ಆದರೆ ಉದಯನನ ಆತುರವು ಅವನನ್ನು ವೈರಿಗಳ ಬಲೆಯಲ್ಲಿ ಬೀಳುವಂತೆ ಮಾಡಿ ಬಿಟ್ಟಿತು.

ರಾಜನ ಅಂಗರಕ್ಷಕನಾದ ಹಂಸಕನೊಬ್ಬನೇ ಮುಖ ಬಾಡಿಬಂದುದನ್ನು ಕಂಡು ನಿಜಾಂಶವನ್ನು ತಿಳಿದು ಯೌಗಂಧರಾಯಣನು 'ಅಯ್ಯೋ! ಸರ್ವನಾಶ ವಾಯಿತಲ್ಲಾ!' ಎಂದು ಉದಯನನು ಜೀವಂತವಾಗಿದ್ದಾನಲ್ಲಾ ಎಂಬುದನ್ನು ತಿಳಿದುಕೊಂಡನು. ಕೆಟ್ಟ ಸಮಾಚಾರವೆಂದು ಹೇಗೋ ತಿಳಿದ ಉದಯನನ ತಾಯಿಯು ಚೇಟಿಯ ಮುಖಾಂತರ ವಿವರಗಳನ್ನಪೇಕ್ಷಿಸಲು, ತಾನೇ ಹೋಗಿ,

ಹೇಗಾದರೂ ಮಾಡಿ ಉದಯನನನ್ನು ಬಿಡಿಸಿಕೊಂಡು ಬರುವದಾಗಿ ಶಪಥವನ್ನು ಮಾಡಿ ಹೊರಡುವನು. ವೇದವ್ಯಾಸರ ಅನುಗ್ರಹದಿಂದ ತನ್ನ ವೇಷವು ವಿಕೃತವಾದುದನ್ನು ಕಂಡು ಬೆರಗಾಗಿ (ಸರ್ಪವು ಕಚ್ಚಿದ ಅನಂತರ ನಳನ ದೇಹವು ವಿಕಾರ ಹೊಂದಿದಂತೆ), ವಿದೂಷಕನನ್ನು ಸೇನಾಧಿಪತಿಯಾದ ರುಮಣ್ವಂತನನ್ನು ವೇಷ ಬದಲಿಸಿಕೊಂಡು ಕರಕೊಂಡು ವೈರಿಯ ಪಟ್ಟಣವನ್ನೇ (ಉಜ್ಜಯಿನಿಯನ್ನೇ) ಸೇರಿಕೊಳ್ಳುವನು. ಇಲ್ಲಿಗೆ ಒಂದನೆಯ ಅಂಕ.

ಇತ್ತಲಾಗಿ ಮಹಾಸೇನನೂ, ಅವನ ರಾಣಿಯೂ, ಅವನ ಮಗಳಾದ ವಾಸವದತ್ತೆಗೆ ಸರಿಯಾದ ವರನು ಸಿಗಲಿಲ್ಲವೆಂದು ದುಃಖಪಡುತ್ತಿರುವಾಗ, ಸರಿಯಾಗಿ ವತ್ಸರಾಜನು ಸೆರೆ ಹಿಡಿಯಲ್ಪಟ್ಟನೆಂದು ಕಂಚುಕಿಯು ವರದಿಯನ್ನು ತರುವನು. ಮಹಾಸೇನನ ಸಂತೋಷಕ್ಕೆ ಎಣೆಯೇ ಇಲ್ಲ. ಹೇಗೆ ಮಹಾಸೇನನ ಸಂತೋಷಕ್ಕೆ ಎಣೆಯೇ ಇಲ್ಲವೋ ಹಾಗೆಯೇ ಈ ಅಂಕವೂ ಸಂಸ್ಕೃತ ನಾಟಕಗಳಲ್ಲಿ ಎಣೆಯಿಲ್ಲದ್ದಾಗಿದೆ.. ಮಹಾಸೇನನೆಂಬ ತನ್ನ ಬಿರುದು ಅಂದೇ ಅನ್ವರ್ಥವಾಯಿತೆಂದು ಹಿಗ್ಗಿ, ದೈವವೇ ಅವನನ್ನು ತನ್ನ ಅಳಿಯನಾಗುವಂತೆ ತನ್ನ ಹತೋಟಿಯಲ್ಲಿ ತಂದುಕೊಟ್ಟಿತಲ್ಲಾ! ಎಂದು ಸಂತುಷ್ಟನಾಗುವನು. ಉದಯನನ ವೀಣೆಯು ವಾಸವದತ್ತೆಗೆ ಇನಾಮವಾಗಿ ಕಳುಹಿಸಲ್ಪಟ್ಟಿತು. ಉದಯನನನ್ನು ಸೆರೆಹಿಡಿದ ಸಂದರ್ಭದಲ್ಲಿ ತನ್ನ ಸೈನಿಕರು ಹಳೇ ಸೇಡನ್ನು (ಮುಂಚೆ ಎಷ್ಟೋಸಲ ಯೌಗಂಧರಾಯಣನ ನಾಯಕತ್ವದಲ್ಲಿ ಅವರು ಸೋತು ಹೋಗಿದ್ದರು) ಅವನ ಮೇಲೆ ತೀರಿಸಿಕೊಳ್ಳುವರೆ ಚಿತ್ರಹಿಂಸೆಗೆ ಒಳಗಾಗಿದ್ದನೆಂದು ತಿಳಿದು. ಎಷ್ಟು ಮಾತ್ರಕ್ಕೂ ಅವನನ್ನು ಹಿಂಸಿಸದೆ, ಅತಿ ಮರ್ಯಾದೆಯಿಂದ ಅವನ ಗಾಯಗಳಿಗೆಲ್ಲಾ ಸರಿಯಾದ ಚಿಕಿತ್ಸೆಯನ್ನು ಮಾಡಿ ಅವನನ್ನು ಪಾಲಕಿಯಲ್ಲಿ ಕೂಡ್ರಿಸಿ 'ಮಣಿಭೂಮಿಕಾ' ಎಂಬ ಶೀತಲವಾದ ಅರಮನೆಗೆ ಕರದೊಯ್ದು, ಅಲ್ಲಿಯೂ ರಾಜವೈಭವದಿಂದ ಕಂಡುಕೊಳ್ಳುವರೆ ಕಟ್ಟಾಜ್ಞೆಯನ್ನು ವಿಧಿಸುವನು.

ಈಗ ತಾನೇ ಗೂಢವಾದ ಭಾಷೆಯಲ್ಲಿ ವ್ಯವಹರಿಸುವ ಮಂತ್ರಾಂಕವು ಆರಂಭವಾಗುವದು. ವೈರಿಯ ಪಟ್ಟಣದೊಳಗಿನಿಂದಲೇ–ಸಿಂಹದ ಗುಹೆಯೊಳಗಿನಿಂದಲೇ ಹೇಗೋ ಹಾಗೆ–ಯೌಗಂಧರಾಯಣ, ವಸಂತಕ, ರುಮಣ್ವಂತರು ತಮ್ಮ ಕಾರ್ಯವನ್ನು ಸಾಧಿಸುವದು ವಿಚಿತ್ರವಾಗಿದೆ. ಯೌಗಂಧರಾಯಣನು ದೇಹದಲ್ಲಿ ಸಂಪೂರ್ಣ ವಿಕೃತನಾಗಿ ಉನ್ಮತ್ತನಂತೆ ಉಜ್ಜಯಿನಿಯ ರಸ್ತೆಗಳಲ್ಲಿ ಅಲ್ಲಲ್ಲಿ ತಿರುಗುವನು. ವಸಂತಕನಾದರೋ ಬ್ರಾಹ್ಮಣ ಭಿಕ್ಷುಕನಾಗಿ ಯಾರ ಸಂದೇಹವೂ ತನ್ನ ಮೇಲೆ ಬೀಳದಂತೆ ಉದಯನನ ಸೆರೆಮನೆಯವರೆಗೂ ಹೋಗಿ

ಗುಟ್ಟನಲ್ಲಿ ಯೌಗಂಧರಾಯಣನ ಸಂದೇಶಗಳನ್ನು ಅವನಿಗೆ ಸಾಗಿಸುತ್ತಿದ್ದನು. ರುಮಣ್ವಂತನೂ ಇವನೂ ಯಾವದೋ ಒಂದು ದೇವಕುಲದ ಅಗ್ನಿಗೃಹದಲ್ಲಿ ಸೇರಿ ಯಾರಿಗೂ ತಿಳಿಯದಂತೆ. ಉದಯನನನ್ನು ಸೆರೆಯಿಂದ ಬಿಡಿಸುವರೆ ಉಪಾಯ ಗಳನ್ನು ಹುಡುಕುತ್ತಿದ್ದರು. ನಲಗಿರಿಯೆಂಬ ಮದ್ದಾನೆ ಮಹಾಸೇನನ ಅರಮನೆ ಯಲ್ಲಿದ್ದದ್ದಕ್ಕೆ ಪಕ್ಕದಲ್ಲಿ ದೊಡ್ಡ ಬೆಂಕಿಯನ್ನೆಬ್ಬಿಸಿ ಮಾಹುತನ ಹತೋಟಿಯಿಂದ ಓಡಿಸಿದರೆ, ಉದಯನನೊಬ್ಬನೇ ಅದನ್ನು ಹತೋಟಿಗೆ ತರಬೇಕೆಂದೆಲ್ಲರಿಗೂ ಗೊತ್ತಿತ್ತು. ಆದ್ದರಿಂದ ಅವನ ಸಹಾಯವನ್ನೇ ಕೋರಿ ತನ್ನ ಪಟ್ಟಣವನ್ನು ಕಾಪಾಡು ವರೆ ಮಹಾಸೇನನೇ ಬೇಡುವನೆಂದೂ ಹಾಗಾದ ಪಕ್ಷದಲ್ಲಿ ಅದೇ ಆನೆಯಿಂದ ಪಟ್ಟಣದ ಹೊರಗೂ ಅಲ್ಲಿಂದ ತನ್ನ ದೇಶಕ್ಕೂ ಉದಯನನಾಗಲೇ ಓಡಿಹೋಗ ಬಹುದೆಂದೂ ಯೌಗಂಧರಾಯಣನು ತನ್ನ ಉಪಾಯವನ್ನು ಮಂಡಿಸುವನು. ಈ ಉಪಾಯದ ವಿವರಗಳನ್ನೆಲ್ಲಾ ವರ್ಣಿಸಿದಾಗ ವಸಂತಕನು, "ಮೊನ್ನೆ ತಾನೆ ನಮ್ಮ ರಾಜನು ವಾಸವದತ್ತೆಯ ಮೇಲೆ ಕಣ್ಣಿಟ್ಟು ಜೈಲುವಾಸವನ್ನೂ ಮರೆತು ಮರ್ಯಾದೆಯ ಯೋಚನೆಯೂ ಇಲ್ಲದೆ ಅವಳನ್ನು ಕಾಮಿಸುತ್ತಿರುವನು. ತಾನು ಹೊರಗೆ ಓಡಿಹೋಗುವದಾದರೆ ಅವಳನ್ನು ಹೊತ್ತುಕೊಂಡೇ ಹೋಗಿ ತೀರ ಬೇಕೆಂದೇ ಉದಯನನ ಅಭಿಮತ" ಎಂದು ವಿವರಿಸಿದನು. ತನ್ನ ಉಪಾಯಗಳೆಲ್ಲಾ ವ್ಯರ್ಥವಾಯಿತಲ್ಲಾ ಎಂದು ಅಪ್ರತಿಭನಾದ ಯೌಗಂಧರಾಯಣನು ಕೂಡಲೇ ದುಃಖವನ್ನು ನೀಗಿಕೊಂಡು 'ನಮ್ಮ ಸ್ವಾಮಿಯನ್ನೂ, ವಾಸವದತ್ತೆಯನ್ನೂ ಏಕಕಾಲದಲ್ಲಿ ಬಿಡಿಸದಿದ್ದರೆ ನನ್ನ ಹೆಸರು ಯೌಗಂಧರಾಯಣನಲ್ಲ'ವೆಂದು ಘೋರ ಪ್ರತಿಜ್ಞೆಯನ್ನು ಮಾಡಿಬಿಡುವನು. ವಾಸವದತ್ತೆಯ ಆನೆಯಾದ ಭದ್ರಾವತಿಯನ್ನು ಅದೇ ಕಾಲದಲ್ಲಿ ಉನ್ಮತ್ತನಾಗುವಂತೆ ಮಾಡಿಸಿ, ಉದಯನನೇ ಎರಡೂ ಆನೆಗಳನ್ನು ವಶಪಡಿಸಿಕೊಂಡು, ಅವಳೊಡನೆಯೇ ಸ್ವಾಮಿ ಬಿಡುಗಡೆ ಯನ್ನು ಹೊಂದುವರೆ ಸಕಲ ಸನ್ನಾಹಗಳನ್ನೂ ಏರ್ಪಡಿಸಬೇಕೆಂದು ನಿಶ್ಚಿತವಾಗಿ ಅಂಕವು ಮುಗಿಯುವದು.

ಪ್ರವೇಶಕದಲ್ಲಿ ಯೌಗಂಧರಾಯಣನು ಹೂಡಿದ ಉಪಾಯವೇನೋ ಸಫಲವಾಗಿ ಉದಯನ ವಾಸವದತ್ತೆಯರಿಬ್ಬರೂ ನಲಗಿರಿಯ ಮೇಲೆ ಹತ್ತಿ ಕೌಶಾಂಬಿಯ ಹಾದಿಯನ್ನು ಹಿಡಿದು ಓಡಿಹೋದರೆಂಬ ಸಮಾಚಾರ ನಮಗೆ ತಿಳಿದರೂ ಯೌಗಂಧರಾಯಣನೊಬ್ಬನೇ ತನ್ನ ಖಡ್ಗವು ಅಕಸ್ಮಾತ್ತಾಗಿ ಆನೆಯ ದಂತದ ಆಘಾತದಿಂದ ತುಂಡಾಗಿ, ನಿಶ್ಶಸ್ತ್ರನಾಗಿ ವೈರಿಗಳಿಂದ ಸೆರೆ ಹಿಡಿಯಲ್ಪಟ್ಟನಲ್ಲಾ ಎಂದು ನಾವು ಕೊಂಚ ದುಃಖಿತರಾಗುತ್ತೇವೆ. ಹೆಮ್ಮೆ

ನಾಗಿಯೇ ನಮ್ಮ ಸ್ವಾಮಿಯನ್ನು ಆಶ್ರಯಿಸಿದುದೆ'ಂದೂ ಹೇಳಿ 'ಉಜ್ಜಯಿನಿಯ ಜನರೂ ತನ್ನ ಸ್ವಾಮಿಯಲ್ಲಿ ತನ್ನ ಸ್ವಂತ ಪ್ರಜೆಗಳಷ್ಟೇ ಅನುರಕ್ತರಾಗಿದ್ದಾರಲ್ಲವೇ' ಎಂದು ಯೌಗಂಧನು ವಾದಿಸಿದಾಗ ಭರತರೋಹಕನು ನಿರ್ಧ್ಯಂತರವಿಲ್ಲದೇ ಒಪ್ಪಲೇಬೇಕಾಯಿತು. ಆದರೂ ಅಪ್ರತಿಭನಾಗದೆ, ಸೆರೆಹಿಡಿಯಲ್ಪಟ್ಟ ವೈರಿಗೆ ಶಾಸ್ತ್ರಗಳಲ್ಲಿ ವಿಧಿಸಿದ ಶಿಕ್ಷೆಯಾವದೆಂದು ಯೌಗಂಧನನ್ನು ವಿಚಾರಿಸಿದಾಗ ಆತನು ಸಂಭ್ರಾಂತನಾಗದೆ ಮರಣವೇ ಎಂದು ಒಪ್ಪಿದಾಗ, 'ನಾವು ನಿನ್ನನ್ನು ನಿನ್ನ ಸ್ವಾಮಿಯನ್ನು ಮರಣದಂಡನೆಗೆ ಒಳಪಡಿಸದಿದ್ದರಿಂದ ನಮ್ಮ ಕೃತಜ್ಞತೆಗೆ ಪಾತ್ರರಲ್ಲವೇ?' ಎಂದು ವಾದಿಸಲು ಯೌಗಂಧನು 'ನಿಮ್ಮ ಕೃತಜ್ಞತೆಯು ನಮ ಗೇನೇ ಸಲ್ಲತಕ್ಕದ್ದು' ಎಂದು ವಾದಿಸಿ ಅವನ ಬಾಯಿ ಕಟ್ಟಿಸುವನು. ಈ ಸಮಯ ಹಲ್ಲಿ ಯೌಗಂಧನ ಶೌರ್ಯಕ್ಕೆ ಮೆಚ್ಚಿದ ಮಹಾಸೇನನೇ ಸ್ವಂತವಾಗಿ ಅವನಿಗೆ ಭಂಗಾರದ ಹರಿವಾಣವನ್ನು ಉಡುಗೊರೆಯಾಗಿ ಕಳುಹಿಸಿದ್ದನೆಂದು ತಿಳಿದು ಯೌಗಂಧರಾಯಣನೂ ಬೆರಗಾಗುವನು. ಆಗ ಇನ್ನೊಂದು ಅನಾಹುತ ಅಂತಃಪುರದೊಳಗೆ ನಡೆದಿರುವದೆಂದು ತಿಳಿಯುವುದು. ರಾಣಿಯಾದ ಅಂಗಾರ ವತಿಯು ದುಃಖದಿಂದ ಸಂತಪ್ತಳಾಗಿ ಉಪ್ಪರಿಗೆಯ ಮೇಲಿಂದ ಹಾರಿ ತನ್ನ ಪ್ರಾಣವನ್ನು ಕಳಕೊಳ್ಳುವರೆ ಉದ್ಯುಕ್ತಳಾಗಿದ್ದಾಗ ಮಹಾಸೇನನು 'ಅಭಿಮತ ನಾದ ಅಳಿಯನೊಡನೆ ಮಗಳು ಓಡಿಹೋದರೆ ನಾವು ದುಃಖಪಡುವದೇಕೆ? ಒಂದು ಚಿತ್ರದಲ್ಲಿ ಅವರಿಬ್ಬರನ್ನೂ ಚಿತ್ರಿಸಿ ವಿವಾಹ ಸಮಾರಂಭವನ್ನು ಜರಗಿಸಬಹುದಷ್ಟೆ' ಎಂದು ಸಂತೈಸುವನೆಂದು ತಿಳಿಯುವುದು. ಆಗಲೇ ವಿಷಯ ವನ್ನರಿತ ಯೌಗಂಧನು ಕನಿಕರದಿಂದ ಸಮ್ಮಂಧಿಯಾಗಿ ಪಟಗಳ ವಿವಾಹ ಸಮಾ ರಂಭದಲ್ಲಿ ತಾನೂ ಭಾಗವಹಿಸುವನು ಎಂಬಲ್ಲಿಗೆ ನಾಟಕವು ಮುಗಿಯುವದು. ಈ ಪಟಗಳ ವಿವಾಹವೆಂಬುದು ಕಥಾಸರಿತ್ಸಾಗರದಲ್ಲಿಯೂ ಬೃಹತ್ಕಥಾಮಂಜರಿ ಯಲ್ಲಿಯೂ ಪ್ರಾಯಶಃ ಇದ್ದಿಲ್ಲವೆಂದೇ ಊಹಿಸಬೇಕು. ಇದು ಭಾಸನ ಪ್ರತಿಭೆಯ ಸೃಷ್ಟಿಯೇ ಆಗಿರಬಹುದು.

ಇದರ ಉತ್ತರ ಭಾಗವೆಂಬುದೇ ಸ್ವಪ್ನವಾಸವದತ್ತ. ಇಷ್ಟರವರೇಗೆ ಆನೆಗಳನ್ನು ಬೇಟೆಯಾಡುವದೂ, ವೀಣೆಯನ್ನು ಬಾರಿಸುವುದೂ ಇಷ್ಟೇ ಉದಯನ ನನ್ನು ಹುಚ್ಚುಮಾಡಿಸಿದ್ದರೆ, ಈಗ ವಾಸವದತ್ತೆಯ ಹುಚ್ಚೂ ಅದಕ್ಕೆ ಸೇರಿ ಅವನನ್ನು ಸುಖಲೋಲುಪನನ್ನಾಗಿ ಮಾಡಿದ್ದರಿಂದ ಅಕ್ಕಪಕ್ಕದ ರಾಜರೆಲ್ಲಾ ಸೇರಿ ಇವನ ರಾಜ್ಯದ ಭಾಗಗಳನ್ನೊಂದೊಂದಾಗಿ ವಶಪಡಿಸಿಕೊಳ್ಳಲಾರಂಭಿಸಿದರು. ಹಾಗಾದರೂ ಇದನ್ನು ಗಮನಿಸದೆ ಸಂಗೀತದೊಳಗೆ ಮುಳುಗಿ ಕಾಲಕಳೆಯುವ ಉದಯನನನ್ನು ಹಾದಿಗೆ ತರಲು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಲು

ಯೌಗಂಧರಾಯಣನು ರಾಣಿಯಾದ ವಾಸವದತ್ತೆಗೆ ಬುದ್ಧಿ ಹೇಳಿ ಕೆಲವು ಕಾಲದವರೆಗೆ ಅಜ್ಞಾತವಾಗಿ ಆವಂತಿಕೆಯೆಂಬ ಹೆಸರಿನಿಂದ ಪದ್ಮಾವತಿಯೆಂಬ ಮಗಧ ರಾಜನ ತಂಗಿಯೊಡನೆ ವಾಸಿಸಲು ಒಡಂಬಡಿಸುವನು. ಪದ್ಮಾವತಿಯನ್ನು ಉದಯನನು ಮದುವೆಯಾದರೆ ಇಡೀ ಭೂಮಂಡಲದ ಸಾರ್ವಭೌಮತ್ವವೇ ಅವನಿಗಾಗುವದೆಂಬ ಸಿದ್ಧವಾಕ್ಯನಾದ ಜ್ಯೋತಿಷ್ಕನ ಭವಿಷ್ಯವಾಣಿಯನ್ನಾದರಿಸಿ ಯೌಗಂಧನು ಹೀಗೆ ಪ್ರವರ್ತಿಸಿದುದರ ಕಾರಣ ನಾಟಕವನ್ನಾರಂಭಿಸುವಾಗ ಯೌಗಂಧನು ಬ್ರಾಹ್ಮಣವೇಷದಲ್ಲಿ ತನ್ನ ಅಕ್ಕನಾದ ಆವಂತಿಕೆ (ವಾಸವದತ್ತೆ)ಯನ್ನು ಕರೆಕೊಂಡುಬಂದು ಬದಿಯಲ್ಲಿ ರಂಗಭೂಮಿಯ ಮೇಲೆ ಬರಲು, ಇನ್ನೊಂದು ಬದಿಯಲ್ಲಿ ಮಗಧರಾಜನ ತಂಗಿಯಾದ ಪದ್ಮಾವತಿಯು ತನ್ನ ತಾಯಿಯನ್ನು ಕಾಣಲು ಅದೇ ತಪೋವನದ ಹತ್ತಿರ ಬರುವುದನ್ನು ನಾವು ಕಾಣುವೆವು. ರಾಜಪುತ್ರಿಯು ಬರುವಾಗ ಅವಳ ಠೀವಿಗೆ ಸರಿಯಾಗಿ ದಾರಿಯಲ್ಲಿದ್ದ ಜನರೆಲ್ಲರನ್ನೂ ದೂರಸರಿದು ನಿಲ್ಲಲು ಆಜ್ಞೆಯಾದಾಗ, ಇಷ್ಟರವರೆಗೆ ರಾಣಿಯಾಗಿ ಈ ಅವಮರ್ಯಾದೆಯನ್ನು ಕಾಣದಿದ್ದ ವಾಸವದತ್ತೆಗೆ ಮೊದಲು ಕಷ್ಟವೆನಿಸುವದು. ಯೌಗಂಧರಾಯಣನಿಗೂ ಇದು ಅಸಹ್ಯವಾಗಿದ್ದರೂ ವಾಸವದತ್ತೆಯನ್ನು ದುಃಖದ ಕಾಲ ದಾಟಿದ ಅನಂತರ ಸುಖವು ಬಂದೇ ತೀರುವದು ಎಂದು ಹೇಳಿ ಸಂತೈಸುತ್ತಿರುವನು. ಆಗ ಅವರ ಪುಣ್ಯಕ್ಕೆ ಪದ್ಮಾವತಿಯ ಕಂಚುಕಿಯೇ ಸ್ವತಃ ಪ್ರವೇಶಿಸಿ 'ನಮ್ಮ ಸ್ವಾಮಿಯಾದ ಪದ್ಮಾವತಿಯು ಈಗ ಯಾರಾದರೂ ಬಂದರೆ ಅವರ ಅಭೀಷ್ಟವನ್ನು ಸಲ್ಲಿಸುವರೆ ಕಾದಿರುವಳು' ಎಂದು ಘೋಷಿಸುವನು. ಅದೇ ಸಮಯವೆಂದರಿತ ಯೌಗಂಧನು ಮುಂದೆ ಬಂದು 'ಇವಳೀಗ ನನ್ನ ತಂಗಿ. ಅವಳಿಗೇನೋ ಕಾರಣದಿಂದ ಗಂಡನಿಂದ ದೂರವಿರಬೇಕಾಗಿದೆ. ಅವಳನ್ನು ಈ ಸಮಯದಲ್ಲಿ ಕಾಪಾಡಿ ಪುಣ್ಯ ಕಟ್ಟಿಕೊಳ್ಳಬೇಕು' ಎಂದು ಪ್ರಾರ್ಥಿಸುವನು. 'ನ್ಯಾಸರಕ್ಷಣವೆಂದರೆ ತುಂಬಾ ಕಷ್ಟ. ಅವಳಿಗೆ ಬೇಕಾದರೆ ಧನ ಅಲಂಕಾರಗಳನ್ನೋ ಒಂದೇ ಸಲ ಕೊಡುವದು ವಾಸಿಯಲ್ಲವೇ?' ಎಂದು ಕಂಚುಕಿಯು ಪ್ರತಿಯನ್ನು ಹೇಳಿದರೂ, ಮೊದಲನೆಯ ಮಾತನ್ನು ಹಿಂತೆಗೆಯಬಾರದೆಂದು ರಾಜಕುಮಾರಿಯು ಸಂತೋಷದಿಂದಲೇ ಅವಳನ್ನು ತನ್ನೊಡನೆ ಇಟ್ಟುಕೊಳ್ಳುವರೆಯೇ ಒಪ್ಪುವಳು. ಆಗಲೇ ಆಶ್ರಮದಿಂದ ಹೊರಗೆ ಬಂದ ರಾಜಮಾತೆಯು ತನ್ನ ಮಗಳಿಗಾಗಿ ವರಾನ್ವೇಷಣೆ ಹೊರಡುತ್ತಿದೆಯೋ ಎಂದು ವಿಚಾರಿಸಿದಾಗ, ಮಹಾಸೇನನೆಂಬ ರಾಜನು ತನ್ನ ಮಗನಿಗೋಸ್ಕರ ದೂತರನ್ನು ಕಳುಹಿಸಿದುದಾಗಿ ಸಮಾಚಾರ ತಿಳಿಯಿತು. 'ಹಾಗಾದರೆ ತನ್ನ ಅತ್ತಿಗೆಯಾದಳೆಂದು ತೋರುತ್ತವೆ.' ಎಂದು ವಾಸವದತ್ತೆಯೇ ಯೋಚಿಸುತ್ತಿರು

ವಂತೆಯೇ ಯೌಗಂಧನು ಹೊರಡಲನುವಾಗುವನು. ಆಗಲೇ ಇನ್ನೊಂದು ಬದಿಯಿಂದ ಆ ತಪೋವನಕ್ಕೆ ಒಬ್ಬ ಬ್ರಹ್ಮಚಾರಿಯು ಓಡಿಓಡಿ ಬರುವದು ಕಾಣುವದು. (ಈತನು ಯೌಗಂಧನ ಸೇವಕನೇ ಆಗಿದ್ದು ಅವನ ಆಜ್ಞೆಯ ಪ್ರಕಾರವೇ ಹೀಗಿ ಬಂದದ್ದೆಂತಲೇ ಊಹಿಸಬೇಕಾಗುತ್ತದೆ).ಸಮಾಚಾರವೇನೆಂದು ಕೇಳಲ್ಪಟ್ಟವನಾಗಿ ಹೆಂಗಸರಲ್ಲಿದ್ದುದಕ್ಕೆ ಸಂಕೋಚಪಟ್ಟವನಂತೆ ನಟಿಸಲು, ಕಂಚುಕಿಯು 'ಭಯಪಡುವರೆ ಕಾ ರ ಣ ವಿ ಲ್ಲ. ನಿನ್ನ ಸಮಾಚಾರವನ್ನು ವಿವರಿಸು' ಎಂದು ಸಂತೈಸಲ್ಪಟ್ಟವನಾಗಿ ತನ್ನ ಕಥೆಯನ್ನಾರಂಭಿಸುವನು. ವಾಸವದತ್ತೆಗೆ ತನ್ನ ಪರಕೀಯರ ದರ್ಶನವು ಕಷ್ಟಕರವಾದುದನ್ನು ಪದ್ಮಾವತಿಯು ತಿಳಿದುಕೊಳ್ಳುವಳು. ಆಗ ಯೌಗಂಧನು ಆ ಬ್ರಹ್ಮಚಾರಿಯೊಡನೆ ,ಏನೂ ತಿಳಿಯದವನಂತೆ, 'ಏನಯ್ಯಾ? ಎಲ್ಲಿಂದ ಬರೋಣವಾಯಿತು ? ಎಲ್ಲಿಗೆ ಹೊರಟುದು' ಎಂದು ವಿಚಾರಿಸಲು ಆತನು 'ರಾಜಗೃಹದಲ್ಲಿ ಜನ್ಮಿಸಿದವನಾದರೂ, ಲಾವಾಣಕದಲ್ಲಿ ವಿದ್ಯಾಭ್ಯಾಸಕ್ಕಾಗಿ ವಾಸಿಸುತ್ತಿದ್ದೆ. ಅಲ್ಲಿಗೊಂದು ದಿನ ವಾಸವದತ್ತೆಯೊಡನೆ ಉದಯನನೆಂಬ ರಾಜನು ಬೇಟೆಗಾಗಿ ಬಂದಿದ್ದನೆ'ಂದು ಆರಂಭಿಸುವನು. ಆಗ ವಾಸವದತ್ತೆಯು, ಉತ್ಕಂಠಿತಳಾಗಿ ಕೇಳಲಾರಂಭಿಸಿದಳು. ಯೌಗಂಧನು ಬೇಕೆಂತಲೇ 'ಸರಿ ಸರಿ ! ಉದಯನನೆಂಬ ರಾಜನಿದ್ದಾನೆ. ಅದಿರಲಿ ನಿನ್ನ ವಿದ್ಯಾಭ್ಯಾಸ ಮುಗಿದಕೂಡಲೇ ಅಲ್ಲಿಂದ ಹೊರಟುಬಂದೆಯಾ ?' ಎಂದು ಕೇಳಲು 'ಇಲ್ಲ, ಇಲ್ಲ, ಅಲ್ಲಿ ಒಂದು ದಾರುಣವಾದ ವೃತ್ತಾಂತವು ಜರಗಿ ಹೋಯಿತು. ಆ ರಾಜನು ಬೇಟೆಗೋಸ್ಕರ ಹೊರಗೆ ಹೋದಾಗ ಅವನ ಅರಮನೆಗೆ ಅಕಸ್ಮಾತ್ತಾಗಿ ಬೆಂಕಿ ಬಿದ್ದು ಅದರಲ್ಲಿ ವಾಸವದತ್ತೆಯು ಸುಟ್ಟುಹೋದಳು. ಅವಳನ್ನು ರಕ್ಷಿಸಲು ಪ್ರಯತ್ನಿಸಿದವನಾದ ಮಂತ್ರಿ ಶ್ರೇಷ್ಠ ಯೌಗಂಧರಾಯಣನೂ ಸತ್ತನು' ಎಂದನು. ಹಾಗಾದ ಅನಂತರ ಮತ್ತೇನಾಯಿತೆಂದು ಏನೂ ತಿಳಿಯದವನಂತೆ ಮುಂದಿನ ಪ್ರಶ್ನೆ! 'ರಾಜನು ಹಿಂದೆ ಬಂದು ವಿಷಯವನ್ನು ತಿಳಿದು ಅದೇ ಬೆಂಕಿಯಲ್ಲಿ ತಾನೂ ಬಿದ್ದು ಸಾಯುವೆನೆಂದು ಪ್ರಯತ್ನಿಸಿದಾಗ ರುಮಣ್ವಂತ ವಸಂತಾದಿಗಳು ಹೇಗೋ ಬಹುಕಷ್ಟಪಟ್ಟು ಅವನನ್ನು ನಿವಾರಿಸಿದರು. ಆದರೂ, ಅವಳ ದಗ್ಧ ಶೇಷಗಳಾದ ಆಭರಣಗಳನ್ನು ಹುಡುಕಿ ಅವುಗಳನ್ನೇ ಮುದ್ದಾಡಿ, ಇಲ್ಲಿ ಅವಳೊಡನೆ ರಮಿಸಿದ್ದು ಎಂಬಿವೇ ಮೊದಲಾಗಿ ಅಳುತ್ತಿದ್ದನು' ಎಂದು ಹೇಳುವಾಗ ವಾಸವದತ್ತೆಯ ಕಣ್ಣಿನಿಂದ ಹಠಾತ್ತಾಗಿ ನೀರು ಬಂದೇ ಬಿಟ್ಟಿತು. ಇದನ್ನು ನೋಡಿದ ಯೌಗಂಧನು ನನ್ನ ತಂಗಿಯು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದಾಳೆ. ಕರುಣಾರ್ದ್ರ ಹೃದಯಳು ! ಎಂದು ಟೀಕಿಸಿ ಮತ್ತೇನಾಯಿ

ತೆಂದು ಬ್ರಹ್ಮಚಾರಿಯನ್ನು ಪುನಃ ಪ್ರಶ್ನಿಸಿದನು. "ಅಲ್ಲಿಯೇ ಮೂರ್ಛೆಹೋದ ಉದಯನನನ್ನು ಶೈತ್ಯೋಪಚಾರಗಳಿಂದ ಸಂತೈಸಿದರೂ ಅಲ್ಲಿಯೇ 'ಇದೇ ನನ್ನ ಸರ್ವಸ್ವವು ಬೂದಿಯಾಗಿದೆಯಲ್ಲಾ !' ಎಂದು ಅಳುತ್ತಿರುವವನನ್ನೇ ಹೇಗಾದರೂ ಒಡಂಬಡಿಸಿ ರುಮಣ್ವಂತನು ಬಹುಕಷ್ಟದಿಂದ ಸಂತೈಸಿದನು. ಅವನು ಊಟ ಮಾಡಲಾರೆನೆಂದು ಅತ್ತರೆ, ರುಮಣ್ವಂತನೂ ಹಾಗೆಯೇ ಅನ್ನ ನೀರನ್ನು ತೊರೆದೇ ಬಿಟ್ಟು, ಸಮದುಃಖನಾಗಿ ಒಂದೆರಡು ದಿನ ಹಗಲೂ ರಾತ್ರಿಯೂ ನೆರಳಿನಂತೆಯೇ ಹಿಂಬಾಲಿಸಿ, ಆತ್ಮಹತ್ಯೆಯನ್ನು ಮಾಡಿಕೊಂಡಾನೋ ಎಂಬ ಭಯದಿಂದ ಹತ್ತಿರವೇ ಇದ್ದನು." "ಮುಂದೇನಾಯಿತಯ್ಯಾ" ಎಂದು ಕೇಳಿದಾಗ ಬ್ರಹ್ಮ ಚಾರಿಯು, "ಹೇಗೋ ಅವನನ್ನು ಒಡಂಬಡಿಸಿ ಅವನನ್ನಲ್ಲಿಂದ ಸಾಗಿಸಿದು ದಾಯಿತು. ಅವನು ಅಲ್ಲಿಂದ ಹೊರಟು ಹೋದ ಅನಂತರ ಆ ಊರಿನಲ್ಲಿ ನಿಲ್ಲ ಲಾರದೆ ನಾನೂ ಅಲ್ಲಿಂದ ಹೊರಟೇ ಬಿಟ್ಟೆನು" ಎಂದು ಹೇಳಿ ವಿಶ್ರಾಂತಿ ಯನ್ನು ಪಡೆದು ಅಲ್ಲಿಂದಲೂ ಹೊರಡಲನುವಾದನು. ಆಗ ಯೌಗಂಧನು ಹೊರಡ ಲುದ್ಯುಕ್ತನಾಗಲು, ರಾಜಕುಮಾರಿ ಪದ್ಮಾವತಿಯು 'ಅಣ್ಣನಿಲ್ಲದೆ ನಮ್ಮೊಡನೆ ಇರಲು ಇವಳು ಸಂಕೋಚಪಡುವದಿಲ್ಲ'ವೇ ಎಂದು ಕೇಳಲು ಸಾಧು ಜನರೊಡನೆ ಇವಳಿಗೇನೂ ಸಂಕೋಚಕ್ಕೆ ಕಾರಣವಿಲ್ಲ'ವೆಂದು ಹೇಳಿ ಹೊರಡುವನು. ಪದ್ಮಾ ವತಿಯೂ ಆವಂತಿಕೆಯನ್ನು ಕರಕೊಂಡು ಹೋಗುವಳೆಂಬಲ್ಲಿಗೆ ಒಂದನೆಯ ಅಂಕವು ಮುಗಿಯುವುದು.

ಎರಡನೆಯ ಅಂಕದಲ್ಲಿ ವಾಸವದತ್ತೆಯೂ ಪದ್ಮಾವತಿಯೂ ಮತ್ತು ಅವಳ ಸಖಿಯರೂ ಚಂಡಾಡುವದನ್ನು ನೋಡುತ್ತಾನಿಂತಿರುವದನ್ನು ಕಾಣುತ್ತೇವೆ. ಶಾರಾದಾ ತನಯರ ಸಾಕ್ಷ್ಯವನ್ನಾದರಿಸಿದರೆ ಈ ಅಂಕವು ಪ್ರಾಯಶಃ ಬೇರೆ ರೂಪದಲ್ಲಿದ್ದು ಈಗ ಸ್ವಲ್ಪ ಸಂಗ್ರಹೀತವಾಗಿದೆಯೆಂದು ಸಂಶಯಕ್ಕಾಸ್ಪದ ಕೊಡು ವಂತಿದೆ. ಆಟದ ಎಡೆಯಲ್ಲಿ ಏನೋ ನೆನಪಾದಂತೆ ವಾಸವದತ್ತೆಯು ಮಹಾ ಸೇನನ ಸೊಸೆಯಾಗುವವಳೇಎಂದು ಪದ್ಮಾವತಿಯನ್ನು ಸಂಬೋಧಿಸುವಳು. ಆಗ ಪದ್ಮಾವತಿಯು ಮಹಾಸೇನನು ಯಾರೆಂದು ತನಗೇ ಗೊತ್ತಿಲ್ಲವೆನ್ನುವಾಗ 'ಉಜ್ಜಯಿನಿಯ ರಾಜನು ಅವನು. ಅವನಿಗೆ ವಾಸವದತ್ತೆಯೆಂಬ ಮಗಳಂತೆ' ಎಂದು ತಿಳಿಯ ಹೇಳುವಳು. ಸಮಾಚಾರವನ್ನು ತಿಳಿದಿರಬಹುದಾದ್ದರಿಂದ ಹೀಗೆ ಹೇಳಿರಬಹುದೆಂದು ಪದ್ಮಾವತಿಯು ಸಹಜವಾಗಿ ಗ್ರಹಿಸಿದಾಗ ಚೇಟಿಯು, 'ನಮ್ಮ ಸ್ವಾಮಿಯು ಉದಯನನ ಗುಣಗಳಲ್ಲಿ ಅನುರಕ್ತಳಾಗಿರುವಳು' ಎಂದು ಹೇಳಿದಾಗ 'ಆಹಾ ! ಇವಳೂ ನನ್ನ ಸ್ವಾಮಿಯಲ್ಲಿ ಮೋಹಿಸಿರುದು ವಿಚಿತ್ರವೇನೂ ಅಲ್ಲ' ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುವಳು.

ಚೇಟಿಯು 'ಇಂಥಾಸಂದರ್ಭದಲ್ಲಿ ಉದಯನನನ್ನು ನೋಡದೇನೇ ಅವನಲ್ಲಿ ಅನುರಕ್ತನಾಗುವದು ಸರ್ವಥಾ ಸರಿಯಲ್ಲ. ಅವನು ಒಂದು ಪಕ್ಷದಲ್ಲಿ ಕುರೂಪಿಯಾಗಿದ್ದರೆ!' ಎಂದು ಹೇಳಿದರೆ 'ಸರ್ವಥಾ ಕುರೂಪಿಯಲ್ಲ. ಅತಿಸುಂದರ ಪುರುಷ' ಎಂದು ಅವಂತಿಕೆಯ ಬಾಯಿಯಲ್ಲಿ ಮಾತು ಬಂದೇ ಬಿಡುವುದು. 'ನಿನಗೆ ಇದು ಹೇಗೆಗೊತ್ತು' ಎಂದು ಅವರೆಲ್ಲರೂ ಕೇಳಿದಾಗ 'ಉಜ್ಜಯಿನಿಯಲ್ಲಿರುವ ನನ್ನ ಸ್ನೇಹಿತರು ಹೀಗೆ ಹೇಳಿದುದನ್ನು ನಾನು ಕೇಳಿದ್ದೇನೆ'ಂದು ಹೇಗೋ ತಪ್ಪಿಸಿಕೊಂಡಳು. ಆಗ ಧಾತ್ರಿಯು ಬಂದು 'ಉದಯನನು ಮಂತ್ರಿಗಳೊಡನೆ ನಮ್ಮ ರಾಜಧಾನಿಗೆ ಈಗ ತಾನೇ ಬಂದಿದ್ದಾನೆ.ಅವನನ್ನು ಮರ್ಯಾದೆಯಿಂದ ಕಂಡು ಅವನ ವಾಸಕ್ಕೆ ಒಂದು ಅರಮನೆಯನ್ನು ಮಾಡಿಕೊಟ್ಟ.ನಮ್ಮ ಸ್ವಾಮಿಯು ಮೆಲ್ಲನೆ ನಮ್ಮ ಸ್ವಾಮಿಯನ್ನು ಅವನಿಗೆ ವಿವಾಹಮಾಡಿಕೊಡುವದಾಗಿ ಅವನಲ್ಲಿ ಕೇಳಿಕೊಂಡಾಗ ಆತನೂ ಒಪ್ಪಿದ್ದಾನೆ'ಂಬ ಶುಭ ಸಮಾಚಾರವನ್ನು ಆಗಲೇ ತಂದಳು. 'ಇದೇನನಾಹುತ! ಆತನು ಆರೋಗ್ಯವಾಗಿರುವನೇ' ಎಂದು ಅವಂತಿಕೆಯು ಮೈ ಮರತೇ ಉದ್ಗರಿಸಿಯೇ ಬಿಡುವಳು. ಏನಿದು ಅನಾಹುತವೆಂದೆಲ್ಲರೂ ಕೇಳಿದಾಗ 'ನನ್ನ ಮಿತ್ರರೆಲ್ಲರೂ ಉಜ್ಜಯಿನಿಯಲ್ಲಿ ಆತನು ವಾಸವದತ್ತೆಯಲ್ಲಿ ಆಗ ಅಷ್ಟು ಮೋಹಿತನಾಗಿದ್ದಾನೆಂದು ಹೇಳಿದ್ದರಲ್ಲಾ! ಈಗ ವ್ಯಾಮೋಹವೆಲ್ಲಾ ಮಾಯವಾಯಿತೇ ಎಂದು ಹಾಗೆ ಹೇಳಿದುದೆ'ಂದು ಹೇಗೋ ಕಷ್ಟಪಟ್ಟು ಸಮಾಧಾನವನ್ನು ನಿರೂಪಿಸುವಳು. ಸರಲ ಹೃದಯೆಯಾದ ಪದ್ಮಾವತಿಗೆ ಈ ಉತ್ತರವೇನೋ ಸರಿಯೆಂದು ತೋರಿತು. ಅಷ್ಟಾದಗೂ ಅವಂತಿಕೆಯು ತನ್ನ ದುಃಖವನ್ನು ನುಂಗಿಕೊಳ್ಳಲಾರದೇ–'ಏನು, ಆತನೇ ಸ್ವತಹ ಇವಳನ್ನು ಸ್ವೀಕರಿಸಿದ್ದೋ' ಎಂದು ಕೇಳಲು, ಧಾತ್ರಿಯು 'ಮಂತ್ರಿಗಳು ಹೇಗೋ ಅವನನ್ನೊಡಂಬಡಿಸಿ ಇಲ್ಲಿಗೇ ಕರಕೊಂಡು ಬಂದದ್ದು, ನಮ್ಮ ಮಹಾರಾಜನು ಅವನನ್ನು ಕಂಡು ತನ್ನ ತಂಗಿಯನ್ನು ವರಿಸಲು ಪ್ರಾರ್ಥಿಸಿದನು. ಆಗ ಏನೋ ಮಂತ್ರಿಗಳು ಒತ್ತಾಯ ಸಡಿಸಿದುದರಿಂದ ಒಪ್ಪಿದನಂತೆ' ಎಂದು ನಿಜಾಂಶವನ್ನು ನುಡಿದಾಗ ತನ್ನ ಅಜ್ಞಾತವಾಸಕ್ಕೆ ಸಂಬಳವನ್ನೂ ಕರುಣಿಸಿದ್ದಾಯಿತೆಂದು ಸ್ವಲ್ಪ ಸಮಾಧಾನ ತಂದುಕೊಂಡಳು. ಆಗ ಚೇಟಿಯೊಬ್ಬಳು ಓಡಿಬಂದು ಅದೇ ದಿನ ಮದುವೆಯೆಂದು ನಿಶ್ಚಯವಾಯಿತೆಂತಲೂ ಪದ್ಮಾವತಿಯು ಕೂಡಲೇ ಮದುವೆಯ ಪೂರ್ವಾಂಗವಾದ ಅಭ್ಯಂಗ ಸ್ನಾನಕ್ಕೆ ಆಗಲೇ ಹೊರಡಲೇ ಬೇಕೆಂತ ತಿಳಿಸುವಳು. ತನ್ನ ಸ್ವಾಮಿಯು ಇನ್ನೊಬ್ಬಳ ಸ್ವಾಮಿಯಾಗಿ ತನ್ನ ಕೈ ಬಿಡುವನೇ ಎಂಬುದೊಂದೇ ಅವಂತಿಕೆಗೆ ದುಃಖ.

ಅವಳು ಒಬ್ಬಳೇ ತನ್ನ ದುಃಖವನ್ನು ತೋಡಿಕೊಳ್ಳುವರೆ ಉದ್ಯಾನದಲ್ಲಿ ಒಂದು
ಮೂಲೆಗೆ ಹೋಗುವಳೆಂದು ಅಂಕವು ಮುಗಿಯುವದು. ಮೂರನೆಯ ಅಂಕವು
ಕೂಡಲೇ ಪ್ರಾರಂಭವಾಗುವದು. ತಾನೊಬ್ಬಳೇ ಅಳಬೇಕೆಂದು ಯೋಚಿಸಿದರೆ
ಅಸೂಯಾಪರವಾದ ದೈವವು ಇದನ್ನೂ ಸಹಿಸಲಾರದೆ ಮದುವೆಗೆ ಬೇಕಾದ
ಹೂವಿನ ಮಾಲೆಗಳನ್ನೂ ಅವಳೇ ಹೆಣೆಯಬೇಕೆಂದು ಆಜ್ಞೆಯಾಗಿದೆಯೆಂದು
ಚೇಟಿಯೊಬ್ಬಳು ಅವಳನ್ನು ಹುಡುಕಿಕೊಂಡು ಬಂದಳು. ಬೇರೆ ವಿಧಿಯಿಲ್ಲ
ವೆಂದು ವಿಧಿಯನ್ನು ನಿಂದಿಸುತ್ತಾ ಅವಸರದಿಂದದನ್ನು ನೇಯುವಾಗ ಕುತೂಹಲ
ವನ್ನು ತಡೆಯಲಾರದೆ, 'ಏನು ಅಳಿಯನು ಸುಂದರನೋ' ಎಂದು ಕೇಳುವಳು.
ಆಗ ಚೇಟಿಯು 'ಶರಚಾಪಗಳಿಲ್ಲದ ಮನ್ಮಥನೆ'ಂದು ಹೇಳಿದರೆ, 'ಸಾಕು ! ಪರ
ಪುರುಷರ ಗೊಡವೆ ನನಗೇಕೆ !' ಎಂದು ಸುಮ್ಮನಾಗುವಳು. ಹೂಮಾಲೆ
ಯನ್ನು ಬೇಗ ತಯಾರು ಮಾಡಿ ಕೊಡೆಂದು ಕೇಳಲ್ಪಟ್ಟವಳಾಗಿ, 'ಸರಿ ಈ
ಹೂಗಳ ಹೆಸರೇನಮ್ಮಾ' ಎಂದು ಕೇಳಿದಾಗ, 'ಇದು ಅವಿಧವಾಕರಣ, ಇದು
ಸಪತ್ನೀ ಮರ್ದನ' ಎಂದುತ್ತರ ದೊರಕುವದು. ಮನಸ್ಸಿನಲ್ಲಿಯೇ 'ಮೊದಲನೆ
ಯದನ್ನು ಪದ್ಮಾವತಿಯೂ, ನಾನೂ ಅನೇಕ ಸಲ ನೇಯಬೇಕಲ್ಲವೆ' ಎಂದರೂ
ಎರಡನೆಯ ಹೆಸರು ಕೇಳಿ ದುಃಖವನ್ನು ನುಂಗಿಕೊಳ್ಳಲಾರದೆ, 'ಇದನ್ನು
ನೇಯುವ ಅವಶ್ಯಕತೆಯೇ ಇಲ್ಲ,' ಎಂದು ಗೋಳಿಡುವಳು. ಕಾರಣವನ್ನು
ಕೇಳಲ್ಪಟ್ಟು ವಿಧಿಯಿಲ್ಲದೆ ಸಪತ್ನಿಯಿದ್ದವಳಾಗಲೇ ಸುಟ್ಟುಹೋದ್ದರಿಂದ ಇದರ
ಪ್ರಯೋಜನವಿಲ್ಲವೆಂದುಸುರುವಳು. ಅಷ್ಟರಲ್ಲಿಯೇ ಇನ್ನೊಬ್ಬ ಚೇಟಿಯು
ಬಂದು ಮಾಲೆಗಳನ್ನೆಳೆದುಕೊಂಡು ಅಲ್ಲಿದ್ದ ಚೇಟಿಯನ್ನು ಕರೆದುಕೊಂಡು
ಹೋದಾಗ ಆವಂತಿಕೆಯ ದುಃಖಕ್ಕೆ ಪಾರವೇ ಇಲ್ಲವೆಂದು ತಿಳಿಸಿ ಅಂಕವು
ಮುಗಿಯುವದು.

ನಾಲ್ಕನೆಯ ಅಂಕದಲ್ಲಿ ಮದುವೆಯು ಮುಗಿಯಿತೆಂದೂ, ಸಮ್ಮಾನದ
ಊಟಗಳಿಂದ ತನಗೆ ಅಜೀರ್ಣವಾದುದರಿಂದ ನಿದ್ರೆಯೇ ಸರಿಯಾಗಿ ಬರುವುದಿಲ್ಲ
ವೆಂದೂ ತಪಿಸುತ್ತಿರುವ ವಿದೂಷಕನನ್ನು ಹುಡುಕಿಕೊಂಡು ಚೇಟಿಯೊಬ್ಬಳು
ಬರುವಳು. ವಿದೂಷಕನು ರಾಜನನ್ನು ಕರೆದುಕೊಂಡು ಉದ್ಯಾನಕ್ಕೆ ಹೋಗು
ವನು, ಇತ್ತಲಾಗಿ ಆವಂತಿಕೆಯೂ ಪದ್ಮಾವತಿಯೂ ಅದೇ ಸ್ಥಳಕ್ಕೆ ತೆರಳುವರು.
ಪದ್ಮಾವತಿಯ ಚೇಟಿಯು ಪದ್ಮಾವತಿಯ ಹತ್ತಿರ ಅವಳು ಉದ್ಯಾನಕ್ಕೆ ಯಾಕೆ
ಬಂದುದೆಂದು ಕೇಳುವಳು. ಉದ್ಯಾನದಲ್ಲಿ ಹೂವಿನ ಗಿಡಗಳೇ ಮೊದಲಾದುವು
ಗಳಿಗೆ ಸರಿಯಾಗಿ ನೀರೆರೆಚಿ ಅವುಗಳಲ್ಲಿ ಅಂದವಾದ ಹೂಗಳಾದರೆ ತನ್ನ ಗಂಡನಿಗೆ
ಸಂತೋಷವಾದೀತೆಂದು ತನ್ನಾಶಯವೆಂದು ಪದ್ಮಾವತಿಯುಸುರಿದಾಗ, ಆವಂತಿ

ಕೆಗೆ ಇಷ್ಟು ಚಿಕ್ಕವಳಿಗೂ ಇದೇ ಉನ್ಮಾದವೇ ಎಂದು ಅಂತರಂಗದಲ್ಲಿ ಸಂತುಷ್ಟ ಳಾಗುವಳು. ಸ್ವಲ್ಪ ಹೂಗಳನ್ನು ಕೊಯ್ದು ಅನಂತರ ಪದ್ಮಾವತಿಯು ಅವಳಿಗೆ ಸಾಕೆಂದು ಹೇಳುವಾಗ ಆವಂತಿಕೆಯು ಯಾಕೆ ಹೀಗೆ ಮಾಡಿದೆಯೆಂದು ಕೇಳಿ ದಾಗ, ಪದ್ಮಾವತಿಯು, 'ಉಳಿದ ಹೂಗಳನ್ನಾದರೂ ಕಂಡು ಗಂಡನು ಸಂತೋಷಿ ಸಲಿ' ಎಂದು ಹೇಳಿ ಅವನಿಲ್ಲದೆ ತನ್ನ ಮನಸ್ಸಿಗೆ ಸುಖವೆನಿಸುವದೇ ಇಲ್ಲವೆಂದು ಮನಸ್ಸನ್ನು ಬಿಚ್ಚಿ ಹೇಳುವಳು. ಇವಳೇ ಹೀಗೆಂದರೆ ತನ್ನ ಪಾಡೇನೆಂದು ಆವಂತಿಕೆಯು ನೆನೆಸಿಕೊಂಡು ತನಗೆ ತಿಳಿಯದಂತೆಯೇ ವಾಸವದತ್ತೆಯ ಮೇಲೆ ಅವನ ವ್ಯಾಮೋಹವು ಇದಕ್ಕಿಂತಲೂ ವಿಶೇಷವಾಗಿತ್ತೆಂದು ಅವಳ ಬಾಯಿ ಯಿಂದ ಬಂದೇ ಬಿಡುತ್ತದೆ. ಅವಳಿಗೆ ಇದು ಹೇಗೆ ಗೊತ್ತಿತ್ತೆಂದು ಪದ್ಮಾವತಿಯು ವಿಚಾರಿಸಲು, ಹಾಗಿಲ್ಲದಿದ್ದರೆ, ಇವನೊಡನೆ ತಂದೆ ತಾಯಿಗಳನ್ನು ಬಿಟ್ಟು ಓಡಿ ಹೋಗಲು ಒಪ್ಪುತ್ತಿದ್ದಳೇ ಎಂದು ಹೇಗೋ ತೋಚಿದ ಕಾರಣವನ್ನು ಎತ್ತಿ ತೋರಿಸುವಳು. 'ಗಂಡನಿಂದ ವೀಣೆಯನ್ನು ಕಲಿಯಬಾರದೇ' ಎಂದು ಚೇಟಿಯು ಸೂಚಿಸಿದಾಗ, ಪದ್ಮಾವತಿಯೇ 'ನಾನೇನೋ ಇದನ್ನು ಕೇಳಿಯೂ ಆಯಿತು. ಅವರೇನೂ ಹೇಳದೆ ಸುಮ್ಮನಿದ್ದುಬಿಟ್ಟರು' ಎಂದು ತನ್ನ ದುಃಖವನ್ನು ಹೇಳಿ ಕೊಂಡಳು. ಹೀಗೆಯೇ ಮೆಲ್ಲಮೆಲ್ಲನೆ ಪದ್ಮಾವತಿಯ ಬಾಯಿಯಿಂದ ಉದಯ ನನು ಆಗಾಗ್ಯೆ ವಾಸವದತ್ತಾ ದೇವಿಯವರ ಗುಣಗಾನ ಮಾಡಿ ದಾಕ್ಷಿಣ್ಯದಿಂದ ತನ್ನೊಡನೆ ಮಾತಾಡದಿದ್ದರೂ ಆಗಾಗ್ಯೆ ಅವಳಿಗೋಸ್ಕರ ಅಳುವದಿದೆಯೆಂದು ಹೇಳಿ ದಾಗ ವಾಸವದತ್ತೆಗೆ ಸ್ವಲ್ಪ ಮಟ್ಟಿಗೆ ಆಪ್ಯಾಯನವಾಯಿತು. ಇಷ್ಟು ಸಾಲದೆ ನಾಟಕಕರ್ತನಿಗೆ ತೋರಿತೇನೋ, ಉದಯನನ ಸ್ವಂತ ಬಾಯಿಯಿಂದಲೇ ಈ ತರದ ಆಶ್ವಾಸನವನ್ನು ಕೊಡಿಸಬೇಕೆಂದು ಅತಿ ಬುದ್ಧಿವಂತಿಕೆಯಿಂದ ಪರಸ್ಪರ ತಿಳಿಯದ ಹಾಗೆಯೇ ಅವರಿಬ್ಬರನ್ನೂ ಕಲೆ ಹಾಕುವನು. (ದಿಙ್ನಾಗ ಭವ ಭೂತಿಯರು ಇದನ್ನು ಅನುಕರಿಸಿರುವದೇನೋ ನಿಜ. ಆದರೆ ಭಾಸನು ಪ್ರತಿಭೆ ಯಿಂದ ದೈವೀ ಮಾಯೆಯ ಸಹಾಯವಿಲ್ಲದೇನೇ ಸುಲಭವಾಗಿ ಅವರನ್ನು ಒಟ್ಟಿಗೆ ತಂದರೂ ಒಬ್ಬರಿಗೊಬ್ಬರಿಗೂ ಗೊತ್ತಿಲ್ಲದಂತೆ ಒಬ್ಬರಮಾತನ್ನಿನ್ನೊಬ್ಬರು ಕೇಳದಂತೆ ಏರ್ಪಾಡು ಮಾಡುವನು. ದೇವತಾ ಪ್ರಸಾದದಿಂದ ಸೀತೆಯು ರಾಮನಿಗೆ ಅದೃಶ್ಯಳಾಗಿ ಅವಳ ಮಾತನ್ನು ಮಾತ್ರ ರಾಮನು ಕೇಳಿದನೆಂದು ಹೇಗೋ ಅತಿಕಷ್ಟದಿಂದ ಸಂನಿಧಾನಕವನ್ನು ರಚಿಸಿರುವರು.)

ಮಾತಿನ ಮಲ್ಲನಾದ ವಿದೂಷಕನು ರಾಜನನ್ನು ತನ್ನ ರಾಣಿಯರಿದ್ದ ಮೂಲೆಯ ಅತಿಸಮೀಪಕ್ಕೇನೇ ಕರದೊಯ್ಯುವನು. ರಾಜನ ಮನದ ಚಿಂತೆ ಯನ್ನು ಓಡಿಸಲು, ವಿದೂಷಕನು ಆತನಿಗೆ ಸಾರಸಪಕ್ಷಿಗಳ ಸಾಲನ್ನು ತೋರಿಸು

ವನು. ಆಗ ಸಂಭ್ರಾಂತಳಾದ ಚೇಟಿಯು ರಾಜನು ಹತ್ತಿರವೇ ಇರುವದನ್ನು ರಾಣಿಯರಿಗೆ ತಿಳಿಸುವಳು. ಆದರೆ ಆವಂತಿಕೆಯೂ ಇದ್ದುದರಿಂದ ಪದ್ಮಾವತಿಯು ರಾಜನ ಬಳಿಗೆ ಹೋಗದಿರುವಳು. ಪದ್ಮಾವತಿಯು ಅಲ್ಲಿಂದ ಹೋಗಿ ಹೆಚ್ಚು ಹೊತ್ತಾಗಿರಲಾರದೆಂದು ವಿದೂಷಕನು ಉಪವನದ ಹೂಗಳನ್ನು ನೋಡಿ ಊಹಿಸುವನು. ರಾಜನಿಗೂ ಹೂಗಳನ್ನು ನೋಡಿ ತುಂಬಾ ಸಂತೋಷ, ಆವಂತಿಕೆಗೆ ತಾನು ಉಜ್ಜಯಿನಿಯಲ್ಲಿಯೇ ಇದ್ದೇನೋ ಎಂದು ಭಾಸವಾಗುವದು. ವಿದೂಷಕನು ಮಾಧವೀ ಲತಾಮಂಟಪದೊಳಗೆ ಪ್ರವೇಶಿಸುವ ಸೂಚನೆಯನ್ನು ಕೊಟ್ಟಾಗ ಚೇಟಿಯು ಒಂದು ಹೂವಿನ ಮೇಲಿರುವ ಭ್ರಮರಗಳನ್ನಲ್ಲಾಡಿಸಿ ವಿದೂಷಕನನ್ನು ಕಚ್ಚಿಸಿ ಹೊರಗೆ ನಿಲ್ಲುವಂತೆ ಮಾಡುವಳು. ಉಪಾಯವಿಲ್ಲದೆ ಅಲ್ಲಿರುವ ಆಸನದಲ್ಲಿಯೇ ರಾಜನೂ ವಿದೂಷಕನೂ ಕುಳಿತುಕೊಳ್ಳುವರು. ಆಗ ವಿದೂಷಕನೇ ಮಾತಿಗೆ ಮೊದಲು ಮಾಡುವನು. 'ಆಗಿನ ವಾಸವದತ್ತೆಯ ಮೇಲೆ ನಿನ್ನ ಮೋಹವು ಹೆಚ್ಚೋ, ಈಗಿನ ಪದ್ಮಾವತಿಯ ಮೇಲೋ ? ನಿನ್ನ ಹೃದಯವನ್ನು ಬಿಚ್ಚಿ ಹೇಳು, ಇಬ್ಬರೂ ಇಲ್ಲಿಲ್ಲವಷ್ಟೆ' ಎಂದು. ಯಾವ ತರದ ಪ್ರಶ್ನೆಯೆಂದು ಉತ್ತರವನ್ನು ಕೊಡದಿರುವರೆ ಉಪಾಯವನ್ನು ಹುಡುಕುತ್ತಿರಲು, ಇಲ್ಲಿಂದ ಉತ್ತರ ಹೇಳದೆ ಬಿಡಲಾರೆನೆಂದು ಬಲಾತ್ಕರಿಸುವನು. ಈ ಮೌನವೇನೋ ಪದ್ಮಾವತಿ ಗರ್ವವಾದರೂ ವಿದೂಷಕ ಸಾಧಾರಣದಲ್ಲಿ ಬಿಡಲೊಲ್ಲನು. ಉಪಾಯವಿಲ್ಲದೆ ರಾಜನು ಶಬ್ದಗಳನ್ನರಸುತ್ತಾ ತಡವರಿಸಿ, "ಪದ್ಮಾವತಿಯೇನೋ ನನ್ನ ಮನಸ್ಸನ್ನಾಕರ್ಷಿಸುವದು ನಿಜ, ಆದರೆ ವಾಸವದತ್ತೆಯಷ್ಟಲ್ಲ" ಎಂದು ಹೇಗೋ ಬಡಬಡಿಸುವನು. ಇದನ್ನು ಕೇಳಿ ಆವಂತಿಕೆಯೇನೋ ನಿಟ್ಟುಸಿರು ಬಿಡುವಳು. ಆದರೆ ಚೇಟಿಯು ರಾಜನ ಹೃದಯವನ್ನರಿಯದೆ ಪದ್ಮಾವತಿಯ ಮೇಲೆ ಇಷ್ಟೇ ಆದರವೋ ಎಂದು ಉದ್ಗಾರವೆತ್ತುವಳು. ಪದ್ಮಾವತಿಯಾದರೋ ಅನ್ಯಥಾ ಗ್ರಹಿಸದೆ 'ಮರಣದ ಎಲ್ಲೆಯನ್ನೂ ಕಾಣದ ನಿರ್ವ್ಯಾಜವಾದ ಪ್ರೇಮವಲ್ಲವೇ ?' ಎನ್ನುವಳು. ಆದರೆ ಈಗ ರಾಜನೇ ಅದೇ ಪ್ರಶ್ನೆಯನ್ನು ವಿದೂಷಕನಿಗೆ ಹಾಕಿದಾಗ ರಾಣಿಯರಿಬ್ಬರೂ ಚಕಿತರಾದರು. ಬುದ್ಧಿಶಾಲಿಯಾದ ಅವನು ಇಬ್ಬರನ್ನೂ ಗೌರವಿಸುವುದಾಗಿ ಹೇಳಿ ಜಾರುವರೆ ಪ್ರಯತ್ನಿಸುವನು, ಆದರೂ ಪದ್ಮಾವತಿಯು ತನ್ನನ್ನು ಸವಿಯೂಟಕ್ಕೆ ಕರೆಯುವಳೆನ್ನುವನ, 'ವಾಸವದತ್ತೆಯ ಊಟವನ್ನು ಮರೆತೆಯಲ್ಲಾ, ಅವಳ ಹತ್ತಿರ ದೂರು ಹೇಳಿಕೊಡುವೆನೆ'ಂದು ರಾಜನು ಉದ್ಗಾರವೆತ್ತಿದಾಗ 'ಓಹೋ ! ದೂರು ಹೇಳುವದು ಸತ್ತವಳಿಗೆ ಹೇಗೆ ?' ಎಂದು ವಿದೂಷಕನು ಉಚ್ಚರಿಸಲು ರಾಜನು ಗೋಳಿಡುವನು. ದೈವತಂತ್ರದ ಎದುರು ನಮ್ಮ

ವೇನೂ ನಡೆಯುವುದಿಲ್ಲವೆಂದು ವಿದೂಷಕನು ಅವನನ್ನು ಸಂತೈಸಲು ಪ್ರಯತ್ನಿಸು ವನು. ರಾಜನಾದರೋ 'ಬಹುಕಾಲದಿಂದ ದುಃಖವನ್ನು ನುಂಗಲು ಪ್ರಯತ್ನಿಸಿದೆ. ಆದರೆ ಪ್ರತಿನಿಮಿಷವೂ ನೂತನವಾಗುವುದು. ಈ ಅಳುವದೆಂಬುದು ಪ್ರಾಯ ಶ್ಚಿತ್ತ. ಅತ್ತರೇನೇ ಮನಸ್ಸಿಗೆ ಸ್ವಲ್ಪ ಪ್ರಸಾದನೇರ್ಪಡುತ್ತದೆ.' ರಾಜನ ಮುಖದಲ್ಲಿ ಕಣ್ಣೀರೇ ತುಂಬಿದ್ದರಿಂದ ಅದನ್ನು ತೊಳೆಯುವರೆ ನೀರನ್ನು ತರಲು ವಿದೂಷಕನು ಹೊರಗೆ ಬಂದನು. ಈಗ ತಾನೇ ತಮಗಿಬ್ಬರಿಗೂ ತಪ್ಪಿಸಿ ಕೊಳ್ಳಲು ಬಿಡುವು ದೊರಕಿತೆಂದು ಆವಂತಿಕೆಯು ತಾನೇ ಓಡಿಹೋದರೂ ಪದ್ಮಾವತಿಯನ್ನು ರಾಜನ ಸಮೀಪಕ್ಕೆ ಹೋಗಲು ಸಲಹೆಕೊಡುವಳು. ಆಗಲೇ ಒಳಗೆ ಬರುತ್ತಿದ್ದ ವಿದೂಷಕನೊಡನೆ ಸಮಾಚಾರವೇನೆಂದು ಕೇಳಿದಾಗ ಆತನು ಮೊದಲು ಕಷ್ಟಪಟ್ಟು ಇದು–ಇದು–ಎಂದು ತೊದಲ್ನುಡಿಯನ್ನಾರಂಭಿಸುವನು. ಪದ್ಮಾವತಿಯು ಪುನಃ ಒತ್ತಾಯಿಸಿದಾಗ 'ರಾಜನ ಕಣ್ಣಿನೊಳಗೆ ಕಸ ಹೊಕ್ಕಿತು' ಎಂದು ಹೇಗೋ ವಿವರಿಸಿ, ಪದ್ಮಾವತಿಯ ಹತ್ತಿರವೇ ನೀರನ್ನು ಕೊಟ್ಟು ತೊಳೆ ಯಿಸುವನು. ಆಗ ರಾಜನ ಸಂಭ್ರಮವು ದ್ವಿಗುಣವಾಗಿ ನಮ್ಮ ಸಂವಾದವನ್ನು ಇವಳು ಕೇಳಿರಬಹುದೋ ಎಂದು ಕಳವಳಗೊಳ್ಳುವನು. ಆಗ ವಿದೂಷಕನು ಕಣ್ಣಿನೊಳಗೆ ಕಸಬಿದ್ದಿದೆ ಎಂದು ಹೇಳಿದೆನೆಂದು ಮೆಲ್ಲನೆ ಕಿವಿಯಲ್ಲಿ ಹೇಳಿ ದ್ದನ್ನೇ ರಾಜನು ಅನುಮೋದಿಸುವನು. ಇನ್ನೂ ಅನರ್ಥವುಂಟಾದೀತೆಂದು ವಿದೂಷಕನು ಮೆಲ್ಲಗೆ 'ನಿನ್ನ ಭಾವನು ಏರ್ಪಡಿಸಿದ ಸತ್ಕಾರಕೂಟಕ್ಕೆ ಹೊರಡಲು ಹೊತ್ತಾಯಿತಲ್ಲವೇ ?' ಎಂದು ಜ್ಞಾಪಿಸಲು ಪದ್ಮಾವತಿಯನ್ನು ಒಡಂಬಡಿಸಿ ರಾಜನೂ ವಿದೂಷಕನೂ ಸಜ್ಜಾಗುವರು.

ಇನ್ನು ಮುಂದಿನದ್ದೇ ಪ್ರಸಿದ್ಧವಾದ ಸ್ವಪ್ನಾಂಕ. ರಾಜನ ದುಃಖ ವನ್ನಾತನ ಬಾಯಿಯಿಂದಲೇ ಹೇಳಿಸಿ ಆವಂತಿಕೆಗೆ **ವೇತನವನ್ನೇ**ನೋ ಕೊಟ್ಟಂತಿ ದ್ದುದು ನಿಜ. ಇಷ್ಟು ಸಾಲದೆಂದು ತೋರಿ ಅವರಿಬ್ಬರನ್ನೂ ಸ್ವಪ್ನದಲ್ಲಿ ಯಾದರೂ ಮಾತನಾಡಿಸಿ ಪರಸ್ಪರ ಮುಟ್ಟಿಸಬೇಕೆಂದಾತನಿಗೆ ತೋರಿರಬೇಕು. ಉದಯನ ವಾಸವದತ್ತೆಯರ ಹೃದಯದ X-Ray photo ಯಂತಿದ್ದು ಹೃದಯವನ್ನೇ ಬಿಚ್ಚುವ–ಹೀಗಾಗಿ ನಮ್ಮ ಹೃದಯವನ್ನೂ ಅದರೊಡನೆ ಇಡೀ ನಾಟಕವನ್ನಲ್ಲಗೆಳೆದು ಮಾಲತೀ ಮಾಧವದಲ್ಲಿ II ಸಂಜಯೂಯು ಪ್ರತಿಶ್ರುತಾಂ ಇತ್ಯಾದಿ ಸ್ಥಳದಲ್ಲಿ ನಿರ್ದೇಶಿಸಲ್ಪಟ್ಟ ನಾಟಕವೇ ಭಾಸನದ್ದಾಗಿರಬೇಕೆಂದು ವಾದಿಸುವರು. ಆದರೆ ಪದ್ಮಾವತಿಯೇನೋ ತನ್ನ ಚಿಕ್ಕ ತಲೆ ನೋವಿಗೆ ಆಡಂಬರವೇಕೆಂದು ಬೇಕೆಂದೇ ಸಮುದ್ರಗೃಹಕ್ಕೆ ಹೋಗದೆ ಕೂತಳೆಂದು

ವಾದಿಸುವವೇ ಸರಿಯೆಂದು ತೋರುತ್ತದೆ. ಈ ನಾಟಕದ ಪ್ರತಿಯೊಂದು ಸಂದರ್ಭದಲ್ಲಿಯೂ ವಾಸವದತ್ತೆಯ ಪ್ರಾಶಸ್ತ್ಯವೇ ಒಡೆದು ಕಾಣುವದು.

ಒಂದನೆಯ ಅಂಕದಲ್ಲಿ ಅವಳು ಸತ್ತಳೆಂಬ ಸುಳ್ಳು ಸುದ್ದಿ, ಎರಡನೆಯ ಅಂಕದಲ್ಲಿ ಅವಳ ಒಂದೆರಡು ಮಾತುಗಳಿಂದ ಪದ್ಮಾವತಿಯು ಉನ್ಮಾದಿತಳಾಗಿ ಉದಯನನನ್ನೇ ಕಾಮಿಸುವದು, ಮೂರನೆಯ ಅಂಕದಲ್ಲಿ ಅವಳಿಂದಲೇ ಹೆಣೆಯಲ್ಪಟ್ಟ ಹೂಮಾಲೆಗಳಿಂದ ಅವಳ ಗಂಡನನ್ನೇ ಇನ್ನೊಬ್ಬಳಿಗೆ ಧಾರಾದತ್ತವಾಗಿ ಕೊಡಲೊಪ್ಪುವದು, ನಾಲ್ಕನೆಯ ಅಂಕದಲ್ಲಿ ಅವಳು ಅಜ್ಞಾತವಾಸಕ್ಕೆ ಸ್ವಲ್ಪ ಮಟ್ಟಿಗೆ ವೇತನವನ್ನು ಕರುಣಿಸಿದ್ದು, ಐದರಲ್ಲಿ ಸ್ವಪ್ನದಲ್ಲಿಯೂ ಅವಳನ್ನು ಕಂಡು ಮಾತನಾಡಿಸಿದುದು, ಆರರಲ್ಲಿ ಪ್ರತಿಜ್ಞಾ ನಾಟಕದ ಚಿತ್ರಗಳಿಗೆ ಮಾಡಿಸಿದ ಮದುವೆಯ ಪುನರಾವರ್ತನ, ಇದರ ಸಹಾಯದಿಂದ ಅವರ ಸಮಾಗಮ. ಎಲ್ಲಿ ನೋಡಿದರೂ ವಾಸವದತ್ತೆಯೇ ಜೀವಕಳೆಯನ್ನು ತುಂಬುವದು. ಎಲ್ಲಾ ಸಂದರ್ಭಗಳೂ ಸ್ವಪ್ನದಲ್ಲಿಯೇ ಕಳೆಗೊಳ್ಳುವದರಿಂದ ಈ ನಾಟಕದ ಹೆಸರಿಗೇ ಸ್ವಪ್ನವೆಂಬ ವಿಶೇಷಣವನ್ನು ಸೇರಿಸಿದುದೂ ನ್ಯಾಯವೇ.

ಒಂದನೆಯ ಹೆಂಡತಿಯು ಕೈಬಿಟ್ಟು ಎರಡನೆಯ ಹೆಂಡತಿಯು ಕೈಹಿಡಿಯಬೇಕಾಗಿ ಬಂದರೂ ಅವಳಿಗೂ ಕಾಹಿಲೆ, ತಲೆನೋವೆಂದು ಗಾಬರಿಯಾದ ಉದಯನನು ವಿದೂಷಕನೊಡನೆ ಸಮುದ್ರ ಗೃಹಕ್ಕೆ-ಎಲ್ಲಿ ಅವಳನ್ನು ಮಲಗಿಸಬೇಕೆಂತ ಏರ್ಪಾಟು ಮಾಡಿಯದೋ ಅಲ್ಲಿಗೆ-ಅವಳೇ ಬರುವದಕ್ಕಿಂತ ಅರ್ಧ ಯಾ ಮುಕ್ಕಾಲು ಗಂಟೆಗೆ ಮುಂಚಿತವಾಗಿಯೇ ಹೋಗಿ ಬಿಡುವನು. ಸಾಯಂಕಾಲದ ಸಮಯ, ಮಸುಕು ಮಸುಕಾಗಿದೆ. ಹಾಸಿಗೆಯನ್ನಾಗಲೇ ಚೇಟಿಯರು ಸಿದ್ಧಗೊಳಿಸಿರುವರು. ತಂಗಾಳಿ ಬೀಸುತ್ತಿರಲು ರಾಜನು ತಾನೇ ಹಾಸಿಗೆಯ ಮೇಲೆ ಕುಳಿತು ವಿದೂಷಕನಿಂದ ಕಥೆಯನ್ನು ಹೇಳಿಸುವನು. ಉಜ್ಜಯಿನಿಯಲ್ಲಿ ಬಹು ರಮಣೀಯವಾದ ಸ್ನಾನ ಘಟ್ಟಗಳಿದ್ದವೆಂದಾರಂಭಿಸಿದ್ದೇ ತಡ,ರಾಜನು ಆ ಪಟ್ಟಣದಲ್ಲಿ ವಾಸವದತ್ತೆಗೆ ವೀಣೆಯ ಪಾಠಗಳನ್ನು ಹೇಳಿಕೊಡುವಾಗ ತನ್ನ ಮುಖವನ್ನೇ ನೋಡುತ್ತಾ ಮೀಟುವ ಕೋಲನ್ನು ಎಲ್ಲೆಲ್ಲಿಯೋ ಹಾಕುತ್ತಾ ತನ್ನೆದೆಯನ್ನು ಕಣ್ಣೀರಿನಿಂದ ತೋಯಿಸಿದ್ದು ನೆನಪಿಗೆ ಬಂದು ಅಳಲಾರಂಭಿಸಲು, ಈ ಕಥೆಯು ಇಷ್ಟವಾಗದಿದ್ದರೆ ಇನ್ನೊಂದನ್ನು ಹೇಳುವೆನೆಂದು ಕಾಂಪಿಲ್ಯರಾಜ, ಬ್ರಹ್ಮದತ್ತ ನಗರವೆಂದು ತಿರುಗುಮುರುಗಾಗಿ ಶುರುಮಾಡುವನು. ರಾಜನು ನಕ್ಕು ನಗರ ರಾಜರನ್ನು ತಿರುಗಿಸಿ ಹೇಳಲಾಗಿ, ತಪ್ಪಿನ ಹೆದರಿಕೆಯಿಂದ ಅದನ್ನೇ ಹತ್ತುಸಲ ತಿರುಗಿ ತಿರುಗಿ ಹೇಳುವನು. ತಂಗಾಳಿಯು ಬೀಸುತ್ತಿರುವಾಗ ರಾಜನಿಗೆ ಅಲ್ಲಿಯೇ ನಿದ್ದೆಯು ಬಂತು. ಅದನ್ನು ನೋಡಿ ತನಗೂ ಸ್ವಲ್ಪಚಳಿಯಾಗಲು

ಹೊದ್ದುಕೊಳ್ಳಲು ಹಚ್ಚಡವನ್ನು ತರುವರೆ ವಿದೂಷಕನೆದ್ದು ಹೋಗುವನು. ಈ ಸಂದರ್ಭದಲ್ಲಿ ರಾಜನೊಬ್ಬನೇ ಇದ್ದು ಮೂರು ಸಂಜೆಯ ಕತ್ತಲಲ್ಲಿ ದೂರದಲ್ಲಿ ಚಿಮಣಿ ದೀಪವು ಮಿಣುಕುತ್ತಿರಲು, ವಾಸವದತ್ತೆಯು ಮೆಲ್ಲನೆ ಪದ್ಮಾವತಿಗೆ ತಲೆ ನೋವಾದ್ದರಿಂದ ಕತೆಗಳನ್ನು ಹೇಳುವರೆ ಅಲ್ಲಿಗೆ ಬಂದಳು. ಪದ್ಮಾವತಿಯು ನ್ನೊಬ್ಬಳನ್ನೇ ಅಲ್ಲಿಯೇ ಬಿಟ್ಟು ಹೋದರಲ್ಲಾ ಎಂದು ಶಂಕಿಸುತ್ತಾ ಹಾಸಿಗೆಯ ಮೇಲೆಯೇ ಕುಳಿತಾಗ ವೈಜುಮ್ಮೆನ್ನುವದು. ಕಾರಣ ತಿಳಿಯದೆ, ಹಾಸಿಗೆಯಲ್ಲಿ ಮಲಗಿದವಳ (?) ಶ್ವಾಸೋಚ್ಛ್ವಾಸವನ್ನು ಕ್ಷಣ ಗಮನಿಸುವಳು. ಸರಿಯಾಗಿ ನಿಶ್ವಾಸೋಚ್ಛ್ವಾಸ ಬಿಡುತ್ತಾಳೆ (?). ಆದ್ದರಿಂದ ತಲೆನೋವು ವಾಸಿಯಾಗಿರ ಬಹುದೆಂತ ಯೋಚಿಸುವಷ್ಟರಲ್ಲಿ ರಾಜನಿಗೆ ಸ್ವಪ್ನಬಿದ್ದು 'ವಾಸವದತ್ತೆ! ಅವಂತಿ ರಾಜಪುತ್ರಿ!' ಎಂದು ಕರೆದಾಗ ನಿಜವು ಇವಳ ಮನಸ್ಸಿನಲ್ಲಿ ಹೊಳೆಯುವದು.ಆಗಲೇ ಓಡಿಹೋಗುವ ಯೋಚನೆಮಾಡಿಕೊಂಡರೂ ಸ್ಮೃತಿಯಿಲ್ಲದೆ ಸ್ವಪ್ನದಲ್ಲಿ ಮಾತ ನಾಡುವದೆಂದು ನಿರ್ಧಾರವಾದ ಮೇಲೆ ಮನಸ್ಸನ್ನೂ ಕಣ್ಣನ್ನು ತೃಪ್ತಿಪಡಿಸಿಯೇ ಹೋಗುವದೆಂದು ತೀರ್ಮಾನಿಸುವಳು. ಸ್ವಪ್ನದಲ್ಲಿಯೇ ಮತ್ತು 'ಪ್ರಿಯತಮೆ! ಪ್ರಿಯಶಿಷ್ಯೆ! ಒಂದುತ್ತರವನ್ನು ಕೊಡಲಾರದೇ?' ಎಂದಾಗ ಮನಸ್ಸಿಲ್ಲದಿದ್ದರೂ, 'ಇಲ್ಲಿರುವೆನಲ್ಲಾ' ಎಂಬ ಶಬ್ದಗಳು ಅವಳ ಬಾಯಿಯಿಂದ ಹೊರಟೇ ಬಿಡು ತ್ತವೆ. 'ಏನು ಸಿಟ್ಟೇ?' ಎಂದು ರಾಜನು ಸ್ವಪ್ನದಲ್ಲಿಯೇ ಮುಂದುವರಿಸಿದಾಗ, 'ಎಂದಿಗೂ ಇಲ್ಲ! ದುಃಖಿಸುತ್ತಿದ್ದೇನೆ' ಎಂದಾಗ ರಾಜನು ಸ್ವಪ್ನದಲ್ಲಿಯೇ 'ಸಿಟ್ಟಿಲ್ಲ ದಿದ್ದರೆ ಅಲಂಕಾರಗಳೇಕಿಲ್ಲ.' 'ಅಲಂಕಾರಗಳೇಕೆ?' ಎಂದು ಮರುತ್ತರವೂ ಬಂತು. 'ಹಳೆಯ ಸುಖಕಾಲದ ನೆನಪುಗಳಿಂದ ಹೀಗಾದ್ದೇನು?' ಎಂದು ಸ್ವಪ್ನ ದಲ್ಲೇ ರಾಜನು ಮುಂದುವರಿಸಲು, ಆಭರಣಗಳನ್ನು ಸುಡು, ಎಂದಿವಳ ಬಾಯಿ ಯಿಂದ ಹೊರಟಿತು. ಆ ರಾಜನು ನಿದ್ದೆಗಣ್ಣಿನಲ್ಲಿಯೇ ವಾಸವದತ್ತೆಯ ಕ್ಷಮೆ ಯನ್ನು ಯಾಚಿಸುವರೆ ಹೋಗಿ ಕೈ ನೀಡಿದನು. ಆಗ ತಾನೇ ತಾನು ನಿಂತದ್ದು ತಪ್ಪಾಯಿತೆಂದು ಪ್ರಜ್ಞೆಬಂದು ಓಡುವರೆ ನಿಶ್ಚಯಿಸಿದರೂ ಹೊರಗಿರುವ ಕೈಗಳ ಮೇಲೆ ಪುನಃ ಹಚ್ಚಡವನ್ನು ಹೊದಿಸಿಯೇ ಹೋಗುವದೆಂಬ ಲವಲವಿಕೆಯನ್ನು ತಡೆಯಲಾರದೆ ಹಾಗೇ ಮಾಡಿ ಓಡುವಳು. ಅಕಸ್ಮಾತ್ತಾಗಿ ಅವಳ ಕೈಯ ಸ್ಪರ್ಶದಿಂದ ಸಂಪೂರ್ಣವಾಗಿ ಎಚ್ಚತ್ತ ಉದಯನನು ವಾಸವದತ್ತೆಯ ಬೆನ್ನನ್ನು ಸ್ವಲ್ಪ ಮಟ್ಟಿಗೆ ಕತ್ತಲಲ್ಲಿ ಗುರುತಿಸಿ ಹಿಂದೆ ಓಡುವನು. ಆದರೆ ಸಂಭ್ರಮದಲ್ಲಿ ಬಾಗಿಲಿನ ಮೇಲು ತಾಳವು ತಲೆಗೆ ತಾಗಿ ಅಯ್ಯೋ ಎಂದು ಕೂಗಿಕೊಳ್ಳುವನು. ಅಷ್ಟರಲ್ಲಿ ವಾಸವದತ್ತೆಯೂ ಕತ್ತಲಲ್ಲಿ ಬಹುದೂರ ಸಾಗಿಕೊಂಡಿದ್ದಳು. ಇತ್ತ

ಲಾಗಿಂದ ಹೆಚ್ಚಡವನ್ನು ವಿದೂಷಕನು ತಂದಾಗ ರಾಜನು ಅವನನ್ನು ಕುರಿತು 'ವಾಸವದತ್ತೆಯು ಬದುಕಿರುವಳು ?' ಎನಲಾಗಿ ವಿದೂಷಕನು 'ಛೀ ! ಸತ್ತವರು ಬದುಕಿರುವದುಂಟೇ ?' ಎಂದುತ್ತರಿಸಲು, ರಾಜನು 'ನನ್ನ ಕಣ್ಣಿನಿಂದಲೇ ನಾನವ ಳನ್ನು ನೋಡಿದ್ದೆ. ರುಮಣ್ವಂತರೆಲ್ಲಾ ಸುಳ್ಳು ಹೇಳಿದ್ದು' ಎಂದು ವಾದಿಸ ಲಾರಂಭಿಸಿದನು. ಆಗ ವಿದೂಷಕನು 'ನೀನಾಕೆಯ ನೆನಪು ಬಂದು ಸ್ವಪ್ನದಲ್ಲಿ ಕಂಡಿರಬೇಕು. ಇಲ್ಲದಿದ್ದರೆ ಅವಂತಿ ಸುಂದರೀ ಎಂಬ ಯಕ್ಷಿಣಿಯನ್ನು ಇಲ್ಲಿ ಕಂಡದ್ದೋ ಏನೋ' ಎಂದು ಸಮಾಧಾನಪಡಿಸಲೆತ್ನಿಸಿದಾಗ ರಾಜನೂ ಮುಂಚಿನ ಪಲ್ಲವಿಯನ್ನೇ ಹಾಡುತ್ತಾ 'ಕಪ್ಪುಹಚ್ಚದಿರುವ ಕಣ್ಣುಗಳು, ಬಾಚದಿರುವ, ಕೆದರಿದ ಅಸ್ತವ್ಯಸ್ತವಾದ ತಲೆಗೂದಲು ಎಲ್ಲಾ ಅವಳದ್ದೆಂಬುದರಲ್ಲಿ ಸಂದೇಹವಿಲ್ಲ. ಇಗೋ ! ನೋಡು ಮೈಯಲ್ಲಿ ಅವಳ ಸ್ಪರ್ಶದಿಂದುಂಟಾದ ರೋಮಾಂಚನವೂ ತಣಿಯಲಿಲ್ಲ' ಎಂದೊದರಿದನು. ಈ ಸಮಯಕ್ಕೆ ಸರಿಯಾಗಿ ಕಂಚುಕಿಯು ಬಂದು 'ಪ್ರಭೋ ! ನಿಮ್ಮ ಸೈನ್ಯಗಳೂ ಮಗಧ ಸೈನ್ಯಗಳೂ ಸನ್ನದ್ಧವಾಗಿವೆ. ವೈರಿಯಾದ ಆರುಣಿಯನ್ನು ಗೆಲ್ಲಲು ವಿಜಯಯಾತ್ರೆಗೆ ಸಿದ್ಧನಾಗು' ಎಂದು ಬಿನ್ನವಿಸುವನೆಂಬುವಲ್ಲಿಗೆ ಅಂಕವು ಮುಗಿಯಿತು.

ಆರನೆಯ ಅಂಕವು ಆರಂಭವಾಗುವ ಮೊದಲು ವೈರಿಗಳನ್ನು ಗೆದ್ದಾಗಿದೆ. ಸಮಾಚಾರವು ಉಜ್ಜಯಿನಿಯವರೇಗೂ ಹೋಗಿ ಸ್ವತಃ ಮಹಾಸೇನನೇ ಅಭಿ ನಂದನಾರ್ಥವಾಗಿ ದೂತನನ್ನು ಕಳುಹಿಸಿರುವನು. ಅವರನ್ನೆದುರುಗೊಳ್ಳಲು ಪದ್ಮಾವತೀ ಸಮೇತನಾಗಿ ರಾಜನು ಆಸ್ಥಾನಮಂಟಪದಲ್ಲಿ ಕುಳಿತಿರುವುದನ್ನು ನಾವು ಕಾಣುತ್ತೇವೆ. ಈ ದೂತರೊಡನೆ ಮುದುಕ ಕಂಚುಕಿ ರೈಭ್ಯ ಮತ್ತು ವಾಸವದತ್ತೆಯ ಧಾತ್ರಿಯಾದ ವಸುಂಧರೆಯೂ ಇರುವಳು. ಆಗಲೇ ಮುರಿದು ಹೋದ ಘೋಷವತಿಯೆಂಬ ಪ್ರಿಯವಾದ ವೀಣೆಯು ಸಿಕ್ಕಿ ದುಃಖಾಕ್ರಾಂತ ನಾಗಿದ್ದರೂ ಆ ದುಃಖವನ್ನು ನುಂಗಿ ರಾಜನು ಸಭೆಯಲ್ಲಿ ಮಂಡಿಸಿದ್ದನು. ಆಗ ಮಾವ ಮಹಾಸೇನನಿಂದ ಬಂದ ದೂತರಾದ ಕಂಚುಕಿಯೂ ಧಾತ್ರಿಯೂ ಪ್ರವೇಶಿಸಿದಾಗ ಇವನೆದ್ದುನಿಂತು, ತಾನು ಕಳ್ಳನಂತೆ ವಾಸವದತ್ತೆಯನ್ನು ಕದ್ದು ಕೊಂಡು ಬಂದು ಅವಳನ್ನು ಮರಣಕ್ಕೆ ತುತ್ತುಪಡಿಸಿದರೂ ತನ್ನಲ್ಲಿ ಪ್ರೇಮಾತಿ ಶಯವನ್ನು ಕರುಣಿಸಿದ್ದ ಮಾವ ಅತ್ತೆಯವರಲ್ಲಿ ತನ್ನ ಗೌರವವನ್ನು ವ್ಯಕ್ತಪಡಿಸು ವನು. ಅವರ ಆಶೀರ್ವಾದದಿಂದಲೇ ತನ್ನ ರಾಜ್ಯವು ಹಿಂದೆ ಬಂತೆಂದು ಅವರನ್ನು ಮನ್ನಿಸುವನು. ಅವರು ಪ್ರೇಮ ಪುರಸ್ಸರವಾಗಿ ಕುಶಲ ಪ್ರಶ್ನೆಯನ್ನು ಮಾಡಲು ತನ್ನ ಕುಶಲವೆಂಬುದು ವಾಸವದತ್ತೆಯೊಡನೆಯೇ ಹೊರಟು ಹೋಗಿದೆಯೆಂದು ಉಸುರುವನು. ಆಗ ಕಂಚುಕಿಯು 'ಹೀಗೆ ಗಂಡನಿಂದ ಸ್ಮರಿಸಲ್ಪಟ್ಟ ವಾಸವ

ದತ್ತೆಯು ಸತ್ತರೂ ಸತ್ತಿಲ್ಲವೆಂದು ನಾವು ಭಾವಿಸುವೆವು. ವಿಧಿ ವಿಲಾಸವನ್ನು ನಿವಾರಲೆಂತು ! ಮರಣೋಪಾಯದಿಂದ ಯಾರೂ ಯಾರನ್ನು ರಕ್ಷಿಸಲು ಸಾಧ್ಯವೇ ಇಲ್ಲ' ಎಂದು ಎಷ್ಟು ಸಂತೈಸಿದರೂ ರಾಜನು 'ಜನ್ಮ ಜನ್ಮಾಂತರದಲ್ಲಿಯೂ, ಅವಳನ್ನು ಮರೆಯುವದಸಾಧ್ಯ'ವೆಂದಳುವನು. ಆಗ ಧಾತ್ರಿಯು ನಮ್ಮ ಮಗಳಿಗೆ ವೀಣೆಯನ್ನು ಕಲಿಸಲೊಪ್ಪಿದಾಗಲೇ ನಾವು ನಿನಗೆ ಅವಳನ್ನು ಧಾರಾ ದತ್ತನಾಗಿ ಕೊಟ್ಟಿದ್ದೆವು. ಅಗ್ನಿ ಸಾಕ್ಷಿಯಾಗಿ ವಿವಾಹವನ್ನು ನೆರವೇರಿಸಲಾಗದೆ ಈ ಎರಡು ಚಿತ್ರಪಟಗಳನ್ನು ಬಿಡಿಸಿ ಅದರಲ್ಲಿಯಾದರೂ ನಿಮ್ಮ ವಿವಾಹವನ್ನು ಕಣ್ಣಾರೆ ಕಂಡು ಸಂತೋಷಿಸಿದೆವು. ಅವುಗಳನ್ನಾದರೂ ಕಂಡು ನಿನ್ನ ದುಗುಡ ವನ್ನು ಮರೆತುಬಿಡು' ಎಂದು ನಿನ್ನ ಅತ್ತೆ ಅಂಗಾರವತೀ ರಾಣಿಯವರ ಸಂದೇಶ' ಎಂದು ಹೇಳಿದಾಗ ರಾಜನ ಕಣ್ಣಿನಲ್ಲಿ ಧರ ಧರ ನೀರು ಬರುವದು. ಪದ್ಮಾವತಿಯು ಆಗ ಚಿತ್ರಪಟಗಳನ್ನು ಕಾಣಲಪೇಕ್ಷಿಸಿ ವಾಸವದತ್ತೆಯನ್ನು ಕಂಡು ಚಕಿತಳಾಗಿ 'ಆರ್ಯಪುತ್ರನೇ ! ಈ ಚಿತ್ರಪಟವು ಅಕ್ಕನಂತಿರುವದೇ !' ಎಂದು ಪ್ರಶ್ನಿಸುವಳು. 'ಅವಳೇ ಇವಳೆಂಬುದರಲ್ಲಿ ಸಂದೇಹವೇ ಇಲ್ಲ. ಇಷ್ಟು ಸುಂದರವಾದ ಆಕೃತಿಯು ಈಗ ಭಸ್ಮವಾಗಿದೆಯೆಂದು ನಂಬಬಹುದೇ' ಎನ್ನುವಾಗ ಪದ್ಮಾ ವತಿಯು ಆಕೃತಿ ಸಾದೃಶ್ಯವನ್ನು ಹೋಲುವರೆ ಉದಯನನ ಚಿತ್ರಪಟವನ್ನೂ ಅವನನ್ನು ಪುನಃ ಪುನಃ ನೋಡುವಳು. ಉದಯನನು ಬೆರಗಾಗಿ 'ಏನಿದು ! ಉದ್ವೇಗ'ಎಂದು ವಿಚಾರಿಸಿದಾಗ ಪದ್ಮಾವತಿಯು 'ನನ್ನ ಮದುವೆಯ ಮುಂಚೆ ಒಬ್ಬ ಬ್ರಾಹ್ಮಣನು ಪ್ರೋಷಿತಭರ್ತೃಕೆಯೆಂದು ತನ್ನ ತಂಗಿಯನ್ನು ನ್ಯಾಸವಾಗಿ ಟ್ಟನು. ಅವಳಿಗೂ ಚಿತ್ರಪಟಕ್ಕೂ ತುಂಬಾ ಸಾದೃಶ್ಯವಿದೆ, ಎಂದು ಹೇಳುವದಕ್ಕೂ ಪ್ರತೀಹಾರಿಯು ಉಜ್ಜಯಿನಿಯಿಂದೊಬ್ಬ ಬ್ರಾಹ್ಮಣನು ಬಾಗಿಲಲ್ಲಿರುವ ನೆಂದು ಸಮಾಚಾರವನ್ನು ತಿಳಿಸುವುದಕ್ಕೂ ಸರಿಯಾಯಿತು. ಬ್ರಾಹ್ಮಣ (=ಯೌಗಂಧರಾಯಣ) ನನ್ನ ಉದಯನನು ಗುರುತಿಸಲಾರದವನಾಗಿದ್ದರೂ ಅವನ ಸ್ವರವನ್ನು ಗುರುತಿಸಿದ್ದ ಸ್ವರವೇ ಎಂದು ಉದ್ವಿಗ್ನನಾಗಿದ್ದಾಗ ಆತನು ತನ್ನ ತಂಗಿಯನ್ನು ಯಾಚಿಸುವನು. ಮುಖಕ್ಕೆ ಯವನಿಕೆಯನ್ನೆಳೆದು ಮುಚ್ಚಿಕೊಂಡು ವಾಸವದತ್ತೆಯೂ ಒಳಗೆ ಬರುವಳು. ನಿನ್ನಣ್ಣನೂ ಬಂದಿರುವನೆಂದ ಸಮಾಚಾರವನ್ನು ಪದ್ಮಾವತಿಯು ವಾಸವದತ್ತೆಗೆ ತಿಳಿಸುವಳು."ಕ್ರಮಪ್ರಕಾರವಾಗಿ ಸಾಕ್ಷಿಗಳ ಸಮಕ್ಷಮದಲ್ಲಿಯೇ ಈ ನ್ಯಾಸವನ್ನು ಹಿಂದೆ ಕೊಡಬೇಕೆಂದು ಧರ್ಮ ಶಾಸ್ತ್ರಗಳ ನಿಯಮ. ಆದ್ದರಿಂದ ಉಜ್ಜಯಿನಿಯಿಂದ ಬಂದ ಈ ಧಾತ್ರಿಯೂ ಕಂಚುಕಿಯೂ ಸಾಕ್ಷಿಗಳಾಗಲಿ" ಎಂದು ರಾಜನು ಹೇಳಿದಾಗ ಪದ್ಮಾವತಿಯು

ಒಪ್ಪಿ ವಾಸವದತ್ತೆಯನ್ನವರ ವಶಕ್ಕೊಪ್ಪಿಸುವಳು. ಅವಳು ಅವರೊಡನೆ ಸ್ವಲ್ಪ ದೂರ ಹೋಗಿ ತನ್ನ ಮುಖ ಪರದೆಯನ್ನೆಳೆದೊಡನೆ ಅವರು ವಾಸವದತ್ತೆಯನ್ನು ಗುರುತಿಸಿದರು. ರಾಜನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನ ವಿಸ್ಮಯವನ್ನು ಹೆಚ್ಚಿಸುತ್ತಾ ಉಜ್ಜಯಿನಿಯ ಬ್ರಾಹ್ಮಣನು ತಾನು ಯೌಗಂಧರಾಯಣನೆಂದು ರಾಜನ ಪಾದಗಳಲ್ಲಿ ಬೀಳುವನು. ವಾಸವದತ್ತೆಯೂ ಗಂಡನಿಗೆರಗುವಳು. ಸಂತೋಷದ ಭರದಲ್ಲಿಯೇ ಉಜ್ಜಯಿನಿಗೆ ಕೂಡಲೇ ಹೊರಡುವದಾಗಿ ನಿಶ್ಚಯಿಸುವರು.

೧೪

ಭಾಸನ ನಾಟಕಗಳ ಪ್ರಾಶಸ್ತ್ಯ

ಪ್ರಸಿದ್ಧ ಆಲಂಕಾರಿಕನಾದ ರಾಜಶೇಖರನು ಒಂದು ಶ್ಲೋಕದಲ್ಲಿ ಭಾಸನ ನಾಟಕ ಚಕ್ರವನ್ನು ಅಗ್ನಿಯಲ್ಲಿ ಹಾಕಿ ಸುಟ್ಟರೂ ಸ್ವಪ್ನವಾಸವದತ್ತವೊಂದನ್ನು ಬೆಂಕಿಯು ಸುಡದೇ ಹೋಯಿತೆಂದು–ಸ್ವಪ್ನವಾಸವದತ್ತಸ್ಯ ದಾಹಕೋऽಭೂನ್ನ ಪಾವಕಃ ಎಂದು ಈ ಸ್ವಪ್ನ ನಾಟಕವನ್ನು ಬಾಯಿತುಂಬಾ ಹೊಗಳಿರುವನು. ಇದಕ್ಕೆ ಕಾರಣವೇನು ?

ಕಾಲಿದಾಸ ಭವಭೂತ್ಯಾದಿಗಳು ದೈವಿಕ ಸಾಧನಗಳ ಸಹಾಯದಿಂದ ದುಃಖಾಂತಗಳಾದ ನಾಟಕಗಳನ್ನು ಮೋದಾಂತವಾಗಿ ಮಾಡಿದರೆ ಭಾಸನು ಇವುಗಳ ಸಹಾಯವಿಲ್ಲದೇನೇ ತನ್ನ ಪ್ರತಿಭೆಯ ಮಹಿಮೆಯಿಂದಲೇ ದುಃಖಮಯವಾದ ಕಾವ್ಯವನ್ನು ಪ್ರಮೋದಾಂತವಾಗಿ ಮುಗಿಸಿ ನಮ್ಮ ಹೃದಯದ ದುಗುಡವನ್ನು ಸಂಪೂರ್ಣವಾಗಿ ದೂರೀಕರಿಸುವನು. ಇವನು ಚಿತ್ರಿಸಿದ ಪ್ರೇಮವೆಂಬುದು ಮರಣದ ಎಲ್ಲೆಗಳನ್ನು ದಾಟಿ ಸಾಹಿತ್ಯಾಕಾಶದಲ್ಲಿ ಧ್ರುವತಾರೆಯಾಗಿ ರಾರಾಜಿಸುವುದು. ವಾಸವದತ್ತೆಯು ಸತ್ತರೂ ನಮ್ಮ ಹೃದಯ ಸಿಂಹಾಸನದಲ್ಲಿ ಈಗಲೂ ಅಭಿಷಿಕ್ತಳಾಗಿಯೇ ಇರುವಳಲ್ಲವೇ ? ಭವಭೂತಿಯು ದುಃಖ ಸಂವೇದನೆಗೋಸ್ಕರವೇ ರಾಮನಲ್ಲಿ ಚೈತನ್ಯವು ಆಹಿತವಾಯಿತೆಂಬುದನ್ನು ಕಲಿಯುವರೆ ವಾಸವದತ್ತೆಯ ಜೀವನ ಚರಿತವನ್ನೆಷ್ಟು ಸಲ ಓದಿರಬಹುದೋ ತಿಳಿದಿಲ್ಲ. ದಶರಥನ ಮರಣವನ್ನು ಬಿಂಬಿಸುವ ದೃಶ್ಯ, ದುರ್ಯೋಧನನು ಸಾಯುವ ದೃಶ್ಯ, ನಮ್ಮ ಹೃದಯದಲ್ಲಿ ಆಚಂದ್ರಾರ್ಕವಾಗಿ ನೆಲೆಸಿಬಿಟ್ಟವೆ.

ಇವನು ಸ್ವಪ್ನವಾಸವದತ್ತದಲ್ಲಿ ವರ್ಣಿಸಿರುವ ಪ್ರೇಮವೆಂಬುದು ಅಚ್ಚಳಿಯದ, ಎಂದೆಂದಿಗೂ ಸಾವು ಇಲ್ಲದ ಪ್ರೇಮ. ಅದರಿಂದಲೇ ಅವನಿಗೆ ಅತ್ಯುಚ್ಚ

ವಿಶ್ವಕವಿಗಳೊಡನೆ ಗಣನೀಯವಾದ ಸ್ಥಾನ ಲಭಿಸಿದೆ. ದುಃಖಮಯವಾದ ಜೀವನವನ್ನು ಸಾಕಷ್ಟು ಸುಖಮಯವಾಗಿ ಮಾಡಿ ನಮ್ಮ ಜೀವನದ ಮಟ್ಟವನ್ನೇ ಸುಧಾರಿಸುವ ಮಾರ್ಗವನ್ನು ಕಲ್ಪಿಸಿದಂತಿಲ್ಲವೇ ? ವಿಶ್ವಪ್ರೇಮಿಗೆ ಸೋಲು ಅಪಜಯಗಳ ಸೊಲ್ಲೇ ಬಾಧಿಸುವುದಿಲ್ಲ. ಉದಯನನಂಥ ಪ್ರೇಮಿಗೆ ಕಾಮನ ಜಗತ್ತೇ ಅನಂತ, ಅವನ ಬಾಣಗಳೇ ಅಸಂಖ್ಯ. ಇವನ ವೈಶಿಷ್ಟ್ಯವೆಂದರೆ ಭಗವದ್ಗೀತೆಯಲ್ಲಿ ತೋರಿಸಿದ ಮಾರ್ಗವನ್ನೇ ಅನುಸರಿಸಿ, ಈ ಕಾಮವನ್ನು ಧರ್ಮಾವಿರುದ್ಧವಾಗಿ ಮಾಡಿ, ಅದನ್ನು ನೂತನವಾಗುವ ಮಾರ್ಗಕ್ಕೆ ಮೇಲ್ಪಂಕ್ತಿ ಯನ್ನು ಹಾಕಿಕೊಟ್ಟದ್ದು. ಇದು ಭಾರತೀಯ ದೇಶದ ಕವಿಗೆ ಮಾತ್ರ ಸಾಧ್ಯ. Our sweetest songs are those that tell of saddest thought ಎಂಬ ಮಾತು ಇವನಿಗೂ, ಇವನ ನಾಟಕಗಳಿಗೂ ಅಕ್ಷರಶಃ ಅನ್ವಯಿಸುವುದು. ಇವನ ಹೆಸರೂ ಅನ್ವರ್ಥವಾಗಿ ವಿಶ್ವಸಾಹಿತ್ಯವನ್ನೇ ಭಾವಿಸಿ ಪ್ರಜ್ವಲವಾಗಿ ಮಾಡುವುದು.

ಈತನ ಚಾರುದತ್ತಕ್ಕೆ ರಾಜಕೀಯ ಪ್ರಸಂಗವನ್ನೂ ಕೋರ್ಟು ವ್ಯವಹಾರ ವನ್ನೂ ಜೋಡಿಸಿ, ಈತನ ಆಶ್ರಯದಾತನಾದ ಶೂದ್ರಕನೆಂಬ ಇನ್ನೊಂದು ಹೆಸರಿದ್ದ ಪುಷ್ಯಮಿತ್ರರಾಜನೇ ಮೃಚ್ಛಕಟಿಕವನ್ನು ಬರೆದಿರಬಹುದೆಂತ ನಾವು ಊಹಿಸುತ್ತೇವೆ. ಮೃಚ್ಛಕಟಿಕದ ಪ್ರಸ್ತಾವನೆಯಲ್ಲಿ ತನ್ನನ್ನು ದ್ವಿಜಮುಖ್ಯತಮ ನೆಂದು ಕರೆದುಕೊಂಡುದೂ, ಹರಿವಂಶ ಭವಿಷ್ಯಪರ್ವ II 40 ರಲ್ಲಿ ಸೇನಾನೀಃ ಕಾಶ್ಯಪೋ ದ್ವಿಜಃ ಎಂದಿರುವುದನ್ನು ನಿರ್ದೇಶಿಸಿದುದೂ ಅಶ್ವಮೇಧ ಯಾಗವನ್ನು ಮಾಡಿದುದೂ ಪುಷ್ಯಮಿತ್ರನೇ ಈ ರಾಜನೆಂದೂಹಿಸಿದರೇನೇ ಸರಿಹೋಗುತ್ತದೆ. 'ರಾಜಾನಂ ವೀಕ್ಷ್ಯ ಪುತ್ರಂ ಪರಮ ಸಮುದ ಯೇನಾಶ್ವಮೇಧೇನ ಚೇಷ್ಟ್ವಾ' ಎಂಬಲ್ಲಿ ಮಗನಾದ ಅಗ್ನಿಮಿತ್ರನು ರಾಜನಾದುದನ್ನು ಕಂಡು, ಎಂದು ಟೀಕಿಸಿದ ರೇನೇ ಸರಿಹೋಗುವುದು.

ಅಶೋಕ ಕುಮಾರಭಟ್ಟಾಚಾರ್ಯರೆಂಬ ಪ್ರಸಿದ್ಧ ವಿಮರ್ಶಕರ ಮಾತು ಗಳನ್ನು ಈ ಸಂದರ್ಭದಲ್ಲಿ ಇಲ್ಲಿ ಸಂಗ್ರಹಿಸಿ ಕೊಡುವುದು ಪ್ರಶಸ್ತವೆನಿಸುತ್ತದೆ. 'ಕಾಲಿದಾಸನು ಕವಿಯಾಗಿ ನಾಟಕದಲ್ಲಿ ಎಡವಿಬಿದ್ದರೆ, ಭಾಸನು ಹುಟ್ಟುವಾಗಲೇ ನಾಟಕಕರ್ತನಾಗಿದ್ದನು. ಮನುಷ್ಯರ ವಿವಿಧ ಹೃದಯದ ಭಾವನೆಗಳ ಮತ್ತು ಪ್ರಕೃತಿ ವೈಚಿತ್ರ್ಯದ ಯಥಾವತ್ತಾದ ಪ್ರತಿಬಿಂಬವನ್ನು ನಾವು ಕಾಲಿದಾಸನಲ್ಲಿ ಕಂಡರೆ, ಭಾಸನ ಪ್ರತಿಭೆಯು ಇವಿಷ್ಟರಲ್ಲಿಯೂ ಪಳಗಿದ ಕೈವಾಡವನ್ನು ತೋರಿಸಿ ಅಷ್ಟರಲ್ಲಿಯೂ ತೃಪ್ತವಾಗದೆ ಯುದ್ಧರಂಗದ ಭಯಂಕರ ಸಾವಿನ ಚಿತ್ರಣವನ್ನೂ ಈ ತರಹದವೇ ಆದ ಇನ್ನಿತರ ಭಯಂಕರ ಜೀವನ ಯಾತನೆಗಳನ್ನೂ ಚಿತ್ರಿಸುವುದ

ರಲ್ಲಿಯೂ ಅದ್ವಿತೀಯನಾಗಿರುವದೆಂತ ಒಪ್ಪಲೇಬೇಕಾಗುತ್ತದೆ. ಇವುಗಳ ವರ್ಣನೆಯೇನೋ ಇವನಲ್ಲಿ ಉಚ್ಚ ರೀತಿಯದ್ದೇ ಆಗಿದ್ದರೂ ಅದರಲ್ಲಿ ಇವನೇ ಅಗ್ರಗಣ್ಯನೆಂದು ಎತ್ತಿತೋರಿಸುವ ಯೋಗ್ಯತೆ ಮಾತ್ರ ಉಚ್ಚ ತರಗತಿಯುಳ್ಳಿವನಲ್ಲಿಲ್ಲವೆಂದು ನಾವು ಒಪ್ಪಿದರೂ ಒಪ್ಪಬಹುದು.' ಒಂದೇ ಮಾತಿನಲ್ಲಿ ಇವನ ಹಿರಿಮೆಯನ್ನು ಹೇಳುವುದಾದರೆ ಈತನು ಆದಿಯಲ್ಲಿಯೂ ಮಧ್ಯದಲ್ಲಿಯೂ ಅಂತ್ಯದಲ್ಲಿಯೂ ಸನ್ನಿವೇಶಗಳನ್ನೆಲ್ಲಾ ಜೋಡಿಸುವ ನೈಪುಣ್ಯವನ್ನು ಅತ್ಯುತ್ತಮವಾಗಿ ಪಡೆದು, ನಾಟಕೀಯತೆಯೆಂಬ ಭರತನಿಂದ ನಾಟ್ಯಶಾಸ್ತ್ರದಲ್ಲಿ ಶ್ಲಾಘಿಸಲ್ಪಟ್ಟ ಗುಣವನ್ನು ಸರಿಯಾಗಿ ಅರಿತಿದ್ದು, ಭಾರತ ದೇಶದ ನಾಟಕಕರ್ತರಲ್ಲಿ ಮೊದಲನೆಯ ಸಾಲಿನವನೆಂಬುದು ನಿರ್ವಿವಾದವಾಗಿದೆ. ಇವನಿಗಿಂತ ಶ್ರೇಷ್ಠ ನಾಟಕಕರ್ತರಿಲ್ಲವೆಂದಲ್ಲ. ಆದರೆ ಅವರೆಲ್ಲರಿಗೂ ಗುರುವಾಗಿ, ಮಾರ್ಗದರ್ಶಿಯಾಗಿ ಈಗ ದೊರಕಿದ ನಾಟಕಕರ್ತರಲ್ಲಿ ಈತನೇ ಮೊದಲಿಗನೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

೧೫

ಭಾಸನ ಭಾವಜ್ಞಾನ

ನಮ್ಮ ಭಾವಜ್ಞಾನವೆಂಬ ಶಾಸ್ತ್ರವನ್ನು ಆಂಗ್ಲರು Psychology ಎಂದು ಕರೆಯುವರು. ಈ ಶಾಸ್ತ್ರವು ಪಾಶ್ಚಾತ್ಯರಲ್ಲಿ ಅತೀವ ಚಿಕ್ಕ ಶಿಶುವಾಗಿ ಪ್ರಾಯಶಃ Freud ಇತ್ಯಾದಿ ಮನಃಶಾಸ್ತ್ರಜ್ಞತತ್ವರು ಹೋದ ಶತಮಾನದಲ್ಲಿ ಮಾತ್ರ ಇದನ್ನೇ ಪ್ರತ್ಯೇಕ ಶಾಸ್ತ್ರವೆಂದಾದರಿಸಲು ಪ್ರಾರಂಭಿಸಿದ್ದರೂ, ನಮ್ಮ ಪೂರ್ವಜರಲ್ಲಿ ಕ್ರಿಸ್ತುಪೂರ್ವದಲ್ಲಿಯೇ ಇದನ್ನು ವಾತ್ಸ್ಯಾಯನಾದಿಗಳು 64 ಉತ್ತಮ ಕಲೆಗಳಲ್ಲಿ ಒಂದಾಗಿ ಪರಿಗಣಿಸಿ, ಇದನ್ನು ಆಮೂಲಾಗ್ರವಾಗಿ ಅಭ್ಯಸಿಸಿದ್ದರು. ಕಾಲಿದಾಸನು ಮಾಲವಿಕಾಗ್ನಿಮಿತ್ರದಲ್ಲಿ ಈ ಭಾವಜ್ಞಾನವೆಂಬ ಪದವನ್ನು ಸ್ಪಷ್ಟವಾಗಿ ಉಪಯೋಗಿಸಿ, ಇದರ ಪ್ರಾಶಸ್ತ್ಯಕ್ಕೆ ಅತ್ಯುತ್ತಮವಾದ ಸಾಕ್ಷ್ಯವನ್ನು ನೀಡಿರುವನು. ಇದಂತೂ ಒತ್ತಟ್ಟಿಗಿರಲಿ, ಪ್ರತಿಯೊಬ್ಬ ಕವಿಯು ಈ ಶಾಸ್ತ್ರವನ್ನು ಸರಿಯಾಗಿ ಅಭ್ಯಸಿಸಿಯೇ ತೀರಬೇಕೆಂಬುದು ಸಹಜವೇ ಆಗಿದೆ. Wordsworth, Tennyson, ಇತ್ಯಾದಿ ಆಂಗ್ಲಕವಿಗಳು ತಮ್ಮ ತಮ್ಮ ಅತಿ ಚಿಕ್ಕ ಪದ್ಯಗಳಾದ Lucy Gray, We are seven, Home They Brought Her warrior Dead ಇತ್ಯಾದಿಗಳಲ್ಲಿ ಚಿಕ್ಕ ಹುಡುಗರ ಮತ್ತು ಹೆಂಗಸಿನ ಹೃದಯದ ಮರ್ಮವನ್ನು ಹೇಗೆ ಅತಿ ಸೊಗಸಾಗಿ ಪ್ರತಿಬಿಂಬಿಸಿದ್ದಾರೆಂಬ ವಿಷಯವು ಆ ಪದ್ಯಗಳನ್ನೋದಿದವರಿಗೆ ತಿಳಿದ ವಿಷಯವೇ ಆಗಿದೆ. ಆದರಲ್ಲಿಯೂ ವಿಚಿತ್ರವೇನೆಂದರೆ ನಾವೇ ಈ ಚಿಕ್ಕ ಪದ್ಯಗಳನ್ನು ನಮ್ಮ ಬಾಲ್ಯದಲ್ಲಿ ಓದಿದಾಗ ಒಂದು ತರದ ಆನಂದವನ್ನನುಭವಿಸಿದ್ದೆವು; ಈಗ ಅವುಗಳನ್ನೇ ಓದುವಾಗ ನಮ್ಮ ಕಣ್ಣಿನಲ್ಲಿ ಹಠಾತ್ತಾಗಿ ನೀರು ಉಕ್ಕಿ ಬಂದು, 'ಎಷ್ಟು ಉಚ್ಚ ತರಗತಿಯ ಭಾವಜ್ಞಾನ'ವೆಂದು ತಲೆದೂಗುವುದಿಲ್ಲವೇ ? ಇದೀಗ ಕವಿಯ ಗೂಢವಾದ ರಹಸ್ಯ.

ನಮ್ಮ ಭಾಸನ 13 ನಾಟಕಗಳಲ್ಲಿ ಪ್ರತಿಯೊಂದರಲ್ಲಿಯೂ ಈ ತರದ ಭಾವಜ್ಞಾನವನ್ನು ಹೆಜ್ಜೆಹೆಜ್ಜೆಗೂ ಮಾತು ಮಾತಿಗೂ ನಾವು ಕಾಣುತ್ತೇವೆಂದರೆ ಅತಿಶಯೋಕ್ತಿಯಾಗಲಾರದು. ಪ್ರತಿಯೊಂದು ಸನ್ನಿವೇಶವನ್ನು ಮುಂಬರಲಿರುವ ಸನ್ನಿವೇಶದೊಡನೆ ಜೋಡಿಸುವ ನೈಪುಣ್ಯ, ಮಾತಿನ ಗಾಂಭೀರ್ಯ ಮತ್ತು ವ್ಯಂಗ್ಯ ಚಮತ್ಕಾರ, ಚಿಕ್ಕ ಚಿಕ್ಕ ಭಾವಗರ್ಭಿತವಾದ ಸಂಭಾಷಣೆಗಳು, ಎದುರಾಳಿಯ ಹೃದಯವನ್ನು ಸಂಪೂರ್ಣವಾಗಿ ವಶೀಕರಿಸುವ ಭಾವಭಂಗಿಗಳು —ಇವುಗಳನ್ನೊಂದೊಂದಾಗಿ ಪರಿಗಣಿಸಲು ಹೋದರೆ ಅದೇ ದೊಡ್ಡ ಗ್ರಂಥವಾದೀತೆಂದು ಹೇಳಿದರೂ ತಪ್ಪಾಗದು. ಸ್ಥಾಲೀಪುಲಾಕ ನ್ಯಾಯದಿಂದ ಕೆಲವೇ ಮಾರ್ಮಿಕಗಳಾದ ಸಂದರ್ಭಗಳನ್ನು ಅಲ್ಲಲ್ಲಿಂದ ಹೆಕ್ಕಿ ಆತನ ವಿಶಿಷ್ಟವಾದ ಭಾವಜ್ಞಾನವನ್ನು ವಿಶದೀಕರಿಸುವೆವು.

ಇವುಗಳಲ್ಲಿ ವಯಃಪರಿಪಾಕವನ್ನನುಸರಿಸಿ ಆರಂಭದಲ್ಲಿ ಅತಿ ಚಿಕ್ಕ ಮಕ್ಕಳ ಚಿತ್ರಣವನ್ನು ವಾಚಕರ ಮುಂದಿಡಲು ಪ್ರಯತ್ನಿಸುವೆವು. ಊರುಭಂಗದ ದುರ್ಜಯನೆಂಬ ದುರ್ಯೋಧನನ ಪುತ್ರನು (ಭಾರತದಲ್ಲಿ ಈತನೇ ಇಲ್ಲ : ಅಲ್ಲಿಯ ದುರ್ಯೋಧನನ ಪುತ್ರನೆಂದರೆ ಸುಮಾರು 20–25 ವರ್ಷದ ತರುಣನು)ಸುಮಾರು 4 ಯಾ 5 ವರ್ಷದ ಹಸುಳೆಯು ; ಇವನ ಅಣ್ಣಂದಿರಾದ ಪಾಂಡವ ಪುತ್ರರಾದ ಅಭಿಮನ್ಯು ಘಟೋತ್ಕಚರು 20 ಯಾ 25 ವರ್ಷದ ತರುಣರು ; ಮಧ್ಯಮ ವ್ಯಾಯೋಗದಲ್ಲಿಯೂ ಸಾಧಾರಣ ಇದೇ ವಯಸ್ಸಿನ ಮೂವರು ಅಣ್ಣತಮ್ಮಂದಿರು ಬ್ರಾಹ್ಮಣಪುತ್ರರು. ಬಾಲಚರಿತದ ಕೃಷ್ಣಬಲರಾಮರೂ ವಯಸ್ಸಿನಲ್ಲಿ ಇವರಿಗಿಂತ ಸ್ವಲ್ಪ ಚಿಕ್ಕವರಾದರೂ ಊರುಭಂಗದ ದುರ್ಜಯನ ಸಾಲಿಗೆ ಸೇರತಕ್ಕವರಲ್ಲ. ಅವರನ್ನು ಅಭಿಮನ್ಯು ಘಟೋತ್ಕಚರ ಸಾಲಿನಲ್ಲಿಯೇ ವರ್ಣಿಸಬೇಕು. ಈ ಹುಡುಗರ ಸಾಲಿನಲ್ಲಿಯೇ ಮದುವೆಯಾಗದ ಪದ್ಮಾವತೀ ಕುರಂಗಿಕಾ ಎಂಬ ಕನ್ಯೆಯರನ್ನೂ ಅವರ ವಿಚಾರಗಳನ್ನೂ ವಿಚಾರಿಸುವುದು ಉತ್ತಮವೆಂದೆನಿಸುತ್ತದೆ.

ಈ ಮಕ್ಕಳ ಭಾವಚಿತ್ರಣವೆಂಬುದು ನಮ್ಮ ಪ್ರಾಚೀನ ಭಾರತದಲ್ಲಿ ಅತೀವ ವಿರಳ; ಈ ಚಿತ್ರಣವು ಅತೀವ ಹೃದಯಂಗಮವಾಗಿದೆಯೆಂಬುದರಲ್ಲಿ ಎಳ್ಳಷ್ಟೂ ಸಂದೇಹವೇ ಇಲ್ಲ. ಪ್ರಾಯಶಃ ಇಡೀ ಸಂಸ್ಕೃತ ಸಾಹಿತ್ಯದಲ್ಲಿ ಈ ತರದ ಚಿಕ್ಕಮಕ್ಕಳ ಚಿತ್ರಣವೆಂಬುದು ಕಠೋಪನಿಷತ್ತಿನ ನಚಿಕೇತನಲ್ಲಿ ಪ್ರಾರಂಭವಾಗಿ ಭಾಸನ ಮೇಲ್ಪಂಕ್ತಿಯನ್ನು ಅನುಸರಿಸಿದ ಕಾಲಿದಾಸ (ಶಾಕುಂತಲ VII ನೆಯ ಅಂಕದ ಸರ್ವದಮನ) ಭವಭೂತಿಯ ಉತ್ತರ ರಾಮಚರಿತದ ಕುಶಲವರ ಚಿತ್ರಣವಲ್ಲಿಯೇ ಸಮಾಪ್ತವಾಯಿತೆಂದು ಹೇಳಿದರೂ ತಪ್ಪಾಗದೆಂದು ತೋರು

ತ್ತದೆ. ಇದರ ಛಾಯೆಯು ಸ್ವಲ್ಪಮಟ್ಟಿಗೆ ಮೃಚ್ಛಕಟಿಕದಲ್ಲಿಯೂ ಬಂದಿದೆ; ಆದರೂ ಇಲ್ಲಿ ಭಾಸನ ಚಾರುದತ್ತದ ಪಳಗಿದ ಕೈಯೇ ತೋರುವುದರಿಂದಲೂ, ಭಾಸನೇ ಇದನ್ನು ಬರೆದು ರಾಜನಾದ ಶೂದ್ರಕನಿಂದ ಅತಿ ಅಂತಿಮಾವಸ್ಥೆಯಲ್ಲಿ (ಪ್ರಾಯಶಃ ಒಂದೆರಡು ತನ್ನದಾದ ಹೊಸ ವಿಷಯಾಭಿಪ್ರಾಯಗಳನ್ನೋ ಸೇರಿಸಿ) ಸ್ವೀಕೃತವಾದದ್ದರಿಂದಲೂ, ಅದರ ಚಿತ್ರಣವನ್ನು ಬೇಕೆಂದೇ ಬಿಟ್ಟಿದ್ದೇವೆ.

ಊರುಭಂಗದ ದುರ್ಜಯನನ್ನು ನಾವೆಂದಿಗೂ ಮರೆಯಲು ಸಾಧ್ಯವೇ ಇಲ್ಲ. ತಾಯಂದಿರನ್ನೂ ಅಜ್ಜ ಅಜ್ಜಿಯರನ್ನೂ ರಣರಂಗಕ್ಕೆ ಕರಕೊಂಡು ಬರುವ ದೃಶ್ಯ. ಎಷ್ಟು ಪ್ರೇಮಪೂರಿತನಾದ ಹೃದಯ ಅವನದ್ದು. ತಂದೆಯನ್ನು ನೋಡಿದ ಕೂಡಲೇ ಎಂದಿನಂತೆ ಅವನ ತೊಡೆಯ ಮೇಲೇರಿ 'ಅಂಕಾಶ್ರಯ ಪ್ರಣಯಿ'ಯಾಗಿ ತೊಡೆಯೆಂಬ ಸಿಂಹಾಸನವೇರಲಿಚ್ಛಿಸುವನು. (ಭಾಗವತದಲ್ಲಿ ಧ್ರುವನು ತಂದೆಯ ತೊಡೆಯನ್ನೇರಲಾರದೆ ತಪಸ್ಸಿಗೇ ಹೊರಟುಬಿಟ್ಟನೆಂಬ ಸೊಗಸಾದ ಕಥೆ.) ತೊಡೆಮುರಿದ ತಂದೆಗೆ ದುಃಖವು ಉಕ್ಕಿ ಉಕ್ಕಿ ಬರುವಾಗ, ಹೃದಯದಲ್ಲಿಯೂ ತೊಡೆಯಲ್ಲಿಯೂ ಏಕಕಾಲದಲ್ಲಿಯೇ ದಾರುಣವಾದ ಯಾತನೆಯನ್ನನುಭವಿಸುವನು. ಮಗನ ಪ್ರಶ್ನೆಗೆ ತಾನೆಲ್ಲಿಗೋ ಹೊರಟಿರುವೆನೆನ್ನುವನು. ಶಾಲೆಯ excursion ಗಳಂತೆಯೇ ಏನೋ ಎಂದು ಭಾವಿಸಿದ ಬಾಲಕನು 'ಅಪ್ಪಾ ! ನನ್ನನ್ನೂ ಅಲ್ಲಿಗೆ ಕರಕೊಂಡು ಹೋಗಲಾರೆಯಾ!' ಎಂದು ಬಿನ್ನವಿಸುವನು. ಇದೇ ಅಂತಿಮವಾದ ಪ್ರಯಾಣ (excursion) ಎಂಬುದವನಿಗೇನು ಗೊತ್ತು ? ಆಗ ತಂದೆಯು 'ಹೋಗು ! ಮಗನೇ ! ಭೀಮಸೇನನ ಹತ್ತಿರ ಹೇಳು. ಅವನು ನಿನ್ನನ್ನೂ ನನ್ನೊಡನೆ ಕಳುಹಿಸಲೂಬಹುದು' ಎಂದು ಹೇಳುವಾಗ ಯಾವ ತಂದೆಯು ಕಣ್ಣಿನಿಂದ ನೀರು ಕೂಡಲೇ ಹೊರಹೊಮ್ಮುವುದಿಲ್ಲ ! ಇಷ್ಟಾಗುವಾಗ ತಂದೆ ತಾಯಿಗಳು ಹತ್ತಿರ ಬಂದಾಗ ಎಂದಿನಂತೆ ಅವರಿಗೆ ಪ್ರಣಾಮವನ್ನು ಮಾಡಲುದ್ಯುಕ್ತನಾದ ದುರ್ಯೋಧನನು ತೊಡೆಗಳು ಮುರಿದು ಹೋದ್ದರಿಂದ ಪ್ರಯತ್ನಾರ್ಧದಲ್ಲಿಯೇ ಬಿದ್ದುಬಿಡುವನು. ಹಿರಿಯರಿಗೆ ನಮಸ್ಕಾರ ಮಾಡಲಿಲ್ಲವಲ್ಲಾ ಎಂಬುದೇ ಈ ಮರಣೋನ್ಮುಖನಾದ ಕರ್ಮನಿಷ್ಠನ ಚಿಂತೆ. ಹೀಗೆಯೇ ಇಲ್ಲಿ ತಂದೆಯು ಹೃದಯವನ್ನು ಅದಕ್ಕಿಂತಲೂ ಮೇಲಾಗಿ ಕ್ಷತ್ರಿಯರಿಗುಚಿತವಾದ ರೀತಿಯಲ್ಲಿ ತಾಯಿಯ ಹೃದಯವನ್ನು ಬಿಚ್ಚಿ ನಮ್ಮೆದುರಿಗೆ ಇಟ್ಟಂತೆ ನಾವು ಕಾಣುತ್ತೇವೆ. ದುರ್ಯೋಧನನ ನಿಜವಾದ ತನ್ಮಯನ್ನು ನಾವು ಇಲ್ಲಿಯೇ ಕಾಣುವುದೆಂದರೂ ತಪ್ಪಾಗದು. 'ತಾಯಿಯೇ ! ನಿನ್ನ ಮಗನು ಕ್ಷತ್ರಿಯ ತಾಯಿಗೇ ಹುಟ್ಟಿದ್ದೆಂಬುದನ್ನು ಖಚಿತಪಡಿಸುವರೆ **ಅಪರಾಙ್ಮುಖ**ನಾಗಿ ವೈರಿಗಳಿಗೆ ಬೆನ್ನನ್ನು ತೋರಿಸದೆ ಸತ್ತನೆಂದು ದುಃಖಿಸದಿರು' ಎಂದು

ಯಾವ ಮಗನು ಹೇಳುವಾಗ ತಾಯಿಯ ಹೃದಯವು ಅಭಿಮಾನದಿಂದ ಉಕ್ಕಿ ಬರಲಿಕ್ಕಿಲ್ಲ! ಧೃತರಾಷ್ಟ್ರನಾದರೋ ಪುತ್ರವಾತ್ಸಲ್ಯದಿಂದ ಸ್ವಲ್ಪ ಮಟ್ಟಿಗೆ ಹೇಡಿ ತನವನ್ನೇನೋ ಪ್ರದರ್ಶಿಸಿದರೂ, ಅವನ ಪುತ್ರವ್ಯಾಮೋಹದಿಂದ ಹಾಗೆ ಹೇಳಿದ ನೆಂದು ನಾವು ಅದನ್ನು ಹೆಚ್ಚು ಗಮನಕ್ಕೆ ತರುವುದಿಲ್ಲ. ಆದರೆ ಮಗನು ಪುನಃ ತಾಯಿಯ ಹತ್ತಿರ ಇನ್ನೊಂದು ಜನ್ಮದಲ್ಲಿಯೂ ನೀನೇ ತಾಯಿಯಾಗಬೇಕೆಂದು ಪ್ರಾರ್ಥಿಸಿದಾಗ ನಮ್ಮ ಕಣ್ಣಿನಲ್ಲಿ ಹಠಾತ್ತಾಗಿ ನೀರು ಬಂದೇ ಬರುವುದು. ಈ ಸಂದರ್ಭದಲ್ಲಿ ದುರ್ಯೋಧನನಿಗೆ ತನ್ನ ಹೆಂಡಂದಿರಿಗೂ ಸಮಾಶ್ವಾಸನವನ್ನು ಹೇಗೋ ಹಾಗೇ ಕೊಡಲೇಬೇಕಾಗುತ್ತದೆ. ಅವರಲ್ಲೊಬ್ಬಳೇನೋ ಸಹಗಮನದ ಯೋಚನೆಯನ್ನು ಮೊದಲೇ ಮಾಡಿಕೊಂಡಿದ್ದಳಂತೆ. ಕಟ್ಟಕಡೇಗೆ ಮಗನ ಕಡೆಗಂತೂ ಈ ಸಾಯುವ ರಾಜನು ತಿರುಗಿ 'ಯುಧಿಷ್ಠಿರನು ಕ್ಷಾಮಾಪಸವ್ಯವಾಗಿ ಯಜ್ಞೋಪವೀತವನ್ನು ಮಾಡಿಕೊಂಡು ತನ್ನ ಜ್ಞಾತಿಗಳಿಗೂ ಹಿರಿಯರಿಗೂ ತರ್ಪಣಬಿಡುವಾಗ ನೀನೂ ಅವನನ್ನು ಮುಟ್ಟಿಕೋ—ಇನ್ನುಮೇಲೆ ಸುಭದ್ರಾ ಉತ್ತರಾ ದ್ರೌಪದಿಯರನ್ನು ತಾಯಂತೆ ಭಾವಿಸು. ಇನ್ನು ಮುಂದೆ ಪಾಂಡವರೇ ನಿನಗೆ ಗತಿ' ಎಂದು ಒಂದು ಒಂದಾಗಿ ಉಪದೇಶಿಸುವಾಗ ಮರೆಯಲ್ಲಿದ್ದ ಬಲರಾಮನೂ 'ಅಯ್ಯೋ! ವೈರವು ಪಶ್ಚಾತ್ತಾಪವಾಗಿ ಮಾರ್ಪಟ್ಟಿತಲ್ಲಾ!' ಎಂದು ತಲೆದೂಗಬೇಕಾಗುತ್ತದೆ. ಆಗಲೇ ಅಶ್ವತ್ಥಾಮಾಚಾರ್ಯನು ಮುಂದೆ ಬಂದು ತನ್ನ ಮಾತುಗಳಿಂದ ದುರ್ಜಯನನ್ನೇ ಕುರುರಾಜನನ್ನಾಗಿ ಸ್ವೀಕರಿಸಿ, ತಾನೇ ಸ್ವತಃ ಸೌಪ್ತಿಕವಧಕ್ಕೆ ಹೊರಡಲನುವಾಗಿ ಸಾಯುವ ರಾಜನ ಅನುಮತಿ ಯನ್ನೂ ಯಾಚಿಸುವನು. ಮಹಾಭಾರತದ ದುರ್ಯೋಧನನು ಇದನ್ನೇ ಸರ್ವಾತ್ಮನಾ ಅನುಮೋದಿಸಿದರೂ, ಭಾಸನ ದುರ್ಯೋಧನನು 'ಖಂಡಿತ ವಾಗಿಯೂ ಹಾಗೆ ಮಾಡಬೇಡ, ನನ್ನ ಧಮ್ಮಯ್ಯ! ಆ ಕುರುಕುಲದನಿವಾಪ ಮೇಘಗಳಾದರೂ ಬದುಕಿರಲಿ, ಗುರುಪುತ್ರ!' ಎಂದು ಅಂಗಲಾಚಿ ಬೇಡುವನು. ಆಗ ಗುರುಪುತ್ರನು ಇದರ ಮರ್ಮವನ್ನರಿಯಲಾರದೆ 'ಅಯ್ಯೋ! ಭೀಮಸೇನನು ನಿನ್ನ ತೊಡೆಗಳನ್ನು ಮುರಿದಂತೆ ನಿನ್ನ ಅಭಿಮಾನವನ್ನೂ ಮುರಿದನೇ!' ಎನ್ನುತ್ತ ಹೊರಗೆ ಹೋಗುವಾಗಲೇ ದುರ್ಯೋಧನನು ದಿವ್ಯ ವಿಮಾನವನ್ನೇರಿ ವೀರಸ್ವರ್ಗವನ್ನೈದುವನು. ಭಾಸನ ಧೃತರಾಷ್ಟ್ರನು ಇದನ್ನು ಸಹಿಸಲಾರದೆ, ಕೂಡಲೆ ತಪೋವನಕ್ಕೆ ಹೊರಟುಹೋಗುವನು. ಒಂದೇ ಮಾತಿನಲ್ಲಿ ಹೇಳುವುದಾದರೆ ಈ ತರದ ಭಾವಾನುವೇಶವು ವಿಶ್ವಸಾಹಿತ್ಯನಲ್ಲಿಯೇ ಪ್ರಾಯಶಃ ಅತಿದುರ್ಲಭ; ವಿಶಿಷ್ಟ್ಯ ದುರ್ಜಯನಂಥ ಹುಡುಗ ಹೃದಯದ ಚಿತ್ರಣವು ಅತಿ ಸಹಜವಾಗಿ, ಅನ್ಯಾದೃಶವಾಗಿ ಸರ್ವೋತ್ಕೃಷ್ಟವಾಗಿ ಮನೋರಂಜಕವಾಗಿದೆ.

ಇನ್ನು ಅಭಿಮನ್ಯು ಘಟೋತ್ಕಚರೆಂಬ ಇನ್ನಿಬ್ಬರು ಪಾಂಡವಪುತ್ರರ ಕಡೇಗೆ ಸ್ವಲ್ಪ ದೃಷ್ಟಿಯನ್ನು ಬೀರೋಣ. ಭಾಸನಲು ತ್ಯಷ್ಟವಾದ ಪ್ರತಿಭೆಯೇ ಅತಿ ನೂತನವಾದ ಸನ್ನಿವೇಶಗಳನ್ನು ಕಲ್ಪಿಸಿ ಇವರ ಪಾತ್ರಗಳನ್ನು ಎಷ್ಟು ಮುದ್ದಾಗಿ ಚಿತ್ರಿಸಿರುವುದೆಂಬುದನ್ನು ವಾಚಕರೇ ಮನಗಾಣಿಸಿಕೊಳ್ಳಬಹುದು. ಇನ್ನೊಂದು ಭಾಸನ ವೈಶಿಷ್ಟ್ಯವೇನೆಂದರೆ, ವ್ಯಾಸಮಹರ್ಷಿಗಳು ಪಾಂಡವರ ಪ್ರೌಢಿಮೆಯನ್ನೇ ಚಿತ್ರಿಸಿ ಅದರಲ್ಲಿಯೇ ತೃಪ್ತರಾದರೆ, ಈ ಉಪಪಾಂಡವರನ್ನೇ ಕಥಾನಾಯಕರನ್ನಾಗಿ ಗೌರವಿಸುವ ಹಿರಿಮೆಯು ಭಾಸನದ್ದೇ ಆಗಿದೆ. ಘಟೋತ್ಕಚನಿಗಾಗಿ ಮಧ್ಯಮ ವ್ಯಾಯೋಗವೂ ದೂತ ಘಟೋತ್ಕಚಗಳೆಂಬ ಎರಡು ಏಕಾಂಕಗಳು ಏರ್ಪಟ್ಟಿದ್ದರೆ, ಮೂರು ಅಂಕಗಳಿರುವ ಪಂಚರಾತ್ರವೇ ಅಭಿಮನ್ಯುವಿಗೆ ಮೀಸಲಾಗಿಡಲ್ಪಟ್ಟಿದೆ. ಇವರಿಬ್ಬರೂ ಕಡೇಗೆ ಕೌರವಕುಲ ದಾವಾಗ್ನಿಗಳಾದುದೇನೂ ಖಂಡಿತವಾಗಿ ಸೋಜಿಗವಲ್ಲವೇ ಅಲ್ಲ, ಅದಕ್ಕೆ ಸರಿಯಾದ ಬೀಜಾರೋಪವನ್ನಿಲ್ಲಿ ಮಾಡಿದಂತಿದೆ.' ಆಂಗ್ಲಕವಿಯೋರ್ವನು Child is the father of the man ಎಂದು ಹಾಡಿದರೆ ಅದು ಹದಿನಾರಾಣೆ ಸತ್ಯವೆಂದು ಈ ಎರಡು ನಾಟಕಗಳನ್ನೋದಿದೊಡನೆ ನಮಗೆ ಹೊಳೆಯುವುದು. ತಂದೆಗೆ ತನ್ನ ಮಗನೇ ಎಂದು ಗೊತ್ತಾಗಿರಬಹುದು, ಆದರೆ ಮಗನಿಗೆ ತಂದೆಯೆಂದು ಗೊತ್ತಾಗದೆ ಆತನೊಡನೆಯೇ ಮಲ್ಲಯುದ್ಧ ಹೂಡುವುದು Sohrab and Rustumನ್ನು ನೆನಪಿಗೆ ತಂದುಕೊಡುವಂತಿದೆ. ಎಲ್ಲಾದಕ್ಕೂ ಶಿಖರಪ್ರಾಯವಾಗಿ ಮಗನು ತಾಯಿಗೆ 'ಆಹಾರವನ್ನು ತಂದಿರುವೆನಮ್ಮಾ' ಎಂದು ಹೇಳಿದಾಗ ಒಂದೊಂದಾಗಿ, ಮುದುಕನೋ – ಅಲ್ಲ, ಮುದುಕಿಯೋ—ಅಲ್ಲ, ಇತ್ಯಾದಿ ಅನೇಕ ಪ್ರಶ್ನೆಗಳಿಗೆ ಸಮಾಧಾನವನ್ನು ಪಡೆದು, ಕಡೆಗೆ ಹಾಗಾದರೆ ನನಗೆ ಸಮ್ಮತವಾದ ಆಹಾರವನ್ನು ಎದುರಿನಲ್ಲಿ ತಂದು ನಿಲ್ಲಿಸು ! ನೋಡೋಣವೆಂದು ತಾಯಿಯು ಕೇಳಿದಾಗ ಭೀಮಸೇನನನ್ನೇ ತಂದಿರಿಸಲು, ತಾಯಿಯು—'ಏನಿದು ಮಗನೇ ! ನಮ್ಮ ಉಪಾಸ್ಯವಾದ ದೈವತವನ್ನೇ ಎದುರಿಗೆ ತಂದಿಟ್ಟಿರುವಿಯಲ್ಲಾ' ಎಂದು ಹೇಳಿ ಆನಂದಬಾಷ್ಪಗಳಿಂದ ಅವನಿಗೆ ತಾನೂ ನಮಸ್ಕರಿಸಿ, ಮಗನಿಂದಲೂ ನಮಸ್ಕಾರ ಮಾಡಿಸಿದ ಸನ್ನಿವೇಶವು ನಮ್ಮಿಂದ ಸರ್ವಥಾ ಮರೆಯಲಸಾಧ್ಯವಾಗಿದೆ. ಭೀಮಸೇನನು ಅವಳಿಗೆ 'ಮಾ ಪ್ರಕಾಶಯ ನೀಚತಾಂ' ನಿನ್ನ ರಾಕ್ಷಸತನ್ಮೆಯನ್ನೆಂದಿಗೂ ನನ್ನ ಮುಂದೆ ಪ್ರಕಟಿಸಬೇಡವೆಂದು ಹೇಳಿದ್ದನ್ನು ಚಾಚೂ ತಪ್ಪದೆ, ಎಷ್ಟು ಅಗ್ರಾಮ್ಯವಾದ ರೀತಿಯಲ್ಲಿವಳು ಗಂಡನನ್ನು ಮನೆಗೆ ಕರೆಸಿಕೊಂಡಳು ! ದಂಡಿಯು ಕಾವ್ಯಾದರ್ಶ I ಪರಿಚ್ಛೇದದಲ್ಲಿ ಈ ಗ್ರಾಮ್ಯಾಗ್ರಾಮ್ಯ ರೀತಿಗಳನ್ನುದಹರಿಸುವಾಗ—

'ಕನ್ಯೇ ಕಾಮಯಮಾನಂ ಮಾಂ ನ ತ್ವಂ ಕಾಮಯಸೇ ಕಥಂ' ಎಂಬುದು ಗ್ರಾಮ್ಯ,

'ಕಾಮಂ ಕಂದರ್ಪಚಂಡಾಲೋಮಯಿ ವಾಮಾಕ್ಷಿ ನಿರ್ದಯಃ

ತ್ವಯಿ ನಿರ್ಮತ್ಸರೋ ದಿಷ್ಟ್ಯಾ ಇತ್ಯಗ್ರಾಮ್ಯೋಽರ್ಥೋ ರಸಾವಹಃ' ಎಂದು ಹೇಳಿದರೆ, ಭಾಸನ ಕ್ರಮವನ್ನು ಅದಕ್ಕಿಂತಲೂ ಪಶಗುಣವಾಗಿ ಅಗ್ರಾಮ್ಯ ವೆಂದೇ ತಲೆದೂಗಲೇಬೇಕಲ್ಲವೇ ?

ದೂತ ಘಟೋತ್ಕಚದ ಘಟೋತ್ಕಚನೆಂದರೆ ಪ್ರಾಯಶಃ ಈ ಕವಿಯ ಹೃದಯವನ್ನೇ ಹೀರಿಕೊಂಡ ಅವನ ಪಂಚ ಪ್ರಾಣವೇ ಎಂದರೂ ತಪ್ಪಾಗದು. ರಾಕ್ಷಸ ಕುಲದಲ್ಲಿ ಹುಟ್ಟಿದರೂ ಎಷ್ಟು ಸೌಜನ್ಯ, ಹಿರಿಯರಲ್ಲಿ ನಮ್ರತ್ವ ! ದೂತ ನಾಗಿ ಬಂದಿದ್ದರೂ ಅಜ್ಜನಾದ ಧೃತರಾಷ್ಟ್ರನನ್ನು ಕಂಡೊಡನೆ ಸಾಷ್ಟಾಂಗ ನಮಸ್ಕಾರ ಮಾಡಲನುವಾಗಲು, ಅರ್ಧದಲ್ಲಿಯೇ ಕ್ರಮವನ್ನು ನೆನೆದುಕೊಂಡು, ಯುಧಿಷ್ಠಿರಾದಿಗಳಾದ ತನ್ನ ತಂದೆಗಳ ನಮಸ್ಕಾರವನ್ನೇ ಮೊದಲು ಸಲ್ಲಿಸಿ, ತಾನೂ ಭಕ್ತಿ ನಮ್ರನಾಗಿ ನಮಸ್ಕರಿಸುವನು. ಯಾರಲ್ಲಿ ಭಕ್ತಿಯಿರಬೇಕೋ ಅವರಲ್ಲಿ ಗೌರವ, ಪರುಷನಾಗಿರಬೇಕಾದರೆ ಅದಕ್ಕೂ ಆಗಲೇ ತಯಾರು, ಮಧ್ಯಮ ಅಥವಾ ಸುಂದರ ತರುಣನೆಂದರೆ ಭಾಸನಿಗೆ ಅತಿಸಂತೋಷ ; ಹೀಗೆಯೇ ಹೆಂಗಸರಲ್ಲಿ ಉದಯದ್ಯೌವನೆ (Cleopatra ಇವಳಂತಿರುವವಳು—in the plenitrde of her appeal, -age cannot wither her, nor cus tom stale her infinite variety-Shakespeare ActII Seen III)ಯ ವರ್ಣನೆಯಲ್ಲಿ ಭಾಸನ ಮನಸ್ಸೇ ತಲ್ಲೀನವಾಗಿ ಬಿಡು ವುದು. ಅದಂತಿರಲಿ ; ಈ ಘಟೋತ್ಕಚ (ಅಭಿಮನ್ಯು, ದುರ್ಜಯ ಇತ್ಯಾದಿ ಚಿಕ್ಕ ಚಿಕ್ಕ ಬಾಲಕರು) ನನ್ನು ಭಾಸನ ಧಾಟಿಯಲ್ಲಿಯೇ ಮಧ್ಯಮಕ (ಅಲ್ಪಾರ್ಥೇಕ ಪ್ರತ್ಯಯಃ) ನೆಂದು ಕರೆಯಬಹುದೋ ಎಂದು ತೋರುವುದು. ಅಜ್ಜನನ್ನು ನಮಸ್ಕರಿಸಿದ ನಂತರ ಶ್ರೀಕೃಷ್ಣನ ಸಂದೇಶವನ್ನು ಅಲ್ಲಿಯೇ ನಿಂತಿದ್ದ ದುರ್ಯೋಧನ ನಿಗೆ ಹೇಳಲನುವಾಗುವನು. ದುಃಶಾಸನಾದಿಗಳು ರಾಜ್ಯವೇ ಇಲ್ಲದ ಗೊಲ್ಲ ನಾಗಿದ್ದ ಕೃಷ್ಣನ ಸಂದೇಶವನ್ನು ರಾಜಾಧಿರಾಜನಾದ ದುರ್ಯೋಧನನು ಕೇಳಲಾರ ನೆಂದಾಗ ಘಟೋತ್ಕಚನು ಕೊಂಚವೂ ಅಪ್ರತಿಭನಾಗದೆ, ಇಡೀ ತ್ರೈಲೋಕ್ಯಕ್ಕೇ ರಾಜಾಧಿರಾಜನಾದ ಕೃಷ್ಣನ ಸಂದೇಶವೆಂದು ಅಳುಕಿಲ್ಲದೆ ಸಾರುವನು. ಆಗ ದುರ್ಯೋಧನನೇ 'ಈ ಸಲ್ಲದ ವಾಗ್ಯುದ್ಧವು ಒತ್ತಟ್ಟಿರಲಿ, ಸಂದೇಶವನ್ನಾದರೂ ಕೇಳೋಣ' ಎಂದಾರ್ಭಟಿಸಲು, ಅಷ್ಟೇ ಆರ್ಭಟದಿಂದ 'ನೋಢಿ, ಅಭಿಮನ್ಯು

ವಧ ಸಂತಪ್ತನಾದ ಅರ್ಜುನನು ನಾಳೆ ಸಾಯಂಕಾಲದೊಳಗಾಗಿ ಕಾಲನಿಗೇ ಅಂತಕನಾಗಿ ನಿಮ್ಮನ್ನೆಲ್ಲರನ್ನೂ ಕೊಂದೇಬಿಡುವನು, ಆ ಮರಣದಿಂದ ತಪ್ಪಿಸಿ ಕೊಳ್ಳುವರೆ ಈಗಲಾದರೂ ಶ್ರೀಕೃಷ್ಣನು ನಿಮಗೆ ಸೌಭ್ರಾತ್ರದ ಸಂದೇಶವನ್ನು ಸಾರುವನು; ಈಗಲಾದರೂ ಅಣ್ಣತಮ್ಮಂದಿರು ನೂರೈದು ಜನರೊಂದಾಗಿ ಲೋಕದ ಯೋಗಕ್ಷೇಮವನ್ನು ಸಾಧಿಸಿದಂತವರಾಗಿ' ಎಂದು ಧೃತರಾಷ್ಟ್ರನ ಎದುರೇ ವಿಶ್ವಶಾಂತಿ ಸಂದೇಶದ ಮೋಹಿನೀ ಮಂತ್ರವನ್ನು ಜಪಿಸುವನು. ಇದನ್ನು ಕೇಳಿದೊಡನೆ ದುಃಶಾಸನ ಶಕುನಿ ಕರ್ಣರು 'ಮುಚ್ಚು ಬಾಯಿ! ಅಬದ್ಧವನ್ನು ಬೊಗಳುವ ನಾಲಿಗೆಯನ್ನೇ ಕತ್ತರಿಸಿ ನಿನ್ನನ್ನೀಗಲೇ ಯಮಪುರಿಗೆ ಅಟ್ಟುತ್ತಿದ್ದೆವು. ದೂತನಾಗಿ ಬಂದಿದ್ದೀಯಲ್ಲಾ' ಎಂದು ತಮ್ಮ ತಮ್ಮ ಖಡ್ಗಗಳನ್ನು ಝಳಪಿಸು ವರು. ಆಗಲೂ ದಂಗುಬಡಿದವನಾಗದೆ ಘಟೋತ್ಕಚನು 'ನಿಮಗೆಲ್ಲಾ ನಿಮ್ಮ ನಿಮ್ಮ ಖಡ್ಗಗಳ ಸಹಾಯ ಬೇಕಷ್ಟೆ. ನನಗೆ ಖಡ್ಗವೂ ಬೇಡ, ಯಾವ ಆಯುಧವೂ ಬೇಡ. ಇಲ್ಲಿಯೇ ನಿಮ್ಮ ಮಧ್ಯದಲ್ಲಿಯೇ ಬರೇ ಕೈಗಳಿಂದಲೇ ನಿಮ್ಮನ್ನೆಲ್ಲರನ್ನೂ ಯಮಪುರಿಗೆ ಅಟ್ಟಲು ಬಂದ ಕಾಲಾಂತಕನಿಗೂ ಯಮನೇ ನಾನಾಗಿ ಬಂದಿರುವೆನು! ಬಾಲನೆಂದು ನನ್ನಲ್ಲಿ ಕನಿಕರಬೇಡ! ಅಭಿಮನ್ಯುವಿನ ಬಿಲ್ಲಿನ ನಾಣನ್ನೇ ಕತ್ತರಿಸಿದನಂತರ ಪಾಪ! ಆತನು ನಿಮ್ಮೆಲ್ಲರ ಬಾಣಗಳಿಗೆ ಆಹುತಿಯಾದನು. ಅವುಡುಕಚ್ಚಿಕೊಂಡು, ಬರೇ ಮುಷ್ಟಿಗಳಿಂದ ಈ ಘಟೋ ತ್ಕಚನೆಂಬ ಯಮನು ನಿಮ್ಮೆಲ್ಲರನ್ನೂ ತನ್ನೊಡನೆ ಎಳೆದುಕೊಂಡು ಹೋಗಲೂ ತಯಾರಾಗಿರುವೆನು! ಎದೆಯಲ್ಲಿ ಪಾದೆ ಬೆಳೆದವನೇ ನನ್ನ ಹತ್ತಿರಕ್ಕೆ ಬರಲಿ—

ದಷ್ಟೋಷ್ಠೋ ಮುಷ್ಟಿಮುದ್ಯಮ್ಯ ತಿಷ್ಠತ್ಯೇಷ ಘಟೋತ್ಕಚಃ |
ಉತ್ತಿಷ್ಠತು ಪುಮಾನ್ಕಶ್ಚಿದ್ಗಂತುಮಿಚ್ಛೇದ್ಯಮಾಲಯಮ್ ||'

ವೀರರಸಕ್ಕೇ ತವರುಮನೆಯಂತಿಲ್ಲವೇ ಈ ಮಾತುಗಳು! ಪ್ರಾಯಶಃ ಇಡೀ ಸಂಸ್ಕೃತ ಸಾಹಿತ್ಯದಲ್ಲಿ ಇದನ್ನು ಸ್ವಲ್ಪಮಟ್ಟಿಗೆ ಹೋಲುವ ಸನ್ನಿವೇಶವನ್ನು ಭವಭೂತಿಯು ಇದನ್ನೇ ಅನುಸರಿಸಿ ಈ ಶ್ಲೋಕದಲ್ಲಿ ನಮ್ಮ ಮುಂದೆ ನಿಲ್ಲಿಸಿರು ವನು—

ದೃಷ್ಟಿಃ ತೃಣೀಕೃತಜಗತ್ತ್ರಯಸತ್ತ್ವಸಾರಾ ಧೀರೋದ್ಧತಾ ನಮಯತೀವ
ಗತಿರ್ಧರಿತ್ರೀಂ |
ಕೌಮಾರಕೇಽಪಿ ಗಿರಿವದ್ಗುರುತಾಂ ದಧಾನೋ **ವೀರೋರಸಃ** ಕಿಮಯ
ಮೇತಿ ಉತ **ದರ್ಪ** ಏವ ||

ಅವರೆಲ್ಲರೂ ತಮ್ಮ ಆಯುಧಗಳನ್ನು ಝಳಪಿಸಿ ಅವನ ಹತ್ತಿರಕ್ಕೋಡಿದಾಗ, ಆ ಆರ್ಭಟದ ಶಬ್ದವನ್ನು ಕೇಳಿ ಕುರುಡನಾದ ಅಜ್ಜನು 'ಪ್ರೀತಿಯ ಮೊಮ್ಮಗನೆ!

ಇಲ್ಲಿ ನನ್ನ ಸಮ್ಮುಖದಲ್ಲಿ ಯುದ್ಧ ಬೇಡ ಮಗೂ ! ನನ್ನ ಮಾತಿನಿಂದ ದೂತನೇ ಆಗಿ ಹಿಂದೆ ಹೋಗಣ್ಣಾ !' ಎಂದು ಅಂಗಲಾಚಿ ಬೇಡಲು, 'ಹಾಗೇ ಆಗಲಿ ! ಅಜ್ಜನ ಮಾತಿನಿಂದ ನಾನು ದೂತನೇ ! ನನ್ನ ಪರಾಕ್ರಮವನ್ನು ತೋರುವುದಿಲ್ಲ' ಎಂದು ಶಾಂತನಾಗುವನು. ಆಗಲೂ ಶಾಂತರಾಗದ ಕರ್ಣಾದಿಗಳು ಈತನನ್ನು ಕೆಣಕುತ್ತ, 'ರಾಕ್ಷಸ ಕುಲದಲ್ಲಿ ಹುಟ್ಟಿದವನಲ್ಲವೇನೋ ನೀನು ? ಈ ಪರುಷ ವರ್ತನೆಯು ನಿನಗೊಪ್ಪುವುದೆಂದು ಪ್ರತ್ಯೇಕವಾಗಿ ಹೇಳಬೇಕೆ ?' ಎಂದು ಮೂದಲಿಸುವರು. ಆಗಲೂ ಅಪ್ರತಿಭನಾಗದ ಈ ಬಾಲನು ಶಾಂತರೀತಿಯಿಂದಲೇ ಉತ್ತರಿಸುವನು—'ಹುಟ್ಟಿದ್ದೇನೋ ರಾಕ್ಷಸ ಕುಲದಲ್ಲಿ ನಾವು ; ಆದರೆ ನಾವು ಅರಗಿನ ಮನೆಗಳಲ್ಲಿ ತಮ್ಮಂದಿರು ನಿದ್ರಿಸುವಾಗ ಕೊಲ್ಲಿಸಲುದ್ಯುಕ್ತರಾಗುವುದಿಲ್ಲ ; ನಮ್ಮ ತಮ್ಮಂದಿರ ಹೆಂಡಂದಿರ ಜಡೆಗಳನ್ನೆಳೆಯಲು ಕೈಮುಂದು ಮಾಡುವುದಿಲ್ಲ ; ಚಿಕ್ಕ ಚಿಕ್ಕ ಹಸುಳೆಗಳನ್ನು (ಅಭಿಮನ್ಯುವಿನಂಥ ತಮ್ಮನ ಮಕ್ಕಳನ್ನು) ನಾವೆಂದಿಗೂ ಕೊಲ್ಲಲೋಡಿಬರುವುದಿಲ್ಲ ; ನಮ್ಮ ಆಕೃತಿಯೇನೋ ವಿಕೃತವಾಗಿ, ನಮ್ಮ ಆಚಾರ ಗಳು ಕೊಂಚ ಗ್ರಾಮ್ಯ ಅಥವಾ ಉಗ್ರವಾಗಿರಬಹುದು ; ಆದರೆ ನಮ್ಮ ಪ್ರತಿ ಯೊಂದು ಕೆಲಸದಲ್ಲಿಯೂ ದಯಾಮಯರಾಗಿಯೇ ವರ್ತಿಸುವೆವು' ಎಂದು ಹೇಳಿದ್ದೇ ತಡ, ಕರ್ಣದುಃಶಾಸನಾದಿಗಳ ರಕ್ತಕುದಿಯಲು ಪ್ರಾರಂಭವಾಯಿತು. ಆಗ ದುರ್ಯೋಧನನು 'ನಿನ್ನ ಸಂದೇಶವನ್ನು ಸಾರಿಯಾಯಿತಲ್ಲಾ ! ಇನ್ನು ತೆರಳ ಬಹುದು. ನಿನ್ನ ಸಂದೇಶಕ್ಕೆ ಸರಿಯಾದ ಉತ್ತರವನ್ನು ನಾವು ನಾಳೆ ರಣ ರಂಗದಲ್ಲಿ ಕೊಡುವೆವು' ಎನ್ನಲಾಗಿ ಹೊರಡಲನುವಾಗಿಯೇ ಶ್ರೀಕೃಷ್ಣನ ಪಶ್ಚಿಮ (ಕೊನೆಯದಾದ) ಸಂದೇಶವನ್ನು ಸಾರಿ ಹೋಗುವನು.

'ಧರ್ಮಂ ಸಮಾಚರ ಕುರು ಸ್ವಜನವ್ಯಪೇಕ್ಷಾಂ- ಧರ್ಮವನ್ನೇ ಸರಿಯಾಗಿ ಆಚರಿಸಿರಿ, ಅಣ್ಣತಮ್ಮಂದಿರೆಂಬ ಭಾವನೆಯು ಸದಾ ನಿಮ್ಮಲ್ಲಿ ನೆಲಸಲಿ.' (ಗೋಕರ್ಣಲ್ಲಿನಮೇಲೆ ಮಳೆಯನ್ನು ವರ್ಷಿಸಿ ತೆರಳುವನು.)

ಇನ್ನು ಅಭಿಮನ್ಯುವಿನ ಚಿತ್ರಣವೂ ನಮ್ಮ ಮನಸ್ಸನ್ನು ಸೂರೆಗೊಳ್ಳು ವುದು. ಅಭಿಮನ್ಯುವು ಶ್ರೀಕೃಷ್ಣನ (ಯಾವ ಶ್ರೀಕೃಷ್ಣನನ್ನು ಅನಭಿಷಿಕ್ತರಾಜನೆಂದು ದುರ್ಯೋಧನನು ಹಂಗಿಸಿದ್ದನೋ ಆ ಶ್ರೀಕೃಷ್ಣನ) ಪ್ರತಿನಿಧಿಯಾಗಿ ದುರ್ಯೋಧನನ ಪಂಚರಾತ್ರಯಜ್ಞ ವೈಭವದಲ್ಲಿ ಭಾಗವಹಿಸಿ ಆತನನ್ನು ಸಭಾಜಿಸುವರೆ ಬಂದಿರು ವನು. ಮೊದಲನೆಯ ಅಂಕದಲ್ಲಿ ವಿರಾಟನ ಗೋಗ್ರಹಣವು ಯಜ್ಞಾವಭೃಥ ದಲ್ಲಿ ಯಜ್ಞಶಾಲೆಯಲ್ಲಿಯೇ ನಿರ್ಣೀತವಾದಾಗ ಅಭಿಮನ್ಯುವೂ ಕೌರವ ಸೇನಾ ನಾಯಕರೊಡನೆ ಸೇರಿ, ತನ್ನ ದೊಡ್ಡಪ್ಪನಾದ ಭೀಮಸೇನನೊಡನೆ ಯುದ್ಧಕ್ಕೆ ನಿಲ್ಲುವನು. ಭೀಮಸೇನನಿಗೆ ಅಭಿಮನ್ಯುವಿನ ಗುರುತಂತೂ ಆಯಿತು ; ಆದರೆ

ಸೌಟುಗಳನ್ನು ಕೈಯಲ್ಲಿ ಹಿಡಿದು ಅಡಿಗೆ ಭಟ್ಟನಾದ ವಲಲಭಟ್ಟನ ಗುರುತು ಈ ಚಿಕ್ಕ ಪೋರನಿಗೆಂತು ? ಭೀಮನ ಮುಂದೆ ಯುದ್ಧಕ್ಕೇ ಪ್ರಸಕ್ತಿಯಿಲ್ಲವಷ್ಟೆ. ಸಾವಿರಾರು ಬಾಣಗಳು ತನ್ನಮೇಲೆ ಬಿದ್ದರೂ ಲಕ್ಷಿಸದೆ, ಹತ್ತುಸಾವಿರ ಆನೆಗಳ ಬಲವುಳ್ಳ ಭೀಮನು ದೊಪ್ಪನೆ ಬಂದು ಕುದುರೆಗಳ ಮೇಲೂ ರಥದ ಮೇಲೂ ಒಂದು ಕೈ ಇಟ್ಟ ಕೂಡಲೆ, ವಜ್ರವೇ ರಥದಮೇಲೆ ಬಿದ್ದಂತಾಗಿ, ಕುದುರೆಗಳಿಗೆ ಶ್ವಾಸಬಿಡಲು ಕೂಡಾ ಸಾಧ್ಯವಿಲ್ಲದಂತಾಗುವುದು. ಅತ್ತಿತ್ತಕಾಣದೆ, ಅಭಿಮನ್ಯು ವನ್ನು ಗಿಡುಗನು ಹಾರಿಬಂದು ಚಿಕ್ಕಮಿಾನನ್ನು ದೋಚಿಕೊಂಡು ಹೋಗುವಂತೆ –ಭೀಮನಾಲಂಗಿಸಿ, ಮಂಗವು ಮರಿಯನ್ನಾನಿಸಿಕೊಂಡು ಹಾರುವಂತೆ, ಹೊರಟು ಹೋಗುವನು. ಅಭಿಮನ್ಯುವಿಗೆ ಶ್ವಾಸಬಿಡಲು ಕೂಡ ಕಷ್ಟವಾಗಿದೆ. ಆಗ ಸ್ವಲ್ಪ ಮುಂದೆ ಹೋದನಂತರ ಅವನ ಹೆಸರು ಹೇಳಿ ಏಕವಚನದಲ್ಲಿ ಸಂಬೋಧಿಸಿ, 'ಪೋರನೇ ! ಸುಭದ್ರೆಯು ಸೌಖ್ಯವಾಗಿದ್ದಾಳೋ' ಎಂದು ಮಾತಿಗೆ ಮೊದಲು ಮಾಡುವನು. ಅಡಿಗೆಯವನು ಹೀಗೆ ಹೀನಯಿಸಿ ಮಾತನಾಡುವುದನ್ನು ಸಹಿಸ ಲಾರದೆ ದುಃಖದಿಂದ ಪರಿತಪಿಸುವಾಗ, ಈ ಮಹಾರಾಜನು (ಹಿಂದೀ ಭಾಷೆ ಯಲ್ಲಿ ಅಡಿಗೆಯವನನ್ನು ಕೆಲವೆಡೆ ಹೀಗೆ ಕರೆಯುವುದಿದೆಯಂತೆ) 'ಏನೋ ಕೃಷ್ಣನೂ ಕುಶಲಿಯಷ್ಟೆ' ಎಂದು ಶ್ರೀಕೃಷ್ಣನನ್ನೂ ಏಕವಚನದಲ್ಲಿಯೇ ನಿರ್ದೇಶಿ ಸುವನು. 'ಈತನ ಹತ್ತಿರ ನಾನು ಮಾತನಾಡಲಾರೆ' ಎಂದು ನಿರುಪಾಯನಾಗಿ ಅಭಿಮನ್ಯುವು ಮೌನವ್ರತವನ್ನು ಅವಲಂಬಿಸಿದಾಗ, ಭೀಮಸೇನನು ಇವನನ್ನು ನೇರವಾಗಿ ಆಸ್ಥಾನ ಸಭೆಗೇ ಕರೆದುಕೊಂಡು ಹೋಗುವನು. ಅಲ್ಲಿಯೂ ವಲಲಭಟ್ಟನು ವಿರಾಟರಾಜನನ್ನು ನಮಸ್ಕರಿಸದೆ, ಬ್ರಾಹ್ಮಣನಾದ ಕಂಕಭಟ್ಟ ನನ್ನು (ಯುಧಿಷ್ಠಿರ)ಮಾತ್ರ ನಮಸ್ಕರಿಸಿ, ಸುಮ್ಮನೆ ಕಲ್ಲಿನಂತೆ ನಿಂತು ಬಿಡುವನು. ಆಗಲೇ ಬಂದ ಉತ್ತರನು ಅರ್ಜುನನ ಪರಿಚಯ ಮಾಡಿಕೊಟ್ಟು, ಯುಧಿಷ್ಠಿರ ಭೀಮರ ಪರಿಚಯವನ್ನೂ ಮಾಡಿಸಿದಾಗ, ಅಭಿಮನ್ಯುವಿಗೆ ಸತ್ಯವು ಹೊಳೆದು ತನ್ನ ದೊಡ್ಡಪ್ಪಂದಿರನ್ನೂ ತಂದೆಯನ್ನೂ ಅಭಿವಂದಿಸುವನು. ಕೃತಜ್ಞತೆಯಿಂದ ತುಳುಕುತ್ತಿರುವ ವಿರಾಟನು ಉತ್ತರೆಯನ್ನು ಅಭಿಮನ್ಯುವಿಗೆ ವಿವಾಹಮಾಡಿ ಕೊಡಲೊಪ್ಪಿದಾಗ ಚಿಕ್ಕಮದುಮಗನಾಗಿ ಶೋಭಿಸುವನು. ಇದೀಗ ವಿರಾಟ ನಗರದ ವರ್ಣನೆಯಾದರೆ, ಹಸ್ತಿನಾವತಿಗೆ ಅಸ್ತವ್ಯಸ್ತವಾಗಿ ಅರ್ಜುನನಿಂದ ಸೋಲಿಸಲ್ಪಟ್ಟ ವೀರಾಧಿವೀರರೆಂದು ಹೆಗ್ಗಳಿಕೆಯನ್ನು ಹೊತ್ತ ಕುರುವೀರರೆಲ್ಲ ಜೀವವಿದ್ದರೆ ಬೆಲ್ಲಬೇಡಿಯಾದರೂ ತಿಂದು ಬದುಕಬಹುದೆಂದೋಡಿ ಬಂದು, ಹೇಗೋ ಹೇಗೋ ಹಸ್ತಿನಾವತಿಯನ್ನು ಮುಟ್ಟಿದ ನಂತರ, ತಾವೆಲ್ಲರೂ ಹಿಂದೆ

ಬಂದಿರುವೆವೋ ಇಲ್ಲವೋ ಎಂಬುದನ್ನು ತಿಳಿಯಲೋಸುಗ ಹಾಜರಿ ಪಟ್ಟಿಯನ್ನು ಕರೆದಾಗ, ಕಡೇಗೆ ಸೇರಿಸಿದ ನೂತನ ಸೈನಿಕನಾದ ಅಭಿಮನ್ಯುವೊಬ್ಬನೇ ಇಲ್ಲವೆಂದು ನಿರ್ಣಯವಾಯಿತು. ಶಕುನಿಗೂ ಎಂದಿನಂತೆ 'ಅವನಂತೂ ನಮ್ಮ ವೈರಿಯ ಮಗನಲ್ಲನೇ? ನಾವೇ ಅವನನ್ನು ಮತ್ತೆ ಯುದ್ಧದಲ್ಲಿ ಕೊಲ್ಲಬೇಕಾಗಿತ್ತು. ಈಗ ಅವನೇ ವೈರಿಗಳಿಂದ ಸೆರೆಹಿಡಿಯಲ್ಪಟ್ಟರೆ ಅದರಲ್ಲಿ ಏನು ಅಭ್ಯಂತರ?' ಎಂದು ಘೋಷಯಾತ್ರೆಯಲ್ಲಿ ಭೀಮನ 'ಅಸ್ಮಾಭಿಲ್ಲಿ ಯತ್ತು ಕರ್ತವ್ಯಂ ಗಂಧರ್ವೈಃ ತದನುಷ್ಠಿತಂ'—ಎಂಬ ಮಾತನ್ನೇ ನಮಗೆ ನೆನಪು ತಂದು ಕೊಡುವನು. ಆದರೆ ಭಾಸನ ದುರ್ಯೋಧನನು—

'ಅಥ ಮಮ ಸತು ಪುತ್ರಃ ಪಾಂಡವಾನಾಂ ತು ಪಶ್ಚಾತ್ |
ಸತಿ ಚ ಕುಲವಿರೋಧೇ ನಾಪರಾಧ್ಯಂತಿ ಬಾಲಾಃ ||

ಆ ಅಭಿಮನ್ಯುವು ನನಗಾಗಿ ಯುದ್ಧವನ್ನೆಸಗಿದವನು; ಕುಲದಲ್ಲಿ ಹಿರಿಯರಿಗೆ ಜಗಳವಿದ್ದರೆ, ಅಲ್ಲಿ ಚಿಕ್ಕ ಬಾಲಕರ ತಪ್ಪೇನೂ ಇಲ್ಲ' ಎಂದು ಮರುಗುವಾಗ ನಮ್ಮ ಕಣ್ಣಿನಲ್ಲಿ ಹಠಾತ್ತಾಗಿ ನೀರು ಬಂದೇ ಬರುವುದು. ಈ ಚರ್ಚೆಯು ನಿರ್ಣಯವಾಗದಿರುವಾಗಲೇ, ದ್ರೋಣರು ಪಾಂಡವರನ್ನು ಹೊಗಳಲಾರಂಭಿಸಿದ್ದು ಕಪಟಿ Advocate General ಆದ ಶಕುನಿಗೆ ಸರಿಹೋಗುವುದೇ ಇಲ್ಲ. 'ಎಲ್ಲಿ ಯಾರ ಪರಾಕ್ರಮವೇ ಆಗಲಿ! ಪಾಂಡವರದ್ದೇ ಎಂದು ಹೊಗಳುವುದರಲ್ಲಿ ನೀವು ಮುಂದಾಳುಗಳಾಗುತ್ತೀರಿ' ಎಂದು ಜರೆಯುವನು. ಆಗಲೇ ಭಟನೊಬ್ಬನು 'ಇದೋ ಇಲ್ಲಿ ಬಾಣ, ಈ ಬಾಣಗಳು ಲಕ್ಷಾಂತರ ಗಟ್ಲೆಯಲ್ಲಿ ನಮ್ಮ ಮೇಲೆ ಬಿದ್ದು ನಮ್ಮನ್ನು ದಿಙ್ಮೂಢರನ್ನಾಗಿ ಮಾಡಿದ್ದು' ಎಂದು ಒಂದನ್ನು ತಂದು ಕೊಡುವನು. ಭೀಷ್ಮನು 'ಪಾಂಡುಪುತ್ರಸ್ಯ ಅರ್ಜುನಸ್ಯ' ಎಂದು ಅದನ್ನೋದಿ ಸಂತುಷ್ಟನಾಗಿ, ಬೇಕಂತಲೇ 'ತೊಂಭತ್ತು ವರ್ಷದ ಹಣ್ಣು ಮುದುಕ ನಾನು; ಸರಿಯಾಗಿ ಕಣ್ಣು ಕಾಣುವುದಿಲ್ಲ. ದಯವಿಟ್ಟು ಓದು, ಶಕುನಿ ಮಹಾರಾಯನೇ' ಎಂದು ಅವನಿಗೆ ಅದನ್ನು ಕೊಡುವನು. ಆಗ ಶಕುನಿಯೂ ಅದನ್ನೋದಿ 'ಏನು! ಅರ್ಜುನನೆಂದು ಲೋಕದಲ್ಲಿನ್ನೊಬ್ಬನು ಯಾರದಾದರೂ ಹೆಸರಾಗಬಾರದೇಕೆ?' ಎಂದು ಅಡಿಗೆ ಬಿದ್ದರೂ ಮೂಗಿಗೆ ಮಣ್ಣಾಗಲಿಲ್ಲವೆಂದು ವಾದಿಸುವವನಂತೆ ಆರಂಭಿಸುವನು. ಆಗಲೇ ಉತ್ತರನು ದೂತನಾಗಿ ಬಂದಿರುವೆನೆಂದು ಹೇಳುವಾಗ, ಏನು ವಿರಾಟರಾಜನ ಸಂದೇಶವೆಂದು ಕೇಳಲ್ಪಟ್ಟಾಗ 'ಅಲ್ಲ ಅಲ್ಲ! ನನ್ನನ್ನು ಕಳುಹಿಸಿದವರು ಯುಧಿಷ್ಠಿರಮಹಾರಾಜರು' ಎಂದುಸುರುವನು. ಸಂಭ್ರಾಂತರಾದ ಕುರುವೃದ್ಧರು 'ಏನು ಸಮಾಚಾರ'ವೆಂದು ಪ್ರಶ್ನಿಸಲಾಗಿ 'ಅರ್ಜುನನ ಮಗನಾದ ಅಭಿಮನ್ಯುವಿಗೆ ಉತ್ತರೆಯೆಂಬ ನನ್ನ ತಂಗಿಯನ್ನು ಮದುವೆಯಲ್ಲಿ ಕೊಡವದೆಂತ

ನಿಶ್ಚಯ ತಾಂಬೂಲವಾಗಿದೆ. ಮದುವೆಯನ್ನೆಲ್ಲಿ ನೆರವೇರಿಸುವುದು, ಹಸ್ತಿನಾವತಿಯಲ್ಲಿಯೋ ವಿರಾಟಪುರಿಯಲ್ಲಿಯೋ ಎಂದು ವಿಚಾರಿಸುವರೆ ನಾನು ಇಲ್ಲಿಗೆ ಬಂದುದು' ಎಂದು ಹೇಳಿದಾಗ, ಈ ದುರ್ಯೋಧನನ ಮನಸ್ಸಿನಲ್ಲಿ ವಿಷವನ್ನು ತುಂಬಿಸಿದಂಥ ಮಹಾರಾಯರೆಲ್ಲರೂ ಏಕಕಂಠದಲ್ಲಿ 'ಅಲ್ಲಿ(ವಿರಾಟಪುರಿ)ಯೇ ನಡಿಯಲಿ' ಎಂದು ಕೂಗುವರು. ಆಗ ಭೀಷ್ಮಾಚಾರ್ಯರೂ, ದ್ರೋಣರೂ ಕುರುಕುಲಕ್ಷೇಮವನ್ನು ಅಭಿಲಾಷಿಸಿ 'ಐದುರಾತ್ರಿಗಳೊಳಗಾಗಿ ಪಾಂಡವರ ಕುರುಹು ಈಗಲಾದರೂ ದೊರಕಿತಲ್ಲಾ ಅವರಿಗವರ ಅರ್ಧರಾಜ್ಯವನ್ನು ಕೊಡು' ಎಂದು ನಿರ್ಬಂಧಿಸಿದಾಗ ದುರ್ಯೋಧನನು ಚಾಚೂ ಎಂದು ಮರುಮಾತೆತ್ತದೆ ರಾಜ್ಯವನ್ನು ವಿಭಜಿಸಿ ಕೊಡುವನು. ಮಧ್ಯಮ ವ್ಯಾಯೋಗದ ಬ್ರಾಹ್ಮಣಪುತ್ರರ ವಿಷಯ ಸಾಕಷ್ಟು ಈ ಮೊದಲೇ ಹೇಳಲ್ಪಟ್ಟಿದೆ. ಇಲ್ಲಿ ಹೇಳುವ ವಿಶೇಷ ಯೋಗ್ಯತೆಯೇನೂ ಕಂಡುಬರುವುದಿಲ್ಲ.

ಇನ್ನು ಪದ್ಮಾವತೀ ಕುರಂಗಿಕೆಯರೆಂಬ ಮದುವೆಯಾಗದ ಹುಡುಗಿಯರ ಗೋಜಿಗೀಗ ಹೋಗದೆ, ಆಂಗ್ಲ ಭಾವಜ್ಞಾನಶಾಸ್ತ್ರ (Psychology)ದಲ್ಲಿ ಈಗ ಅತಿಪ್ರಸಿದ್ಧರಾದ Woodworth ಮತ್ತು George A Buttrick ಎಂಬೀರ್ವರ ವಾಕ್ಯಗಳನ್ನು ಪರಿಶೀಲಿಸಿ, ಎರಡು ಸಾವಿರ ವರ್ಷಗಳ ಮುಂಚೆಯೇ ನಮ್ಮ ಭಾರತವರ್ಷದಲ್ಲಿ ಈ ಶಾಸ್ತ್ರದ ತತ್ತ್ವಗಳು ನಮ್ಮ ಕವಿಗಳಲ್ಲಿ ಹೇಗೆ ಬೇರೂರಿದ್ದವೆಂಬುದನ್ನು ದಿಙ್ಮಾತ್ರ ಪ್ರದರ್ಶನಮಾಡಿ ವಿರಮಿಸೋಣ. ಇವರಲ್ಲಿ ಮೊದಲಿನವರ ವಾಕ್ಯವನ್ನೀಗ ಉದಹರಿಸುವೆವು. The wish gratified in the dream is the one that has been left unsatisfied in the daytime (ಪುಟ-503 Psychology 10th Edn.) ಅಂದರೆ ಹಗಲಲ್ಲಿ ತೃಪ್ತಿಪಡಿಸಲಾಗದ ಇಚ್ಛೆಯು (ಹೆಚ್ಚುಕಾಲ ಅತೃಪ್ತವಾಗಿಯೇ ಉಳಿದಲ್ಲಿ) ತಾನಾಗಿಯೇ ರಾತ್ರಿಯಲ್ಲಿ ಸ್ವಪ್ನದಲ್ಲಿ ತೃಪ್ತಿಯನ್ನು ಪಡೆದುಕೊಳ್ಳುವುದು. ಈ ಮಾತು ಅಕ್ಷರಶಃ ಸತ್ಯವೆಂದು ಸ್ವಪ್ನವಾಸವದತ್ತದ ಸ್ವಪ್ನಾಂಕವೆಂದು ಪ್ರಸಿದ್ಧವಾದ ಐದನೆಯ ಅಂಕವನ್ನೋದಿದವರಿಗೆ ಖಚಿತವಾಗುವುದು. ಅಲ್ಲಿಯ ಸನ್ನಿವೇಶವನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು. ಪದ್ಮಾವತಿಗೆ ತಲೆನೋವೆಂಬ ಸಮಾಚಾರ ವಾಸವದತ್ತೆಗೂ ಉದಯನನಿಗೂ ಹೋಗಿಯದೆ. ಅನೇಕ ದಿನಗಳಿಂದ (ಪ್ರಾಯಶಃ ಅನೇಕ ವರ್ಷಗಳಿಂದ) ಉದಯನನ ಮನಃಸಾಮ್ರಾಜ್ಯಾಧಿದೇವತೆಯಾದ ವಾಸವದತ್ತೆಯು ಹೇಗೋ ಅವನ ಕಣ್ಣುಗಳಿಂದ ತಪ್ಪಿಸಿಕೊಂಡು ಅಲ್ಲಿಯೇ ತನ್ನ ದುಃಖಕ್ಕೆ ಕೊಗಚಕೊಂಚವಾಗಿ ಆಗಾಗ್ಯೆ ವೇತನವನ್ನು ಪಡಿಯುವಂತೆಯೋ

ಎಂಬಂತೆ ಅಜ್ಞಾತವಾಸದಲ್ಲಿರುವಳಷ್ಟೆ. ನಾಟಕೀಯತೆಯಲ್ಲಿ ಒಳ್ಳೇ ಪಳಗಿದವನಾದ ಭಾಸನು ಬೇಕೆಂದೇ ಪದ್ಮಾವತಿಯನ್ನು ಸಮುದ್ರಗೃಹಕ್ಕೆ ಕಳುಹಿಸಲೇ ಇಲ್ಲ, ಅವಳು—'ಇಷ್ಟು ಚಿಕ್ಕ ತಲೆನೋವಿಗೆ ಇಷ್ಟು ದೊಡ್ಡ ಗಲಾಟೆಯೇಕೆ' ಎಂದು ಯೋಚಿಸುತ್ತಾ ತನ್ನ ಮನೆಯಲ್ಲಿಯೇ ಕಾಲವನ್ನು ಕಳೆದುಬಿಟ್ಟಳು. ಇತ್ತ ಕಡೆ ಉದಯನನಿಗೊಂದೇ ಚಿಂತೆ, "ಒಂದನೆಯ ಹೆಂಡತಿಯಂತೂ ಕೈಬಿಟ್ಟಾಯಿತು, ರೂಪೌದಾರ್ಯ ಸೌಶೀಲ್ಯಗಳಲ್ಲಿ ಅವಳನ್ನು ಸ್ವಲ್ಪಮಟ್ಟಿಗೆ ಹೋಲುವವಳಾಗಿರುವ ಪದ್ಮಾವತಿಗೂ ಅವಳಂತೆಯೇ ಕಾಹಿಲೆಯಿರಬೇಕೇ" ಎಂದೇ ಯೋಚಿಸುತ್ತಾ ಏಳೂವರೆ ಘಂಟೆಗೆ ಸಮುದ್ರ ಗೃಹಕ್ಕೆ ಪದ್ಮಾವತಿಯು ಬರುವುದಾಗಿ ಸಮಾಚಾರ ಬಂದಿದ್ದರೂ, ಮನಸ್ಸಿನ ದುಗುಡದಿಂದ ಏಳು ಘಂಟೆಯ ಮೂರು ಸಂಜೆಯ ಹೊತ್ತಿಗೇ ವಿದೂಷಕನೊಡನೆ ಅಲ್ಲಿ ಸೇರುವನು. ಅಲ್ಲಿ ವಿದೂಷಕನು ಬೇರೆ ಕೆಲಸವಿಲ್ಲದೆ ಉಜ್ಜಯಿನಿಯ ಕಥೆಯನ್ನೊಂದನ್ನಾರಂಭಿಸಲು ಉದಯನನ ಕಣ್ಣಿನಲ್ಲಿ ಹಠಾತ್ತಾಗಿ ನೀರು ಸುರಿಯಲಾರಂಭಿಸುವುದು. ಈ ಕಥೆಯು ಅನಭಿಮತವೆಂದು ಇನ್ನೊಂದನ್ನು ಹಳ್ಳಿಯ ಗೌಡನಂತೆ 'ಬ್ರಹ್ಮದತ್ತಂ ನಾಮನಗರಂ | ಕಾಂಪಿಲ್ಯೋ ನಾಮರಾಜಾ' ಎಂದು ಹೆಸರುಗಳನ್ನು ತಿರುಗುಮುರುಗಾಗಿ ಹೇಳುವನು. ನಗುವನ್ನು ತಡೆಯಲಾರದವನಾಗಿ ಉದಯನನು 'ಹಾಗಲ್ಲವೋ ಮಹಾರಾಯಾ ! ಬ್ರಹ್ಮದತ್ತನೆಂದು ರಾಜನ ಹೆಸರು, ಕಾಂಪಿಲ್ಯವೆಂದು ಆತನ ಪಟ್ಟಣದ ಹೆಸರು' ಎಂದು ಹೇಳಿದಾಗ, ವಿದೂಷಕನು ಅದನ್ನೇ ಹತ್ತಾವರ್ತಿ ಹೇಳಿ ಉರು ಹಾಕುವನು. ಆಗ ತಾನೇ ಉದಯನನು ಪದ್ಮಾವತಿಗೆಂದು ಹಾಸಿದ ಹಾಸಿಗೆಯಲ್ಲಿ ನಿದ್ದೆ ಹೋಗಿಬಿಟ್ಟಿದ್ದನು. ಛಳಿಯ ಬಾಧೆಯು ಸ್ವಲ್ಪ ಹೆಚ್ಚಾದ್ದರಿಂದ ವಿದೂಷಕನು ಹೊದಿಯಲು ಹಚ್ಚಡವನ್ನು ತರುವರೆ ಹೊರಗೆ ಹೊರಟುಹೋಗುವನು. ಆಗತಾನೇ ಏಳೂವರೆ ಘಂಟೆ ಸುಮಾರಾದ್ದರಿಂದ ಪದ್ಮಾವತಿಯನ್ನು ಕಥೆಗಳಿಂದ ವಿನೋದಿಸಲು ಬಂದ ವಾಸವದತ್ತೆಯು ಸಹಜವಾಗಿಯೇ ಹಾಸಿಗೆಯಲ್ಲಿ ಕುಳಿತುಕೊಳ್ಳುವಳು. ಶೀತಲವಾದ ತಂಗಾಳಿಯೂ ಬೀಸುತ್ತಿದ್ದರಿಂದ ಉದಯನನಿಗೆ ಸರಿಯಾಗಿ ನಿದ್ದೆ ಹತ್ತಿತ್ತು. ಎಲ್ಲಿಯೋ ಮೂಲೆಯಲ್ಲಿ ಒಂದು ಸಣ್ಣ ಚಿಮಣಿ ದೀಪವು ಮಿಣುಕುತ್ತಿತ್ತು. ಪದ್ಮಾವತಿಯೇ ಮಲಗಿರುವಳೆಂದು ನಂಬಿದ್ದ ವಾಸವದತ್ತೆಗೆ ಕ್ರಮವಾದ ಶ್ವಾಸೋಚ್ಛ್ವಾಸಗಳನ್ನು ನೋಡಿ ತಲೆಶೂಲೆಯ ಬಾಧೆ ಕಡಿಮೆಯಾಗಿರಬಹುದಲ್ಲಾ ಎಂದು ಸಂತೋಷವಾಗುತ್ತಿರುವಾಗಲೇ ನಿದ್ದೆಯಲ್ಲಿಯೇ ವಾಸವದತ್ತೆಯನ್ನು ಸ್ವಪ್ನದಲ್ಲಿ ಕಂಡು 'ಹೇ ವಾಸವದತ್ತೇ' ಎಂದು ಕೂಗಿಕೊಳ್ಳುವನು. ಜೀವವೇ ಹಾರಿಹೋದಂತಾಯಿತು ಈ ವಿರಹಿಣಿಗೆ. ಪುನಃ 'ಅವಂತೀ ರಾಜಪುತ್ರಿ' ಎಂದು ಸಂಬೋಧನೆ.

ಇದೀಗ ಸ್ವಪ್ನವಾಗಿರಬಹುದೆಂದು ಸ್ವಲ್ಪ ಧೈರ್ಯದಿಂದ ವಾಸವದತ್ತೆಯು 'ಹೃದಯವನ್ನೂ ಕಣ್ಣುಗಳನ್ನೂ ಸ್ವಲ್ಪವುಟ್ಟಿಗಾದರೂ ಸಂತೋಷಿಸುವಂತೆ ಮಾಡುವೆನು' ಎಂದು ಹೇಳಿ ತನಗೆ ತಿಳಿಯದೇನೆ 'ಇಲ್ಲಿಯೇ ಇರುವೆನಲ್ಲಾ ?' ಎಂದುತ್ತರಿಸಿಯೇಬಿಡುವಳು. ಸ್ವಪ್ನದಲ್ಲಿಯೇ ಈ ಉತ್ತರವನ್ನು ಪಡೆದ ಉದಯನನು 'ಏನು ! ಅಲಂಕಾರಗಳ್ಯಾವುವೂ ಇಲ್ಲವಲ್ಲಾ ! ನನ್ನ ಮೇಲೆ ಸಿಟ್ಟೇ ?' ಎನ್ನಲು ತನ್ನ ಭಾವಗಳನ್ನು ತಡೆಹಿಡಿಯಲಸಾಧ್ಯವಾಗಿ 'ಒಡವೆಗಳಿಂದೇನಾಗುವುದು ?' ಎಂದಾಗ 'ಏನು ವಿರಚಿಕೆಯ ವಿಷಯವನ್ನು ಇನ್ನೂ ನೆನಪಿನಲ್ಲಿಟ್ಟುಕೊಂಡು ನೊಂದುಕೊಳ್ಳುವಿಯೇನು ?' ಎಂದನು. (ಪ್ರಾಯಶಃ ಮದುವೆಯಾಗುವ ಮುಂಚೆ ವಿರಚಿಕೆಯೆಂಬುವಳೊಡನೆ ಸರಸಸಲ್ಲಾಪ ಮಾತ್ರವಲ್ಲದೆ ಅವಳೊಡನೆ ದುರ್ಮಾರ್ಗದಲ್ಲಿಯೂ ಪ್ರವರ್ತಿಸಿ, ಮದುವೆಯಾದನಂತರ ಅದಕ್ಕೋಸ್ಕರ ವಾಸವದತ್ತೆಯ ಕ್ಷಮಾಪಣೆಯನ್ನು ಯಾಚಿಸಿರಬೇಕು.) ಇದನ್ನು ಸಹಿಸಲಾರದೆ 'ವಿರಚಿಕೆಯ ಸುದ್ದಿಯೇ ನನಗೆ ಬೇಡ'ವೆಂದು ವಾಸವದತ್ತೆಯು ನಡುಗಿ ನಡುಗಿ ಉಸಿರಿದಾಗ 'ಹಾಗಾದರೆ (ಸ್ವಪ್ನದಲ್ಲಿಯೇ ಕೈ ಹೊರಗೆ ಹಾಕಿ) ನನಗೀಗ ಚಿರಕಾಂಕ್ಷಿತವಾದ ಆಲಿಂಗನವನ್ನನುಗ್ರಹಿಸು' ಎಂದನು. ಇಷ್ಟರೊಳಗೇ ಅತೀವ ಗಾಬರಿಯಾಗಿ 'ಯೌಗಂಧರಾಯಣನು ಏನನ್ನೋ ಉದ್ದೇಶಿಸಿ ನಾನು ದೂರವಿರಬೇಕೆಂದು ವಿಧಿಸಿದ್ದು. ನಾನಿಲ್ಲಿಯೇ ನಿಂತರೆ ಅನರ್ಥವಾದೀತಲ್ಲಾ' ಎಂದು ಯೋಚಿಸಿದ ವಾಸವದತ್ತೆಯು 'ಅಯ್ಯೋ ! ಆರ್ಯಪುತ್ರನ ಕೈಗೆ ಛಳಿಯಾಯಿತಲ್ಲಾ' ಎಂದು ಫಕ್ಕನೆ ಯೋಚಿಸಿ, ಹಚ್ಚಡವನ್ನು ಮುಂಚಿನಂತೆಯೇ ಕೈಯ ಮೇಲೆಳೆದು ಹೊರಗೋಡಿದಳು. ಆಗಲೇ ಅವಳ ಕೈಯ ಸ್ಪರ್ಶವು ಅನಾಯಾಸವಾಗಿ ಏರ್ಪಡಲು, ಸಂಪೂರ್ಣ ಎಚ್ಚತ್ತು ಹಿಂಬಾಲಿಸಿ ಅವಳ ಬೆನ್ನನ್ನು ನೋಡಿಯೇ ಬಿಟ್ಟನು. ಆದರೆ ಗ್ರಹಚಾರ ವಶಾತ್ ಬಾಗಿಲಿನ ಮೇಲಿನ ಹೊಸ್ತಿಲು ತಲೆಗೆ ತಗಲಿ 'ಅಯ್ಯೋ !' ಎಂದು ಬೊಬ್ಬಿಡುತ್ತಾ ಕೂತುಬಿಟ್ಟನು. ಆಗಲೇ ಕತ್ತಲೆಯಲ್ಲಿ ವಾಸವದತ್ತೆಯು ಬಹುದೂರ ದಾಟಿದ್ದಳು. ಇನ್ನುಳಿದ ಕಥೆ ನಮಗೆ ಪ್ರಸ್ತುತವಲ್ಲವಾದುದರಿಂದ ಉಪೇಕ್ಷಿಸಲಾಗಿದೆ.

ಇನ್ನು George A. Buttrick ಎಂಬ ಮಹನೀಯರು Prayer ಎಂಬ ಪ್ರಾರ್ಥನೆಯ ಮಹತ್ತ್ವವನ್ನು ಪ್ರತಿಪಾದಿಸುವ ತಮ್ಮ ಅಮೂಲ್ಯವಾದ ಗ್ರಂಥದಲ್ಲಿ 'Psychology has made us doubly sure that a repressed memory cannot be entirely suppressed' ಎಂಬ ಉದ್ಗಾರವನ್ನೆತ್ತಿರುವರು. ಇದಕ್ಕೂ ನಾವು ಇದೇ ಸ್ವಪ್ನಾಂಕದ

ದೃಷ್ಟಾಂತವನ್ನೇ ಮಂಡಿಸುವೆವು. ಈ ವಾಕ್ಯದ ಅರ್ಥವೇನೆಂದರೆ 'ಕಷ್ಟಪಟ್ಟು ಸ್ಮೃತಿಗೆ ಬರುವ ವಿಷಯುಗಳನ್ನು ಬದಿಗೆದೂಡಲು ಪ್ರಯತ್ನಿಸಿದರೂ ಸರ್ವಥಾ ಅವುಗಳನ್ನು ದೂಡಿ ಮರೆಮಾಡಲು ಸಾಧ್ಯವೇ ಇಲ್ಲ.' ಹೇಗಾದರೂ ಇನ್ನೊಂದೆಡೆ, ಸಂದರ್ಭವು ಸಂಪೂರ್ಣ ಪ್ರತ್ಯೇಕವಾಗಿದ್ದರೂ, ಆ ವಿಷಯುಗಳು ನಮ್ಮ ಸ್ಮೃತಿ ಪಥಕ್ಕೆ ಬಂದೇ ಬರುವುವು. ಉದಯನನು ಪ್ರಯತ್ನಪೂರ್ವಕವಾಗಿ ಎಚ್ಚತ್ತಿರುವಾಗಲಾದರೂ ವಾಸವದತ್ತೆಯನ್ನು ಮರೆತುಬಿಡುವರೆ ಪ್ರಯತ್ನಮಾಡಿದ್ದನು ; ಆದರೆ ಸ್ವಪ್ನದಲ್ಲಿ ಅವಳ ಸ್ಮರಣೆಯನ್ನು ಅವನು ಹೇಗೆ ತಡೆದಾನು ? ಇದೀಗ ಭಾವಜ್ಞಾನಶಾಸ್ತ್ರದ (Psychology) ಅತಿಮುಖ್ಯ ತತ್ತ್ವವೆಂದು 20ನೆಯ ಶತಮಾನದ ಭಾವಶಾಸ್ತ್ರವನ್ನಾರಾಧಿಸುವವರಿಂದ ನಾವು ಕಲಿತರೆ, ಕ್ರಿಸ್ತುವಿಗೂ ಪೂರ್ವದಲ್ಲಿದ್ದ ಭಾಸನಿಗೇ ಈ ತತ್ವವು ಚನ್ನಾಗಿ ತಿಳಿದೇ ಇತ್ತು.

ಇತ್ತೀಚೆಗೆ ಪಾಶ್ಚಾತ್ಯರಲ್ಲಿ, ಅವರಲ್ಲಿಯೂ ವಿಶೇಷವಾಗಿ ಅಮೆರಿಕನರಲ್ಲಿ ಕೆಲವರು Surrealism ಎಂಬ ಈ Psychology ಶಾಸ್ತ್ರದಲ್ಲಿಯೇ ಹೊಸ ವಿಜ್ಞಾನ ಭಾಗವನ್ನು ಕಲ್ಪಿಸಿದ್ದಾರೆ. ಅವರ ವಿವೇಚನೆಗೂ ನಮ್ಮ ಪ್ರಾಚೀನ ಸ್ವಪ್ನಶಾಸ್ತ್ರದ ವಿವೇಚನೆಗೂ ತುಂಬಾ ಹೋಲುವೆಯಿದೆಯೆಂಬುದನ್ನು ಈಗ ಆ ಪಾಶ್ಚಾತ್ಯ ವಿದ್ವಾಂಸರ ಮಾತುಗಳಿಂದಲೇ ಸ್ಪಷ್ಟಪಡಿಸುವೆವು. ಮೊದಲು ಅವರ ವಾಕ್ಯಗಳನ್ನೇ ಉದಾಹರಿಸಿದನಂತರ ಹೇಗೆ ಅವುಗಳ ಅಕ್ಷರಶಃ ಸಮನ್ವಯವನ್ನೂ ಈ ನಾಟಕಗಳಲ್ಲಿ ಕಾಣಬಹುದೆಂಬುದನ್ನು ವಾಚಕರ ಮುಂದೆ ಮಂಡಿಸುವೆವು.

ಒಬ್ಬ ಮಹನೀಯರ ಮಾತುಗಳು—"Surrealism" ಎಂಬ ಪುಸ್ತಕ, ಪುಟ 18—"Simulations involve intuitional practice of putting yourself in another place, thus talking with other tongues. Simulations of delirium are declared as proof that the normal man can gain temporary access to domains hitherto forbidden the human mind. These simulations can be called experimental dreams because the intervention of lyrical activity has been brought into play in order to illumine the problem of the interpretation of the national and irrational worlds ; therefore the variables, the provocations,

the moments of liberation do not find themselves subjected to the will of the Poet, but rely considerably on the automatism of necessities and on reactions created by reason of the logic of the recital itself. Thus all that which is superimposed as the logical plot of the poet registers with all "the dociliating that his habits, his sensoral and literary tes will permit." ಇದೇ ಮಹನೀಯರು 65ನೇ ಪುಟದಲ್ಲಿ the drift of surrealism has always and chiefly been towards a general and emphatic **crisis in consciousness**. The surrealist attempts to explore the realm of the subconscious, to examine it, not with the eye of the scientist or doctor, but with the eye of the **poet and artist** without recourse to the logic of everyday reality ; thoughts and dreams almost universally operate, as a sequence of morning images, usually in monochrone, with occasional flashes of colour, captions and sound,........tentative forecasts into the future" ಇಲ್ಲಿ simulations ಎಂದರೆ ಇನ್ನೊಬ್ಬರ ಯಥಾವತ್ತಾದ ಅನುಕರಣೆ ಎಂದರ್ಥ ; ಇವುಗಳ ಸಹಾಯದಿಂದ ಮನಸ್ಸನ್ನು ಸರಿಯಾದ ಹತೋಟಿಯಲ್ಲಿ ತಂದುಕೊಂಡು, ಮೆಲ್ಲಮೆಲ್ಲನೆ ಭವಿಷ್ಯವನ್ನೋ ಅಥವಾ ಪ್ರತ್ಯಕ್ಷಾತೀತವಾದುದನ್ನೋ ಸ್ವಪ್ನಗಳ ಮೂಲಕ ನಾವು ತಿಳಿಯಲು ಸಾಧ್ಯವಿದೆಯೆಂದು ಇಲ್ಲಿ ಹೇಳಿದಂತಿದೆ. ಹೀಗೆಯೇ ನಮ್ಮ ಭಾವಜ್ಞಾನಶಾಸ್ತ್ರವೇತ್ತರು (ಅಥವಾ ಮನಃಶಾಸ್ತ್ರ ತತ್ತ್ವಜ್ಞರು) ಸ್ವಪ್ನಗಳೂ ಪ್ರತ್ಯಕ್ಷವೂ ಪರಸ್ಪರ ಹೋಲುವುವು ಮತ್ತು ಎರಡೂ ಮಿಥ್ಯೆಯೆಂದು ವೇದಾಂತಿಗಳಲ್ಲಿ ಪ್ರಸಿದ್ಧರಾದ ಅದ್ವೈತಿಗಳು ವಾದಿಸುವರು. ಅದಿರಲಿ, ಸ್ವಪ್ನಾವಸ್ಥೆಯನ್ನು ನಾವು ಯೋಗಶಾಸ್ತ್ರದ ಪ್ರಕಾರ ಸರಿಯಾಗಿ ವಿವೇಚಿಸಿದರೆ, ಜಾಗ್ರದವಸ್ಥೆಗೂ ಸ್ವಪ್ನಾವಸ್ಥೆಗೂ ಅನ್ಯೋನ್ಯಾಶ್ರಯ ಸಂಬಂಧವೇ ಸರ್ವದಾ ಇದ್ದಂತೆ ತೋರುವುದು. ಈ ಅದ್ವೈತ ವೇದಾಂತಿಗಳೂ ಎಲ್ಲಾ ವಸ್ತುಗಳೂ ಸ್ವಪ್ನವಾಗಿಯೇ ಇರುವುವೆಂದು ವಾದಿಸುವರು. ಅವರ ಪ್ರಕಾರ ಈ

ಪ್ರಾತಿಭಾಸಿಕಸತ್ತೆಯನ್ನು ದಾಟಿ ಪಾರಮಾರ್ಥಿಕ ಸತ್ಯವನ್ನು ಕಂಡುಹಿಡಿಯು ವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಹೀಗಾಗಿ ಪ್ರತ್ಯಕ್ಷಕ್ಕೂ ಅತೀತವಾದ ವಸ್ತುವೊಂದನ್ನು ನಾವೆಲ್ಲರೂ ಒಪ್ಪಿಯೇ ತೀರಬೇಕಾಗುತ್ತದೆ. ಜಾಗ್ರತ್ತಿಗೂ ಸ್ವಪ್ನಕ್ಕೂ ಯಾವತರದ ಸಂಬಂಧವೇ ಇಲ್ಲವೆಂಬ ಕೆಲವು ನಾಸ್ತಿಕರ ಮತವನ್ನು ನಿರಾಕರಿಸುವರೆಯಾದರೂ ನಮಗೆ ಭಾಸನಂತಹ ಕವಿಗಳ ಸಹಾಯು ವಿದ್ದೇ ತೀರಬೇಕಾಗಿದೆಯೆಂದು Andrew Breton ಎಂಬ ಇನ್ನೊಬ್ಬ ಪಾಶ್ಚಾತ್ಯ ತತ್ತ್ವಶಾಸ್ತ್ರಿಯ ಮಾತು—The poet (**like Bhasa is our parenthetical clause**)has come into being to overcome the depressing idea of an irreparable divorce between action and a dream.

ಇದೀಗ ಭಾಸನು ಅತ್ಯುತ್ತಮ ಭಾವಜ್ಞಾನಿಯೆಂಬುದು ನಮಗೆಲ್ಲರಿಗೂ ನೆನೆವರಿಕೆಯಾಗಿರಬಹುದೆಂತ ನಾವು ಭಾವಿಸುತ್ತೇವೆ. ಪ್ರತಿಯೊಬ್ಬ ಕವಿಯೂ ತನ್ನ ಸುತ್ತಮುತ್ತಲಿನ ಆವರಣಗಳಲ್ಲಿರುವ ಎಲ್ಲಾ ವಿಷಯಗಳನ್ನೂ ಶ್ರವಣ, ಮನನ,ನಿದಿಧ್ಯಾಸನ ಪೂರ್ವಕವಾಗಿ ಗ್ರಹಿಸಿ,ಅವುಗಳ ಅಂತರೀಯಕವಾದ ಸಂದೇಶ ವನ್ನು ಹೀರಿ, ನಮ್ಮಂತಹ ಪಾಮರ ಜನರಿಗೆ ಅದರ ಅಮೃತವನ್ನು ಉಣ್ಣಿಸುವ ಯೋಗ್ಯತೆ ಇದ್ದವನಾಗಿರಬೇಕು. ಇಂಥಾ ಯೋಗ್ಯತೆಯನ್ನು ನಾವು ಭಾಸನಲ್ಲಿ ಕಾಣುತ್ತೇವೆಂದು ನಿಷ್ಪಕ್ಷಪಾತವಾಗಿ ಇಷ್ಟರವರೇಗೆ ಸಾಧಿಸಲು ಪ್ರಯತ್ನಿ ಸಿದ್ದೇವೆ. ಈತನ ಹದಿಮೂರು ನಾಟಕಗಳು (ಅನಂತಶಯನದಲ್ಲಿ ಮುದ್ರಿತ ವಾದವುಗಳು) ಪ್ರಥಿತಯಶಸ್ಕನೆಂದು ಕಾಲಿದಾಸನಿಂದ ಹೊಗಳಲ್ಪಟ್ಟ ಉದಾತ್ತ ನಾಟಕಗಳಾಗಿಯೇ ಇರಬೇಕೆಂಬ ಪಕ್ಷವನ್ನವಲಂಬಿಸಿ ಇಲ್ಲಿ ನಾವು ವಾದಿಸಿರು ವೆವು. ಏನೋ ಭಾಸನವೆಂದು ಉದಾಹರಿಸಲ್ಪಟ್ಟ ಪ್ರಸಿದ್ಧ ಶ್ಲೋಕಗಳು 'ಕಪಾಲೇ ಮಾರ್ಜಾರಃ ಪಯ ಇತಿ ಕರಾನ್ ಲೇಢಿ ಶಶಿನಃ' (ಮಮ್ಮಟನಲ್ಲಿ ಉದಾಹೃತ) ಎಂಬುದೂ–'ತ್ರೇತಾಯುಗಂ ನ ಖಲು ತದ್ಧಿ ನ ಮೈಥಿಲೀ ಸಾ' (ಅಭಿನವಗುಪ್ತ ನಾಟ್ಯಶಾಸ್ತ್ರದಲ್ಲಿ ಉದಾಹೃತ) —ಈ ನಾಟಕಗಳಲ್ಲಿ ದೊರಕಲಿಲ್ಲವೆಂಬ ಒಂದೇ ಮಾತಿನಿಂದ ಇವೆಲ್ಲವೂ ಭಾಸನ ನಾಟಕಗಳೇ ಅಲ್ಲವೆಂದು ನಾವು ಅಲ್ಲಗಳೆಯು ಕೂಡದೆಂದು ನಮ್ಮ ಅಭಿಪ್ರಾಯ. ಉದಯನನ ಸ್ವಪ್ನವನ್ನು ತೋರಿಸುವ ಅಂಕ, ಚಾರುದತ್ತದಲ್ಲಿ ವಿದೂಷಕನ ಸ್ವಪ್ನದ ಮಾತುಗಳು, ಇವುಗಳಿಗಿಂತಲೂ ವಿಶೇಷವಾಗಿ ಆಂಗ್ಲೇಯರಲ್ಲಿ ವಿಶ್ವಕವಿಯೆಂದು ಪ್ರಸಿದ್ಧನಾದ Shakespeare ನ ghostscene-ಪ್ರೇತಗಳ ದೃಶ್ಯವನ್ನೂ ಮಿಂಚಿ ವಿಶ್ವಸಾಹಿತ್ಯದಲ್ಲಿಯೇ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುವ ಯೋಗ್ಯತೆಯನ್ನೂ ಸುಲಭವಾಗಿಯೇ

ಪಡೆದಿರುವ ಬಾಲಚರಿತದ ಕಂಸನ ಸ್ವಪ್ನದ ದೃಶ್ಯ—ಬರೇ ಈ ಮೂರೇ ದೃಶ್ಯಗಳನ್ನು ಬರೆದ ನಾಟಕಕರ್ತನು ವಿಶ್ವಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದೇ ತೀರಬೇಕೆಂದು **'ಸಮಾನಧರ್ಮ'**ರಾದ ನನಗನಿಸುತ್ತದೆ. ಅವಿಮಾರಕ ನಾಟಕದಲ್ಲಿ ನಾಯಕನಾದ ಅವಿಮಾರಕನು ಗಂಧರ್ವನಿಂದ ಮಾಯಾ ಉಂಗುರವನ್ನು ಪಡೆದು ಅದೃಶ್ಯನಾದಂತೆ ನಮ್ಮ ಭಾಸನೂ ಯಾರೋ ಮಹನೀಯರ ಅನುಗ್ರಹದಿಂದ ಸಾಹಿತ್ಯಾಕಾಶದಲ್ಲಿಷ್ಟರವರೇಗೆ ಕಾಣಿಸದಿದ್ದಾನೆ. ನಮ್ಮ ಪ್ರಯತ್ನ ಫಲವಾಗಿ ಅವನಿನ್ನಾದರೂ ಧ್ರುವವಾದ ಸ್ಥಾನವನ್ನು ಪಡೆದು ಪ್ರಕಾಶಿಸಲಾರಂಭಿಸಿದರೆ ನಮ್ಮ ಪ್ರಯತ್ನವು ಸಫಲವಾದೀತೆಂದು ಆಶಿಸುವೆವು.

೧೬

ಭಾಸನ ಏಕಾಂಕ ನಾಟಕಗಳು

The approach of the oriental artist is that of forgetting his ego and mirroring an idea while that of the western artist is that of an individualist—Dr. C. P. Ramaswami Iyer. ನಮ್ಮ ಪೌರ್ವಾತ್ಯ ಕವಿಗಳು ತಮ್ಮ ಅಹಂತೆಯನ್ನು ಸಂಪೂರ್ಣವಾಗಿಮರೆಸಿ ಆಂತರೀಯಕ ಭಾವವನ್ನು ಬಿಂಬಿಸುವುದರಲ್ಲಿಯೇ ನಿರತರಾದರೆ, ಪಾಶ್ಚಾತ್ಯ ಕವಿಯು ತನ್ನ ವ್ಯಕ್ತಿಗತಗಳಾದ ಅಭಿಪ್ರಾಯಗಳನ್ನು ಮಂಡಿಸುವುದರಲ್ಲಿ ಬದ್ಧದೀಕ್ಷನಾಗುವನು ಎಂಬ ಈ ಮಹನೀಯರ ಅಭಿಪ್ರಾಯವನ್ನು ಅಕ್ಷರಶಃ ಭಾಸನಲ್ಲಿ ನಾವು ಕಾಣಬಹುದು. ಪಾಶ್ಚಾತ್ಯ ಕವಿಗಳು ಇತ್ತೀಚೆಗೆ ಚಿಕ್ಕ ಕಥೆಗಳನ್ನು (Short Stories) ಬರೆಯಲುಪಕ್ರಮಿಸಿ, ಒಂದೊಂದೇ ಸಣ್ಣ ಪುಟ್ಟ ಸಂದರ್ಭಗಳನ್ನಾಯ್ದು, ಅದರ ಆಧಾರದಿಂದ ಆಯಾ ನಾಯಕನ ಭಾವ ಪ್ರತಿಬಿಂಬವನ್ನು ಸಮಗ್ರವಾಗಿ ಸಾಧಿಸಲು ಪ್ರಯತ್ನಿಸುತ್ತಿದ್ದರೆ, 2000 ವರ್ಷಗಳ ಹಿಂದೆಯೇ ನಮ್ಮ ಭಾಸನು ಈ ತರದ ಏಕಾಂಕಗಳನ್ನಾಗಲೇ ರಚಿಸಿದ್ದನೆಂದರೆ ಆತನ ಪ್ರತಿಭೆಯ ವೈಶಾಲ್ಯವು ಒಡೆದುಕಾಣುವುದು.

ಸುತ್ತುಮುತ್ತಲಿನ ವಿಷಯಗಳನ್ನೆಲ್ಲಾ ಆಮೂಲಾಗ್ರವಾಗಿ ಗ್ರಹಿಸುವ ಅನ್ಯಾದೃಶವಾದ ಶಕ್ತಿಯಿಂದ ಯಾವುದಾದರೊಂದು ಸಂದರ್ಭವನ್ನು ಅವಯವಶಃ ಬಿಡಿಸಿ, ಅದರ ನೈಜ ಮತ್ತು ಆಂತರಿಕಗಳಾದ ಸಂದೇಶಗಳನ್ನು ಹೀರುವ ಶಕ್ತಿಯು ಇವನಲ್ಲಿ ನೆಲೆಗೊಂಡಿತ್ತು. ಘಟೋತ್ಕಚನೋ, ಕೃಷ್ಣನೋ, ಕರ್ಣನೋ, ದುರ್ಯೋಧನನೋ, ಅಭಿಮನ್ಯುವೋ ಅವರವರ ನಿರ್ದಿಷ್ಟವಾದ ಕೆಲಸಗಳನ್ನು ಸಾಂಗವಾಗಿ ನೆರವೇರಿಸಿ, ನಮ್ಮ ಕಣ್ಣಿನ ಮುಂದೆ ಆದರ್ಶ ಪಾತ್ರರಾಗಿ

ಶಾಶ್ವತವಾಗಿ ನೆಲೆಸಿಬಿಟ್ಟಿದ್ದಾರೆ. (ಪಂಚರಾತ್ರವು ಮೂರಂಕದ ನಾಟಕವಾದರೂ ಅದನ್ನು ನಾವು ಏಕಾಂಕದ ಸಾಲಿಗೆ ಸೇರಿಸುತ್ತೇವೆ. ಭರತನಾಟ್ಯ ಆದಿಗಳಿಂದ ನಿರ್ದಿಷ್ಟಗಳಾದ ನಾಟಕಗಳ ಕಾಲಾವಕಾಶ ಮಾನಗಳಿಂದ ಇವನ ಪ್ರತಿಭೆಯೇನೋ ಸ್ವಲ್ಪಮಟ್ಟಿಗೆ ಕುಂಠಿತವಾಗಿರಬಹುದೆಂದು ಒಪ್ಪಬಹುದು; ಆದರೆ ಅವುಗಳ ಸಾಮಾಜಿಕ ಹಿನ್ನೆಲೆಯೆಂಬುದು ಅತಿ ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿದೆಯೆಂಬುದರಲ್ಲಿ ಸಂದೇಹವೇ ಇಲ್ಲ. ದುರ್ಯೋಧನನ ದುಃಖವನ್ನೇ ಪ್ರತಿಬಿಂಬಿಸಿದ್ದರೂ ಮನುಷ್ಯರ ಸಾಮಾನ್ಯ ಕುಟುಂಬ ಜೀವನವನ್ನೂ ಮತ್ತು ಅಲ್ಲಿ ನಮ್ಮ ಪ್ರತಿಯೊಬ್ಬರ ಕರ್ತವ್ಯವನ್ನೂ ಯಥಾವತ್ತಾಗಿ ವಿವರಿಸಿ, ಸಮಾಜದಲ್ಲಿರಬಹುದಾದ ದೋಷಗಳನ್ನು ತಿದ್ದುವ ಪಳಗಿದ ಕೈಯನ್ನು ನಾವು ಅಲ್ಲಲ್ಲಿ ಕಾಣಬಹುದು. ಆಧುನಿಕ ಆಂಗ್ಲ ಸಾಹಿತಿಗಳಲ್ಲಿ ಈಗ ಕೆಲವರು Progressives ಅಥವಾ ಪುರೋಗಾಮಿಗಳೆಂದು ನಿರ್ದೇಶಿಸಲ್ಪಟ್ಟಿದ್ದರೆ, ಭಾಸನೂ ಆಗಲೇ ಈ ತರದ ಲೇಖಕರಿಗೆ ಮೇಲ್ಪಂಕ್ತಿಯನ್ನು ಹಾಕಿಟ್ಟಿದ್ದನೆಂದು ಧಾರಾಳವಾಗಿ ಹೇಳಬಹುದು. ಸಮಾಜದಲ್ಲಿರುವ ಕುಂದುಕೊರತೆಗಳನ್ನು ತಿದ್ದುವ ಉದಾತ್ತವಾದ ಧ್ಯೇಯವನ್ನು ಮುಂದಿಟ್ಟುಕೊಂಡೇ ಮಧ್ಯಮ ವ್ಯಾಯೋಗ ನಾಟಕವನ್ನು ಬರೆದುದೆಂದಾಗಲೇ ನಿರ್ದೇಶಿಸಿದ್ದೇವೆ. ಅಂದರೆ ಸಮಾಜದಲ್ಲಿ ಮಧ್ಯಮನಾದ ಮಗನಿಗೆ ತಂದೆಯ ಆಸ್ತಿಯಲ್ಲಿ ಕೋಡಿಲ್ಲದ ಎತ್ತು, ಒಂದು ಕಾಲಿಲ್ಲದ ಮಂಚ ಇತ್ಯಾದಿಗಳೇ ಲಭಿಸುತ್ತಿದ್ದಾಗ, ಈ ಸಂದರ್ಭವನ್ನು ಸಮಯೋಚಿತವಾಗಿ ಚಿತ್ರಿಸಿ, ಆಗಿನ ಕಾಲದ ಧರ್ಮಶಾಸ್ತ್ರಗಳಲ್ಲಿಯೇ ಕನಿಕರ ಹುಟ್ಟುವಂತೆ ಮಾಡಿ, ಯಾಜ್ಞವಲ್ಕ್ಯ ಮಹರ್ಷಿಗಳಿಂದ ಸಮಾಂಶವೇ ಅಣ್ಣತಮ್ಮಂದಿರಲ್ಲಿ ಎಲ್ಲೆಲ್ಲಿಯೂ ಆದರಿಸಲ್ಪಡುವಂತೆ ಮಾಡಿತು. ಪ್ರಾಯಶಃ ಆಂಗ್ಲಸಾಹಿತ್ಯದಲ್ಲಿ Sir Richard Steele (1671–1729) ಎಂಬಾತನ Tatler ಎಂಬ ಪ್ರಬಂಧಗಳಲ್ಲಿ ಈ ತರದ ಕುಶಾಗ್ರಬುದ್ಧಿಯನ್ನು ನಾವು ಕಾಣುತ್ತೇವೆಂದರೆ ತಪ್ಪಾಗದು. ಆದರೆ ಈತನು ನಾಟಕಗಳನ್ನು ಬರೆದಿಲ್ಲವೆಂದೆಲ್ಲರಿಗೂ ಗೊತ್ತೇ ಇದೆ. ಭಾಸನಾದರೋ ತನ್ನ ಕಥೆಗಳನ್ನು ಹೇಳುವಾಗ ಭಾವಾಭಿನಿವೇಶ, ಮನೋದಾರ್ಢ್ಯ, ಉದಾತ್ತ ಆಶಯ, ಧಾರ್ಮಿಕವಾದ ಕೋಪಗಳಿಂದ ಉತ್ತಪ್ತನಾಗಿ ಮಾರ್ಮಿಕವಾದ, ರೀತಿಯಲ್ಲಿ ಸಮಾಜ ದೋಷಗಳನ್ನು ಚಿತ್ರಿಸುವುದನ್ನು ಕಂಡು ನಾವು ಚಮತ್ಕೃತರಾಗುತ್ತೇವೆ.

ಮಧ್ಯಮ ವ್ಯಾಯೋಗದಲ್ಲಿ ಮೊಟ್ಟಮೊದಲು ನಾವು ಘಟೋತ್ಕಚನ ಚಿತ್ರವನ್ನು ಕಂಡು ಚಕಿತರಾಗುತ್ತೇವೇನೋ ನಿಜ; ಇದನ್ನಾಗಲೇ ನಾವು

ಸರಿಯಾಗಿ ವರ್ಣಿಸಿದ್ದರಿಂದ ಅದರ ಗೋಜಿಗೀಗ ಹೋಗಬಯಸುವುದಿಲ್ಲ. ಆದರೆ ವ್ಯಂಗ್ಯವಾಗಿ ಇಲ್ಲಿ ಬಂದ ಹಿಡಿಂಬೆಯ ಚಿತ್ರಣವು ಅಚ್ಚಳಿಯದೆ ನಮ್ಮ ಮನಸ್ಸನ್ನು ಸೂರೆಗೊಳ್ಳುವುದು. ಅವಳೀಗ ರಾಕ್ಷಸಿಯಾಗಿದ್ದರೂ ಗಂಡನನ್ನು ಅಗ್ರಾಮ್ಯವಾದ ರೀತಿಯಲ್ಲಿ ಮನೆಗೆ ಕರೆಸುವಳೆಂಬ ವಿಷಯವನ್ನೂ ನಾವಾವಾಗಲೇ ಇನ್ನೊಂದೆಡೆ ವಿಶದಿಸಿದ್ದಾಗಿದೆ. ಇದೇ ಘಟೋತ್ಕಚನು ' ದೂತ ಘಟೋತ್ಕಚದ ನಾಯಕನು ; ಆತನು ದುರ್ಯೋಧನನ ಶಿಬಿರಕ್ಕೆ ಶಾಂತಿದೂತನಾಗಿ (Ambassador) ತೆರಳಿ ಶಾಂತಿಯ ಸಂದೇಶವನ್ನೂ ' ಅಭಿಮನ್ಯುವಿನ ಮರಣದಿಂದ ಸಂತಪ್ತನಾದ ಅರ್ಜುನನ ಶಪಥವನ್ನೂ ವೈರಿಗಳ ಮಧ್ಯದಲ್ಲಿ —ಸಿಂಹವು ಗರ್ಜಿಸುವಂತೆ–ಸಾರಿ ಹಿಂದೆ ಬರುವ ಸಂದರ್ಭವೆಂದರೆ ಸಾಹಿತ್ಯಾಕಾಶದಲ್ಲಿ ಸ್ವರ್ಣಾಕ್ಷರಗಳಲ್ಲಿ ಕೆತ್ತಿಡಲ್ಪಡಬೇಕಾದ್ದೆಂದರೆ ಅತಿಶಯೋಕ್ತಿಯಲ್ಲ. ಈ ಸಂದರ್ಭದಲ್ಲಿ ಅಭಿಮನ್ಯುವಿಗೂ ತನಗೂ ಎತ್ತಿ ತೋರಿಸಿದ ಭೇದವು ಮಾರ್ಮಿಕವಾಗಿದೆ. ಕರ್ಣ ಶಕುನಿ ದುಃಶಾಸನಾದಿಗಳು ಆತನನ್ನು ಅಲ್ಲಿಯೇ ಕೊಲ್ಲಲು ತಯಾರಾಗಿದ್ದರೂ, ದೂತರಲ್ಲಿ ಮರ್ಯಾದೆಯನ್ನು ಪ್ರಕಟಿಸುವ ವ್ಯಾಜದಿಂದ ನಿನ್ನನ್ನು ಕೊಲ್ಲದೆ ಬಿಟ್ಟಿದ್ದೇವೆಂದು ಜಂಭಕೊಚ್ಚಿಕೊಳ್ಳಲು, 'ನಾನು ಚಿಕ್ಕ ಹುಡುಗನೆಂದು ನನ್ನನ್ನಲ್ಲಗಳೆಯಬೇಡಿ ; ಅಭಿಮನ್ಯುವಿಗೂ ನನಗೂ ಪ್ರಾಯವೇನೋ ಒಂದೇ ಆಗಿದ್ದರೂ, ಆತನೇನೋ ಬಾಣದ ನಾಣು ಕತ್ತರಿಸಲ್ಪಟ್ಟು ನಿಃಶಸ್ತ್ರನಾಗಿ ಅಸಹಾಯಕನಾಗಿರಬಹುದು ; ಆದರೆ ನಾನು ಹಲ್ಲು ಕಡಿದು ಬರೇ ಮುಷ್ಟಿಪ್ರಹಾರಗಳಿಂದ, ನಿಮ್ಮೆಲ್ಲರನ್ನೂ ಏಕಕಾಲದಲ್ಲಿ ಎದುರಿಸಿ, ಯಮಪುರಿಗಟ್ಟುವೆನು' ಎಂದು ಹೇಳಿದ ಮಾತನ್ನು ಕೇಳುವಾಗ ಯಾವಾತನ ಮನಸ್ಸು ವೀರಾವೇಶದಿಂದ ಕುಣಿಯುವುದಿಲ್ಲ ? ಹಾಗೆಯೇ ಮಾಡಲೂ ತಯಾರಿದ್ದ. ಆದರೆ ಅಜ್ಜನಾದ ಧೃತರಾಷ್ಟ್ರನ ಮಾತಿನಿಂದ ದೂತನಾಗಿಯೇ ಉಳಿಯಬೇಕಾಯಿತು. ಅದರನಂತರ ಅವರೆಲ್ಲಾ 'ರಾಕ್ಷಸನಲ್ಲವೋ ನೀನು' ಎಂದು ಮೂದಲಿಸಿದಾಗ ಕೊಂಚವೂ ಅಪ್ರತಿಭನಾಗದೆ 'ತಮ್ಮಂದಿರ ಹೆಂಡಂದಿರ ಸೀರೆಗಳನ್ನು ಎಳೆಯಲು ಹೇಸದ ರಾಕ್ಷಸ ನಾನಲ್ಲ ; ತಮ್ಮಂದಿರನ್ನು ಅರಗಿನ ಮನೆಯಲ್ಲಿ ನಿಃಶಂಕವಾಗಿ ಮಲಗಿದ್ದಾಗ ಅವರಿದ್ದ ಮನೆಗೆ ಬೆಂಕಿ ಇಟ್ಟ ರಾಕ್ಷಸ ನಾನಲ್ಲ ; ತಮ್ಮಂದಿರ ಚಿಕ್ಕ ಹಸುಳೆಗಳನ್ನು ಕೊಲ್ಲಲ್ಲು ಹೇಸದ ರಾಕ್ಷಸ ನಾನಲ್ಲ' ಎಂದು ಹೇಳುವುದನ್ನು ಕೇಳುವಾಗ ನಮ್ಮ ರಕ್ತವು ಕುದಿಯಲಾರಂಭಿಸುವುದು. ಹೀಗಾಗಿ ಈ 'ಕೌರವಕುಲದಾವಾನಲ'ನಿಗೆರಡು ಏಕಾಂಕ ನಾಟಕಗಳನ್ನು ಸಮರ್ಪಿಸಿ, ವೇದವ್ಯಾಸರೇ ಪಾಂಡವರನ್ನು ಮಾತ್ರ ಹೊಗಳಿ ಸಂತೃಪ್ತರಾಗಿದ್ದರೆ, ಭಾಸನು ಈ 'ಅಭಿಮನ್ಯು ಘಟೋತ್ಕಚ

ರೆಂಬ ಪಾಂಡವಪುತ್ರರನ್ನೂ ಮತ್ತು ಊರುಭಂಗದಲ್ಲಿ ದುರ್ಯೋಧನನ ಪುತ್ರನಾದ ದುರ್ಜಯನನ್ನೂ, ನಿಷ್ಪಕ್ಷಪಾತವಾಗಿ ಕೌರವ ಪಾಂಡವರಿಬ್ಬರ ಮಕ್ಕಳನ್ನು ನಮ್ಮ ಕಣ್ಣೆದುರು ಅಚ್ಚಳಿಯದಂತೆ ನಿಲ್ಲಿಸುವನು. ಕರ್ಣಭಾರದಲ್ಲಿ ಕರ್ಣನ ಮನಸ್ಸಿನ ಮಡುಗಡಗಳನ್ನೊಂದೊಂದಾಗಿ ಬಿಡಿಸಿ, XRay ಫೋಟೋವಿನಿಂದ ಹೃದಯದಂತರಾಲದಲ್ಲಿ ಸಂದುಸಂದುಗಳಲ್ಲಿರುವ ಅಭಿಪ್ರಾಯಗಳನ್ನು ವಿಶದೀಕರಿಸಿ ನಮ್ಮೆದುರಿನಲ್ಲಿ ಕರ್ಣನನ್ನೇ ನಿಲ್ಲಿಸಿದಂತಿದೆ. ಊರುಭಂಗವು ಸಂಸ್ಕೃತ ಸಾಹಿತ್ಯದಲ್ಲಿಯೇ—ವಿಶ್ವಸಾಹಿತ್ಯದಲ್ಲಿ ಎಂದರೂ ತಪ್ಪಾಗದು–ಅತ್ಯುತ್ಕೃಷ್ಟವಾದ ಸ್ಥಾನವನ್ನು ಹೊಂದಿ, ಕರುಣರಸ ಚಿತ್ರಣದಲ್ಲಿ ಭವಭೂತಿಗೂ ಮಾರ್ಗದರ್ಶಿಯಾಗಿದೆಯೆಂದು ನಮ್ಮ ಅಭಿಪ್ರಾಯ. ದೂತವಾಕ್ಯದಲ್ಲಿ ಶ್ರೀಕೃಷ್ಣನು ಒಳಗೆ ಹೊಕ್ಕಿದೊಡನೆಯೇ ದ್ರೌಪದೀವಸ್ತ್ರಾಪಹಾರದ ಚಿತ್ರವನ್ನು ದುರ್ಯೋಧನನು ನೋಡುತ್ತ ತಲ್ಲೀನನಾಗಿದ್ದಂತೆ ನಟಿಸಿ ಬೇಕೆಂದೇ ಏಳದೇ ಕುಳಿತಿದ್ದಾಗ 'ಏನಿದು! ಬಾಲಿಶನಾಗಿ ಸ್ವಜನರ ಅವಮಾನವನ್ನೇ ನೋಡುತ್ತಿರುವನಲ್ಲಾ!' ಎಂದು ಅವನನ್ನೇ ಹೀಯಾಳಿಸಿ, 'ಆ ಚಿತ್ರವನ್ನು ಇಲ್ಲಿಂದೀಗಲೇ ತೆಗೆದುಕೊಂಡು ಹೋಗು' ಎಂದು ಸ್ವತಹ ತಾನೇ ಅಲ್ಲಿಯ ಯಜಮಾನನೋ ಎಂಬ ರೀತಿಯಲ್ಲಿ ಆಜ್ಞಾಪಿಸಿದವನು ಅಂತ್ಯದವರೇಗೂ ನಮ್ಮ ಹೃದಯಾಕಾಶದಲ್ಲಿ ತಾಂಡವವನ್ನಾಡುತ್ತಾ ಸಾಮ್ರಾಜ್ಯದ ಡೇರೆಯನ್ನೇ ನಾಟಿಸಿರುವನೆಂದರೂ ತಪ್ಪಾಗದು.

ಹೀಗೆ ಐದು ಚಿಕ್ಕ ಏಕಾಂಕಗಳಲ್ಲಿ ಇಡೀ ಭಾರತ ಯುದ್ಧವನ್ನು ಸಂಕ್ಷೇಪವಾಗಿ ಚಿತ್ರಿಸಿಯೂ ತೃಪ್ತನಾಗದ ಈ ಕವಿಶ್ರೇಷ್ಠನು, ಭಾರತವನ್ನು ಬರೆದೂ ತೃಪ್ತನಾಗದ ವೇದವ್ಯಾಸರ ಮನಸ್ಸಿನಂತೆ, (ನಾರದರ ಪ್ರೇರಣೆಯಿಂದ ಪುರಾಣಶ್ರೇಷ್ಠವಾದ ಭಾಗವತವನ್ನು ಅನುಗ್ರಹಿಸಿದಂತೆ) ಪಂಚರಾತ್ರವನ್ನು ಬರೆದು ವಿಶ್ವಶಾಂತಿಯ ಸಂದೇಶವನ್ನೇ ಸಾರುವಂತಿದೆ. ಯುದ್ಧದ ಎಡೆಯಲ್ಲಿಯೂ ಘಟೋತ್ಕಚನೇ ಈ ಮಂತ್ರವನ್ನು ಧೃತರಾಷ್ಟ್ರನ ಎದುರಿನಲ್ಲಿಯೇ 'ನಾವೆಲ್ಲಾ 105 ಜನರೂ **ಪಂಚೋತ್ತರಂ ಶತಂ** ಎಂದೊಂದಾಗಿರುವಾ' ಎಂದು ಜಪಿಸಿದಾಗ ಅದನ್ನು ದುರ್ಯೋಧನ ಆಗ ಅಲ್ಲಗಳೆದು ಬಿಟ್ಟದ್ದನಲ್ಲವೇ? ಈ ಪಂಚರಾತ್ರದಲ್ಲಿ ಹೊಸದಾದ ಪಂಚರಾತ್ರಯಜ್ಞವೊಂದನ್ನು ದುರ್ಯೋಧನನಿಂದಾರಂಭಿಸಿ, ಅದರ ಅವಭೃಥದ ಸಂದರ್ಭದಲ್ಲಿ 'ಬೇಕಾದ್ದನ್ನು ಗುರುದಕ್ಷಿಣೆಯಾಗಿ ಕೊಡಲು ತಯಾರು' ಎಂದು ದುರ್ಯೋಧನನು ಕುರುಕುಲಗುರುವಾದ ದ್ರೋಣನನ್ನು ಯಾಚಿಸುವಂತೆ ಪ್ರೇರಿಸುವನು. ಈ ಪಂಚರಾತ್ರಯಜ್ಞದ ಫಲವಾಗಿ ಕೌರವ ಪಾಂಡವರೆಲ್ಲ ಒಂದಾಗಿ, ಪಂಚೋತ್ತರಶತವಾಗಿ, ನೆಲೆನಾಟಲನುಕೂಲ

ನಾಯಿತು. ಒಂದೇ ಕುಟುಂಬದಲ್ಲಿ ಒಡಕುಬುದ್ಧಿಗಳಿರದೆ, ಅಣ್ಣತಮ್ಮಂದಿರೆಲ್ಲರೂ ಐಕಮತ್ಯದಿಂದಿಲ್ಲದಿದ್ದರೆ ದೊಡ್ಡ ದೊಡ್ಡ ರಾಜರ ಅರಮನೆಗಳೂ ಅರ್ಧಮನೆಗಳಾಗಿಯೇ ಉಳಿಯುವುವು, ಸಣ್ಣ ಬಡವರ ಗುಡಿಸಲುಗಳಂತವೂ ಕೂಡ ಅರಮನೆಗಳಿಗಿಂತಲೂ ಹೆಚ್ಚಿನ ಸುಖ ಸಂತೋಷಗಳ ಬೀಡುಗಳಾಗವೆಂಬುದೇ ಭಾಸನ ಅತಿ ಮುಖ್ಯವಾದ ಸಂದೇಶ.

೧೭

ಭಾಸನ ಪಾತ್ರಗಳ ವೈಶಿಷ್ಟ್ಯ

Dr. Ryder ಎಂಬ ಮಹನೀಯರ ಅಭಿಪ್ರಾಯವಿದು-Sudraka's characters take rank easily with the citizens of the world—ಅಂದರೆ ಶೂದ್ರಕನ ಪಾತ್ರಗಳು ಲೋಕದ ನಾಗರಿಕರೊಡನೆ ಸಮಾನವಾದ ಸ್ಥಾನವನ್ನು ಹೊಂದುವ ಯೋಗ್ಯತೆಗಳುಳ್ಳವು. ಈ ಮಾತು ಮೊಟ್ಟಮೊದಲು ಶೂದ್ರಕನ ಗುರುವಾದ ಭಾಸನಿಗೆ ಅನ್ವಯಿಸಿ, ಆದರನಂತರ ಶೂದ್ರಕನಿಗೆ ಅನ್ವಯಿಸತಕ್ಕದ್ದೆಂದು ನಾವು ಹೇಳುವೆವು. ಇದೇ ಮಹನೀಯರಿನ್ನೊಂದೆಡೆ 'Sudraka's story runs from force to tragedy, from satire to pathos, with a breadth truly Shakespearean' ಅರ್ಥಾತ್ ಈ ಶೂದ್ರಕನ ಕಥೆಯು ಪ್ರಹಸನದಿಂದ ದುರಂತಕ್ಕೆ, ನಂಜಿನಿಂದ ಕರುಣಾರಸದ ಉಚ್ಚಮಟ್ಟಕ್ಕೆ, ವಿಶ್ವಕವಿಯಾದ ಶೇಕ್ಸ್‌ಪೀಯರನ ವೈಶಾಲ್ಯದಿಂದ ಸುಲಭವಾಗಿ ಸಂಚರಿಸುವುದು. ಇದೇ ಉದಾತ್ತ ವಿಮರ್ಶಕನ ಇನ್ನೊಂದು ವಾಕ್ಯವನ್ನು ಉದಾಹರಿಸಬಹುದು-His humour is the third of his vitally distinguishing qualities; it has an American flavour in its puns and in its situations-ಈತನ ಹಾಸ್ಯವು ಇವನ ವಿಶಿಷ್ಟವಾದ ಗುಣಗಳಲ್ಲಿ ಮೂರನೆಯದು—ಶ್ಲೇಷ ಮತ್ತು ಸಂದರ್ಭಗಳನ್ನೂ ಸರಿಯಾಗಿ ಜೋಡಿಸಿ ಅದಕ್ಕೆ ಅಮೇರಿಕ ದೇಶದವರ ಹಾಸ್ಯದಷ್ಟೇ ಉಚ್ಚಮಟ್ಟವನ್ನೇರುವುದು.

Dr. Johnston ಎಂಬ ಇನ್ನೊಬ್ಬ ವಿಮರ್ಶಕನ ಅಭಿಪ್ರಾಯವನ್ನು ಇಲ್ಲಿ ಉದಾಹರಿಸೋಣ. ಈತನ ಅಭಿಪ್ರಾಯ ಪ್ರಕಾರ ಚಾರುದತ್ತದಲ್ಲಿರುವ ಸಂಭಾಷಣೆಗಳು ಸಂಕ್ಷಿಪ್ತಗಳಾಗಿ, ರಸಭರಿತಗಳಾಗಿ, ಹಾಸ್ಯಜನಕಗಳಾಗಿ ಉದಾತ್ತ

ನಾದ ಭಾಷೆಯಲ್ಲಿ ಪೋಣಿಸಲ್ಪಟ್ಟಿವೆ—with sharper outlines, the conversation (crisper, wittier and more idiomatic than perhaps in the whole range of Samskrit literature)that ofcultured gosthital refined to a high degree—ಇಡೀ ಸಂಸ್ಕೃತ ಸಾಹಿತ್ಯದಲ್ಲಿಯೇ ಈ ತರದ ಅತ್ಯುದಾತ್ತಗಳಾದ ಗೋಷ್ಠಿಗಳ ಮನೋರಂಜಕಗಳಾದ ಸಂಭಾಷಣೆಯನ್ನು ನಾವೆಲ್ಲಿಯೂ ಕಾಣಲಾರೆವು.

ಒಂದೆರಡು ಉದಾಹರಣೆಗಳಿಂದ ಈ ಅಭಿಪ್ರಾಯಗಳನ್ನು ವಿಶದೀಕರಿಸಲು ಪ್ರಯತ್ನಿಸುವೆವು. ಚಾರುದತ್ತ ನಾಟಕದ ವಸಂತಸೇನೆಯ ಗುಣಗಳನ್ನು ಪರಿಶೀಲಿಸಿದರೆ ವಸಂತಸೇನೆಯಂಥ ಹೆಂಗಸರು ಈಗಲೂ (ಆದರೆ ಅಂಥವರು ಯಾವ ಕಾಲದಲ್ಲಿಯೂ ಅತಿ ವಿರಳರು) ಸಮಾಜದಲ್ಲಿ ದೊರಕಬಹುದು. ಆದರೆ ಅವಳ ವೈಶಿಷ್ಟ್ಯವೇನೆಂದರೆ, ಅವಳೇ ಸ್ವತಹಾ ಧೈರ್ಯವಾಗಿ ಒಬ್ಬಳೇ ನಾಯಕನನ್ನು ಹುಡುಕಲು ಹೊರಡುವಳು. ಸಂಸ್ಕೃತ ನಾಟಕಗಳಲ್ಲಿಯೂ, ಹೆಚ್ಚೇಕೆ, ನಮ್ಮ ಸಮಾಜದಲ್ಲಿ ಸ್ವಾಭಾವಿಕವಾಗಿ ಕಂಡುಬರುವುದೆಂದರೆ ನಾಯಕರೇ ನಾಯಕಿಯನ್ನು ಹುಡುಕಿಕೊಂಡು ಹೋಗುವುದು, ಇಲ್ಲಿಯಾದರೊ ಅತ್ಯಾಧುನಿಕ ಸಮಾಜದವರಲ್ಲಿಯೂ ಕೆಲವೇ ಕಡೆಗಳಲ್ಲಿ ಕಂಡುಬರುವಂತೆ ಹೆಂಗಸೇ ಕಾಮಿಸಿಕೊಂಡು ಹೋಗುವ ಸನ್ನಿವೇಶ ಅನ್ಯಾದೃಶವಾಗಿದೆಯೆಂದು ಹೇಳಬೇಕು. ಹೀಗಿದ್ದ ವಸಂತಸೇನೆಯು ವೇಶ್ಯೆಯಾಗಿದ್ದು ನಡತೆಯಲ್ಲಿ ಪತಿವ್ರತೆಯರ ಸಾಲಿನೊಳಗೂ ಸೇರಲು ಯೋಗ್ಯತೆಯನ್ನು ಪಡೆದುದು ಅತ್ಯಪೂರ್ವವಾಗಿದೆಯೆಂದೂ ಒಪ್ಪಲೇಬೇಕಾಗಿದೆ. ಪ್ರಾಯಶಃ ಇವಳ ಗುಣನಡತೆಗಳನ್ನನುಸರಿಸಿಯೇ ಕಾಲಿದಾಸನು ವಿಕ್ರಮೋರ್ವಶೀಯ ನಾಟಕದಲ್ಲಿ ಊರ್ವಶಿಯ ಪಾತ್ರವನ್ನು ಸೃಷ್ಟಿಸಿರಬಹುದೆಂದು ಹೇಳಿದರೂ ತಪ್ಪಾಗದು.

ಚಾರುದತ್ತನೆಂದರೆ ಬ್ರಾಹ್ಮಣನಾಗಿದ್ದರೂ ವೈಶ್ಯವೃತ್ತಿಯನ್ನವಲಂಬಿಸಿ, ವೈಶ್ಯರಿಗೇ ಮನುಸ್ಮೃತಿಯ ಪ್ರಕಾರ ಮೀಸಲಿಟ್ಟ ದತ್ತವೆಂಬ ಹೆಸರನ್ನೂ ಇದ್ದವನು. ಆಗರ್ಭಶ್ರೀಮಂತನಾಗಿ, ಸಚ್ಚರಿತ್ರನಾಗಿದ್ದರೂ, ದಾನಶೂರಕರ್ಣನಷ್ಟೇ ಪ್ರಸಿದ್ಧನಾಗಿ ಬಡತನದಲ್ಲಿ ಕೊಡುಗೈಯಾಗಿಯೇ ಚಿತ್ರಿಸಲ್ಪಟ್ಟಿರುವನು. ಎರಡನೇ ಅಂಕದಲ್ಲಿ ಮಾವುತನ ಪರಾಕ್ರಮವನ್ನು ಕಂಡು ಸಂತುಷ್ಟನಾಗಿ ಅಭ್ಯಾಸವಶದಿಂದ ಭಂಗಾರದ ಬಳೆಗಳಿದ್ದ ಮಣಿಗಂಟಿನ ಸ್ಥಳವನ್ನು ಪರೀಕ್ಷಿಸಿ, ಬರಿದಾಗಿರಲು, ಮೈಮೇಲಿದ್ದ ಉತ್ತರೀಯವನ್ನಾದರೂ ಎತ್ತಿ ಸಂತೋಷವಾಗಿ ಕೊಟ್ಟು, ತಾನು ಬರೇ ಮೈಬಿಟ್ಟುಕೊಂಡು ಹೊರಟ ಸುಕುಮಾರ ಸುಂದರವ್ಯಕ್ತಿ.* ಸಮುದ್ರವು

ಹೇಗೆ ನತ್ನಾಕರನಾಗಿರುವುದೋ ಹಾಗೆಯೇ ರತ್ನಾಕರನಾಗಿದ್ದ ಈ ಮಹಾತ್ಮನಿಗೆ ಹಣವಿಲ್ಲವೆಂದು ವ್ಯಸನವಲ್ಲ, ಆದರೆ ಇವನ ಸಾರವನ್ನೆಲ್ಲ ಹೀರಿ, ಹಣ್ಣಿನ ಸಿಪ್ಪೆಯನ್ನು ಉಪೇಕ್ಷಿಸುವಂತೆ, ಜನಗೆಲ್ಲರೂ ಈತನ ಸೌಹೃದವನ್ನೂ ಕೂಡ ಈಗ ಅಪೇಕ್ಷಿಸುವುದಿಲ್ಲವೆಂಬುದೊಂದೇ ಇವನ ದುಃಖವಾಗಿತ್ತು. ಆಗಿನ ಬಡತನ ದಲ್ಲಿಯೂ ಸಂಗೀತಪ್ರಿಯನಾಗಿದ್ದು ಕೆಲವು ಸಂಗೀತ ಕಚೇರಿಗಳಿಗೂ ಹೋಗುವ ಅಭ್ಯಾಸವನ್ನಿಟ್ಟುಕೊಂಡಿದ್ದನು. ಪ್ರಾಯಶಃ ಆಗಿನ ಕಾಲದಲ್ಲಿ ಇವುಗಳಿಗೆ ಪ್ರತ್ಯೇಕ ದುಡ್ಡು ಕೊಟ್ಟು ಈಗಿನ ಕ್ರಮದಂತೆ ಟಿಕೆಟು ಪಡಕೊಂಡವರೇ ಮಾತ್ರ ಹೋಗುವುದೆಂಬ ರೂಢಿಯು ಇನ್ನೂ ಬಳಕೆಯಲ್ಲಿ ಬಂದಿದ್ದಿಲ್ಲವೆಂತಲೇ ಊಹಿಸ ಬೇಕಾಗುತ್ತದೆ. ಅದಂತಿರಲಿ, ಇವನಲ್ಲಿ ಒತ್ತೆಯಾಗಿಟ್ಟ ಆಭರಣಗಳನ್ನು ಕಳ್ಳನು ಕದ್ದುಕೊಂಡು ಹೋದಾಗ, ಧರ್ಮಶಾಸ್ತ್ರ ನಿಯಮಗಳ ಪ್ರಕಾರ ಅದನ್ನೋ ಅಥವಾ ಮೂಲ್ಯವನ್ನೋ ಹೇಗಾದರೂ ಮಾಡಿ ಹಿಂದೆ ಕಳುಹಿಸಿಯೇ ತೀರ ಬೇಕೆಂದು ದೃಢಸಂಕಲ್ಪಮಾಡಿಕೊಂಡನು. ನಾರದಸ್ಮೃತಿ III 12ರ ಪ್ರಕಾರ,

> ಚೋರೈಃ ಹೃತಂ ಜಲೇ ಮಗ್ನಂ ಅಗ್ನಿನಾ ದಗ್ಧಮೇವ ಚ ।
> ನ ದದ್ಯಾದ್ಯದಿ ತಸ್ಮಾತ್ ನ ಸಂಹರತಿ ಕಿಂಚನ ॥

ನ್ಯಾಸವಾಗಿಡಲ್ಪಟ್ಟ ಆಭರಣಗಳನ್ನು ಕಳ್ಳನು ಕದ್ದುಕೊಂಡು ಹೋದರೆ ಅವು ಗಳನ್ನು ಹಿಂದೆ ಕೊಡದಿದ್ದರೆ ಅದರಿಂದ ಸಮಾಜದಲ್ಲಿ ಪ್ರತಿಷ್ಠೆ ಅಥವಾ ಮರ್ಯಾದೆಯು ಕಡಿಮೆಯಾಗಲಾರದೆಂದು ಸ್ಪಷ್ಟವಾಗಿ ಸಾರಿದ್ದರೂ, ಭಾಸನ ಕಾಲದಲ್ಲಿ ಆ ನಿಯಮವು ಇನ್ನೂ ಜಾರಿಯಲ್ಲಿ ಬಂದಿದ್ದಿರಲಾರದೆಂದೇ ನಾವು ಊಹಿಸಬೇಕಾಗುತ್ತದೆ. ಹೀಗಾಗಿ ಧರ್ಮಶಾಸ್ತ್ರ ಚರಿತ್ರವನ್ನು ಬರೆದ ಮಹಾ ಮಹೋಪಾಧ್ಯಾಯ ಪಾಂಡುರಂಗ ವಾಮನ ಕಾಣೆ ಮಹಾಶಯರ ಮತವನ್ನನು ಸರಿಸಿದರೂ ಭಾಸನು ಕ್ರಿಸ್ತುವು ಹುಟ್ಟುವದಕ್ಕಿಂತಲೂ ಪೂರ್ವದಲ್ಲಿಯೇ ಇದ್ದಿರ ಬೇಕೆಂತಲೇ ಒಪ್ಪಬೇಕಾಗುತ್ತದೆ. ಇದು ಮಾತ್ರವಲ್ಲ, ಕ್ರಿಸ್ತುವಿನ ಅನಂತರ ಬಂದ ಧರ್ಮಶಾಸ್ತ್ರಕಾರರೆಲ್ಲಾ ಏಕಕಂಠದಿಂದ **'ಕಲಿವರ್ಜ್ಯ'**ಗಳೆಂದು ಎತ್ತಿ ತೋರಿಸಿದ ಧರ್ಮಾತಿಕ್ರಮಗಳಲ್ಲಿ ಅನೇಕ ಸಂಪ್ರದಾಯಗಳು ಭಾಸನ ಕಾಲದಲ್ಲಿ ಇನ್ನೂ ಕಲಿವರ್ಜ್ಯಗಳಾಗಿರಲಿಲ್ಲವೆಂದೇ ಅಂಗೀಕರಿಸಬೇಕಾಗುತ್ತದೆ. ಉದಾಹರ ಣಾರ್ಥವಾಗಿ ಚಾರುದತ್ತನಿಗೆ ವೇಶ್ಯೆಯನ್ನು ಮದುವೆಯಾದುದರಿಂದ ಸಮಾಜದಲ್ಲಿ ಅದರ ಮೇಲೆ ಯಾವ ತರದ ಗೌರವಹಾನಿಯೂ ಉಂಟಾಗಲಿಲ್ಲವೆಂಬುದು ಚಾರುದತ್ತದಿಂದ (ವಿಶೇಷವಾಗಿ ಮೃಚ್ಛಕಟಿಕದಿಂದ) ನಮಗೆ ತಿಳಿದುಬರುತ್ತದೆ. ಕ್ರಿಸ್ತುವಿನ ಪೂರ್ವದಲ್ಲಿ ಬ್ರಾಹ್ಮಣನು ಕೆಳಗಿನ ಮೂರು ಜಾತಿಯ ಹೆಂಗಸರನ್ನೂ

ಸ್ಮೃತಿ ಪ್ರಕಾರವಾಗಿಯೇ ಮದುವೆಯಾಗುವುದರಲ್ಲಿ ಯಾವ ತರದ ತಡೆಯೂ ಇದ್ದಿಲ್ಲವೆಂದು ಕಾಣೆ ಮಹಾಶಯರೇ ಒಪ್ಪುತ್ತಾರೆ. ಕ್ರಿಸ್ತುವಿನ ನಂತರ ಏಳನೆಯ ಶತಮಾನದಲ್ಲಿಯೂ ಬಾಣನಿಗೆ ಪಾರಶವ ಭ್ರಾತ (ಕೆಳಗಿನ ಜಾತಿಯ ಹೆಂಡತಿ–ತಾಯಿಯ ಸವತಿಯಲ್ಲಿ ಹುಟ್ಟಿದ ಸಹೋದರ)ನಿದ್ದನೆಂದು ನಾವು ಹರ್ಷ ಚರಿತದಲ್ಲಿ ಓದಿದರೂ ಕ್ರಿಸ್ತುವಿನನಂತರ ಇದು ಆ ತರದ ಹೀನಜಾತಿಯ ಹೆಂಡತಿ ಯನ್ನು ಮದುವೆಮಾಡಿಕೊಂಡವನಿಗೆ ಸಮಾಜದಲ್ಲಿ ಗೌರವವನ್ನು ಸ್ವಲ್ಪವಟ್ಟಿಗಾ ದರೂ ಕಡಿಮೆ ಮಾಡಿತೆಂದೇ ನಾವು ಆಗಿನ ಕಾಲದ ಇತಿಹಾಸದಿಂದಲೋ ಅಥವಾ ಶಿಲಾಶಾಸನಗಳಿಂದಲೋ ತಿಳಿಯುತ್ತೇವೆ. ಶಾಕುಂತಲದಲ್ಲಿಯಾದರೋ ಈ ತರದ ನಿರ್ಬಂಧಗಳಿನ್ನೂ ಏರ್ಪಟ್ಟಿದ್ದಿಲ್ಲವೆಂಬುದನ್ನು 'ಅಸವರ್ಣ ಕ್ಷೇತ್ರಸಂಭ ವಾಂ' ಎಂಬ ಪದದಿಂದಲೋ, ಅಥವಾ ಮಾಲವಿಕಾಗ್ನಿಮಿತ್ರದಲ್ಲಿ ಧಾರಿಣಿಯ 'ವರ್ಣಾವರಃ ಭ್ರಾತೃ'ವಾದ ವೀರಸೇನನು ಅಗ್ನಿಮಿತ್ರನ ಸೇನಾಪತಿಯಾಗಿ ಮಾನಿತನಾಗಿದ್ದನೆಂದು ಓದುವಾಗ ನಮಗೆ ಗೊತ್ತಾಗುವುದು. ಚಾರುದತ್ತ ದಲ್ಲಿಯೂ ಇದೇ ತರದ ಕ್ರಿಸ್ತುವಿನ ಪೂರ್ವದ ಶತಮಾನದ ಭಾರತೀಯ ಸಮಾಜವೇ ಪ್ರತಿಬಿಂಬಿತವಾಗಿದೆಯೆಂದೇ ನಮಗನಿಸುತ್ತದೆ. ಇದೇ ರೀತಿಯಲ್ಲಿ ಗೌತಮಾದಿ ಅತಿಪ್ರಾಚೀನ ಧರ್ಮಶಾಸ್ತ್ರಕಾರರು ಕಳ್ಳತನಕ್ಕೆ ಮರಣದಂಡನೆ ಯನ್ನೇ ವಿಧಿಸಿ, ಕಾಳಿದಾಸನೇ ರಘುವಂಶದ ಒಂದನೆಯ ಸರ್ಗದಲ್ಲಿ 'ಶ್ರುತೌ ತಸ್ಕರತಾ ಸ್ಥಿತಾ' ಎಂದು ಕಳ್ಳರೇ ತನ್ನ ಕಾಲದಲ್ಲಿದ್ದಿಲ್ಲವೆಂದು ಸಾಧಿಸಿ,ಶಾಕುಂತಲ ಆರನೆಯ ಅಂಕದಲ್ಲಿ ಕಳ್ಳನಾದ ಬೆಸ್ತರವನಿಗೆ ಗೃಧ್ರಬಲಿಯಾಗುವುದೋ ನಾಯಿ ಗಳಿಂದ ಹರಿಯಲ್ಪಡುವುದೋ ವಿಧಿಸಲ್ಪಟ್ಟಾಗ, ಭಾಸನ ಚಾರುದತ್ತದಲ್ಲಿ ಕಳ್ಳನಿಗೆ ಶಿಕ್ಷೆಯೇ ವಿಧಿಸಲ್ಪಡದಿರುವುದು ಗಮನಿಸತಕ್ಕ ವಿಷಯವೇ ಆಗಿದೆಯೆಂದು ಹೇಳಬೇಕಾಗಿದೆ. ಸಾಧಾರಣ ಇದೇ ಸಮಯದಲ್ಲಿ ಅಥವಾ ಇದಕ್ಕಿಂತ ಒಂದು ಶತಮಾನದ ಮುಂಚೆ ಕೌಟಿಲ್ಯನ ಕಾಲದಲ್ಲಿ ಈ ಕಳ್ಳರಿಗೆ ಮರಣದಂಡನೆ ಯೆಂಬುದು ಅತಿ ತೀಕ್ಷ್ಣವಾದ ದಂಡನೆಂದು ಸ್ವೀಕೃತವಾಗಿ ಕದ್ದ ಅಂಗವನ್ನು ಅಂದರೆ ಕೈಯನ್ನು ಕಡಿಯುವ ಕ್ರಮವು ಜಾರಿಯಲ್ಲಿ ಬಂದಿದ್ದಿರಬೇಕು. ಇದನ್ನೇ ದಂಡಿಯು ದಶಕುಮಾರ ಚರಿತ್ರದಲ್ಲಿ ಒಂದು ಬಗೆಯ ನಂಜನ್ನು ಮನಸ್ಸಿನಲ್ಲಿಟ್ಟು ಕೊಂಡೋ ಏನೋ 'ಮೌರ್ಯದತ್ತವರಃ' ಅಂದರೆ ಮೌರ್ಯರು ಸಮಾಜಕ್ಕೆ ಕರುಣಿಸಿದ ವರವೆಂದು ಮನಸ್ವೀ ಬೈದಿರುವನು. ಅರ್ಥಾತ್ ಈಗಿನ ಕಾಲದಲ್ಲಿ ಹೇರಳವಾಗಿ Black market ಇತ್ಯಾದಿಗಳಲ್ಲಿ ದುಡ್ಡು ಸಂಪಾದಿಸಿದ ವರ್ತಕರು ಅದರ ಕಾಲಾಂಶದಷ್ಟನ್ನು ಸಂತೋಷದಿಂದ Incometax Departmentಗೋ ಅದರ ಅಧಿಕಾರಿಗಳಿಗೋ ತೆತ್ತು, ಸುಖವಾಗಿ ಭೋಗ

ಗಳನ್ನನುಭವಿಸುವಂತೆ ಆಗಿನ ಕಾಲದಲ್ಲಿ ವರಾರ್ಯರ ಅನುಗ್ರಹದಿಂದಲೂ ಹೀಗಾಗಿತ್ತಂತೆ. ಇಷ್ಟೇ ಅಲ್ಲ, ಚಾರುದತ್ತದಲ್ಲಿ ಸಜ್ಜಲಕನು ಕದಿಯುವ ಮುಂಚೆ ಅನುಬಂಧ ಶಬ್ದಕ್ಕೇ ದೊಡ್ಡದೊಂದು ವ್ಯಾಖ್ಯಾನವನ್ನೇ ಬರೆದಂತಿದ್ದು, ತನ್ನನ್ನು ಕದಿಯುವರೆ ಪ್ರೇರಿತವಾದುದು ಸಾತ್ವಿಕ ಆಶೆಯಿಂದ, ಸಚ್ಚರಿತ್ರಳಾದ ಹೆಂಡತಿಯನ್ನು ಪಡೆಯುವದೇ ತನ್ನ ಉದ್ದೇಶವಾದದ್ದರಿಂದ, ತನಗೆ ಕಳ್ಳತನದ ಪಾಪವೇನೊ ಬಾಧಿಸಲಾರದೆಂದೇ ಸಾಧಿಸುವುದೂ ಗಮನಾರ್ಹವಾಗಿದೆ.

ಚಾರುದತ್ತನ ಪಾತ್ರವನ್ನೇ ಬಿಟ್ಟು ನಾವು ಬಹುದೂರ ಸಂಚರಿಸಿದರೂ ಈ ನಾಟಕಗಳಲ್ಲಿ ಬರುವ ಪಾತ್ರಗಳ ವೈಲಕ್ಷಣ್ಯವನ್ನೇ ಎತ್ತಿಹಿಡಿದು ತೋರಿಸುತ್ತ ಬಂದಿದ್ದೇವೆ. ಧರ್ಮಶಾಸ್ತ್ರಕಾರರ ನಡುವಿನಲ್ಲಿಯೇ ಹುಟ್ಟಿ ಬೆಳೆದ ಭಾಸನ ಮನಸ್ಸು ಶ್ರೀಕೃಷ್ಣನನ್ನು ಆಗಿನ ಕಾಲದ ಜನರು ಹೇಗೆ ಜಗತ್ತುಗಳಿಗೆ ಪ್ರಿಯನೆಂದು ಸರ್ವಾತ್ಮನಾ ಅಂಗೀಕರಿಸಿದರೆಂಬುದನ್ನೂ ಪ್ರತಿಬಿಂಬಿಸಿ ತೋರಿಸುವಂತಿದೆ. ದುರ್ಯೋಧನನಂತಹ ಕೆಲವರು ಶ್ರೀಕೃಷ್ಣನನ್ನು ಅವತಾರವೆಂದು ಸ್ವೀಕರಿಸದೆ, ಅವಜ್ಞೆಯಿಂದ ಮೊದಲೇನೋ ತಿರಸ್ಕರಿಸಿದ್ದರೂ, ಮರಣಕಾಲದಲ್ಲಿ ಕರ್ಣಶಕುನಿಗಳೆಂಬ ದುರ್ವಾದಿಗಳು (evil advisers) ಸತ್ತನಂತರ, ಬಲರಾಮನು 'ಅನ್ಯಾಯವಾಗಿ ನಾಭಿಯ ಅಡಿಗೆ ತೊಡೆಯ ಮೇಲೆ ಗದಾಪ್ರಹಾರ ಮಾಡಿದ ಭೀಮಸೇನನ ಮೇಲೆ ತನ್ನ ಹಲಾಯುಧವನ್ನೇರಿಸಿ ಅಪ್ಪಳಿಸಿ ಅವನನ್ನು ಕೊಂದೇ ಬಿಡುವೆ'ನೆಂದು ಸಾಧಿಸಿದಾಗ, ದುರ್ಯೋಧನನು ಅಂಗಲಾಚಿ 'ಗುರುವರ್ಯರೇ! ನನ್ನನ್ನು ಕೊಂದುದು ಭೀಮಸೇನನೇ ಅಲ್ಲ! ಜಗತ್ತುಗಳಿಗೇ ಪ್ರಿಯನಾದ ಶ್ರೀಕೃಷ್ಣನೇ ಭೀಮಸೇನನ ತೀವ್ರವಾದ ಗದೆಯೊಳಗೆ ಅಂತರ್ಯಾಮಿಯಾಗಿ ಪ್ರವೇಶಿಸಿ, ನನ್ನನ್ನು ಮೃತ್ಯುವಿನ ಬಾಯಿಗೆ ತುತ್ತಾಗಿಸಿದ್ದು

ತೀವ್ರಾಂ ಭೀಮಗದಾಂ ಪ್ರವಿಶ್ಯ ಸಹಸಾ ನಿರ್ವ್ಯಾಜಯುದ್ಧಪ್ರಿಯಃ ।
ತೇನಾಹಂ ಜಗತಾಂ ಪ್ರಿಯೇಣ ಹರಿಣಾ ಮೃತ್ಯೋಃ ಪ್ರತಿಗ್ರಾಹಿತಃ ॥'

ಎಂದು ಹೇಳುವನು. 'ವೈರವೇ ಪಶ್ಚಾತ್ತಾಪವಾಗಿ ಮಾರಿಹೋಯಿತಲ್ಲಾ!' ಎಂದು ಬಲರಾಮರು ಕನಿಕರಪಟ್ಟರೆ, ದ್ರೋಣಪುತ್ರನಾದ ಅಶ್ವತ್ಥಾಮನು ಇದನ್ನು ಅರಿಯಲಾರದೆ—'ಅಯ್ಯೋ! ಭೀಮನು ನಿನ್ನ ತೊಡೆಗಳನ್ನು ತುಂಡರಿಸಿದಾಗ ನಿನ್ನ ಮಾನವನ್ನು ತುಂಡರಿಸಿದನೆಂದು ತೋರುತ್ತದೆ'ಎಂದು ಬರೇ ಶಂಭುದತ್ತನಂತೆ ಉಸುರುವನು. ಈ ಅಶ್ವತ್ಥಾಮನ ಪಾತ್ರವನ್ನು ಭಾಸನೇನೋ ಸರಿಯಾಗಿ ಚಿತ್ರಿಸದಿದ್ದರೂ, ಇಲ್ಲಿರುವ 'ಪಿತೃನಿವಪನವ್ಯಗ್ರ' ಅಂದರೆ 'ತಂದೆಯ ಉತ್ತರಕ್ರಿಯೆಗಳಲ್ಲಿಯೇ ನಿರತನಾದ' ಎಂಬ ವಿಶೇಷಣದ ಸಾರವನ್ನು ಹೀರಿ,

ಭಟ್ಟನಾರಾಯಣನು ವೇಣೀಸಂಹಾರದಲ್ಲಿ ಅಪ್ರತಿಮವೀರ್ಯನಾದ ಅಶ್ವತ್ಥಾಮನು ಹೇಗೆ ಇಡೀ ಭಾರತಯುದ್ಧದಲ್ಲಿ ನಿಷ್ಕ್ರಿಯನಾಗಿಯೇ ಉಳಿಯಬೇಕಾಯಿತೆಂಬು ದನ್ನು ವಿಶದಿಸುವಂತಿದೆ. ಎದುರು ಬಂದು ತನ್ನ ವೀರ್ಯವನ್ನು ಪ್ರಕಟಿಸಲುಪಕ್ರಮಿಸಿ ದಾಗ ಕರ್ಣ ದುರ್ಯೋಧನರು ಇವನನ್ನು ಬಾಯಿಗೆ ಬಂದಂತೆ ಹಳಿದು, ಇವನು ಶಸ್ತ್ರಗಳನ್ನೇ ಉದ್ವೇಗದಿಂದ ಬಿಸಾಡುವಂತೆ ಪ್ರತಿಜ್ಞೆಯನ್ನೂ ಮಾಡಿಸಿ, ತಮ್ಮ ಸರ್ವನಾಶಕ್ಕೇ ಕಾರಣರಾದರೆಂದು ಹೃದಯಂಗಮವಾಗಿ ವರ್ಣಿಸಿರುವುದನ್ನು ನಾವು ಅಲ್ಲಿ ಕಾಣುತ್ತೇವೆ. ಇದಂತಿರಲಿ, ಭಾಸನ ದುರ್ಯೋಧನನೆಷ್ಟು ಉದಾತ್ತವಾಗಿ ಚಿತ್ರಿತನಾಗಿದ್ದಾನೆಂಬುದನ್ನು ನಾವಾಗಲೇ ಸೂಚಿಸಿದ್ದೇವೆ. ಈತನೇ ಹಿರಿಯಣ್ಣ ನಾದ ಧೃತರಾಷ್ಟ್ರನ ಉತ್ತರಾಧಿಕಾರಿಯಾಗಿ, ಯುಧಿಷ್ಠಿರನಿಗಿಂತಲೂ ಜ್ಯೇಷ್ಠ ನಾಗಿದ್ದರಿಂದ, ಪಾಂಡವರು ಇವನನ್ನೇ ಹೊಂದಿಕೊಂಡು ಇರುವುದೇ ನ್ಯಾಯ ವಾಗಿತ್ತು. ಅವರೇ ಇವನ ಆಶ್ರಯವನ್ನು ಬಿಟ್ಟು ಕಾಡಿಗೆ ಹೋದರೆ, ಅದು ಸರ್ವಥಾ ಜ್ಯೇಷ್ಠನಾದ ದುರ್ಯೋಧನನ ತಪ್ಪಲ್ಲ; ಭೀಷ್ಮದ್ರೋಣಾದಿಗಳಿಗೂ ಕೂಡ ದುರ್ಯೋಧನನ ಉಪ್ಪನ್ನು ತಿಂದದ್ದರಿಂದ ನಾವಾತನ ಪಕ್ಷವಹಿಸಬೇಕಾಗಿದೆ ಯೆಂದು ಅನಿರ್ವಾಹ ಪಕ್ಷವನ್ನಾಶ್ರಯಿಸಿ ಸಮಾಧಾನ ಹೇಳುವ ಪ್ರಸಂಗವೂ ಒದಗಲೇ ಇಲ್ಲ. ಸ್ವಾಭಾವಿಕವಾಗಿಯೇ ಜ್ಯೇಷ್ಠನಾದ ದುರ್ಯೋಧನನ ಪಕ್ಷ ದಲ್ಲಿಯೇ ತಾವು ಇದ್ದೇವೆಂದೇ ಅವರು ವಾದಿಸಬಹುದಾಗಿತ್ತು. ಈ ಮರ್ಮ ವನ್ನರಿಯದ ಭಟ್ಟನಾರಾಯಣನು ಸಂಸ್ಕೃತ ವೇಣೀಸಂಹಾರದಲ್ಲಿ, ರನ್ನನು ಕನ್ನಡ ಗದಾಯುದ್ಧದಲ್ಲಿ, ದುರ್ಯೋಧನನ ಪಾತ್ರವನ್ನೇನೋ ಅತ್ಯುದಾತ್ತ ವಾಗಿಯೇ ಚಿತ್ರಿಸಲುಪಕ್ರಮಿಸಿದರೂ, ಕೃತಕೃತ್ಯರಾಗದೇ ಉಳಿದರೆಂದಾಗಲೇ ಸೂಚಿಸಿದ್ದೇವೆ. ಭಾಸನ ಪಂಚರಾತ್ರದಲ್ಲಿಯೂ ಇದೇ ಉದಾತ್ತತೆಯು ಒಡೆದೇ ತೋರುವುದು. 'ಮಾವ! ಅರ್ಧರಾಜ್ಯವನ್ನು ಪಾಂಡವರಿಗಾಗಿ ಗುರುಗಳು ಯಾಚಿಸು ವಾಗ ನಾವು ಕೊಟ್ಟುಬಿಡೋಣವೇ' ಎಂದು ಈತನೇ ಅಂಗಲಾಚಿ ಬೇಡುವಾಗ, ಸರ್ವನಾಶವೆಂಬ ವಿಷವೃಕ್ಷಕ್ಕೆ ಬೀಜವಾದ ಈ ಶಕುನಿಮಹಾರಾಯನು—'ಪಾಂಡವ ರಿಗೆ ಅರ್ಧರಾಜ್ಯವನ್ನು ಕೊಡುವುದೇ ನಿನಗಭಿಮತವಾಗಿದ್ದರೆ, ನಾವೇತಕ್ಕೆ ಅದಕ್ಕಡ್ಡಿ ಬರುವೆವು? ನಮ್ಮ ಕೆಲಸವೆಂದರೆ ನೀನು ಯುದ್ಧದಲ್ಲಿ ನಮ್ಮ ಸಹಾಯವನ್ನು ಅಪೇಕ್ಷಿಸಿದರೆ ಮಾತ್ರ ಸಹಾಯವನ್ನೆಸಗುವುದಷ್ಟೇ' ಎಂದು ಹೇಳುವುದರ ನಂಜು ಎಲ್ಲರಿಗೂ ಗೊತ್ತಾಗುವಂತೆಯೇ ಇದೆಯಲ್ಲವೇ? ಅಷ್ಟರಲ್ಲಿಯೂ ಸಂತೃಪ್ತನಾಗದ ಈ ಹಿರಿಯಣ್ಣನ ಮನಸ್ಸು 'ಎಲ್ಲಿಯಾದರೂ ಮೂಲೆಯಲ್ಲಿರುವಮರುಭೂಮಿಯೋ, ಹಾಳುಬಿದ್ದ ಬಂಜರುಭೂಮಿಭೂಯಿಷ್ಠವಾಗಿ ಯಾರಿಗೂ ಬೇಡವಾದ ಗದ್ದೆಗಳನ್ನೋ ಅವರಿಗೆ ಕೊಡಬಹುದಲ್ಲಾ!' ಎಂದುಸುರಿ

ದರೆ 'ಅಯ್ಯಬ್ಬಾ! ಆ ಬಂಜರು ಗದ್ದೆಗಳೂ ಯುಧಿಷ್ಠಿರನೇ ರಾಜನಾದರೆ ಅಧಿಕ ಧಾನ್ಯದವಸಗಳಿಂದ ತಾಂಡವನಾಡುವ ಭೂಮಿಗಳಾದಾವು! ಇದೆಂದೆಂದಿಗೂ ಬೇಡವೇ ಬೇಡ'ವೆಂದ ಸಲಹೆಯೂ ಇವನ ಮುಂದೆ ಮಂಡಿಸಲ್ಪಟ್ಟಿದ್ದನ್ನೂ ನಾವು ಕಾಣುತ್ತೇವೆ. ಈತನ ಉದಾತ್ತತೆಯ ಪರಮೋತ್ಕರ್ಷವು ಪಂಚರಾತ್ರದ ಮೂರನೆಯ ಅಂಕದ ಆದಿಯಲ್ಲಿ ಕಂಡುಬರುವುದು. ಎರಡನೆಯ ಅಂಕದಲ್ಲಿ ವಿರಾಟನ ಗೋವುಗಳನ್ನು ಹಿಡಿಯುವರೆ ಭಾಗವಹಿಸಿದವರಲ್ಲಿ ಕೌರವರ ಕಡೆಯಲ್ಲಿ ಅಭಿಮನ್ಯುವೂ(ಕೃಷ್ಣನ ಪ್ರತಿನಿಧಿಯಾಗಿ ದುರ್ಯೋಧನನ ಪಂಚರಾತ್ರ ಯಜ್ಞಕ್ಕೆ ಬಂದಿದ್ದನಿವನು) ತಿಳಿಯದೆ ತನ್ನ ತಂದೆಯಾದ ಅರ್ಜುನನೊಡನೆಯೂ ಭೀಮಸೇನನೊಡನೆಯೂ ಯುದ್ಧವನ್ನೆಸಗುವನಷ್ಟೆ. ಅಲ್ಲಿಯೂ ಭೀಮಸೇನನು ಅಭಿಮನ್ಯುವನ್ನು ಅಪ್ಪಳಿಸಿ, ಕಂಕುಳಡಿಯಲ್ಲಿಯೋ ಇನ್ಯಾವ ರೀತಿಯಲ್ಲಿಯೋ, ಸೆರೆಹಿಡಿದುಕೊಂಡೇ ಹೋದದ್ದರಿಂದ, ಕರ್ಣನೇ ಮೊದಲಾದ ವೀರಾಧಿವೀರರೆಂದು ಕೊಚ್ಚಿಕೊಂಡ ಅತಿರಥರು ಪಲಾಯನ ಮಂತ್ರವನ್ನು ಜಪಿಸಿಕೊಂಡು, ಹಿಂತಿರುಗಿ ನೋಡುವರೆಯೂ ಧೈರ್ಯವಿಲ್ಲದೆ, ಹಸ್ತಿನಾವತಿಯನ್ನು ಹೇಗೋ ಹಾಗೇ ಸೇರಿ, ಅಲ್ಲಿ ತಮ್ಮ ಹಾಜರಿಪಟ್ಟಿಯಲ್ಲೊಬ್ಬೊಬ್ಬರಾಗಿ ಹೆಸರನ್ನು ಕರೆದಾಗ, ಹೊಸತಾಗಿ ಸೇರಿದ್ದ ಅಭಿಮನ್ಯುವೊಬ್ಬನೇ ಹಾಜರಿಲ್ಲವೆಂದು ಆಗ ತಾನೇ ತೀರ್ಮಾನವಾಯಿತಷ್ಟೆ. ಆಗ ಶಕುನಿಯು (ಮುಂಚೆ ಘೋಷಯಾತ್ರಾ ಪ್ರಕರಣದಲ್ಲಿ ದುರ್ಯೋಧನನನ್ನು ಗಂಧರ್ವರಾಜನಾದ ಚಿತ್ರಸೇನನು ಹೆಡೆಮುರಿದು ಕೈಕಾಲು ಕಟ್ಟಿಕೊಂಡು ಹೋದಾಗ, ಭೀಮಸೇನನು ಸಂತೋಷದಿಂದ 'ನಾವು ಮಾಡಬೇಕಾದ ಕರ್ತವ್ಯವನ್ನು ತಾನೇ ಗಂಧರ್ವರು ಮಾಡಿದ್ದೆ'ಂದು ಹೆಮ್ಮೆಯಿಂದ ಉಬ್ಬಿದಾಗ) 'ಈಗಲ್ಲದಿದ್ದರೆ, ಇನ್ನು ಮುಂದೆ ಯುದ್ಧದಲ್ಲಿಯಾದರೂ ನಾವು ಅಭಿಮನ್ಯುವನ್ನು ಸೋಲಿಸಬೇಕಾಗಿತ್ತಷ್ಟೆ. ಅದರ ಬದಲಾಗಿ ಈಗಲೇ ಆತನ ತೇಜೋವಧವಾಗಿದಂತಿದೆ' ಎಂದು ಸಂತೋಷದಿಂದ ಉಬ್ಬಿದರೆ, ದುರ್ಯೋಧನನು ಮಾತ್ರ 'ಆ ಚಿಕ್ಕ ಹಸುಳೆಯು ನನಗೋಸ್ಕರ ಯುದ್ಧದಲ್ಲಿ ಭಾಗವಹಿಸಿ ಸೆರೆಯಾಳಾದನು. ಕುಟುಂಬದಲ್ಲಿ ಹಿರಿಯರಲ್ಲಿ ದಾಯಾದ ಮತ್ಸರವಿದ್ದರೆ, ಅದು ದೊಡ್ಡವರನ್ನು ಮಾತ್ರ ಸಂಬಂಧಿಸಿದ್ದು, ಚಿಕ್ಕಮಕ್ಕಳ ತಪ್ಪು ಸರ್ವಥಾ ಅಲ್ಲ. ಅವನನ್ನು ನಾವು ತಪ್ಪಿಸಿಕೊಳ್ಳಲಾರದೆ ಬಂದುದೆಂಬುದು ನಮ್ಮ ಮೇಲಿನ ಅತಿ ದೊಡ್ಡದಾದ ಕೀರ್ತಿ ಕಳಂಕ'ವೆಂದುಸುರಿ, ಮಾವನಾದ ಶಕುನಿಯು ಎಷ್ಟು ಹೇಳಿದರೂ ಒಪ್ಪದೆ, ನಿಜವಾದ ದುಃಖದಿಂದ ಮರುಗುವನು. ಈ ಶಕುನಿಯೇ ದುರ್ಯೋಧನನ ಸರ್ವನಾಶಕ್ಕೂ ಕಾರಣನೆಂಬುದಕ್ಕೆ ಇನ್ನು ಬೇರೆ ಸಾಕ್ಷ್ಯವೇಕೆ? ಅಭಿಜ್ಞರು ಸಾರುವಂತೆ—

ಮೂಷಿಕೋ ಧಾನ್ಯನಾಶಾಯ ಧನನಾಶಾಯ ಕುಂಜರಃ
ಜಾಮಾತಾ ಗೃಹನಾಶಾಯ ಸರ್ವನಾಶಾಯ ಮಾತುಲಃ ||

ಈ ಮಾತುಗಳನ್ನು ನಂಬಿಯೇ ದುರ್ಯೋಧನನ ತಲೆಗೆ ಚಂಬು ಹಾಕಿದಂತಾಯಿತಲ್ಲವೇ ? ಈ ಮಾತುಲನು ಸತ್ತನಂತರ ಊರುಭಂಗದಲ್ಲಿರುವ ದುರ್ಯೋಧನನು ದೂತವಾಕ್ಯದಲ್ಲಿ ಪಾಂಡವರನ್ನು ಪರಾತ್ಮಜರೆಂದು ಹಳಿದುದನ್ನೂ ಮರೆತು, ಅಂತ್ಯಕಾಲದಲ್ಲಿ ಮಗನಾದ ದುರ್ಜಯನಿಗೆ ಯುಧಿಷ್ಠಿರನ ಕೌಸ್ತುಮಾಪಸವ್ಯವಾದ ಭುಜವನ್ನು ಮುಟ್ಟಿ, ತನ್ನ ಹೆಸರನ್ನು ಹೇಳಿ, ತನಗೆ ಪಿತೃತರ್ಪಣವನ್ನು ಕೊಡಬೇಕು ಮಗೂ ! ಎಂದು ಹೇಳುವಾಗ ಯಾರ ಹೃದಯವು ಕರಗಿ ನೀರಾಗಲಿಕ್ಕಿಲ್ಲ ?

ಇನ್ನು ಬೇರೆ ಕೆಲವರ ಪಾತ್ರಗಳು ಹೇಗೆ ಉದಾತ್ತತಮವಾಗಿವೆಯೆಂಬುದನ್ನಾಗಲೇ ನಾವು ಕೊಂಚಮಟ್ಟಿಗೆ ಸೂಚಿಸಿಯಾಗಿದೆ. ವ್ಯಾಸಮಹರ್ಷಿಗಳು ಪಾಂಡವರಲ್ಲಿ ಮಾತ್ರ ಪಕ್ಷಪಾತವನ್ನಿಟ್ಟಿದ್ದರೆ, ಈ ಭಾಸನು ಚಿಕ್ಕ ಹಸುಳೆಗಳಾದ ಅಭಿಮನ್ಯು, ಘಟೋತ್ಕಚ, ದುರ್ಜಯರನ್ನೂ ರಮಣೀಯವಾಗಿ ಚಿತ್ರಿಸಿರುವನು. ಇದರಲ್ಲಿಯೂ ದೂತ ಘಟೋತ್ಕಚನ ನೂತನ ಸಂದೇಶವನ್ನು ವಿಲ್ಲಿಪುತ್ತೂರಾರ್ ಎಂಬ ತಮಿಳು ಭಾರತ ಕವಿಗಳು ತಮ್ಮ ಭಾರತ ಕಥೆಯಲ್ಲಿ ಹಾಗೆಯೇ ಭಾವಾನುವಾದ (XII ದ್ರೋಣಪರ್ವ–238 ಮತ್ತು 240 ಪದ್ಯಗಳು) ಮಾಡಿದುದು ಹೃದಯಂಗಮವಾಗಿದೆ. ಈ ಘಟೋತ್ಕಚನ ಸಂದೇಶವು ಭಾರತದಲ್ಲಿರದೆ, ಭಾಸನ ಪ್ರೌಢಪ್ರತಿಭೆಯ ವಿಲಸಿತವೆಂದೆಲ್ಲರೂ ಒಪ್ಪಿಯೇ ತೀರಬೇಕಾಗಿದೆ. ಅದನ್ನು ತಮಿಳಿನಲ್ಲಿ ಹಾಗೆಯೇ ಸ್ವೀಕರಿಸಿದ್ದೂ ಈ ಮಹಾಕವಿಯು ದಾಕ್ಷಿಣಾತ್ಯನಾಗಿದ್ದಿರಬಹುದೋ ಎಂಬ ನಮ್ಮ ಸಂಶಯವನ್ನು ಮತ್ತಷ್ಟು ಪೋಷಿಸುವಂತಿದೆ. ಇದಂತಿರಲಿ, ಈ ಉಪಪಾಂಡವರನ್ನು Further India ಇತ್ಯಾದಿ ಭಾರತೀಯರೇ ಪರದೇಶಗಳಿಗೆ ಹೋಗಿ ತಮ್ಮ ಸಂಸ್ಕೃತಿಯನ್ನು ಅಲ್ಲಿಯೂ ನೆಲೆ ನಾಟಿಸಿದ ಪ್ರದೇಶಗಳಲ್ಲಿ, ಅಲ್ಲಿಯ ಕವಿಗಳು ಸಾಕಷ್ಟು ಹೊಗಳಿ, ಅವರನ್ನೇ ನಾಟಕಗಳಲ್ಲಿಯೂ ಕಾವ್ಯಗಳಲ್ಲಿಯೂ ಕಥಾನಾಯಕರಾಗಿ ಮಾಡಿರುವರಂತೆ. ಅಲ್ಲಿಯೂ ಭಾಸನ ಮೇಲ್ಪಂಕ್ತಿಯನ್ನೇ ಅನುಸರಿಸಿರುವರೆಂದರೂ ತಪ್ಪಾಗದು. ಪ್ರತಿಮಾ ನಾಟಕದಲ್ಲಿ ಸತ್ತರಾಜರ ಪ್ರತಿಮೆಗಳನ್ನು ವಸ್ತು ಸಂಗ್ರಹಾಲಯಗಳಲ್ಲಿ ಸ್ಥಾಪಿಸುವ ಪ್ರಥೆಯನ್ನು ಭಾಸನು ಬಳಸಿಕೊಂಡಿದ್ದರೆ, ಅದನ್ನೇ ಈಗಿನ Cambodia ದೇಶದಲ್ಲಿ ತಮ್ಮ ಪೂರ್ವವಂಶೀಯರಾದ ರಾಜರನ್ನು (Renewos dynasty near Angkor) ದೇವರೆಂದಾದರಿಸಿ,

ಅದರ ಪ್ರತಿಮೆಗಳನ್ನು ಅಲ್ಲಿ ದೇವಾಲಯಗಳಲ್ಲಿಯೋ ವಸ್ತುಸಂಗ್ರಹಾಲಯ
ಗಳಲ್ಲಿಯೋ ಇಡುವ ರಿವಾಜನ್ನೂ ಭಾಸನಿಂದಲೇ ತೆಗೆದದ್ದೆಂದು Dr. A. K.
Coomaraswami ಎಂಬ ಪ್ರಸಿದ್ಧ ಪುರಾಣ ತತ್ತ್ವವೇತ್ತರು ತಮ್ಮ
Indian and Indonesian art ಎಂಬ ಪುಸ್ತಕದ 42ಯ ಪುಟ
ದಲ್ಲಿಯೂ 185ನೆಯ ಪುಟದಲ್ಲಿಯೂ ಧಾರಾಳವಾಗಿ ಒಪ್ಪಿಕೊಂಡಿದ್ದಾರೆ.
ಭಾಸನ ಪಂಚರಾತ್ರದಲ್ಲಿ ನೂತನವಾಗಿ ಕಲ್ಪಿತವಾದ ಐದು ರಾತ್ರಿಗಳಲ್ಲಿ ಪಾಂಡ
ವರ ಕುರುಹು ದೊರಕಿದರೆ ಅವರಿಗೆ ಅವರ ಅರ್ಧರಾಜ್ಯವನ್ನು ಕೊಡುವೆವೆಂಬ
ಅಭಿಸಂಧಿಯನ್ನು ಬಳಸಿಕೊಂಡು ಮಾಲವಿಕಾಗ್ನಿಮಿತ್ರದಲ್ಲಿ ಕಾಳಿದಾಸನೂ ಅದೇ
ಐದು ದಿನಗಳಲ್ಲಿ ಅಶೋಕ ವೃಕ್ಷವು ಮಾಲವಿಕೆಯ ದೋಹದ ಪೂರಣದ ಪ್ರಭಾವ
ದಿಂದ ಹೂಗಳನ್ನು ಹೊರಗೆಡಹಿದರೆ, ಅವಳ ಅಭಿಲಾಷ ಪೂರಯಿಕೃತವಾದ
ಅನುಗ್ರಹವನ್ನು ಕರುಣಿಸುವುದಾಗಿ ಧಾರಿಣೀ ರಾಣಿಯು ಅವಳಿಗೆ ಮಾತು
ಕೊಟ್ಟಿದ್ದಾಗಿ ಕಥೆಯನ್ನು ಜೋಡಿಸಿರುವನು. ಹೀಗೆಯೇ ಪ್ರತಿಮಾ ನಾಟಕದ
ದಶರಥನ ಪ್ರತಿಮೆಯನ್ನು ನೆನೆಸಿಕೊಂಡೇ ದಿಙ್ನಾಗನೆಂಬ ಪ್ರಸಿದ್ಧ ನಾಟಕ
ಕರ್ತನು ತನ್ನ ಕುಂದಮಾಲೆಯೆಂಬ ನಾಟಕದ ಮೊದಲನೆಯ ಅಂಕದಲ್ಲಿಯೇ
ಶುಶ್ರೂಷಯಿತವ್ಯಃ ಪ್ರತಿಮಾ ಗತೋ ಮಹಾರಾಜಃ ಎಂಬ ವಾಕ್ಯವನ್ನು ಬರೆ
ದಿರುವರೆಂದಾಗಲೇ ಸೂಚಿತವಾಗಿದೆ. ಈ ಪ್ರತಿಮಾಗತತ್ತ್ವವು ರಾಮಾಯಣ
ದಲ್ಲಿಯೋ ಅಥವಾ ಇನ್ನಿತರ ಅದನ್ನವಲಂಬಿಸಿದ ಕಾವ್ಯದಲ್ಲಿಯೋ ನಾಟಕ
ದಲ್ಲಿಯೋ ಕಂಡುಬರುವುದೇ ಇಲ್ಲವಾದ್ದರಿಂದ ಭಾಸನ ನಾಟಕವನ್ನೇ ಅವಲಂಬಿ
ಸಿಯೇ ಹೀಗೆ ಬರೆದರೆಂಬುದನ್ನು ಸೊಗಸಾಗಿ ನಿರೂಪಿಸಬಹುದು.

ಇನ್ನು ಉದಯನನ ಪಾತ್ರವೈಶಿಷ್ಟ್ಯವನ್ನು ಕುರಿತು ಸ್ವಲ್ಪ ವಿಚಾರಿಸುವ.
ಈ ವತ್ಸರಾಜನ ಚರಿತ್ರವೆಂಬುದು ಸಂಸ್ಕೃತ ಸಾಹಿತ್ಯದಲ್ಲಿ ಅತಿರಸವತ್ತಾದ
ಘಟ್ಟವೆಂದು ಬೃಹತ್ಕಥೆಯೆಂಬ ಕವಿಗಳ ಆಕರ ಗ್ರಂಥದಲ್ಲಿ ಮಹಾಭಾರತ
ರಾಮಾಯಣ ಕಥೆಗಳಷ್ಟೇ ಅದ್ಭುತವಾಗಿದೆಯೆಂಬುದು ಎಲ್ಲರಿಗೂ ಗೊತ್ತೇ ಇದೆ.
ಕಾಳಿದಾಸನೇ ಮೇಘದೂತದಲ್ಲಿ ಉಜ್ಜಯಿನಿಯಲ್ಲಿ ಉದಯನನ ಕಥೆಗಳಲ್ಲಿ
ಕೋವಿದರಾದ ಗ್ರಾಮವೃದ್ಧರಿದ್ದಾರೆಂದು ಹೇಳಿ, ಈ ಗ್ರಾಮವೃದ್ಧರು ತಮ್ಮ
ಕಥೆಗಳನ್ನು ಹೇಳುವಾಗ 'ಇಲ್ಲಿ ಪ್ರದ್ಯೋತನ ಮಗಳಾದ ವಾಸವದತ್ತೆಯನ್ನು
ಅಪಹರಿಸಿಕೊಂಡು ಹೋದುದು ; ಇಲ್ಲಿ ಆ ಮಹಾಸೇನನೆಂದಿನ್ನೊಂದು ಹೆಸರಿದ್ದ
ಆ ಮಹಾರಾಜನ ಬಂಗಾರದ ತಾಲಮರಗಳ ವನವಿದ್ದುದು ; ಇಲ್ಲಿ ನಲಗಿರಿ
ಯೆಂಬ ಆ ರಾಜನ ಮದ್ದಾನೆಯು ಭ್ರಾಂತವಾಗಿ ಎಲ್ಲರನ್ನೂ ಕೊಲ್ಲಲುಪಕ್ರಮಿ
ಸಿದ್ದು' ಎಂದು ಆಯಾಯಾ ಸ್ಥಳಗಳನ್ನೂ ನಿರ್ದೇಶಿಸಿಯೇ ತೋರಿಸುವರೆಂದು

ಹೇಳುವಾಗ, ಕಾಳಿದಾಸನ ಕಾಲದಲ್ಲಿದ್ದ ಈ ಗ್ರಾಮವೃದ್ಧರು ತಮ್ಮ ಚಿಕ್ಕಂದಿನಲ್ಲಿ ಇವುಗಳನ್ನೆಲ್ಲಾ ಕಣ್ಣಾರೆ ಕಂಡಿದ್ದು, ಅವುಗಳನ್ನು ಭಾಸನು ಆಗಲೇ ನಾಟಕರೂಪದಲ್ಲಿ ಚಿತ್ರಿಸಿದ್ದುದನ್ನೂ ತಾವು ಕಂಡಿದ್ದರೆಂತ ಹೇಳುತ್ತಿರುವರೋ ಎಂದು ಧ್ವನಿಸುವುದಿಲ್ಲವೇ? ಹೀಗೆಯೇ ಇವನ ನಂತರ ಬಂದ ಕವಿಗಳಲ್ಲಿ ಅನೇಕರು ತಾಪಸವತ್ಸರಾಜ, (ಮೊಟ್ಟ ಮೊದಲು Dr. Jacobi ಮಹಾಶಯರು ಇದನ್ನು ಜರ್ಮನಿಯಲ್ಲಿ ಪ್ರಚುರಪಡಿಸಿದ್ದನ್ನು ಮೊನ್ನೆ ಮೊನ್ನೆ ಮೈಸೂರಿನಲ್ಲಿ ಅಚ್ಚಾಗಿ ಈಗ ಪ್ರಚಾರದಲ್ಲಿ ಬಂದಿದೆ. ಅನಂಗರಾಜನದ್ದೆಂದು ಪ್ರತೀತಿ)ಶ್ರೀಹರ್ಷನ ರತ್ನಾವಳೀ, ಪ್ರಿಯದರ್ಶಿಕೆ, ಹೀಗೆಯೇ ಇನ್ನಿತರರನೇಕರೂ ಕೂಡ ಈತನನ್ನು ನಾಯಕನನ್ನಾಗಿ ಸ್ವೀಕರಿಸಿ ನಾಟಕಗಳನ್ನೋ ಕಾವ್ಯಗಳನ್ನೋ ರಚಿಸಿರುವುದು ಆಗಲೇ ಬೆಳಕಿಗೆ ಬಂದಿವೆ. ಇವೆಲ್ಲವುಗಳನ್ನೂ ಪರಸ್ಪರ ಹೋಲಿಸಲು ಹೊರಟರೆ ಅದೊಂದೇ ಅತಿದೊಡ್ಡ ಗ್ರಂಥವಾದೀತೆಂದು ಸೂಚನೆಯನ್ನು ಮಾತ್ರ ಮಾಡಿ ಬಿಡುತ್ತೇವೆ. ಇವುಗಳಲ್ಲಿ ಭಾಸನ ಚಿತ್ರಣವೇ ಅತ್ಯುತ್ತಮವೆಂಬ ವಿಷಯವನ್ನು ಆಯಾಯಾ ನಾಟಕಗಳನ್ನೋದುವವರು ತಾವೇ ಓದಿ ಅನುಭವಿಸಿ ತಿಳಿಯಬಹುದು.

ಇವನ ಇನ್ನೊಂದು ಗುಣವೆಂದರೆ ಅನ್ಯರ ವರ್ಣನೆಗಳಲ್ಲಿ ಉತ್ಪ್ರೇಕ್ಷಣೀಯ ಗುಣಗಳೇ ಹೆಚ್ಚಾಗಿ ಕೃತಕತೆಯ ಕುರುಹುಗಳಾದರೆ, ಇವನ ಪಾತ್ರಗಳ ಸಹಜತ್ವವೇ ನಮ್ಮ ಮನಸ್ಸನ್ನು ಸೂರೆಗೊಳ್ಳುವದು. ಈ ವಿಷಯವನ್ನು ನಮ್ಮ ಮಿತ್ರವರ್ಯರಾದ ಶ್ರೀ ರಾಮಕೃಷ್ಣಭಟ್ಟರು ಊರುಭಂಗದ ದೃಷ್ಟಾಂತದಿಂದ ವಿಶದೀಕರಿಸಿರುವರು. ಅವರು ಹೇಳಿರುವ ಮಾತುಗಳನ್ನೇ ವಿವರಿಸುತ್ತಾ ನಾವು ಹೀಗೆ ಹೇಳಬಯಸುವೆವು. ವಿಷಯವೇನೋ ಅತಿಸರಳ, ಆದರೆ ಇಲ್ಲಿಯೂ ಒಂದು ಅತ್ಯುಚ್ಚವಾದ ನಾವೀನ್ಯ ಇದೆ. ವ್ಯಾಸ ಭಾರತದಲ್ಲಿಲ್ಲದ ಸನ್ನಿವೇಶ, ವ್ಯಾಸವಿದುರರೂ ಒಂದೆಡೆ, ಬಲರಾಮರು ಇನ್ನೊಂದೆಡೆ ಈ ಗದಾಯುದ್ಧದಲ್ಲಿ ಪ್ರೇಕ್ಷಕರು, ಪ್ರತ್ಯಕ್ಷದರ್ಶಿಗಳು. ಕಡೇಗೆ ಅನ್ಯಾಯದಿಂದ ನೆಲಕ್ಕುರುಳಿಸಲ್ಪಟ್ಟ ದುರ್ಯೋಧನನು ಮರಣೋನ್ಮುಖನಾಗಿದ್ದಾಗ ಆ ದುರಂತವನ್ನು ಕಣ್ಣಾರೆ ನೋಡಿ ಮರುಗುವ ಕುರುಡ ತಂದೆ ತಾಯಿಗಳು, ಇಬ್ಬರು ಹೆಂಡಂದಿರು, 5 ವರ್ಷದ ಚಿಕ್ಕ ಹುಡುಗ, ಕಟ್ಟಕಡೇಗೆ ಅಶ್ವತ್ಥಾಮನೇ ಬಂದು ಇದನ್ನೆಲ್ಲಾ ಕಣ್ಣಾರೆ ಕಂಡು, ದುರ್ಯೋಧನನು ಕೇಳುತ್ತಿರುವಂತೆಯೇ ದುರ್ಜಯನಿಗೇ ಪಟ್ಟಕಟ್ಟಿ, ಸೌಪ್ತಿಕ ವಧಕ್ಕೋಸ್ಕರ ಧನುಷ್ಪಾಣಿಯಾಗಿ ದುರ್ಯೋಧನನು ಸಾರಿ ಸಾರಿ ಬೇಡವೆಂದು ನಿಷೇಧಿಸಿದರೂ ಹೊರಟ ಸನ್ನಿವೇಶ. ಕೊನೆಗೆ ಇದನ್ನೆಲ್ಲಾ ಕಾಣುತ್ತಿರುವಂತೆ, ಇವರೆಲ್ಲರೂ ಕಣ್ಣಾರೆ ನೋಡುತ್ತಿರುವಂತೆ,

ವೀರಸ್ವರ್ಗಕ್ಕೆ ಕರೆದೊಯ್ಯುವ ವಿಮಾನವೊಂದು ಬಂದು ದುರ್ಯೋಧನನನ್ನು ಮರ್ಯಾದೆಯಿಂದ ಸ್ವಾಗತಿಸಿ ತನ್ನಲ್ಲಿ ಕೂಡ್ರಿಸಿಕೊಂಡು ಸ್ವರ್ಗಕ್ಕೆ ಹೊರಟುದು– ಇವೆಲ್ಲಾ ಸಂದರ್ಭಗಳು ಅಚ್ಚಳಿಯದೆ ನಮ್ಮ ಮನಸ್ಸಿನಲ್ಲಿ ಪ್ರಭಾವವನ್ನು ಬೀರಿ ಬಿಡುತ್ತವೆ. ಚಿಕ್ಕ ಚಿಕ್ಕ ಸಂದರ್ಭಗಳಿಂದ ಚುಟುಕಿನಲ್ಲಿ, ಚುರುಕಿನಲ್ಲಿ ವಿಷಯುಗಳನ್ನು ವಿಕಾಸಗೊಳಿಸುವುದರಲ್ಲಿ ಇವನು ಅನನ್ಯ ಸಾಮಾನ್ಯನಾಗಿದ್ದಾನೆಂದು ಒಪ್ಪಲೇಬೇಕು. ಈತನ ಪಾತ್ರಗಳೂ ವ್ಯಾಸರ ಪಾತ್ರಗಳಿಂದ ಸರ್ವಥಾ ಭಿನ್ನವೆಂದು ಬೇರೆ ಹೇಳುವ ಅವಶ್ಯವೇ ಇಲ್ಲ. ವ್ಯಾಸರ ಭೀಮನೆಷ್ಟು ವೈರ ನಿರ್ಯಾತನೆಯನ್ನು ಮಾಡಿ, ದುರ್ಯೋಧನನ ಅಭಿಷಿಕ್ತನಾದ ಕಿರೀಟದಮೇಲೆ ಕಚಕ್ಕಚ ತುಳಿದು, “ಪಶು–ಪಶು”ವೆಂದು ವ್ಯಂಗ್ಯವಾಗಿ ಮೂದಲಿಸಿದರೆ, ಈತನ ಭೀಮಸೇನನು ಮಾಡಿದ ತಪ್ಪೆಂದರೆ ನಾಭಿಯ ಅಡಿ, ತೊಡೆಯಮೇಲೆ ಗದಾ ಪ್ರಹಾರ ಮಾಡಿದ್ದೊಂದೇ, ಅದೂ ಕೂಡ ಋಷಿಶಾಪದ ವೈಭವದಿಂದ ಹೀಗಾದ್ದೆ ಎಂಬ ಧ್ವನಿಯೂ ಕೂಡ ಹೊರಡುತ್ತದೆ. ದುರ್ಯೋಧನನ ಉದಾತ್ತತೆಯನ್ನು ನಾವಾಗಲೇ ವಿಶದೀಕರಿಸಿದ್ದೇವಷ್ಟೆ. ಕಾಲು ಗಂಟೆಯೊಳಗೇ ಓದಿ ಮುಗಿಸಲು ಸಾಧ್ಯವಾದ ಕರ್ಣಭಾರವೆಂಬ ನಾಟಕದೊಳಗೇ ಕರ್ಣನ ಚಿತ್ರಣವೆಷ್ಟು ಸೊಗಸಾಗಿ ಬಂದಿದೆಯೆಂಬುದನ್ನೂ ಆತನ ಪಾತ್ರಕ್ಕೂ ವ್ಯಾಸರ ಕರ್ಣನಿಗೂ ಇರುವ ವ್ಯತಿರೇಕವನ್ನು ಸರಿಯಾಗಿ ಪರಿಶೀಲಿಸಿದರೆ ಭಾಸನ ಪಾತ್ರಗಳ ವೈಶಿಷ್ಟ್ಯವು ಒಡೆದು ಕಾಣುವುದು.

೧೮

ರಾಜಸಿಂಹನು ಯಾರು ?

1915ನೆಯ ಇಸ್ವಿಯಲ್ಲಿ ಪಂಡಿತ ರಾಮಾವತಾರ ಶರ್ಮರೆಂಬುವರು 'ಶಾರದಾ' ಎಂಬ ಸಂಸ್ಕೃತ ಪತ್ರಿಕೆಯಲ್ಲಿ ಭಾಸನು ಈ ನಾಟಕಗಳನ್ನು ಬರೆದಿರಲಾರನೆಂಬ ಸಂಶಯವನ್ನು ಪುರಸ್ಕರಿಸಿ ಒಂದು ಲೇಖನವನ್ನು ಬರೆದರು. ಇದನ್ನೇ ಅನುಮೋದಿಸಿ ಬಾರ್ನೆಟ್ ಮಹಾಶಯರು (London School of Oriental and Africal studies ಎಂಬಲ್ಲಿರುವ ಅಧಿಕೃತರು) 1919ನೇ ಇಸ್ವಿಯಲ್ಲಿ ಈ 13 ನಾಟಕಗಳಲ್ಲಿ ಏಳು ನಾಟಕಗಳಲ್ಲಿ

ಇಮಾಂ ಸಾಗರಪರ್ಯಂತಾಂ ಹಿಮವದ್ವಿಂಧ್ಯ ಕುಂಡಲಾಂ |
ಮಹೀಂ ಕಾತಪತ್ರಾಂಕಾಂ **ರಾಜಸಿಂಹಃ** ಪ್ರಶಾಸ್ತು ನಃ ||

ಎಂಬ ಭರತವಾಕ್ಯವು ಕಂಡುಬರುವುದರಿಂದ ಯಾರೋ ಒಬ್ಬ ಪ್ರಸಿದ್ಧ ರಾಜನಾದ 'ರಾಜಸಿಂಹ'ಎಂಬಾತನೋ ಆತನ ಆಸ್ಥಾನದಲ್ಲಿದ್ದ ಆಶ್ರಿತನಾದಯಾರೋ ಕವಿಯು ಈ ನಾಟಕಗಳನ್ನು ಬರೆದಿರಬಹುದೆಂಬ ವಾದವನ್ನು ಮಂಡಿಸಿದರು. ಪಾಂಡೇಯ ಶರ್ಮರೆಂಬ ವಿದ್ವನ್ಮಣಿಗಳು ಈ ರಾಜಸಿಂಹನು ಚೋಳದೇಶದ ರಾಜನಾಗಿ (ರಾಜಸಿಂಹ III) ಹತ್ತನೇ ಶತಮಾನದಲ್ಲಿದ್ದವನೆಂದೂಹಿಸಿದರೆ, ಡಾ|| ಬಾರ್ನೆಟ್ ಮಹಾಶಯರು ಈ ನಾಟಕಕರ್ತನೇ ಮತ್ತವಿಲಾಸ, ಭಗವದಜ್ಜುಕೀಯ ಎಂಬ ಎರಡು ಪ್ರಹಸನಗಳ ರಚಯಿತನಾದ ಮಹೇಂದ್ರ ವಿಕ್ರಮರಾಜ (7ನೆಯ ಶತಮಾನದವ)ನೆಂದೇ ವಾದಿಸಿರುವರು. ಈ ಎರಡು ವಾದಗಳಿಗೂ ಸರಿಯಾದ ಆಧಾರವಿಲ್ಲ. ನಮ್ಮಲ್ಲಿ ಪ್ರಬುದ್ಧ ಕರ್ನಾಟಕದ ಒಂದು ಸಂಚಿಕೆಯಲ್ಲಿ ಶ್ರೀಯುತ ಹುಲ್ಲೂರು ಶ್ರೀನಿವಾಸ ಜೋಯಿಸರೆಂಬುವರು ಭಾರವಿಯೇ ಈ 13 ನಾಟಕಗಳನ್ನೂ ಬರೆದಿರಬಹುದೆಂಬ ಅತ್ಯದ್ಭುತವಾದ ಊಹೆಯನ್ನೂ ಮಂಡಿಸಿದ್ದಾರೆ. ಇವೆಲ್ಲವುಗಳ ಗೋಜಿಗೆ ಹೋಗದೆ ಈ '**ರಾಜಸಿಂಹ**'ನನ್ನು ಕುರಿತು ಶ್ರೀ ಗೋವಿಂದ

ವಾರಿಯರ್ ಎಂಬ ಮಲಯಾಳಿ ಪಂಡಿತರು Bombay Historical society ಯು 1928ನೆಯ ಇಸ್ವಿಯ ಸಂಚಿಕೆಯಲ್ಲಿ (ಪುಟ 164 ರಲ್ಲಿ) ಬರೆದ ಲೇಖನದಲ್ಲಿ ಮೂವರು ರಾಜಸಿಂಹರ ಪ್ರಸ್ತಾಪವನ್ನು ಮುಂದೊಡುವರು. ಇವರಲ್ಲಿ ಮೊದಲಿನವನು 9ನೆ ಶತಮಾನದವ, ಎರಡನೆಯುವ 11ನೆಯ ಶತಮಾನದವ, ಮೂರನೆಯುವ ಮನ್ನಾರ್‌ಕೋಯಿಲ್ ಎಂಬಲ್ಲಿದ್ದು ಈತನೂ 11ನೆಯ ಶತಮಾನದವನೆಂದೂ ಸಾಧಿಸಿ, ಈ ನಮ್ಮ 13 ನಾಟಕಗಳ ರಚಯಿತನಾದ ಭಾಸನು ಮೊದಲನೆಯ ರಾಜಸಿಂಹನ ಆಸ್ಥಾನದಲ್ಲಿದ್ದನೆಂದೂಹಿಸುವರು. ನಮಗೆ ಈ ವಾದಗಳೇ ಸರಿಹೋಗುವುದಿಲ್ಲವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಇನ್ನೊಬ್ಬ ಪ್ರಸಿದ್ಧ ವಿಮರ್ಶಕರಾದ ದೀನೇಶಚಂದ್ರ ಸರ್ಕಾರ್ ಎಂಬ ಬಂಗಾಲದೇಶದವರು Indian Historical Quarterly vol XV ಪುಟ 43ರಲ್ಲಿ ಈ ನಾಟಕಕರ್ತನು ಯಾರೋ ಉತ್ತರ ಹಿಂದುಸ್ತಾನದ ರಾಜನಾಗಿರಬಹುದೆಂದು ಇದೇ ಶ್ಲೋಕದ ಆಧಾರದಿಂದ ಊಹಿಸುವರು. ಈತನ ರಾಜ್ಯದ ಎಲ್ಲೆಗಳು ಹಿಮಾಲಯ ವಿಂಧ್ಯಪರ್ವತಗಳು, ಪೂರ್ವ ಪಶ್ಚಿಮದಲ್ಲಿ ಅರೇಬೀಸಮುದ್ರ, ಬಂಗಾಲದ ಕೊಲ್ಲಿಯೂ ಇದ್ದಿತೆಂದೂ ಅವರ ಅಭಿಪ್ರಾಯ. ಅಲ್ಲಿಯೇ ಇವರು Professor Raya chaudhuri ಎಂಬುವರ ಅಭಿಪ್ರಾಯವನ್ನು ಹೀಗೆ ವರ್ಣಿಸಿರುವರು—'ರಾಜಸಿಂಹನು ಪ್ರಾಯಶಃ ಚಂದ್ರಗುಪ್ತ II ಆಗಿರಬಹುದು. ಭಾಸನು ಈ 13 ನಾಟಕಗಳನ್ನು ಬರೆದದ್ದು ಖಂಡಿತವಾಗಿದ್ದರೆ, ಈತನು ಕಾಳಿದಾಸನ ಸಮಕಾಲೀನನಾಗಿ ಆತನಿಗಿಂತಲೂ ಪ್ರಾಯದಲ್ಲಿ ಸ್ವಲ್ಪ ದೊಡ್ಡವನಾಗಿರಬಹುದೆಂದೂ ನಾವು ಊಹಿಸುತ್ತೇವೆ.' ಈ ರಾಯಚೌಧುರಿ ಎಂಬ ಮಹಾಶಯರ ಊಹೆಯಲ್ಲಿ ಭಾಸನು ಕಾಳಿದಾಸನಿಗಿಂತ ವಯಸ್ಸಿನಲ್ಲಿ ಸ್ವಲ್ಪ ಹಿರಿಯವನಾಗಿದ್ದಿರಬಹುದೆಂಬ ಸಂಶಯವನ್ನು ನಾವು ಆಗಲೇ ಊಹಿಸಿದ್ದರಿಂದ ಈ ಭಾಗವು ನಮಗೆ ಅಭಿಮತವೇ ಆಗಿದೆಯೆಂದೊಪ್ಪಬಹುದು. ಆದರೆ ಈತ ಚಂದ್ರಗುಪ್ತ II ನ ಕಾಲದಲ್ಲಿದ್ದಿರಬಹುದೆಂಬ ಅಂಶವು ಮಾತ್ರ ನಮಗೆ ಅಭಿಮತವಲ್ಲವೆಂಬುದನ್ನು ಪ್ರತ್ಯೇಕ ಹೇಳುವ ಅವಶ್ಯಕತೆ ತೋರುವುದಿಲ್ಲ. ಇನ್ನೊಬ್ಬ ಮಹನೀಯರ ಊಹೆಯೇನೆಂದರೆ ದೂತ ಘಟೋತ್ಕಚ, ಮಧ್ಯಮ ವ್ಯಾಯೋಗ ನಾಟಕಗಳಲ್ಲಿ ಘಟೋತ್ಕಚನೇ ಅಭಿಮತನಾದ ನಾಯಕನಾದ್ದರಿಂದ ಈ ಭಾಸನು ಘಟೋತ್ಕಚಗುಪ್ತನೆಂಬ ಇದೇ ಗುಪ್ತವಂಶದ ರಾಜನೆಂದು. ಆದರೆ ಈ ಘಟೋತ್ಕಚ ಗುಪ್ತರಾಜನು ತನ್ನ ಪೂರ್ವಜರಾದ ಸ್ಕಂದಗುಪ್ತ, ಚಂದ್ರಗುಪ್ತರಷ್ಟು ಯಶಸ್ವಿಯಾಗಿರಲಿಲ್ಲವೆಂಬುದನ್ನು ನಾವು ಚರಿತ್ರೆಯಿಂದಲೇ ತಿಳಿಯುತ್ತೇವೆ. ಇದೇ ದೀನೇಶಚಂದ್ರ ಸರ್ಕಾರರು ಪತಂಜಲಿಯ ಮಹಾಭಾಷ್ಯದ ಕಾಲ

ನಿರ್ಣಯ ಮಾಡುವಾಗ (ಇದೇ Indian Historical Quarterly ಸಂಚಿಕೆಯ vol XV December 1939ರಲ್ಲಿ ಪುಟ 636) ಆರ್ಯಾವರ್ತವೆಂದರೆ ಮನುಸಂಹಿತೆಯ ಮಧ್ಯದೇಶವೆಂದು ಪ್ರತಿಪಾದಿಸಿ, ಇದರ ಎಲ್ಲೆಗಳು ಹಿಮವತ್, ವಿಂಧ್ಯಪರ್ವತಗಳು, ಪ್ರಯಾಗ ವಿನಶನಗಳೆಂಬ ಊರುಗಳೆಂದು ನಿರ್ದೇಶಿಸಿರುವರು. ಮನುವಿನ ಆರ್ಯಾವರ್ತದ ಎಲ್ಲೆಗಳಾದರೋ ಹಿಮದ್ವಿಂಧ್ಯ ಪರ್ವತಗಳು, ಪೂರ್ವಸಮುದ್ರ ಪಶ್ಚಿಮ ಸಮುದ್ರಗಳು. ಇದನ್ನು ಬರೆಯುವಾಗ ಅವರಿಗೆ ನಮ್ಮ ಈ ಭಾಸನ ಭರತವಾಕ್ಯದ ಶ್ಲೋಕದ ನೆನಪು—ಸಾಗರಪರ್ಯಂತಾಂ ಹಿಮವದ್ವಿಂಧ್ಯಕುಂಡಲಾಂ—ಬರುವುದೇ ಸಹಜ. ಅಲ್ಲಿ ಈ ಮಹನೀಯರು ಕ್ರಿಸ್ತುವಿನ ನಾಲ್ಕನೆಯ ಶತಮಾನದ ಅಂತ್ಯದಲ್ಲಿ ಈ ಕವಿಯಿದ್ದಿರಬಹುದೆಂದು ಊಹಿಸಿದರೂ ಅದಕ್ಕವರು ಕಾರಣವನ್ನಲ್ಲಿ ಸೂಚಿಸಲಿಲ್ಲ. ಹೇಗಾದರೂ ಇಲ್ಲಿ ಮಹೀಂ **ಏಕಾತಪತ್ರಾಂಕಾಂ** ಎಂದಿದೆಯೆಂಬುದನ್ನು ಮಾತ್ರ ಒತ್ತಿ ಹೇಳಿ, ಇಲ್ಲಿ ಪ್ರತಿಪಾದಿಸಲ್ಪಟ್ಟ ರಾಜನು ಏಕಚ್ಛತ್ರಾಧಿಪತಿಯಾಗಿದ್ದಿರಬೇಕೆಂಬುದನ್ನು ಮಾತ್ರ ವಿವರಿಸುವೆವು. ಅರ್ಥಾತ್ ನಮ್ಮ ಅಭಿಪ್ರಾಯವನ್ನು ಬಿಡಿಸಿ ಹೇಳುವುದಾದರೆ ರಾಜಸಿಂಹನೆಂದರೆ ಪುಷ್ಯಮಿತ್ರಶುಂಗನೆಂದು ಬೇರೆ ಹೇಳಬೇಕಾಗಿಲ್ಲ.

೧೯

ಯಜ್ಞ ಫಲವೂ ಭಾಸನದ್ದೋ?

ಜಯಕರ್ನಾಟಕ ೧೯೫೩ ನೆಯ ಇಸ್ವಿಯ ಮಾರ್ಚಿಯ ಸಂಚಿಕೆಯಲ್ಲಿ ರಾ. ಭ. ಹಾಸಣಗಿ ಎಂಬ ವಿದ್ವಾಂಸರು ಭಾಸನ ಹದಿನಾಲ್ಕನೆಯ ನಾಟಕರತ್ನ-ಯಜ್ಞಫಲವೆಂಬ ಲೇಖನವನ್ನು ಬರೆದಿರುವರು. ನಾವೂ ಒಂದನೆಯ ಅಧ್ಯಾಯ ದಲ್ಲಿ Dr. Winternitz ಮಹಾಶಯರ ಅಭಿಪ್ರಾಯವನ್ನು ಕನ್ನಡಿಸುವಾಗ ಬೇಕೆಂತಲೇ ಕ್ಷೀರಸಮುದ್ರ ಮಥನದಲ್ಲಿ ಲಬ್ಧವಾದ ರತ್ನಗಳಂತಿರುವ ಈ ನಾಟಕ ಗಳು ಎಂದು ಹೇಳುವಾಗ ಅಲ್ಲಿಯ ರತ್ನಗಳೂ ಹದಿನಾಲ್ಕು, ಈ ನಾಟಕಗಳೂ ಹದಿನಾಲ್ಕು ಇರಬಹುದೋ ಎಂಬ ಸಂಶಯವನ್ನೇ ಮಂಡಿಸಿದ್ದೇವೆ. ಆದರೆ ಶ್ರೀಯುತ ಸಾಹಿತೀವಲ್ಲಭರಾದ ಶಿಯಾಳಿ ಸುಂದರಾಚಾರ್ಯರೆಂಬ ಪ್ರಸಿದ್ಧ ವಿಮರ್ಶಕರು Hindu ಪತ್ರಿಕೆಯ Educational Supplement ನಲ್ಲಿ ಇದನ್ನು ವಿಮರ್ಶಿಸುವಾಗ ಇದರ ಶೈಲಿಯೂ ಧಾಟಿಯೂ ಖಂಡಿತವಾಗಿ ಭಾಸನವಲ್ಲವೆಂಬ ಅಭಿಪ್ರಾಯವನ್ನೇ ಪುರಸ್ಕರಿಸಿದ್ದಾರೆ. ಇದನ್ನೇ ಅನುಮೋದಿಸಿ Dr. Kunhan Raja ಎಂಬ ಇನ್ನೊಬ್ಬ ಪ್ರಸಿದ್ಧ ವಿಮರ್ಶಕರು(Andhra Universityಯಲ್ಲಿಯೂ ಮದ್ರಾಸ್ Universityಯಲ್ಲಿಯೂ ಪ್ರಾಧ್ಯಾ ಪಕರಾಗಿದ್ದು ಈಗ ನಿವೃತ್ತರಾಗಿ ಬೆಂಗಳೂರಿನಲ್ಲಿರುವರು.) ಅಭಿಪ್ರಾಯವನ್ನೇ ಅನುಮೋದಿಸುತ್ತ ಈ ನಾಟಕವನ್ನು ಬರೆದವರು ಇತ್ತೀಚೆಗೆ ತಾನೇ ದಿವಂಗತರಾದ ರೆಂದೂ,ಕೆಲವು ವರ್ಷಗಳ ಹಿಂದೆ ತಾನೇ ಸ್ವತಹಾ ಅವರೊಡನೆ ಪೂನಾ ಪಟ್ಟಣದಲ್ಲಿ ಮಾತನಾಡಿದ್ದೆನೆಂದೂ ಸ್ಪಷ್ಟ ವಿವರಿಸುವರು. ಇವೆರಡು ಮಹನೀಯರ ಅಭಿ ಪ್ರಾಯವೇ ಸಮಂಜಸವಾದುದೆಂದು ನಮಗೂ ಅನಿಸುತ್ತಿದ್ದರೂ, ಹಾಸಣಗಿ ಯವರ ಲೇಖನದ ಸಾರವನ್ನು ಇಲ್ಲಿ ಕೊಟ್ಟು, ಆ ಮಹನೀಯರು ಆ ನಾಟಕ ವನ್ನೆಷ್ಟು ಕೊಂಡಾಡುವರೋ ಅಷ್ಟೇ ಅದನ್ನು ನಾವೂ ಗೌರವಿಸುವೆವೆಂದಿಲ್ಲಿ ಮೊದಲು ಹೇಳಿ ಆ ನಾಟಕದ ಸಾರಾಂಶವನ್ನು ವಿವರಿಸುವೆವು.

ಹಾಸಣಗಿಯವರು ಅಪ್ಪಣೆ ಕೊಡಿಸಿದಂತೆ 13 ನಾಟಕಗಳಲ್ಲಿ ರಾಮಾಯಣದ ಆಧಾರದಮೇಲೆ ಬರೆದವು ಪ್ರತಿಮಾ ಮತ್ತು ಅಭಿಷೇಕ ಎಂಬ ಎರಡೇ ನಾಟಕಗಳು. ಆದರೆ ಯಜ್ಞಫಲವನ್ನೂ ಸೇರಿಸಿಕೊಂಡಲ್ಲಿ ಇದಕ್ಕೆ ಬಾಲ ಕಾಂಡದ ಕಥೆಯನ್ನೂ, ಪ್ರತಿಮಾ ನಾಟಕಕ್ಕೆ ಅಯೋಧ್ಯಾರಣ್ಯಕಾಂಡಗಳ ಕಥೆಯನ್ನೂ, ಅಭಿಷೇಕಕ್ಕೆ ಕಿಷ್ಕಿಂಧಾ, ಸುಂದರ, ಯುದ್ಧಕಾಂಡಗಳ ಕಥೆಯನ್ನೂ ಬಳಸಿಕೊಂಡಿದ್ದಾನೆಂದೂ ವಾದಿಸಬಹುದಾಗಿದೆ. ಅಷ್ಟೇ ಅಲ್ಲ, ಉತ್ತರಕಾಂಡದ ಆಧಾರದಿಂದ ಭವಭೂತಿಯು ಬರೆದಿರುವಂತೆ ಇನ್ನೊಂದು ನಾಟಕವನ್ನೂ ಬರೆದಿರಬಹುದೋ ಎಂದು ಹಾಸಣಗಿಯವರು ಊಹಿಸುವಾಗ ಸಂತೋಷದಿಂದ ನಾವೂ ಅನುಮೋದಿಸುತ್ತೇವೆ. ಸಾಹಿತ್ಯದರ್ಪಣವೆಂಬ ಪ್ರಸಿದ್ಧ ಆಲಂಕಾರಿಕನೊಬ್ಬನು ತನ್ನ ಲಕ್ಷಣೆಯ ಕಾರಿಕೆಯಲ್ಲಿ ಆರನೆಯ ಪರಿಚ್ಛೇದದಲ್ಲಿ—ಉತ್ಸಾಹಾತಿಶಯಂ ವತ್ಸ ತವ ಬಾಲ್ಯಂ ಚ ಪಶ್ಯತಃ । ಮಮ ಹರ್ಷವಿಷಾದಾಭ್ಯಾಂ ಆಕ್ರಾಂತಂ ಯುಗಪನ್ಮನಃ ॥ ಎಂಬ ಬಾಲಚರಿತವೆಂಬ ಭಾಸ ನಾಟಕದಿಂದ ಉದಾಹರಿಸುವೆನೆಂದು ಹೇಳುವನು. ಈ ಶ್ಲೋಕವನ್ನು ಓದಿದ ಕೂಡಲೇ **ರಾಮ** ಬಾಲಚರಿತವನ್ನೂ (—ಕೃಷ್ಣ ಬಾಲಚರಿತದಂತೆಯೇ—) ಬರೆದಿರಬಹುದೋ ಎಂಬ ಸಂಶಯವೂ ಬಲವತ್ತರವಾಗುವದು. ಕಿರಣಾವಲೀ ಇತ್ಯಾದಿ 24 ನಾಟಕಗಳನ್ನೀತನು ಬರೆದಿರುವನೆಂದು ಪ್ರಸಿದ್ಧವಿರುವದಷ್ಟೇ? ಉಳಿದ ನಾಟಕಗಳು ನಮಗೆಂದು ಸಿಗುವವೋ ದೇವರೇ ಬಲ್ಲ. ಮಹಾಭಾರತವನ್ನು ಕುರಿತು ಆರು ನಾಟಕಗಳನ್ನು ಬರೆದಿರುವಾಗ ರಾಮಾಯಣವನ್ನವಲಂಬಿಸಿ ಇನ್ನೂ ಒಂದೆರಡು ನಾಟಕಗಳನ್ನಾದರೂ ಈತನು ಖಂಡಿತವಾಗಿಯೂ ಬರೆದಿರಬಹುದಲ್ಲವೇ ? ಭರತನ ನಾಟ್ಯಶಾಸ್ತ್ರದ ವ್ಯಾಖ್ಯಾನಾವಸರದಲ್ಲಿ ಅ ಭಿ ನ ವ ಗು ಪ್ತ ಭಗವತ್ಪಾದರು "ತ್ರೇತಾಯುಗಂ.... ನ ಖಲು ತದ್ಧಿ ನ ಮೈಥಿಲೀ ಸಾ" ಎಂಬ ಶ್ಲೋಕವನ್ನುದಾಹರಿಸಲಿಲ್ಲವೇ? ಇದರ ವಿಶೇಷ ಪ್ರತಿಪಾದನೆಯನ್ನು Dr. Pusalkar ಮಹಾಶಯರು ತಮ್ಮ ಅಮೂಲ್ಯವಾದ Bhasa-A Study ಎಂಬ ಗ್ರಂಥದಲ್ಲಿ ವಿ ವ ರ ವಾ ಗಿ ಮಾಡಿರುವರು. ವಾಚಕರು ಅದನ್ನಲ್ಲಿಯೇ ಓದಬಹುದೆಂದು ಪ್ರಾರ್ಥಿಸುತ್ತೇವೆ.

ಇನ್ನು ಪ್ರಕೃತ ವಿಷಯ. ಕಾಠೇವಾಡದ ಗೋಂದಲದ ಆಯುರ್ವೇದ ಔಷಧಾಶ್ರಮದಲ್ಲಿ 1941ರಲ್ಲಿ ಇದನ್ನು ಪ್ರಕಟಿಸಿ, ಜೀವರಾಮ ಕಾಳಿದಾಸ ಶಾಸ್ತ್ರಿಗಳಿಂದ ಉತ್ತಮವಾದ ಮುನ್ನುಡಿಯನ್ನೂ ಬರೆಸಿದ್ದಾರೆ. ಇದರಲ್ಲಿ ಗಣಪತಿ ಶಾಸ್ತ್ರಿಗಳ ಅಭಿಪ್ರಾಯ ಪ್ರಕಾರ ಭಾಸನ ನಾಲ್ಕು ವಿಶಿಷ್ಟ ಸಂಪ್ರದಾಯಗಳೆಂದು ಸ್ವೀಕೃತಗಳಾದ (1) ನಾಂದ್ಯಂತೇ ತತಃ ಪ್ರವಿಶತಿ ಸೂತ್ರಧಾರಃ (2) ಸ್ಥಾಪನೆ (ಪ್ರಸ್ತಾವನೆಯಲ್ಲ) (3) ನಾಂದೀ ಪದ್ಯದಲ್ಲಿ ಮುದ್ರಾಲಂಕಾರದಿಂದ ಮುಖ್ಯ

ಪಾತ್ರ ನಿರ್ದೇಶ (ಸ್ವಪ್ನ ವಾಸವದತ್ತಾ ಇತ್ಯಾದಿಗಳಲ್ಲಿದ್ದಂತೆ),(4) ರಾಜಸಿಂಹನ ವಿಶಿಷ್ಟವಾದ ಭರತವಾಕ್ಯ–ತ್ವಂ ರಾಜಸಿಂಹ ಪೃಥಿವೀಂ ಸಾಗರಾಂತಾಂ ಪ್ರಶಾಧಿ ಚ–ಇವಿಷ್ಟು ಇರುವುದರಿಂದ ಇವುಗಳನ್ನು ಆ ನಾಟಕದ ಸಂಪಾದಕರು ಭಾಸನ ವಿಶಿಷ್ಟ ಲಕ್ಷಣಗಳೆಂದೇ ಸಾಧಿಸಿ,ಇದನ್ನು ಭಾಸನ ಹದಿನಾಲ್ಕನೆಯ ನಾಟಕವೆಂದೇ ಸಾಧಿಸಿದ್ದಾರೆ. ನಾವಾದರೋ ಹಾಸಣಗಿಯವರಿಗಿಂತಲೂ ಸ್ವಲ್ಪ ಮುಂದುವರಿದು ನಾವು ವೈಶಿಷ್ಟ್ಯವನ್ನೂ ಆಧಾರವಾಗಿಟ್ಟುಕೊಂಡು ಮೂರು ಯಜ್ಞ–ಪುತ್ರ ಕಾಮೇಷ್ಟಿ, ವಿಶ್ವಾಮಿತ್ರಯಜ್ಞ, ಜನಕಯಜ್ಞ, ಈ ಮೂರು ಯಜ್ಞಗಳ ಫಲ ರೂಪರಾಗಿ ರಾಮಾದ್ಯುತ್ಪತ್ತಿ, ಅಸ್ತ್ರಸ್ವೀಕಾರ, ಸೀತಾ ವಿವಾಹಗಳೆಂಬ ಫಲಗಳು–ಎಂಬಿವಿಷ್ಟೇ ನಾಟಕದಲ್ಲಿ ಉಕ್ತವಾಗಿದ್ದರೂ, ಎಲ್ಲಾ ಯಜ್ಞಗಳ ಫಲರೂಪನಾಗಿ ಪರಶುರಾಮ ಗರ್ವಭಂಗವೆಂಬ ಅತ್ಯುತ್ತಮನಾದ ಫಲವೂ ಅಂತ್ಯದಲ್ಲಿ ಲಭಿಸುವ ದೆಂದು ಪ್ರತಿಪಾದಿಸುವದರಲ್ಲಿ ಇನ್ನಷ್ಟು ಔಚಿತ್ಯವಿದೆಯೆಂದು ಸೂಚಿಸಲು ಬಯಸು ತ್ತೇವೆ. ಇಷ್ಟೇ ಅಲ್ಲ, ಬಾಲಕಾಂಡ ಮಾತ್ರ ಯಜ್ಞಫಲನೆಂದು ನಾವಿಷ್ಟರಲ್ಲಿಯೇ ತೃಪ್ತರಾಗಿ ಸುಮ್ಮನಾಗಬಾರದು, ಇಡೀ ರಾಮಾಯಣವೂ ವಾಲ್ಮೀಕಿಯು ತಪೋ ಯಜ್ಞ ಮಹಿಮೆಯ ಫಲವೆಂಬ ಅತ್ಯುದಾತ್ತವಾದ ಇನ್ನೊಂದು ಧ್ವನಿಯೂ ಇದರಲ್ಲಿದೆಯೆಂದು ನಮಗನಿಸುತ್ತದೆ. ನಮ್ಮ ವೇದದಲ್ಲಿಯಾದರೋ ಬರೇ ಯಜ್ಞಫಲದಿಂದಲೇ ಅವರು ತೃಪ್ತರಾಗದೆ, ಯಜ್ಞವೇ ವಿಷ್ಣುವೆಂದು (ಯಜ್ಞೋ ವೈ ವಿಷ್ಣುಃ) ಉತ್ಕರ್ಷವನ್ನೇ ಸಾಧಿಸಿದ್ದಾರೆ.

ಕಥಾ ಸಾರಾಂಶವನ್ನು ಹಾಸಣಗಿಯವರ ವಾಕ್ಯಗಳಲ್ಲಿಯೇ ಸಂಗ್ರಹಿಸುವಾ: ಅಂಕ ೧– ಮಂತ್ರಿ ಸುಮಂತ್ರನು ರಾಜಾ ದಶರಥನಿಗೆ ಪುತ್ರೋತ್ಪತ್ತಿಯಾದದ್ದ ಕ್ಕಾಗಿ ಪೌರರಿಗೆ, ಬ್ರಾಹ್ಮಣರಿಗೆ ಮತ್ತು ಇತರರಿಗೆ ಎಲ್ಲಾ ಸಂಭಾವನೆಯನ್ನೂ ಹಂಚಿದ ಸಂಗತಿಯನ್ನು ಹೇಳಿಕೊಳ್ಳುವಷ್ಟರಲ್ಲಿ ಕಂಚುಕಿಯು ಬಂದು ಈ ಸಂಭಾ ವನೆಗಳನ್ನು ಹಂಚುವುದಕ್ಕೂ ಬಂದಿಗಳನ್ನು ಬಿಡುಗಡೆ ಮಾಡುವದಕ್ಕೂ ರಾಜರ ಅಪ್ಪಣೆಯಾಗಿದೆಯೆಂದು ಹೇಳುವನು.ಅದಕ್ಕೆ ಸುಮಂತ್ರನು ಆ ಕೆಲಸಗಳನ್ನು ಮಾಡಿ ಯಾಗಿದೆಯೆಂದು ಹೇಳುವನು.ಅಷ್ಟರಲ್ಲಿ ವಿದೂಷಕನು ಬಂದು ತನ್ನ ಸಂತೋಷವನ್ನು ಹೇಳಿಕೊಳ್ಳುತ್ತಿರುವಾಗ ದಶರಥನು ಪ್ರವೇಶಿಸಿ, "ಸಕಲ ವಿದ್ಯಾಪಾರಂಗತನಾಗಿ ವಿವಿಧ ಯಜ್ಞಾದಿಧರ್ಮಕಾರ್ಯಗಳನ್ನು ನಡೆಸಿ ಶತ್ರುಭಯವಿಲ್ಲದಂತೆ ಪ್ರಜೆಗಳನ್ನು ಸುಖವಾಗಿ ಪಾಲಿಸುತ್ತಿದ್ದ ನನಗೆ ಬಹುದಿನಗಳಿಂದಿದ್ದ ಸಂತತಿಯಿಲ್ಲವೆಂಬ ಚಿಂತೆಯು ಇಂದು ಪರಿಹಾರವಾಯಿತಾದರೂ ಮನಸ್ಸಿಗೆ ಮಾತ್ರ ನೆಮ್ಮದಿ ಇಲ್ಲ ದಾಗಿದೆ. ಪಿತೃಋಣ ಮುಕ್ತನಾದೆನೆಂದು ಸಮಾಧಾನಪಟ್ಟುಕೊಳ್ಳುವದರಲ್ಲಿಯೇ ಮುದಿ ವಯಸ್ಸಿನಲ್ಲಿ ಜನಿಸಿದ ಮಕ್ಕಳನ್ನು ವೀರ್ಯವಿದ್ಯಾವಿನಯ ಸಂಪನ್ನರನ್ನಾಗಿ

ಮಾಡುವ ಜವಾಬ್ದಾರಿಯ ಬಂಧನವು ಇಂದು ಬಿಗಿಯುತ್ತಿದೆ. ಪುತ್ರಮೋಹದಿಂದ ಬದುಕಿರುವವರೆಗೂ ಮೋಕ್ಷದ ಯೋಚನೆಯನ್ನೇ ಮಾಡಲು ದಾರಿಯಿಲ್ಲದಾಗಿದೆ" ಎಂದು ತನ್ನ ಮನಸ್ಸಿನ ಸದ್ಯದ ಸ್ಥಿತಿಯನ್ನು ಹೇಳಿಕೊಳ್ಳುತ್ತಿರುವನು. ಆಗ ಪ್ರತೀಹಾರಿ ಚೇಟಿ ಮಂಥರೆಯರು ಬರುವರು.ಅನಂತರ "ಪಟ್ಟದರಸಿ"ಯಾದ ಕೌಸಲ್ಯೆಯು"ನಾನು ಜ್ಯೇಷ್ಠ ಪುತ್ರನನ್ನು ಹೆತ್ತಿರುವದರಿಂದ ನನ್ನನ್ನು ಮೊದಲು ಬಂದು ಅಭಿನಂದಿಸಬೇಕು" ಎಂದು ಹೇಳಿ ಕಳುಹಿಸಿದ ಮಾತನ್ನು ಪ್ರತಿಹಾರಿಯೂ "ಇಬ್ಬರು ತನಯರನ್ನು ಹೆತ್ತಿರುವ ತನ್ನನ್ನು ಮೊದಲು ಬಂದು ನೋಡಬೇಕು" ಎಂದು ಸುಮಿತ್ರೆಯು ಹೇಳಿ ಕಳುಹಿಸಿದ ಮಾತನ್ನು ಚೇಟಿಯೂ, "ನಿನಗೆ ಅತ್ಯಂತ ಪ್ರಿಯಳಾದ ಕಿರಿಯ ಪತ್ನಿಯಾದ ನಾನು ಗಂಡು ಸಂತತಿಯನ್ನು ಹೆತ್ತಿರುವದರಿಂವ ಮೊದಲು ಬಂದು ತನ್ನನ್ನೇ ಅಭಿನಂದಿಸಬೇಕು" ಎಂದು ಹೇಳಿ ಕಳುಹಿಸಿವ ಕೈಕೇಯಿಯ ಮಾತನ್ನು ಮಂಥರೆಯೂ ದಶರಥನಿಗೆ ಹೇಳುವರು. ಆಗ ದಶರಥನು ಈಗ ಸ್ವಲ್ಪ ತಾರತಮ್ಯ ನಡೆದರೂ ಅನರ್ಥವಾದೀತೆಂದು ಯೋಚಿಸಿ, "ಮೂವರೂ ನಡುಮನೆಯಲ್ಲಿ ಬಂದು ಸೇರಲಿ. ಅಲ್ಲಿಗೆ ಬಂದು ಎಲ್ಲರನ್ನೂ ಒಮ್ಮೆಯೇ ಅಭಿನಂದಿಸುವೆನು" ಎಂದು ಹೇಳಿ ಕಳುಹಿಸುವನು. ಅನಂತರ ವಿದೂಷಕನೊಂದಿಗೆ ಸಂಭಾಷಣೆ ಮಾಡುತ್ತ ತನ್ನ ಮೂವರು ಪತ್ನಿಯರಲ್ಲಿಯೂ ಸಮಾನವಾದ ವರ್ತನೆಯು ಯಾವ ರೀತಿಯದೆಂಬುದನ್ನು ಸೂಚಿಸಿ ಹೊರಟು ಹೋಗುವನು.

ಅಂಕ ೨—ರಾಜ ದಶರಥನು ತನ್ನ ಪತ್ನಿಯರಿಗೆ ಉಪವನಕ್ಕೆ ಬರುವಂತೆ ಹೇಳಿ ಕಳುಹಿಸಿ, ತಾನು ನಿರ್ಜನವಾದ ಉಪವನಕ್ಕೆ ಬಂದು ಕುಳಿತುಕೊಂಡು, "ತನ್ನ ಕರ್ತವ್ಯವೆಲ್ಲವನ್ನೂ ಮುಗಿಸಿದ್ದೇನೆ. ಶರೀರವು ಮುಪ್ಪಿನಿಂದ ಜೀರ್ಣವಾಗಿದೆ. ಸಕಲ ರಾಜಗುಣ ಸಂಪನ್ನನಾದ ರಾಮಚಂದ್ರನನ್ನು ಯೌವರಾಜ್ಯ ಪದವಿಯಲ್ಲಿ ಕೂಡ್ರಿಸಲು ಮನಸ್ಸು ಹಾತೊರೆಯುತ್ತಿದೆ" ಎಂದು ಯೋಚಿಸುತ್ತಿರುವಾಗ ಮಂತ್ರಿ ಸುಮಂತ್ರನು ಅಲ್ಲಿಗೆ ಬರುವನು. ಅವನೊಂದಿಗೆ ಇದೇ ವಿಷಯವಾಗಿ ಮಾತನಾಡುತ್ತ "ಕೈಕೇಯಿಯ ವಿವಾಹ ಸಮಯದಲ್ಲಿ ಅವಳ ಮಗನಿಗೆ ರಾಜ್ಯ ಪದವಿಯನ್ನು ಕೊಡುತ್ತೇನೆಂದು ವಚನ ಕೊಟ್ಟಂತೆ ಈಗ ಭರತನೇ ರಾಜ್ಯಾಧಿಕಾರಿಯಾಗುತ್ತಾನೆ. ಇದರಿಂದ ನನ್ನ ಮನಸ್ಸಿನಲ್ಲಿರುವಂತೆ ರಾಮನಿಗೆ ಯೌವರಾಜ್ಯಾಭಿಷೇಕ ಮಾಡಲು ಆತಂಕವುಂಟಾಗಿದೆ. ಇದರಿಂದ ನನ್ನ ಮನಸ್ಸು ಚಿಂತೆ ಜಾಗರಣೆಗಳಿಗೆ ವಶವಾಗಿ ಅತೀವ ನೋಯುತ್ತಿದೆ" ಎಂದು ಹೇಳುವನು. ಆಗ ಸುಮಂತ್ರನು ಮೂವರು ರಾಣಿಯರಿಗೂ ರಾಮನಲ್ಲಿ ಏಕ

ಪ್ರಕಾರವಾದ ಪ್ರೀತಿಯಿರುವದರಿಂದ ನಿನ್ನ ಇಷ್ಟವು ನೆರವೇರುವದಕ್ಕೆ ಯಾವ ತೊಂದರೆಯೂ ಬರಲಾರದೆಂದು ಸಮಾಧಾನ ಹೇಳುವನು. ಅದಕ್ಕೆ ದಶರಥನು "ಆದರೂ ಈ ವಿಷಯದಲ್ಲಿ ಉದಾಸೀನರಾಗದೇ ಮೊದಲೇ ಎಚ್ಚರಿಕೆಯಿಂದಿರುವುದು ಒಳ್ಳೆಯದು. ಅದಕ್ಕಾಗಿ ಪ್ರಜೆಗಳಿಗೂ ಮಂತ್ರಿಗಳಿಗೂ, ಪರಿವಾರದವರಿಗೂ ರಾಮನಲ್ಲಿ ವಿಶೇಷವಾದ ಪ್ರೀತ್ಯಾದರಗಳು ಹುಟ್ಟುವಂತೆಯೂ ಭರತನಿಗೆ ರಾಮನಲ್ಲಿ ಅತಿಶಯವಾದ ಭಕ್ತಿಯು ದೃಢಮೂಲವಾಗುವಂತೆಯೂ ಪ್ರಯತ್ನಿಸಬೇಕೆ"ಂದು ಹೇಳುವನು. ಅಷ್ಟರಲ್ಲಿ ರಾಜ ಮಹಿಷಿಯರು ಬಂದು ರಾಜನಿಗೆ ಅಭಿನಮಿಸುವರು. ಕುಶಲ ಸಂಭಾಷಣೆಯಾದನಂತರ ಕೈಕೇಯಿಯು ಕರೆಸಿದ ಕಾರಣವೇನೆಂದು ಕೇಳುವಳು. ಅದಕ್ಕೆ ದಶರಥನು, "ಸೊಬಗಿನ ಉದ್ಯಾನದ ನೆಳಲಿನಲ್ಲಿ ಕುಳಿತು ವಿನೋದವಾಗಿ ಮಾತನಾಡುವ ಎಂದು ಬರಹೇಳಿದೆ, ಬನ್ನಿ ಕುಳಿತುಕೊಳ್ಳಿ" ಎನ್ನುವನು. ನಂತರ ಎಲ್ಲರೂ ಒಂದು ತರುಚ್ಛಾಯೆಯಲ್ಲಿ ಕುಳಿತುಕೊಳ್ಳುವರು. ಅನಂತರ ದಶರಥನು, "ಮಕ್ಕಳಿಗೆ ಹದಿನೈದು ವರ್ಷ ತುಂಬಿತು ; ಅವರೆಲ್ಲರೂ ನಯ ವಿನಯಾದಿ ಗುಣಭೂಷಿತರು ; ಬುದ್ಧಿವಂತರು ; ಪರಾಕ್ರಮಿಗಳು, ಇದರಿಂದ ನನಗೆ ಎಲ್ಲರಲ್ಲಿಯೂ ಒಂದೇ ಸಮನಾದ ಪ್ರೀತಿಯು ಹರಿಯುತ್ತಿದೆ" ಎಂಬ ಮಾತನ್ನು ಆರಂಭಿಸಿ ರಾಜ್ಯವನ್ನು ನಾಲ್ಕು ಜನರಿಗೂ ಸಮನಾಗಿ ಹಂಚಿ ಕೊಡುತ್ತೇನೆ ಎಂದು ಹೇಳಿ ಅದರ ಬಗ್ಗೆ ಪತ್ನಿಯರ ಅದರಲ್ಲಿಯೂ ವಿಶೇಷವಾಗಿ ಕೈಕೇಯಿಯ ಅಭಿಪ್ರಾಯವನ್ನು ಹೊರಗೆಡಹಿ ಚರ್ಚಿಸಿ ಕೊನೆಗೆ ಎಲ್ಲರ ಏಕಾಭಿಪ್ರಾಯದಿಂದ ರಾಮನಿಗೇ ರಾಜ್ಯಾಧಿಕಾರವೆಂದು ತೀರ್ಮಾನಿಸಿಕೊಂಡು ಎಲ್ಲರೂ ಹೊರಟು ಹೋಗುವರು.

ಅಂಕ ೩—ಇಂದ್ರನು ಕಳುಹಿಸಿದ ಇಬ್ಬರು ಗಂಧರ್ವರು ಅಯೋಧ್ಯೆಗೆ ಬಂದು ರಾವಣನಿಂದ ರಾಮನಿಗೆ ಯಾವ ತೊಂದರೆಯೂ ಆಗದಂತೆ ಗುಪ್ತವಾಗಿ ರಾಮನನ್ನು ಹಿಂಬಾಲಿಸುತ್ತಿರುವರು. ಇದೇ ಸಂದರ್ಭದಲ್ಲಿ ರಾವಣನೂ ಸಹ ಒಂದು ದಿವಸ ಗುಪ್ತವಾಗಿ ಬಂದು ಅಯೋಧ್ಯೆಯಲ್ಲಿ ಸಂಚರಿಸಿ ಹೋಗುವನು. ಈ ಸಂಗತಿಯು ನಗರದಲ್ಲಿ ಹರಡಿ ನಾಗರಿಕರೆಲ್ಲರೂ ಗಾಬರಿ ಪಟ್ಟುಕೊಳ್ಳುವರು. ಇನ್ನೊಂದು ದಿನ ವಿಶ್ವಾಮಿತ್ರನು ತನ್ನ ಯಜ್ಞ ರಕ್ಷಣೆಗಾಗಿ ರಾಮನನ್ನು ಕರೆದುಕೊಂಡು ಹೋಗಬೇಕೆಂದು ಅಯೋಧ್ಯೆಗೆ ಬರುತ್ತಿರುವಾಗ ದಾರಿಯಲ್ಲಿ ಗುಪ್ತವಾಗಿ ಬರುತ್ತಿರುವ ರಾವಣನನ್ನು ಕಾಣುವನು. ಕೂಡಲೇ ತಾನೂ ಸಹ ತಿರಸ್ಕರಣಿ ವಿದ್ಯೆಯಿಂದ ಅದೃಶ್ಯನಾಗಿ ರಾವಣನನ್ನು ಹಿಂಬಾಲಿಸುವನು. ಇದೇ ಸಮಯದಲ್ಲಿ ಅಂದು ಅನಧ್ಯಯನವಾದುದರಿಂದ ಗುರು ವಸಿಷ್ಠರ ಅಪ್ಪಣೆ ಪಡೆದು ರಾಮನು ಸಹೋದರರೊಂದಿಗೆ ಅಸ್ತ್ರ ಸಿದ್ಧಿಯ ಪ್ರಯೋಗ ಪರೀಕ್ಷೆ ಮಾಡಿಕೊಳ್ಳುವದಕ್ಕಾಗಿ

ನೂಪದ ಕಾಡಿಗೆ ಹೋಗುವನು. ಶತ್ರುಘ್ನನಿಂದ ಮೊದಲ್ಗೊಂಡು ಒಬ್ಬೊಬ್ಬರವಾಗಿ ಅಸ್ತ್ರ ಪ್ರಯೋಗಗಳು ನಡೆದ ನಂತರ ರಾಮನು ಅಸ್ತ್ರಪ್ರಯೋಗ ಮಾಡುವನು. ರಾಮನು ಬಿಟ್ಟ ಅಸ್ತ್ರಗಳೆಲ್ಲವೂ ಲಕ್ಷ್ಯಕ್ಕೆ ತಲುಪದೆ ಮಧ್ಯದಲ್ಲಿಯೇ ತುಂಡಾಗಿ ಬೀಳುವುವು. ಹೀಗೆ ಒಂದಾದ ಮೇಲೊಂದರಂತೆ ಬಿಟ್ಟ ಅಸ್ತ್ರಗಳೆಲ್ಲವೂ ವಿಫಲವಾಗುತ್ತಿದ್ದುದನ್ನು ಕಂಡ ರಾಮನು ಕೋಪಗೊಂಡು ಆಗ್ನೇಯಾಸ್ತ್ರವನ್ನು ಬಿಡಲು ಸಿದ್ಧನಾಗುವನು. ಇದನ್ನು ಕಂಡ ಗುಪ್ತನಾಗಿದ್ದ ರಾವಣನಿಗೆ ಹೃದಯ ಕಂಪನವುಂಟಾಗಿ, ಇದು ರಾಮನಿಂದ ತನಗೆ ಉಂಟಾದ ಮೊದಲನೆಯ ಭಯವು ಎಂದು ಹೇಳಿಕೊಳ್ಳುತ್ತಾ ಹೊರಟು ಹೋಗುವನು. ರಾಮನು ಅಸ್ತ್ರ ಪ್ರಯೋಗಿಸಬೇಕೆನ್ನುವಷ್ಟರಲ್ಲಿ ಅದೇ ದಿಕ್ಕಿನಿಂದ ಬರುತ್ತಿದ್ದ ವಶಿಷ್ಠರನ್ನು ಕಂಡ ಭರತನು ರಾಮನನ್ನು ತಡೆಯುವನು. ವಶಿಷ್ಠನು ಬಂದು ರಾವಣನು ನಿಗೂಢನಾಗಿ ಬಂದು ಅಸ್ತ್ರಗಳನ್ನು ಕತ್ತರಿಸುತ್ತಿದ್ದುದನ್ನೂ ಅವನನ್ನು ಹಿಂಬಾಲಿಸುತ್ತಿದ್ದ ವಿಶ್ವಾಮಿತ್ರನ ವಿಚಾರವನ್ನೂ ಹೇಳಿದನು. ಅನಂತರ "ರಾವಣನು ಹಿಂತಿರುಗಿ ಬಂದು ನಿನಗೇನಾದರೂ ತೊಂದರೆಯುಂಟು ಮಾಡಬಹುದೆಂಬ ಶಂಕೆಯಿಂದ ಅವನನ್ನು ಹಿಂಬಾಲಿಸಿ ವಿಶ್ವಾಮಿತ್ರನು ಹೋಗಿದ್ದಾನೆ. ನಾಳೆ ತನ್ನ ಯಜ್ಞ ರಕ್ಷಣೆಗಾಗಿ ನಿನ್ನನ್ನು ಕರೆದುಕೊಂಡು ಹೋಗಲು ಬರುತ್ತಾನೆ" ಎಂದು ಹೇಳಿ ವಿಶ್ವಾಮಿತ್ರನು ಬಂದಾಗ ನಡೆದುಕೊಳ್ಳಬೇಕಾದ ರೀತಿಯನ್ನೂ ಸಹ ರಾಮಾದಿಗಳಿಗೆ ತಿಳಿಸಿದನು. ಇವೆಲ್ಲ ಸಮಾಚಾರಗಳೂ ರಾಮಾದಿಗಳು ನಗರವನ್ನು ಸೇರುವದಕ್ಕೆ ಮುಂಚಿತವಾಗಿಯೇ ಪರಿಚಾರಿಕೆಯರಿಂದ ದಶರಥನಿಗೆ ತಿಳಿದು ಅವನು ನಗರ ರಕ್ಷಣೆಯ ಪ್ರಯತ್ನವನ್ನು ವಿಶೇಷವಾಗಿ ನಡೆಸುವನು.

ಅಂಕ ೪—ವಿಶ್ವಾಮಿತ್ರನು ದಶರಥನಲ್ಲಿಗೆ ಬರುವನು. ಅವನಿಗೆ ಉಚಿತೋಪಚಾರಗಳು ನಡೆದ ನಂತರ ವಿಶ್ವಾಮಿತ್ರನು ರಾಮಾದಿಗಳ ವಿದ್ಯಾಭ್ಯಾಸಾದಿಗಳನ್ನು ಕೇಳುವಾಗ ದಶರಥನು ಆಶ್ರಮವಾಸಿಗಳ ನಿರುಪದ್ರವತೆಯನ್ನು ಕೇಳುವನು. ಹೀಗೆ ಪರಸ್ಪರ ಕುಶಲ ಸಂಭಾಷಣೆಯಾದ ನಂತರ ವಿಶ್ವಾಮಿತ್ರನು ಆಶ್ರಮವಾಸಿಗಳಿಗೆ ರಾಕ್ಷಸರಿಂದ ಆಗುತ್ತಿರುವ ತೊಂದರೆಗಳನ್ನು ಹೇಳುವನು. ರಾಕ್ಷಸರಿಂದಾದ ತೊಂದರೆಗಳನ್ನು ನಿವಾರಿಸಲು ತನ್ನಿಂದೇನಾಗಬೇಕೆಂದು ದಶರಥನು ಕೇಳುವನು : ಅದಕ್ಕೆ ವಿಶ್ವಾಮಿತ್ರನು, "ಒಂದು ಕೆಲಸಕ್ಕೆ ಎರಡು ಫಲ ದೊರೆಯುವದು. ಅದಕ್ಕಾಗಿ ರಾಮನನ್ನು ನನ್ನ ಜತೆ ಕಳುಹಿಸಿಕೊಡು" ಎಂದು ಹೇಳುವನು. ಮಾರೀಚ ಸುಬಾಹುಗಳಿಂದ ಆಗುತ್ತಿರುವ ತೊಂದರೆಯನ್ನು ಪರಿಹರಿಸುವ ಕಷ್ಟದ ಕೆಲಸಕ್ಕೆ ರಾಮನನ್ನು ಕಳುಹಿಸಲು ಮೊದಲು ಒಪ್ಪದೇ ಇದ್ದರೂ ಕೊನೆಗೆ

ವಸಿಷ್ಠರ ಮಾತಿನಿಂದಲೂ, ವಿಶ್ವಾಮಿತ್ರನ ಆಗ್ರಹದಿಂದಲೂ, ರಾಮ ಲಕ್ಷ್ಮಣ ರನ್ನು ವಿಶ್ವಾಮಿತ್ರನ ಜತೆಗೆ ದಶರಥನು ಕಳುಹಿಸಿಕೊಡುವನು.

ಅಂಕ ೫—ಯಜ್ಞ ವಿಘಾತಕರಾದ ರಾಕ್ಷಸರಲ್ಲಿ ಸುಬಾಹುವನ್ನು ಕೊಂದು ಮಾರೀಚನನ್ನು ಬಹು ದೂರ ಸಮುದ್ರದಲ್ಲಿ ಎಸೆದಿರುವದರಿಂದ ಉಪದಿಷ್ಟವಾದ ವಿದ್ಯೆಯು ಬೇಗನೇ ಫಲಿಸಿತೆಂದೂ ಇದರಿಂದ ರಾವಣನ ಶಕ್ತಿಯು ಹ್ರಾಸವಾಯಿತೆಂದೂ ವಿಶ್ವಾಮಿತ್ರನು ರಾಮನಿಗೆ ಹೇಳುವನು. ರಾಮನು ಅದು ಹೇಗೆಂದು ಕೇಳಲಾಗಿ, ವಿಶ್ವಾಮಿತ್ರನು "ಇವನು ರಾವಣನ ಕಡೆಯವನಾದುದರಿಂದ ನಿನ್ನ ಪರಾಕ್ರಮವು ಅವನಿಗೆ ತಿಳಿಯದೇ ಹೋಗುವದಿಲ್ಲ" ಎಂದು ಹೇಳುವನು. ಸ್ವತಃ ಪರಾಕ್ರಮಶಾಲಿಯಾದ ರಾವಣನ ಜತೆಗೆ ತಾನು ಯುದ್ಧ ಮಾಡುವ ಅವಕಾಶವು ದೊರೆಯಬಹುದೇ ಎಂದು ರಾಮನು ಕೇಳಲಾಗಿ ವಿಶ್ವಾಮಿತ್ರನು "ಧರ್ಮನಿಮಿತ್ತವಾಗಿ ನಿನಗೂ ಅವನಿಗೂ ಯುದ್ಧವಾಗಿ ನೀನೇ ಜಯಶಾಲಿಯಾಗುತ್ತೀಯೆ" ಎಂದು ಹೇಳುವನು.

ಅನಂತರ ವಿಶ್ವಾಮಿತ್ರನು ರಾಮಲಕ್ಷ್ಮಣರೊಂದಿಗೆ ಆಶ್ರಮದ ಪ್ರಾಂತ ಭೂಮಿಯನ್ನು ಸುತ್ತುತ್ತಾ ಅವರನ್ನು ಒಂದು ಹಳ್ಳಿಗೆ ಕರೆದುಕೊಂಡು ಹೋಗುವನು. ಅಲ್ಲಿ ಮೊದಲು ಭೆಟ್ಟಿಯಾದ ಒಬ್ಬ ಗ್ರಾಮವೃದ್ಧೆಯೊಡನೆ ಯೋಗ ಕ್ಷೇಮವನ್ನು ವಿಚಾರಿಸಿಕೊಂಡು ಆ ರಾತ್ರಿ ಅವಳ ಆತಿಥ್ಯವನ್ನು ಸ್ವೀಕರಿಸಿ ಗ್ರಾಮೀಣರ ನಿರ್ವ್ಯಾಜ ಸರಳ ಪ್ರೇಮಮಯ ಜೀವನವನ್ನೂ ನಾಗರಿಕರ ಕಪಟಾಡಂಬರದ ಜೀವನವನ್ನೂ ಕುರಿತು ಮಾತನಾಡುತ್ತ ಗ್ರಾಮ ಜೀವನದ ಪ್ರತ್ಯಕ್ಷಾನುಭವವನ್ನು ರಾಮ ಲಕ್ಷ್ಮಣರಿಗೆ ಉಂಟುಮಾಡಿ ಕೊಡುತ್ತ ಮರುದಿನ ಆಶ್ರಮಕ್ಕೆ ಕರೆತರುವನು. ಅನಂತರ ವಿಶ್ವಾಮಿತ್ರನು ವಿದೇಹಾಧಿಪತಿ ಜನಕನು ನಡೆಸುತ್ತಿರುವ ವಾರ್ಷಿಕ ಸತ್ರಕ್ಕೆ ಬರಲು ತನಗೆ ಆಹ್ವಾನ ಬಂದಿದೆಯೆಂದೂ ಇನ್ನು ಆರೆಂಟು ದಿನಗಳಲ್ಲಿಯೇ ಅದರ ಮಂಗಳವು ನಡೆಯುವದರಿಂದ ಜನಕನನ್ನು ಅಭಿನಂದಿಸಲು ತಾನು ಹೋಗಬೇಕಾಗಿದೆಯೆಂದೂ ತನ್ನ ಜತೆಗೆ ಬರಬೇಕೆಂದೂ ರಾಮಲಕ್ಷ್ಮಣರಿಗೆ ಹೇಳುವನು. ಅ ದ ರ ಂ ತೆ ಯೆ ರಾಮಲಕ್ಷ್ಮಣರೊಂದಿಗೆ ವಿಶ್ವಾಮಿತ್ರನು ಜನಕಪುರಿಗೆ ಹೋಗುವನು.

ಅಂಕ ೬—ವಿಶ್ವಾಮಿತ್ರನು ರಾಮಲಕ್ಷ್ಮಣರೊಂದಿಗೆ ಜನಕಪುರಿಗೆ ಬಂದಿದ್ದಾನೆ. ರಾಮನನ್ನು ನೋಡಿದ ಜನಕನ ಭಟರು "ಜಾನಕಿಯು ರಾಮನನ್ನು ವರಿಸಿದರೆ ಚೆನ್ನಾಗಿರುತ್ತದೆ. ಇವರಿಬ್ಬರೂ ಅಲ್ಪಕಾಲದಲ್ಲಿಯೇ ಬದ್ಧಾನುರಾಗಿಗಳಾಗಿರುವಂತೆ ಕಾಣುತ್ತದೆ. ಇಬ್ಬರೂ ಸಂದಿಗೊಂದಿಗಳಲ್ಲಿ ನಿಂತು ಪರಸ್ಪರ ಕದ್ದು ನೋಡುತ್ತಾರೆ" ಎಂಬುದಾಗಿ ಸೀತಾ ರಾಮರ ಪ್ರಣಯ ಚೇಷ್ಟೆಗಳನ್ನೂ

ಪ್ರಸ್ತಾಪಿಸುತ್ತಾರೆ. ಅನಂತರ ಮದನತಪ್ತನಾದ ರಾಮನು ಉಪವನಕ್ಕೆ ಬಂದು ವಿಹರಿಸುತ್ತಿರುವಾಗ ಗೆಳತಿಯರೊಂದಿಗೆ ಜಾನಕಿಯು ಉಪವನಕ್ಕೆ ಬರುವಳು. ಇವರನ್ನು ಕಂಡ ರಾಮನು ಅಲ್ಲಿಯೇ ಮರೆಯಲ್ಲಿ ನಿಲ್ಲುವನು. ಮದನಪೀಡಿತಳಾದ ಸೀತೆಗೆ ಗೆಳತಿಯರು ಶೈತ್ಯೋಪಚಾರ ಮಾಡಿ ಅವಳ ತಾಪಕ್ಕೆ ಕಾರಣವನ್ನೂ ಅವಳ ಬಾಯಿಂದಲೇ ಹೊರಗೆಡಹುವರು. ಸೀತೆಯ ತಾಪವು ತನ್ನ ನಿಮಿತ್ತವಾಗಿಯೇ ಇರುವದೆಂಬುದನ್ನು ತಿಳಿದ ರಾಮನು ಸಂತೋಷ ಪಡುವನು. ಸೀತೆ ಮತ್ತು ಅವಳ ಗೆಳತಿಯರು ರಾಮನ ವಿಷಯವಾಗಿ ಮಾತನಾಡುತ್ತಿರುವಾಗ ಶಿವ ಧನುಸ್ಸನ್ನು ಮುರಿಯಬೇಕೆಂಬ ನಿಬಂಧನೆಯ ವಿಷಯವು ಬಂದ ಕೂಡಲೇ ಗೆಳತಿಯೊಬ್ಬಳು ಕುಳ್ಳನಾದ ರಾಮನಿಂದ ಅದು ಸಾಧ್ಯವಾಗಲಾರದೆಂದು ಹೇಳುವಳು. ಈ ಮಾತನ್ನು ಕೇಳಿದ ಕೂಡಲೇ ಸೀತೆಯು ಮೂರ್ಛೆಗೊಳ್ಳುವಳು. ಕೂಡಲೇ ಗೆಳತಿಯರು 'ಕಾಪಾಡಿರಿ! ಕಾಪಾಡಿರಿ!' ಎಂದು ಕೂಗಿಕೊಳ್ಳುತ್ತ ಸೀತೆಗೆ ಶೈತ್ಯೋಪಚಾರ ಮಾಡುವರು. ಆಗ ರಾಮನು ಅವರ ಹತ್ತಿರಕ್ಕೆ ಬರುವನು. ಅನಂತರದ ಸಂಭಾಷಣೆಯಿಂದ ಸೀತಾ ರಾಮರಿಬ್ಬರೂ ಪರಸ್ಪರ ಕುಲಗೋತ್ರಗಳನ್ನು ತಿಳಿದು ಪರಿಚಯ ಮಾಡಿಕೊಳ್ಳುತ್ತಿರುಗಾಗ ಅಲ್ಲಿಗೆ ಜನಕನು ಬರುತ್ತಿರುವದನ್ನು ಕಂಡು ರಾಮನು ಅಲ್ಲಿಂದ ಹೊರಟು ಹೋಗುವನು. ಜನಕನು ವಿವಾಹದ ವಿಷಯವನ್ನು ಸೀತೆಗೆ ತಿಳುಹಿಸಿ ಸಖಿಯರೊಡನೆ ಅವಳನ್ನು ಮನೆಗೆ ಕಳುಹಿಸುವನು. ಅನಂತನ ಪ್ರತಿಹಾರಿಯ ಹತ್ತಿರ, "ಸಾಯಂಕಾಲ ತಮ್ಮ ಹತ್ತಿರ ಮಾತನಾಡುವ ಕೆಲಸವಿದೆ ಅದಕ್ಕಾಗಿ ಅವಕಾಶ ಮಾಡಿಕೊಳ್ಳುವಂತೆ ವಿಶ್ವಾಮಿತ್ರನಿಗೆ ತಿಳಿಸು" ಎಂದು ಹೇಳಿ ಕಳುಹಿಸಿ, ಅನಂತರ, "ಇಂದಿಗೆ ಆರನೆಯ ದಿವಸ ಸತ್ರಾಂತ್ಯದಲ್ಲಿ ಆರ್ಷ ವಿಧಿಯಿಂದ ಸೀತೆಯನ್ನು ರಾಮನಿಗೆ ಕೊಟ್ಟು ವಿವಾಹ ಮಾಡುತ್ತೇನೆ. ಅದಕ್ಕಾಗಿ ದಶರಥಾದಿಗಳನ್ನು ಕರೆದುಕೊಂಡು ಬರಲು ದೂತರನ್ನು ಅಯೋಧ್ಯೆಗೆ ಕಳುಹಿಸುತ್ತೇನೆ. ನನ್ನ ಪ್ರಾರ್ಥನೆಯನ್ನು ದಶರಥನು ಅಲ್ಲಗಳೆಯಲಾರನು" ಎಂದು ತನ್ನಲ್ಲಿಯೆ ಹೇಳಿಕೊಳ್ಳುತ್ತ ಜನಕನು ಅರಮನೆಗೆ ಹೋಗುವನು.

ಅಂಕ ೭—ಪರಿವಾರ ಸಮೇತನಾದ ದಶರಥ, ವಸಿಷ್ಠ, ಶತಾನಂದಾದಿಗಳು ಜನಕನ ಬಳಗದವರೂ ಸೇರುವ ಸಭೆಯಲ್ಲಿ ಜನಕನು ಆರ್ಷ ವಿಧಿಯಿಂದ ಸೀತೆಯನ್ನು ಶಿವ ಧನುರ್ಭಂಗ ಮಾಡಿದ ರಾಮನಿಗೆ ಕೊಟ್ಟು ಮದುವೆ ಮಾಡುವನು. ಈ ಸಮಾರಂಭವನ್ನು ತಿಳಿದ ಪರಶುರಾಮನು ಇಂತಹ ಮಹತ್ತರವಾದ ಕೆಲಸವನ್ನು ತನಗೆ ತಿಳಿಸದೇ ಮಾಡಿದ್ದಕ್ಕಾಗಿ ಕೋಪಗೊಂಡು ಜನಕನ ಸಭೆಗೆ ಬರುವನು. ಪರಶುರಾಮನನ್ನು ಕಂಡು ಎಲ್ಲರೂ ಭಯಗ್ರಸ್ತರಾಗಿರುವಾಗ

ರಾಮನು, "ಬ್ರಾಹ್ಮಣರು ಕೋಪಗೊಂಡು ಶಾಪ ಕೊಡುವದಕ್ಕಾಗಲೀ, ಕೊಲ್ಲುವದಕ್ಕಾಗಲೀ ಉದ್ಯುಕ್ತರಾಗಿದ್ದರೂ ಸಹ ನಯ ವಿನಯದ ಮಾತುಗಳಿಂದ ಅವರನ್ನು ಸಮಾಧಾನಗೊಳಿಸಬಹುದು" ಎಂದು ಎಲ್ಲರಿಗೂ ಧೈರ್ಯ ಹೇಳುವನು.

ಪರಶುರಾಮನು ಬಂದ ಕೂಡಲೇ ವಸಿಷ್ಠಾದಿಯಾಗಿ ಸಭಿಕರೆಲ್ಲರೂ ಎದ್ದು ಪರಶುರಾಮನಿಗೆ ನಮಸ್ಕರಿಸುವರು. ರಾಮನು ಧನುರ್ಭಂಗ ಮಾಡಿದ ರೀತಿಯನ್ನು ತಿಳಿದ ಪರಶುರಾಮನು ತನ್ನ ಕರದಲ್ಲಿರುವ ಧನುಸ್ಸನ್ನು ರಾಮನ ಕೈಗೆ ಕೊಟ್ಟು ಅದಕ್ಕೆ ಹೆದೆಯೇರಿಸುವಂತೆ ಹೇಳುವನು. ಅದೇ ಸಮಯದಲ್ಲಿ ಪರಶುರಾಮನಿಗೆ ರಾಮನು ವಿಷ್ಣುವಿನ ಅಂಶಾವತಾರವೆಂಬುದು ಗೋಚರವಾಗುವದು. ಕೂಡಲೇ ಪರಶುರಾಮನು ರಾಮನಿಗೆ ನಮಸ್ಕರಿಸಿ ತಾನು ಆರಂಭಿಸಿದ ದುಷ್ಟ ನಿಗ್ರಹ ಕಾರ್ಯವನ್ನು ರಾಮನು ಪೂರೈಸಬೇಕೆಂದು ಹೇಳಿ ಎಲ್ಲರಿಗೂ ಆಶೀರ್ವಾದ ಮಾಡಿ ಹೊರಟು ಹೋಗುವನು. ಈ ಘಟನೆಯು ಶಾಂತ ರೀತಿಯಿಂದ ಕೊನೆಗಂಡದ್ದಕ್ಕಾಗಿ ಎಲ್ಲರಿಗೂ ಸಂತೋಷವಾಗುವದು. ಅನಂತರ ವಿಶ್ವಾಮಿತ್ರನು ಭರತವಾಕ್ಯ ಹೇಳಿ ಆಶೀರ್ವದಿಸುವನು. ಇಲ್ಲಿಗೆ ನಾಟಕ ಮುಕ್ತಾಯವಾಗುತ್ತದೆ.

ನಾಟಕದ ಕಥಾವಸ್ತುವು ಜನಸಾಮಾನ್ಯರಿಗೆ ತಿಳಿದ ವಿಷಯವೇ ಆಗಿದ್ದರೂ, ಭಾಸನು ? ಅದನ್ನು ನಾಟಕದಲ್ಲಿ ಹೇಳುವ ರೀತಿ, ನಿರೂಪಣಾಕ್ರಮಗಳಲ್ಲಿಯೂ ಹೊಸದಾಗಿ ಕಲ್ಪಿಸುವ ಘಟನಾ ವಿಶೇಷಗಳಲ್ಲಿಯೂ ತನ್ನ ಪ್ರತಿಭಾ ವಿಶೇಷವನ್ನು ತೋರಿಸಿದ್ದಾನೆ. ಮೊದಲನೆಯ ಅಂಕದ, ಕೌಸಲ್ಯಾದಿ ರಾಣಿಯರು ಸಂತತಿಯನ್ನು ಪಡೆದದ್ದಕ್ಕಾಗಿ ದಶರಥನು ಅವರನ್ನು ಅಭಿನಂದಿಸಲು ಹೋಗುವ ವಿಷಯ ; ಎರಡನೆಯ ಅಂಕದ ರಾಜ್ಯದ ಉತ್ತರಾಧಿಕಾರಿಯಾಗ ರಾಗ ಬೇಕೆಂಬ ವಿಚಾರದ ಬಗ್ಗೆ ನಡೆಯುವ ಸಂಭಾಷಣೆ ; ಮೂರನೆಯ ಅಂಕದ, ರಾವಣನು ಅದೃಶ್ಯನಾಗಿ ಬಂದು ರಾಮನ ಸತ್ವವನ್ನು ಪರೀಕ್ಷಿಸುವದು ; ಐದನೆಯ ಅಂಕದ ಗ್ರಾಮಸಂಚಾರ; ಆರನೆಯ ಅಂಕದ ಸೀತಾ ರಾಮರು ವಿವಾಹ ಪೂರ್ವದಲ್ಲಿಯೇ ಪರಸ್ಪರ ಸಂದರ್ಶಿಸಿ ಸಂಭಾಷಿಸುವದು ಇವೆಲ್ಲವೂ ಮೂಲ ರಾಮಾಯಣದಲ್ಲಿಲ್ಲದ ಕಲ್ಪಿತವಾದ ಹೊಸಘಟನೆಗಳು.ಇವುಗಳಲ್ಲಿ ಕೊನೆಯದಾದ ಸೀತಾರಾಮರ ವಿವಾಹ ಪೂರ್ವ ಸಂದರ್ಶನ ಸಮ್ಮಿಲನದ ಘಟನೆಯು ಸಾಮಾನ್ಯವಾಗಿ ಇತರ ನಾಟಕಗಳಲ್ಲಿಯೂ ಬರುವಂತಹುದೇಆಗಿದ್ದರೂ ಉಳಿದ ಘಟನೆಗಳು ಸಂಪೂರ್ಣವಾಗಿ ಭಾಸ ಕಲ್ಪಿತವಾದವುಗಳಾಗಿಯೇ ಇದ್ದು ಆತನ ಕಲ್ಪನಾ ವೈಖರಿಯ ನಿದರ್ಶನಗಳಾಗಿವೆ. ನಾಟಕದ ಅರ್ಧಭಾಗವು ಈ ಘಟನಾ ಚಿತ್ರಣದಲ್ಲಿಯೇ ಬೆಳೆದಿದೆ. ಉಳಿದ ಕಥೆಯಾದರೂ ಹೇಳುವ ರೀತಿಯಲ್ಲಿ ಅತ್ಯಂತ ನೂತನವಾಗಿದೆ. ತಾಟಕಾವಧೆ,ವಿಶ್ವಾ

ಯಜ್ಞ ಮತ್ತು ಅವನ ರಕ್ಷಣೆ, ಜನಕನ ಯಜ್ಞಾದಿ ವಿಷಯಗಳು ಕೇವಲ ನಾಲ್ಕು ಮಾತುಗಳಿಂದ ಮುಗಿದುಬಿಡುತ್ತವೆ. ಆದರೂ ನಾಟಕವು ಏಳು ಅಂಕಗಳಾಗಿ ಬೆಳೆದು, ನವೀನ ಮಾದರಿಯಾಗಿ ಕುತೂಹಲ ಜನಕವಾಗಿದೆ. ಕಲ್ಪಿತ ಘಟನೆಗಳಾದರೂ ಇವುಗಳಿಂದ ಮೂಲ ಕಥೆಗೆ ವಿರೋಧವಾಗದಂತೆ, ಪಾತ್ರಗಳ ಘನತೆಗೆ ಕುಂದು ಬರದಂತೆ ಮೂಲ ಕಥೆಗೆ ರಸಪೋಷಕವಾಗಿದೆ.

ರಾಮಾಯಣದ ಉದಾತ್ತ ಪಾತ್ರಗಳನ್ನು ಭಾಸನು ಉದಾತ್ತತಮವನ್ನಾಗಿ ಮಾಡಿದ್ದಾನೆ. ವೃದ್ಧ ಅನುಭವಿ ದಶರಥನ ಚಿಂತೆ, ಅದರ ಪರಿಹಾರೋಪಾಯದ ಬುದ್ಧಿವಂತಿಕೆ, ರಾಮನ ವಿನಯ ಶೀಲತೆ, ಕೌಸಲ್ಯೆಯ ಸ್ನೇಹಮಯತೆ, ಸುಮಿತ್ರೆಯ ತ್ಯಾಗ, ಕೈಕೇಯಿಯ ಗಡಸು ಗಾಂಭೀರ್ಯಗಳು, ವಿಶ್ವಾಮಿತ್ರನ ಗುಣ ಪಕ್ಷಪಾತ, ಪರಶುರಾಮನ ಶಾಂತತೆಗಳು ಖಚಿತವಾಗಿ ಮೌಲಿಕವಾಗಿ ಈ ನಾಟಕದಲ್ಲಿ ಚಿತ್ರಿತವಾಗಿವೆ.

ರಾಮಾಯಣದಲ್ಲಿ ರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದಿರುವದಿನದ ಹಿಂದಿನ ದಿನದವರೆಗೂ, ಕೊನೆಯ ಸಮಯದಲ್ಲಿ ಮಂಥರೆಯು ದುರುಪದೇಶ ಮಾಡುವಾಗಲೂ ಸಹ ಕೈಕೇಯಿಯ ಮನಸ್ಸಿನಲ್ಲಿ ರಾಮನಿಗೇ ಪಟ್ಟಾಭಿಷೇಕ ಮಾಡುವುದು ಸರಿಯಾದುದೆಂದು ಕಲ್ಪನೆಯಿದ್ದಿತು. ಆದರೆ ದಶರಥನಿಗೆ ಮಾತ್ರ ಮೊದಲಿನಿಂದಲೂ ಅನುಮಾನವು ಇದ್ದೇ ಇದ್ದಿತು. ದಶರಥನು ಅನುಮಾನವನ್ನು ಪರಿಹಾರ ಮಾಡಿಕೊಳ್ಳುವದಕ್ಕೆಂದು ರಾಜ್ಯಾಧಿಕಾರಿಯಾರೆಂಬ ವಿಷಯವನ್ನು ಇಲ್ಲಿ ಸೇರಿಸಲಾಗಿದೆ. ಭಾಸನು ಸೇರಿಸಿದ ಉಳಿದ ಘಟನೆಗಳೂ ಸಹ ಇದರಂತೆಯೇ ಮೂಲ ಪಾತ್ರಗಳ ಪೋಷಣೆಗೆ ಅನುಕೂಲವಾಗುವಂತೆ ಇವೆ. ವಿಚಾರ ಧಾರೆಯನ್ನು ಹರಿಸಿವೆ. ನಾಟಕಗಳಿಗೆ ಹೆಸರು ಕೊಡುವುದರಲ್ಲಿ ಭಾಸನ ಬುದ್ಧಿ ಕೌಶಲ್ಯವು ಅಪೂರ್ವವಾದದ್ದು. ಇವನು ತನ್ನ ಇತರ ನಾಟಕಗಳಿಗೆ ಹೆಸರು ಕೊಡುವುದರಲ್ಲಿ ತೋರಿರುವ ಚಾ ತು ರ್ಯ ಮತ್ತು ಸಾಮಂಜಸ್ಯಗಳನ್ನೇ ಈ ನಾಟಕಕ್ಕೆ ಹೆಸರು ಕೊಡವುದರಲ್ಲಿಯೂ ತೋರಿಸಿದ್ದಾನೆ. ಯಜ್ಞ (ಪುತ್ರಕಾಮೇಷ್ಟಿ) ಫಲವಾಗಿ ಜನಿಸಿದ ರಾಮನು ವಿಶ್ವಾಮಿತ್ರನ ಯಜ್ಞ ರಕ್ಷಣೆಯ ನೆವದಿಂದ ದಿವ್ಯಾಸ್ತ್ರಗಳನ್ನು ಪಡೆದು, ಜನಕನ ಯಜ್ಞ ದರ್ಶನದ ಫಲವಾಗಿ ಸೀತೆಯ ಪಾಣಿಗ್ರಹಣ ಮಾಡುವನು. ಮೂರು ಯಜ್ಞಗಳ ವಿಷಯವು ಈ ನಾಟಕದಲ್ಲಿ ಬಂದಿದ್ದು ಅವು ಮೂರಕ್ಕೂ ಸರಿಯಾದ ಉತ್ತಮವಾದ ಫಲಗಳು ದೊರೆತವೆಂದು ತೋರಿಸುವದರಿಂದ ಇದಕ್ಕೆ ಯಜ್ಞಫಲವೆಂಬ ಹೆಸರು ಸಾರ್ಥಕವಾಗಿದೆ. ಇದಲ್ಲದೇ ನಾಟಕದಲ್ಲಿ ಮೊದಲಿನಿಂದ ಕೊನೆಯವರೆಗೂ ಪ್ರತಿಯೊಂದು

ಪಾತ್ರದ ಮಾತುಗಳೂ, ವಿಷಯ ನಿರೂಪಣೆಯೂ ಅತ್ಯಂತ ಹರಿತವಾದ ತರ್ಕ ಶುದ್ಧವಾಗಿ, ಕುತೂಹಲಜನಕವಾಗಿ ಚಿತ್ರಿತವಾಗಿದೆ.

ಇದೀಗ ನಾಟಕದ ಸಾರಾಂಶವನ್ನೋದಿಯಾಯಿತು. ಭಾಸ ನಾಟಕಗಳ ಚಮತ್ಕಾರವನ್ನು ಈ ನಾಟಕ ಕರ್ತೃವು ಸರಿಯಾಗಿ ಹೀರಿಕೊಂಡಿದ್ದಾನೆಂದೇನೋ ಒಪ್ಪಲೇ ಬೇಕಾಗುತ್ತದೆ. ಆದರೇನೋ ಭಾಸನಾಟಕಗಳ ಧೋರಣೆಯೇ ಅನ್ಯಾದೃಶವಾಗಿದೆಯೆಂದೂ ವಾದಿಸಿ, ಪಂಚರಾತ್ರ ಊರುಭಂಗ ನಾಟಕಗಳ ಸೌಷ್ಠವ ಗಾಂಭೀರ್ಯ ಊರ್ಜಿತತಮವಾಗಿ, ಅವುಗಳ ಕೊಂಚಮಟ್ಟಿನ ಅನುಕರಣವನ್ನೇನೋ ಮಾತ್ರ ಇಲ್ಲಿ ಕಾಣಬಹುದಷ್ಟೇ ಎಂದು ಮಾತ್ರ ಇದರ ಪ್ರಾಶಸ್ತ್ಯವನ್ನೂ ಜಾಣ್ಮೆಯನ್ನೂ ತಲೆದೂಗಿ ವಿರಮಿಸುವೆವು.

೨೦

ಭಾಸೋಹಾಸಃ

ಅಯಂ ಹಿ ಪರಮೋ ಲಾಭಃ ಗೃಹೇಷು ಗೃಹಮೇಧಿನಾಂ |
ಯನ್ನರ್ಮೈಃ ನೀಯತೇಕಾಲಃ ಪ್ರಿಯಯಾ ಭೀರು ಭಾಮಿನಿ
-ಭಾಗವತ Xಉ 10-31.

ಪ್ರಾಸಪ್ರಿಯನಾದ ಜಯದೇವನು ಪ್ರಸನ್ನರಾಘವದ ಪ್ರಸ್ತಾವನೆಯಲ್ಲಿ ಹೀಗೇನೋ ಹೇಳಿದ್ದರೂ ಆ ಮಾತಿನಲ್ಲಿ ವಿಶೇಷವಾದ ಔಚಿತ್ಯವಿದೆಯೆಂದು ನಮಗನಿಸುತ್ತದೆ. ಆದಕ್ಕೆ ನೂತನವಾದ ಇನ್ನೊಂದರ್ಥವನ್ನೂ ನಾವು ಕಲ್ಪಿಸುವೆವು.

ಮೊದಲು ವಾಚಕರ ಮುಂದೆ ಇಡೀ ಶ್ಲೋಕವನ್ನಿಡುವೆವು-

ಯಸ್ಯಾಃ ಚೋರಃ ಚಿಕುರನಿಕುರಃ, ಕರ್ಣಪೂರೋ ಮಯೂರೋ
ಭಾಸೋಹಾಸಃ, ಕವಿಕುಲಗುರುಃ ಕಾಳಿದಾಸೋ ವಿಲಾಸಃ||
ಹರ್ಷೋ ಹರ್ಷಃ, ಹೃದಯವಸತಿಃ ಪಂಚಬಾಣಸ್ತು ಬಾಣಃ
ಕೇಷಾಂ ನೈಷಾ ಕಥಯ ಕವಿತಾಕಾಮಿನೀ ಕೌತುಕಾಯ ||

ಅರ್ಥಾತ್ ಕವಿತಾಕಾಮಿನೀ ಎಂಬ ಅತಿ ಸುಂದರಿಯಾದ ಮುಗ್ಧಾಂಗನೆ (ಪ್ರೌಢಾಂಗನೆಯೆಂದರೇ ಇನ್ನಷ್ಟು ಔಚಿತ್ಯ) ಅವಳ ತಲೆ ತುರುಬಿನಲ್ಲಿ ಚೂಡಾಮಣಿಯಂತೆ ರಾರಾಜಿಸುವ ಚೋರನೆಂಬ ಕವಿ, ಮಯೂರನೆಂಬ ಇನ್ನೊಬ್ಬ ಕವಿಯು ಅವಳ ಕಿವಿಯ ವಜ್ರದ ಬೆಂಡೋಲೆ, ಭಾಸನೇ ಅವಳ ಹಾಸ, ಕವಿ ಕುಲಕ್ಕೇ ಗುರುವಾದ ಕಾಲಿದಾಸನೇ ಅವಳ ವಿಲಾಸ, ಶ್ರೀ ಹರ್ಷವರ್ಧನನೇ ಅವಳ ಹರ್ಷ, ಅವಳ ಹೃದಯದೊಳಗೇ ಸದಾ ವಾಸಿಸುವ ಮನ್ಮಥನೇ ಬಾಣ— ಇಷ್ಟು ಹಾವಭಾವಗಳಿಂದೊಡಗೂಡಿದ ತರುಣಿಯು ಯಾರ ಮನಸ್ಸಿನಲ್ಲಿತಾನೇ ಕೌತುಕವನ್ನುಂಟುಮಾಡದಿರಳು? ಇಲ್ಲಿ ನಮಗೀಗ ಪ್ರಸ್ತುತವಾದುದೆಂದರೆ ಎರಡನೇ ಪಾದದ ಮೊದಲಿನ ಭಾಗ. ಭಾಸನು ಈ ಕವಿತಾ ಕಾಮಿನಿಯ ಮಂದ ಹಾಸವಂತೆ! ನಮಗನಿಸುವ ವೈಚಿತ್ರ್ಯವೇನೆಂದರೆ, ಇಲ್ಲಿಯ ಪದಗಳಲ್ಲಿ ಕರ್ತೃ, ಕ್ರಿಯಾಪದಗಳೇ ವ್ಯತ್ಯಸ್ತಗಳಾಗಿವೆಯೆಂದು ತೋರುವದು. ಅವಳ ಭಾಸ=

ಪ್ರಕಾಶವೆಂದರೇ ಹಾಸನೆಂಬ ಕವಿಯ ಹೆಸರೇ ಯಾಕಾಗಿರಬಾರದು? ಈ ಸಂದರ್ಭದಲ್ಲಿ ಅಭಿನವಗುಪ್ತ ಭಗವತ್ಪಾದರ ನಾಟ್ಯ ಶಾಸ್ತ್ರ (ಬರೋಡಾ ಸಂಪಾದಿತ ಪ್ರತಿ Vol I ಪು ೨೧೧) ದಲ್ಲಿ ಹೀಗಲ್ಲವೇ ನಾವು ಓದುವದು-ದ್ವಿವಿಧಾ ಪ್ರಸ್ತಾವನಾ ಭವತಿ, ಪೂರ್ವರಂಗಸ್ಯ ಅಂಗಭೂತಾನ್ಯಸ್ಯ ವಾ। ತತ್ರ ಪೂರ್ವ ರಂಗೇಽಸ್ಯಾಃ ಕವಿರುದಾಸೀನಃ ಸ್ಥಾಪಕ ಏವ ವಾ ಸ್ವತಂತ್ರೋ ನಿರ್ವಾತಾ ತ್ವನ್ಯೋ ವಾ ಕವಿಃ ಧ್ರುವಾಗಾನಾದಾವಪಿ ಪದವ್। ಯದಾಹ ಶ್ರೀಹರ್ಷಃ- ಅತ ಏವ ಹಾಸೋ ನಾಮ ಕವಿಃ ಕಸ್ಮಿಂಶ್ಚಿನ್ನಾಟಕೇ-ದಿವಂ ಯಾತಃ ಚಿತ್ತ ಜ್ವರೇಣ ಕಲಿರಿತ ಏವಾಭಿವರ್ತತೇ। ಅಶಕ್ಯಮಸ್ಯ ಪುರತೋಽವಸ್ಥಾತುಂ- ಇತ್ಯಾದಿ—ಇಲ್ಲಿ ಸಂಪಾದಕ ಮಹಾಶಯರಾದ ಶ್ರೀ M. ರಾಮಕೃಷ್ಣ ಕವಿಗಳು ಹಾಸ ಎಂಬಲ್ಲಿ ಒಂದು ಹಂಸಪಾದವನ್ನು ಹಾಕಿ ಭಾಸ? ಎಂದು ತಮ್ಮ ಪ್ರತಿಭೆ ಯಿಂದಲೇ ಓದುವರು, ಹಾಗೆಯೇ ಸ್ವಲ್ಪ ಮುಂದೆ ಕಸ್ಮಿಂಶ್ಚಿನ್ನಾಟಕೇ ಎಂಬಲ್ಲಿಯೂ ನಲವಿಕ್ರಮೇ? ಎಂಬ ಸಂಶಯವನ್ನೂ ಮಂಡಿಸುವರು. ಇದರ ವಿಷಯ ಸತ್ಯತ್ವವೇನೋ ಇರಲಿ, ಪ್ರಾಯಶಃ ಈ ಕವಿಗೆ ಹಾಸನೆಂಬ ಹೆಸರೇ ಆತನ ಕಾಲದ ಜನರಿಂದ ಕೊಡಲ್ಪಟ್ಟಿತ್ತೋ ಎಂಬ ಸಂಶಯವೇ ಈಗ ನಮ್ಮಲ್ಲಿ ಪ್ರಬಲ ವಾಗುವದು. ಪೂರ್ವಕಾಲದಲ್ಲಿ ಕವಿಗಳಾಗಿದ್ದ ನಿಜವಾದ ಹೆಸರೇನೋ ಸಂಪೂರ್ಣ ವಾಗಿ ಲುಪ್ತವಾಗಿ, ಅಂಕಿತನಾಮ, ಕೆಲವೆಡೆಗಳಲ್ಲಿ ನಕಲಿಯ ಹೆಸರೋ ಇನ್ನ್ಯಾ ವದೋ (ಉದಾ-ಅಕ್ಷಪಾದ, ಉಲೂಕ, ಕೌಟಿಲ್ಯ ಇತ್ಯಾದಿ ಹೆಸರುಗಳನ್ನು ಪರಿಶೀಲಿಸಬೇಕು-) ಇದರಿಂದಲೇ ಕವಿಗಳು ಜನರಲ್ಲಿ ಪ್ರಖ್ಯಾತರಾದರೆಂಬದು ಸರ್ವಥಾ ಪ್ರಸಿದ್ಧವಷ್ಟೆ. ಮಮ್ಮಟನ ಕಾವ್ಯ ಪ್ರಕಾಶದಲ್ಲಿರುವ ಭಾಸನ ಶ್ಲೋಕವೆಂದು ಪ್ರಸಿದ್ಧವಾದ ಶ್ಲೋಕವನ್ನೇ ಕೊಂಚ ಗಮನಿಸುವಾ—

ಕಪಾಲೇ ಮಾರ್ಜಾರಃ ಪಯ ಇತಿ ಕರಾನ್ ಲೇಢಿ ಶಶಿನಃ
ತರುಚ್ಛಿದ್ರ ಪ್ರೋತಾನ್ ಬಿಸಮಿತಿ ಕರೀ ಸಂಕಲಯತಿ।
ರತಾಂತೇ ತಲ್ಪಸ್ಥಾನ್ ಹರತಿ ವನಿತಾಪ್ಯಂಶುಕಮಿತಿ
ಪ್ರಭಾಮತ್ತಃ ಚಂದ್ರೋ ಜಗದಿದಮಹೋ ವಿಭ್ರಮಯತಿ ॥

ಪ್ರಾಯಶಃ ಈ ಶ್ಲೋಕವನ್ನು ಕೇಳಿ ಜನರೆಲ್ಲಾ ಚಕಿತರಾಗಿ ಸಂತೋಷ ದಿಂದ ನಗಲಾರಂಭಿಸಿದ್ದರಿಂದ ಈ ಕವಿಗೆ ಹಾಸನೆಂದೇ ಹೆಸರಾಗಿ, ಅದೇ ಹೆಸರೇ ಸಾಹಿತ್ಯಾಕಾಶದಲ್ಲಿ ಲಬ್ಧಪ್ರತಿಷ್ಠವಾಗಿ, ಅದನ್ನೇ ಹೇಗೋ ಜಯದೇವನು ನಮಗೆ ನೆನಪು ಕೊಡುವಂತೆ ಬರೆದನೋ ತಿಳಿಯದು. ಅಭಿನವ ಗುಪ್ತರೂ ಹಾಗೆಯೇ ಬರೆದಿದ್ದರೂ ಕಾಲಾನುಭಾಗದಲ್ಲಿ ಸತ್ಯವು ನಮ್ಮಿಂದ ಮರೆಯಾದ ನಂತರ ನಮಗದು ತಿಳಿಯದೆ ಭಾಸನೆಂಬ ಹೆಸರೇ ಸರಿಯಾದುದೆಂದು ಯಾರೋ

ದೊಡ್ಡ ಮಹನೀಯರು ವಾದಿಸಿ, ಆ ಹೆಸರೇ ವಾಡಿಕೆಯಲ್ಲಿ ಯಾಕೆ ಬಂದಿರಬಾರದು ? ಇದೇನೋ ಅತಿ ಗಹನವಾದ ವಿಷಯವಾಗಿಬಿಟ್ಟಿದೆ.

ಆ ಶ್ಲೋಕದ ಅರ್ಥವನ್ನು ಪರಿಶೀಲಿಸಿದರೆ ಅದರ ಪ್ರೌಢೋಕ್ತಿಯು ಎಷ್ಟು ಉಚ್ಚವಾದ ಮಟ್ಟಕ್ಕೇರಿದೆಯೆಂಬುದು ನಮಗೆಲ್ಲರಿಗೂ ವೇದ್ಯವಾಗುವದು. ಚಂದ್ರನ ಉದಾತ್ತವಾದ ಬೆಳದಿಂಗಳು ಎಲ್ಲೆಲ್ಲಿಯೂ ವ್ಯಾಪಿಸಿರುವ ಸಂದರ್ಭ ಎಲ್ಲಿಯೋ ಒಂದು ಮೂಲೆಯ ಕಪಾಲದಲ್ಲಿದ್ದ ಬೆಳದಿಂಗಳನ್ನು ಕಂಡು ಬೆಕ್ಕಿಗೆ ಹಾಲೋ ಎಂಬ ಭ್ರಮೆಯು ಮನಸ್ಸಿನಲ್ಲಿ ಉದಯಿಸಿತಂತೆ, ಇನ್ನೊಂದೆಡೆ ಮರದ ಕೊಟರೆಗಳೊಳಗೆ ಹೊಕ್ಕ ಬೆಳದಿಂಗಳನ್ನು ಕಂಡು ತಾವರೆಯ ದಂಟೋ ಎಂದು ಆನೆಯು ಅದನ್ನು ಕಂಡು ಬೆರಗಾಗಿತ್ತಂತೆ, ಇನ್ನೊಂದೆಡೆ ರಮಣನೊಡನೆ ಸುರತವನ್ನನುಭವಿಸಿದ ಪ್ರಮದೆಯು ಬೆಳದಿಂಗಳನ್ನು ಕಂಡು, ತನ್ನ ಸೀರೆಯೊ ಎಂದು ಭ್ರಮಿಸಿ ಆ ಬೆಳದಿಂಗಳನ್ನು ಹಿಡಿಯಲುಪಕ್ರಮಿಸಿದಳಂತೆ–ತಾನೇ ಪ್ರಭೆಯಿಂದ ಉನ್ಮತ್ತನಾದ ಚಂದ್ರನು ಇಡೀ ಲೋಕವನ್ನೇ ಭ್ರಾಂತಿಯ ಮಾರ್ಗದಲ್ಲಿ ತಳ್ಳುವ ಚಂದ್ರನೆಂದೆಷ್ಟು ಸೊಗಸಾದ ಉತ್ಪ್ರೇಕ್ಷೆಯಿಂದ ರಸವತ್ತರವಾಗಿ, ಮಾಡಲ್ಪಟ್ಟ ಭ್ರಾಂತಿಯಿದು ! ಇದನ್ನೋದುವಾಗ ಮಂದಹಾಸವು ನಮ್ಮ ಮುಖದಲ್ಲಿ ತಾಂಡವವಾಡುವದೇನೋ ಅತಿ ಸಹಜವೇ ಅಲ್ಲವೇ !? ಇದರಿಂದಲೇ ಈತನಿಗೆ **ಹಾಸ**ನೆಂಬ ನಕಲಿಯ ಹೆಸರನ್ನು ಆಗಿನ ಕಾಲದ ಜನರು ಕರುಣಿಸಿ, ಅದೇ ಹೆಸರಿಂದ ಈತನು ಈಗಲೂ ಪ್ರಸಿದ್ಧನಾಗಿದ್ದಾನೆಂದೂಹಿಸಿದರೆ ತಪ್ಪೇನು ?"

ಈ ಕವಿಯ ಹಾಸ್ಯವೆಂದರೆ ಸಂಸ್ಕೃತವಾಙ್ಮಯದಲ್ಲಿ ಅತ್ಯುದಾತ್ತವಾದ ಮಟ್ಟಕ್ಕೇರಿ, ಅಗ್ರಾಮ್ಯವಾಗಿದೆಯೆಂದಾಗಲೇ ಅನೇಕ ಪಾಶ್ಚಾತ್ಯರ ಅಭಿಪ್ರಾಯಗಳನ್ನು ನಾವು ಉದಾಹರಿಸಿದ್ದೇವೆ. His humor has an American flavour in its flavour and in its situations ಎಂಬ Dr. Ryderರ ಅಭಿಪ್ರಾಯವನ್ನು ನಾವು ಕಂಡಿದ್ದೇವೆ. ಭವಭೂತ್ಯಾದಿಗಳಿಗೆ ಹಾಸ್ಯವೇ ಅಸಹ್ಯವಾಗಿ ಅವರು ವಿದೂಷಕನನ್ನೇ ಬಿಟ್ಟೇ ಬಿಡುವೊ, ಅಥವಾ ಸ್ವೀಕರಿಸದಿದ್ದರೂ ನಾಗಾನಂದದಲ್ಲಿಯ ವಿದೂಷಕನಂತೆ ನಡುವಿನಲ್ಲಿಯೇ ಓಡಿಸಲೋ ತಯಾರಿದ್ದರು. ಈತನು ಮಾತ್ರ ತನ್ನ ವಿದೂಷಕನನ್ನು ಕ್ರಮವಾಗಿ ವರ್ಣಿಸಿ, ಹಾಸ್ಯರಸದ ತವರುಮನೆಯಾಗಿ ಬಣ್ಣಿಸಿ, ಅವಿಮಾರಕ, ಚಾರುದತ್ತ, ಸ್ವಪ್ನವಾಸವದತ್ತ ನಾಟಕಗಳಲ್ಲಿ ನಾಯಕನ ಬಲಗೈಯಾಗಿಯೇ ಈತನನ್ನು ಚಿತ್ರಿಸಿರುವದನ್ನು ಕಂಡು ನಾವು ಚಕಿತರಾಗುತ್ತೇವೆ. ಈ ವಿದೂಷಕನ ಅನುಕರಣೆಯನ್ನೇ ಸ್ವಲ್ಪಮಟ್ಟಿಗೆ ಮಾಡಿ ಮಾಲವಿಕಾಗ್ನಿಮಿತ್ರದಲ್ಲಿ ಕಾಲಿದಾಸನು ಯಶಸ್ವಿಯಾದನು.

ವಿದೂಷಕನಲ್ಲಿ ಮಾತ್ರವಲ್ಲ, ಇನ್ನಿತರ ಸ್ಥಳಗಳಲ್ಲಿಯೂ ಈತನ ಹಾಸ್ಯವೂ ಅತ್ಯದ್ಭುತವಾಗಿ ಅತಿ ಸರಳವಾಗಿ ಹೃದಯಂಗಮವಾಗಿದೆ. ಆಂಗ್ಲರಲ್ಲಿ Breuity is the soul of wit, ಈತನ ಮಾತುಗಳಲ್ಲಿ ಚಮತ್ಕೃತಿಯಿಂದೊಡಗೂಡಿದ ಸಂಕ್ಷಿಪ್ತತೆ ಇದೆಯೆಂಬ ನಾಣ್ಣುಡಿಯಿದ್ದರೆ ಅದನ್ನೀತನಲ್ಲಿ ನಾವು ಸಂಪೂರ್ಣವಾಗಿ ಕಾಣುವೆವು. ಉದಾಹರಣೆಯಾಗಿ ಪ್ರತಿಜ್ಞಾ ಯೌಗಂಧರಾಯಣದ ಎರಡನೆಯ ಅಂಕವನ್ನೋ ನಾಲ್ಕನೆಯ ಅಂಕವನ್ನೋ ನಾವು ನಿರ್ದೇಶಿಸಬಹುದು. ಎರಡನೆಯ ಅಂಕದ ಸಂನಿವೇಶವನ್ನು ನಾವು ಹೀಗೆಂದು ಸಂಗ್ರಹಿಸಬಹುದು–ಉದಯನನ ಗ್ರಹಣವಾರ್ತೆಯನ್ನು ಮಹಾಸೇನ ಅಂಗಾರವತೀ ರಾಣಿಯರಿಗೆ ಕಂಚುಕಿಯು ನಿವೇದಿಸಿದ ಸಂದರ್ಭ–ರಾಜನಾಗಲೇ ತನ್ನ ಹೆಂಡತಿಯ ಹತ್ತಿರ ಮಗಳಾದ ವಾಸವದತ್ತೆಗೆ ಅನುರೂಪನಾದ ಗಂಡನಾರು ಎಂಬ ಪ್ರಶ್ನೆಯನ್ನು ಮಂಡಿಸಿದಾಗ ವಿಧಿಯು ಉತ್ತರರೂಪವಾಗಿ ಕಂಚುಕಿಯಿಂದ ವತ್ಸರಾಜಃ ಎಂಬ ಶಬ್ದವನ್ನೇ ಉಚ್ಚರಿಸುವಂತೆ ಮಾಡಿದ್ದು ಅತಿ ಸಹಜವಾಗಿದೆ. ಆಗ ಆ ಕಂಚುಕಿಯು ತಾನು ಒಳಗೆ ಹೊಕ್ಕಿದುದು ಪ್ರಮಾದವಾಯಿತೆಂದಾಗಲೇ ಆತನಿಗೆ ಭಾಸವಾಗಿ ಕ್ಷಮೆಯನ್ನು ಯಾಚಿಸುವನು. ದಯಾಮಯನಾದ ರಾಜನು ಆ ತಪ್ಪನ್ನೂ ಲೆಕ್ಕಿಸದೆ, 'ಭೀತನಾಗಬೇಡ! ವಿಷಯವನ್ನು ಮುಂದುವರಿಸಪ್ಪಾ!' ಎಂದು ಆಶ್ವಾಸಿತನಾದನಂತರ ಮೆಲ್ಲಮೆಲ್ಲನೆ ಚೇತರಿಸಿಕೊಂಡು, 'ಉದಯನ ರಾಜನನ್ನು ಸೆರೆಹಿಡಿದಿರುವರು' ಎಂದು ಹೇಳಿದಾಗ ಮಹಾಸೇನನು 'ಈಗ ತಾನೇ ನಾನು ಮಹಾ ಸೇನನೆಂಬ ಅನ್ವರ್ಥ ಹೆಸರುಳ್ಳವನಾದೆ!' ಎಂದುಸುರುವತನಕದ ಸಂನಿವೇಶವು ಸಂಸ್ಕೃತ ಸಾಹಿತ್ಯದಲ್ಲಿಯೇ ಅತೀವ ಚಿತ್ತಾಕರ್ಷಕವಾಗಿದೆ. ಉದಯನನು ಹಿಡಿಯಲ್ಪಟ್ಟನೋ ಎಂಬ ಮಾತನ್ನೇ ಐದಾರು ನಮೂನೆಯಿಂದ ಅವನ ಬಾಯಿ ಯಲ್ಲಿ ಬರುವಂತೆ ಮಾಡಿದರೂ ತೃಪ್ತನಾಗದೆ 'ಏನು ಯೌಗಂಧರಾಯಣನು ಹಾಗಾದರೆ ಮೃತನಾದನೋ' ಎಂದು ವಿಚಾರಿಸಿ, ಅದಕ್ಕೆ 'ಆತನು ಜೀವಂತ ನಾಗಿಯೇ ಇದ್ದಾನೆ' ಎಂಬ ಉತ್ತರವು ದೊರೆತನಂತರ, 'ಹಾಗಾದರೆ ಉದಯನನ್ನು ನಮ್ಮವರು ಹಿಡಿದರೆಂಬದನ್ನು ನಾನು ಖಂಡಿತವಾಗಿಯೂ ನಂಬಲಾರೆ' ಎಂದು ಮಹಾಸೇನನು ವಾದಿಸಿದಾಗ, ಕಂಚುಕಿಯು ಬೇರೆ ಹಾದಿಯನ್ನೇ ಕಾಣದೆ "ರಾಜನೇ! ಈ ಮುದಿ ಬ್ರಾಹ್ಮಣನು ತನ್ನ 90 ವರ್ಷದ ದೀರ್ಘವಾದ ಜೀವಿತ ದಲ್ಲಿ ಇಷ್ಟರವರೆಗೂ ಅನೃತವನ್ನು ನುಡಿದುದೇ ಇಲ್ಲ! ಹಾಗಿದ್ದರೂ ನನ್ನ ಮಾತಿನಲ್ಲಿಯೂ ಅಪನಂಬಿಕೆಯೇ ?" ಎನ್ನುವಾಗ ಈ ಹಾಸ್ಯರಸದ ಪರಮಾವಧಿ ಯನ್ನೇ ನಾವು ಕಂಡು ಚಮತ್ಕೃತರಾಗುತ್ತೇವೆ.

ಈಹಾಸ್ಯರಸದ ರಹಸ್ಯವಿನ್ನೊಂದನ್ನೂನಾವು ಮರೆಯಕೂಡದು. ಆಂಗ್ಲೇಯ

ಶಲ್ಲಿ ಇದರ Scurvilous type ನಂಜನ್ನೂ ಕಾರುವ ಹಾಸ್ಯವೇ ಪ್ರಧಾನವಾಗಿದೆಯೆಂದರೂ ತಪ್ಪಾಗದು. ಆದರೆ ಈ ತರದ ವ್ಯಂಗ್ಯವಾದ ಹಾಸ್ಯವು ನಮ್ಮಲ್ಲಿ ಇಲ್ಲವೇ ಇಲ್ಲವೆಂದರೆ ತಪ್ಪಾಗದು. ಅತಿ ಹೆಚ್ಚಾದ ನಂಜೆಂದರೆ ನಮ್ಮ ಇದೇ ಯೌಗಂಧರಾಯಣ ಸಾಲಂಕಾಯನರೆಂಬ ಮಂತ್ರಿವರ್ಯರ ಸಂವಾದ. ಇಲ್ಲಿಯೇನೋ ಸಾಲಂಕಾಯನನು ಶ್ರೇಷ್ಠತರನಾದ ಯೌಗಂಧನನ್ನೇ ನಾನು ಸೆರೆ ಹಿಡಿಸಿದ್ದಾಯಿತಲ್ಲ ಎಂದು ಗರ್ವದಿಂದ ವಾದವನ್ನಾರಂಭಿಸಿದರೆ, ಆ ಮಂತ್ರಿಯು 'ನಾವು ರತ್ನವನ್ನು ಕದ್ದೊಯ್ದನಂತರ ನೀವು ರತ್ನದ ಪೆಟ್ಟಿಗೆಯಲ್ಲಿ ಬೀಗದ ಮುದ್ರೆಯನ್ನೊತ್ತಿದ್ದಲ್ಲವೇ ?' ಎಂದು ಮೂದಲಿಸುವದೇ ಅತ್ಯದ್ಭುತವಾಗಿಲ್ಲವೇ ? ಪ್ರತಿಜ್ಞಾ ಯೌಗಂಧರಾಯಣ ನಾಟಕವೇ ಪ್ರದ್ಯೋತ ಮಹಾಸೇನನು ಮಂತ್ರಿ ಶ್ರೇಷ್ಠನನ್ನು ಮೋಸಗೊಳಿಸಿ ಉದಯನನನ್ನು ಸೆರೆ ಹಿಡಿಸಿದರೆ, ಅದಕ್ಕೇ ಪ್ರತಿಕೂಲವಾಗಿ ಇಡೀ ನಾಟಕದಲ್ಲಿ ಆ ಮಂತ್ರಿಶ್ರೇಷ್ಠನು ತನ್ನ ವೈರಿಯ ಪತ್ತನದೊಳಗೇ ಇದ್ದುಕೊಂಡು, ಸಿಂಹದ ಗುಹೆಯೊಳಗಿದ್ದುಕೊಂಡೇ, ಅದರ ಮೇಲಿನ ಪ್ರತೀಕಾರವನ್ನು ಅಲ್ಲಿಯೇ ಕಾರಿದ ಸಂನಿವೇಶವೆಂಬದು ಸಂಸ್ಕೃತ ಸಾಹಿತ್ಯದಲ್ಲಿ ಅತ್ಯಪೂರ್ವವಾಗಿದೆ. ಇದರ ಮರ್ಮವನ್ನರಿತ ಶೂದ್ರಕ ವಿಶಾಖದತ್ತರು ಈ ಹಾಸ್ಯರಸ ಘೋಷವನ್ನು ಚನ್ನಾಗಿಯೇ ಮಾಡಿರುವರು. ಇದೇ ಯೌಗಂಧರಾಯಣನನ್ನು ಮೂರನೆಯ ಅಂಕದಲ್ಲಿ ವರ್ಣಿಸುವಾಗ 'ಫೇನಾಯಮಾನ ಮಲಿನ ವರ್ಷಾರಥ್ಯೋದಕಮಿವ' ಅಥವಾ 'ಮಳೆಗಾಲದ ಚರಂಡಿಯ ಕೆಸರು ನೀರಿನ ಮೇಲಿರುವ ನೊರೆ' ಯೆಂದು ಹೇಳುವನು ಇದೇ ಸಂದರ್ಭದಲ್ಲಿ ಆತನೇ ತನ್ನ ಪ್ರಯತ್ನಗಳೆಲ್ಲಾ ವಿಫಲವಾಗುವ ಸಂಭವವನ್ನು ತಾಳಲಾರದೆ–'ಅಯ್ಯೋ ! ನಮ್ಮ ರಾಜನು ಬಂಧನವನ್ನೇ ಪ್ರಮದವನವೆಂದು ಭಾವಿಸಿಕೊಂಡು ಅಲ್ಲಿಯೇ ಅನುರಾಗದಲ್ಲಿಯೇ ನಿರತನಾದನೋ ಇದಕ್ಕಿಂತಲೂ ಹೆಚ್ಚಿನ ಪ್ರಮಾದವಿದ್ದೀತೆ ! ಹಾ ವಿಧಿಯೇ !' (=ಬಂಧನಮಿದಾನೀಂ ಪ್ರಮದವನಂ ಸಂಭಾವ್ಯ ಪ್ರವೃತ್ತೋ ರಾಗಲೀಲಾಂ ಕರ್ತುಮ್)–ಹೇಳುವದೂ ಅತ್ಯೂರ್ಜಿತವಾಗಿದೆ. ಚಾರುದತ್ತನ ಸ್ಥಾಪನೆಯಲ್ಲಿ ಸೂತ್ರಧಾರನು ಹಸಿದು ಊಟ ದೊರಕೀತೆಂದು ಧೈರ್ಯದಿಂದ ಮನೆಯತ್ತ ಸಾಗಿದ್ದಾಗ, ಆತನ ಹೆಂಡತಿಯು ಈತನನ್ನೇನೋ ಸ್ವಾಗತಿಸಿ ಏನಿದೆಯೆಂದು ಕೇಳಲ್ಪಡುವಳು. ಆಗ ಇವಳು ಮೊಸರು, ಬೆಲ್ಲ, ಇತ್ಯಾದಿಗಳೇನೋ ಸಮೃದ್ಧವಾಗಿವೆ. ಆದರೆ ಮಾತ್ರ ನಮ್ಮಲ್ಲಿಲ್ಲ ಸಂತೆಕಟ್ಟೆಯಲ್ಲಿ ಎಂದು ಮೂದಲಿಸಿದಾಗ ಸೂತ್ರಧಾರನು ನಿರಾಶನಾಗಿ 'ಚಂಡಪರ್ವತ ಲಂಡಿತ ಇವ ವರಂಡಃ' ಎಂದರೆ ಬಿರುಗಾಳಿಯಿಂದ ಮೇಲಕ್ಕೇರಿಸಲ್ಪಟ್ಟ ವರಂಡ ತೃಣದಂತೆ ತಾನಾಗಿ, ಅದರಂತೆಯೇ ಆಕಾಶದಲ್ಲಿ ಹಾರಿದರೂ ಕಟ್ಟಕಡೇಗೆ ಕೆಳಗೇನೆ ತಳ್ಳಲ್ಪಟ್ಟೆನೆಂದು ಬಾಯಿ ಬಡಕೊಳ್ಳುವನು. ಸ್ವಪ್ನ

ನಾಟಕದಲ್ಲಿ ನಾಲ್ಕನೆಯ ಅಂಕದಲ್ಲಿ ವಿದೂಷಕನು ಸಮ್ಮಾನದ ಊಟಗಳನ್ನು ಮದುವೆಯ ಸಂದರ್ಭದಲ್ಲಿ ಯಥೇಚ್ಛವಾಗಿ ತಿಂದು, ಊಟವೇ ಬೇಡವೆನ್ನುವಾಗ-ಕೋಕಿಲಾನಾಂ ಅಕ್ಷಿಪರಿವರ್ತ ಇವ ಕುಕ್ಷಿಪರಿವರ್ತಃ (=ಕೋಕಿಲೆಗಳ ಕಣ್ಣಿನ ಬೇಳೆ ತಿರುಗುವಂತೆ ತನ್ನ ಹೊಟ್ಟೆಯಲ್ಲಿ ಅಜೀರ್ಣವಾಗಿ ಸೇರಿರುವ ಆಹಾರವು ಚೆಂಡಿನಂತೆ ಅಲ್ಲಲ್ಲಿಯೇ ತಿರುಗುವುದೆನ್ನುವದಕ್ಕೆ-ಅಕ್ಷಿಪರಿವರ್ತದಂತಿರುವ **ಕುಕ್ಷಿ** (ಹೊಟ್ಟೆ-ಯಲ್ಲಿಯೂ ಪರಿವರ್ತ.) ವೆಂದತಿಸೊಗಸಾಗಿ ಬಣ್ಣಿಸುವನು. ಅಭಿಷೇಕ ನಾಟಕದ Vನೆಯ ಅಂಕದ ಆದಿಯಲ್ಲಿ, ನಿರಾಶನಾದ ರಾವಣನು ಸುಳ್ಳು ಹೇಳಿಯಾದರೂ ಸೀತೆಯನ್ನು ಕೆಡಿಸೋಣವೆಂದು ಬಯಸಿ, ಮಾಯೆಯಿಂದ ರಾಮ ಲಕ್ಷ್ಮಣರ ತಲೆಗಳನ್ನು ಸೃಜಿಸಿ, ತಾನು ಸೀತೆಯ ಹತ್ತಿರ ಮಾತನಾಡುವಾಗ ಆ ತಲೆಗಳನ್ನೆರಡನ್ನು ಅವಳೆದುರಿಗೆ ಪ್ರದರ್ಶಿಸುವಂತೆ ಮಾಡುವನು. ಆಗ ಆತನು ಸಂತೋಷದಿಂದ ಉಬ್ಬುವನಂತೆ ನಟಿಸಿ 'ಇನ್ನು ನಿನ್ನನ್ನಾರು ರಕ್ಷಿಸುವರೆಂ'ದು ಕೊಚ್ಚಿದಾಗ, ವಿಧಿಯು ಬೇಕೆಂದೇ ಕಂಚುಕಿಯು ಅತ್ಯವಸರವಾಗಿ ಪ್ರವೇಶಿಸಿ 'ರಾಮೇಣ'ಎಂದುಸುರುವನು. ಸಮಾಚಾರವನ್ನು ಬೇಗನೆ ಹೇಳು ಎಂದು ಆಜ್ಞಪ್ತನಾಗಿ 'ರಾಮನಿಂದ ನಿನ್ನ ಮಗನು ಹತನಾದನು' ಎಂದು ಸೀತೆಯ ಮುಂದೆಯೇ ಅವಳಿಗಾಶ್ವಾಸನವನ್ನೂ ಉಸುರುವನು. ಆಗಲೇ ಮಾಯೆಯಿಂದ ಸೃಜಿಸಲ್ಪಟ್ಟ ತಲೆಗಳು ತಾವಾಗಿಯೇ ಮಾಯವಾಗಲು, ಸೀತೆಗೆ ಸಂಪೂರ್ಣ ಸಾಂತ್ವನವು ತಾನಾಗಿಯೇ ಊರ್ಜಿತವಾಗಿ ಏರ್ಪಡುವದಿಲ್ಲವೇ ? ಅವಿಮಾರಕದ ಎರಡನೆಯ ಅಂಕದಲ್ಲಿ ಕುರಂಗೀ ರಾಜಪುತ್ರಿಯ ಧಾತ್ರಿಯು ಅವಿಮಾರಕನೆಂಬ ನಾಯಕನ ಹತ್ತಿರ ಹೋಗಿ 'ಸ್ವಾಮಿ ! ಏನನ್ನು ಯೋಚಿಸುವಿರಿ' ಎಂದು ಕೇಳಿದಾಗ 'ಯೋಗಶಾಸ್ತ್ರಂ' ಎಂದು ಬೇರೇನೂ ತೋಚದೆ ಹೇಳಿಬಿಡುವನು. 'ನಾಯಕನೊಡನೆ ನಾಯಿಕೆಯ ಯೋಗವನ್ನು ಬಯಸುವಿರೆಂದು ನಿಮ್ಮ ಮಾತಿನ ಅರ್ಥವೆಂದು ಹೇಳಬಹುದೇ' ಎಂದು ಹೇಳುವಾಗ ನಾವು ಚಮತ್ಕೃತರಾಗುತ್ತೇವೆ.

ಈ ಉತ್ಕೃಷ್ಟವಾದ ಹಾಸ್ಯರಸಪೋಷವನ್ನು ನಾವು ಸರಿಯಾಗಿ ಪರಿಶೀಲಿಸಿದರೆ, ವೇದಾಂತ ಶಾಸ್ತ್ರದ ಪ್ರಭಾವದಿಂದ ನಮ್ಮ ಕವಿಗಳ ದೃಷ್ಟಿಕೋನವೇ ದುಃಖಮಯವಾಗುವದಕ್ಕಿಂತಲೂ ಅನೇಕ ಶತಮಾನಗಳ ಮುಂಚೆಯೇ ಈತನು ಇದ್ದಿರಬೇಕೆಂಬ ವಿಷಯವನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಪದ್ಮಾವತಿಯು ಗಂಡನನ್ನು ವರಿಸುವರೆ ಹೂಮಾಲೆಯನ್ನು ವಾಸವದತ್ತೆಯ ಕೈಯಲ್ಲಿಯೇ ಹೆಣೆಸುವಳು. ಇಡೀ ಸ್ವಪ್ನವಾಸವದತ್ತಾ ನಾಟಕದಲ್ಲಿ ಉದಯನ ವಾಸವದತ್ತೆ

ಯರನ್ನು ಬೇಕೆಂದೇ ಅಗಲಿಸಿ, ಉದಯನನಿಗೆ ಸ್ವಲ್ಪವೂ ಕೂಡಾ ತಿಳಿಯದಂತೆ, ಎಲ್ಲಾ ಕೆಲಸಗಳನ್ನು ಹಿಂದೆ ಇದ್ದೇ ಗೂಢನಾಗಿ ಮಾಡಿಸಿದ ಯೌಗಂಧರಾಯಣನ ಕೌಶಲವು ಅಪಾರವಾಗಿ ನಮ್ಮನ್ನು ಚಕಿತರನ್ನಾಗಿ ಮಾಡುತ್ತದೆ, ದಂಗು ಬಡಿಸುತ್ತದೆಂದರೂ ತಪ್ಪಾಗದು. ಒಂದೇ ಮಾತಿನಲ್ಲಿ ಹೇಳುವದಾದರೆ, ಈ ಹಾಸ್ಯ ರಸಕ್ಕೆ ಈ ತರದ ಹೆಸರೂ ಯಾಕೆ ಬಂತೆಂದರೆ 'ಹಾಸ'ನೆಂಬ ಕವಿಯಿಂದಲೇ ಈ ರಸದ ಉತ್ಪತ್ತಿಯೇ ಕಾವ್ಯ ಸರಣಿಯಲ್ಲಿ ಮೊಟ್ಟ ಮೊದಲು ಬಂದದ್ದರಿಂದ 'ಹಾಸ್ಯ' ಶಬ್ದವನ್ನೇ ಹೊಸದಾಗಿ ಸೃಜಿಸಿದರೋ ಎಂದು ಹೇಳಿದರೂ ತಪ್ಪಾಗದೆಂದು ನಮಗೆ ತೋರುತ್ತದೆ.

೨೧

ಭಾಸಸೋಮಿಲ, ಭಾಸ = ಧಾವಕ ಇತ್ಯಾದಿ ಅಪೂರ್ವ ಪದಗಳು

I ಭಾಸಸೋಮಿಲ ?

ಕಾಲಿದಾಸನು ಮಾಲವಿಕಾಗ್ನಿಮಿತ್ರದ ಪ್ರಸ್ತಾವನೆಯಲ್ಲಿ ಭಾಸನನ್ನು ನಿರ್ದೇಶಿಸುವ ಸಂದರ್ಭದಲ್ಲಿ 'ಪ್ರಥಿತಯಶಸಾಂ**ಭಾಸಸೌಮಿಲ್ಲ**ಕವಿಪುತ್ರಾದೀನಾಂ ಪ್ರಬಂಧಾನತಿಕ್ರಮ್ಯ'....ಎಂದು ಹೇಳಿರುವುದು ಕುತೂಹಲಜನಕವಾಗಿವೆ. ಇಲ್ಲಿ ಭಾಸ, ಸೌಮಿಲ್ಲಕ, ವಿಪುತ್ರ ಎಂದು ಕವಿಗಳ ಹೆಸರನ್ನು ವಿಂಗಡಿಸುವುದೋ, ಭಾಸಸೌಮಿಲ್ಲಕ ಎಂಬುದು ಒಂದೇ ಹೆಸರೋ ಅಥವಾ ಸೌಮಿಲ್ಲ, ಕವಿ, ಪುತ್ರ ಎಂದು ಹೆಸರುಗಳನ್ನೋದುವುದೋ ಎಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಭಾಸನ ಹೊರತು ಉಳಿದ ಹೆಸರುಗಳು ನಮಗೆ ಬರೇ ಹೆಸರುಗಳಾಗಿಯೇ ಉಳಿದಿವೆ. ಅವುಗಳಿಗೆ ಸಾಹಿತ್ಯದಲ್ಲಿ ಬೇರೆಲ್ಲಿಯೂ ನಿರ್ದೇಶವಿಲ್ಲವೆಂದರೂ ತಪ್ಪಾಗಲಾರದು. ಆದರೆ ಈ ಸೌಮಿಲ್ಲ,—ಇದನ್ನು ಸೋಮಿಲ, ಸೋಮಿಲಕ ಎಂದೂ ಕೆಲವೆಡೆ ಓದುತ್ತೇವೆ—ಭಾಸಸೋಮಿಲ ರಾಮಿಲೌ ಎಂಬ ಇಬ್ಬರು—ಇಲ್ಲಿ ಭಾಸಸೋಮಿಲ ಎಂಬುದೊಂದು ಹೆಸರೋ ಎಂದೂಹಿಸಬೇಕಾಗುತ್ತದೆ—ತೌಶೂದ್ರಕಕಥಾ ಕಾರೌ ಭಾಸಸೌಮಿಲ ರಾಮಿಲೌ ಎಂದು ಈ ಶೂದ್ರಕನೆಂಬ ರಾಜನ ಆಸ್ಥಾನದಲ್ಲಿ ಈ ಇಬ್ಬರು ಕವಿಗಳು ಆಶ್ರಿತರಾಗಿದ್ದಾರೆಂದು ಓದುತ್ತೇವೆ. ನಾವಾವಾಗಲೇ ಶೂದ್ರಕನ ಮೃಚ್ಛಕಟಿಕದ 'ರಾಜಾನಂ ವೀಕ್ಷ್ಯ ಪುತ್ರಂ ಪರಮಸಮುದಯೇನ ಅಶ್ವಮೇಧೇನ ಚ ಇಷ್ಟ್ವಾ' ಎಂಬ ಪ್ರಸ್ತಾವನೆಯ ಶ್ಲೋಕವನ್ನುದಹರಿಸಿ, ಮಗನನ್ನು ರಾಜನಾಗಿ ಸ್ಥಾಪಿಸಿ, ತಾನೇ ಸ್ವತಹ ಅಶ್ವಮೇಧಯಾಗವನ್ನೇ ನೆರವೇರಿಸಿ ಎಂದೋದುವಾಗ ಈ ಅಶ್ವಮೇಧ ಯಾಗವನ್ನು ಮಾಡಿ, ಮಗನೂ ರಾಜನಾದದ್ದು ಕಂಡು ಎಂಬುದು ಐತಿಹಾಸಿಕ ದೃಷ್ಟ್ಯಾ ಪುಷ್ಯಮಿತ್ರನಿಗೇ ಸಲ್ಲುವುದೆಂದು ಸಂಶಯವನ್ನು ಮಂಡಿಸಿದ್ದೇವೆ. ಈ ಸಂದೇಹವು ಒತ್ತಟ್ಟಿರಲಿ, ಈ ಶೂದ್ರಕನ ಆಸ್ಥಾನದಲ್ಲಿ

ಭಾಸಸೌಮಿಲ, ರಾಮಿಲ ಎಂಬಿಬ್ಬರು ಕವಿಗಳೆಂದೋದುವಾಗ ಈ ಭಾಸನಿಗೇ ಭಾಸಸೌಮಿಲ ಎಂದಿನ್ನೊಂದು ಹೆಸರೂ ಕೂಡ ಇತ್ತೋ ಎಂಬ ಇನ್ನೊಂದು ಸಂಶಯವೂ ಹೊರಡುವುದು. ಇಲ್ಲಿಯೂ ಸೌಮಿಲ, ರಾಮಿಲ ಎಂಬ ಹೆಸರನ್ನೂ ಪರಿಶೀಲಿಸುವಾಗ ಈ ಇಬ್ಬರು ಅವಳಿಜವಳಿ ಮಕ್ಕಳಾಗಿದ್ದಿರಬಹುದೋ ಎಂಬ ಇನ್ನೊಂದು ಸಂಶಯವೂ ಹೊರಡುವುದು. ಇದೇ ರೀತಿಯಲ್ಲಿ ಪಂಚತಂತ್ರ ದಲ್ಲಿಯೂ ಒಬ್ಬ ಸೋಮಿಲಕನನ್ನೂ ಒಂದೇ ಕಥೆಯಲ್ಲಿ ತಂದಿರುವರು. ಈ ಸೋಮಿಲಕನಿಗೂ ಸೋಮಿಲ ರಾಮಿಲರಿಗೂ ಯಾವ ತರದ ಸಂಬಂಧವಿತ್ತೋ ಗೊತ್ತಿಲ್ಲ.

II ಇನ್ನು **ಭಾಸ=ಧಾವಕ** ಎಂಬ ವಿಚಿತ್ರವಾದ ಒಂದು ವಿವಾದವನ್ನು ಸ್ವಲ್ಪಮಟ್ಟಿಗೆ ವಿಚಾರಿಸೋಣ. ಈ ಮತವೆಂದರೆ ಅತ್ಯದ್ಭುತವಾದುದು, ಯಾರೋ ಒಬ್ಬ ಪ್ರಸಿದ್ಧ ರಾಜನ ಆಸ್ಥಾನದಲ್ಲಿ ಈ ಭಾಸನೆಂಬ ಒಬ್ಬ ಧಾವಕ ಅಂದರೆ ಮಡಿವಾಳನಿದ್ದನು. ಈ **'ಭಾಸ'**ನೆಂದರೆ ವಸ್ತ್ರಗಳನ್ನು ಶುಭ್ರಮಾಡಿ ಕೊಡುವ ಮಡಿವಾಳ, ಆತನೇ ಈ ನಾಟಕಗಳನ್ನೆಲ್ಲಾ (ಮತ್ತೂ ಬೇರೆ ಕೆಲವು ನಾಟಕಗಳನ್ನೂ – ಕಿರಣಾವಲೀ ಇತ್ಯಾದಿಗಳನ್ನೂ) ಬರೆದಾತ, ಬರೆದುದೇನೋ ಭಾಸನೇ ಆಗಿದ್ದರೂ ಕಟ್ಟಕಡೇಗೆ ತನ್ನ ಆಶ್ರಯದಾತನಾದ ಶ್ರೀಹರ್ಷನ ಹೆಸರಿನಿಂದಲೇ ಆ ನಾಟಕಗಳು ಪ್ರಖ್ಯಾತಿಯನ್ನು ಹೊಂದಲಿ ಎಂಬ ಉದಾತ್ತವಾದ ಆಶಯದಿಂದ ತನ್ನ ಹೆಸರನ್ನೇ ಸಂಪೂರ್ಣವಾಗಿ ಮರೆಸಿದನೆಂದೂ ಒಂದು ವಾದ ಮಂಡಿಸಲ್ಪಟ್ಟಿದೆ. ಅರ್ಥಾತ್ ರತ್ನಾವಲೀ, ಪ್ರಿಯದರ್ಶಿಕೆ, ನಾಗಾನಂದ ನಾಟಕಗಳನ್ನೂ ಬರೆದಾತನೂ ಭಾಸನೇ, ಈ ಹದಿಮೂರು ನಾಟಕಗಳನ್ನೂ, ಇನ್ನಿತರ ನಾಟಕಗಳನ್ನೂ ಬರೆದವನೂ ಇವನೇ, ಇದಕ್ಕೆ ಶಾರದಾತನಯನ ಕೆಲವು ಶ್ಲೋಕಗಳೂ ಆಧಾರ, ಹಾಗೆಯೇ ಮಮ್ಮಟನು ಕಾವ್ಯ ಪ್ರಕಾಶದಲ್ಲಿ— ಶ್ರೀಹರ್ಷಾದೇಃ ಧಾವಕಾದೀನಾಮಿವ ಧನಂ ಎಂಬ ವಾಕ್ಯವೇ ಆಧಾರವೆಂದೂ ವಾದಿಸುವರು. ಆದರೆ ಇದೇ ಮಮ್ಮಟನ ಕಾವ್ಯ ಪ್ರಕಾಶದ ವಾಕ್ಯದಲ್ಲಿ ಇನ್ನೊಂದು ವೋಲೆಪ್ರತಿಯಲ್ಲಿ (manuscript) ಸಿಕ್ಕಿದ ಪಾಠವು 'ಶ್ರೀ ಹರ್ಷಾದೇ ರ್ಬಾಣಾದೀನಾಮಿವ ಧನಂ ಎಂದಿರುವುದರಿಂದ ಈ ಪಾಠವನ್ನವಲಂಬಿಸಿ ಒಂದು ಹೊಸ ವಾದವನ್ನವಲಂಬಿಸುವುದೂ ಕ್ಲಿಷ್ಟ ಕಲ್ಪನೆಯೆಂದೇ ಭಾವಿಸಿ, ಈ ವಿಷಯ ವನ್ನಿಲ್ಲಿಗೇ ಬಿಡುತ್ತೇವೆ. ತುಷ್ಯತುದುರ್ಜನ ನ್ಯಾಯವನ್ನವಲಂಬಿಸಿ ಈ ಎರಡನೇ ಪಾಠವನ್ನೇ ಆದರಿಸಿದರೂ, ಬಾಣನು ತನ್ನ ಅತ್ಯುತ್ಕೃಷ್ಟವಾದ ಕಾದಂಬರಿಯನ್ನೇ ಯಾಕೆ ಈ ರಾಜನ ಹೆಸರಿಗೆ ಕೊಡದೆ, ರತ್ನಾವಲ್ಯಾದಿ ನಾಟಕತ್ರಯಗಳನ್ನೇ ಮಾತ್ರ ಆ ರಾಜನ ಹೆಸರಿನಲ್ಲಿ ಬಿಟ್ಟನೋ ಎಂಬುದು ಕುತೂಹಲ ಜನಕವಾಗಿದೆ.

ಇಷ್ಟೇ ಅಲ್ಲ, ಪ್ರಿಯದರ್ಶಿಕೆ ಆದಿನಾಟಕಗಳನ್ನೂ ಈ ಹದಿಮೂರು ನಾಟಕಗಳನ್ನೂ ರಚಿಸಿದವನು ಒಬ್ಬನೇ ಎಂದೊಪ್ಪುವುದೇ ಅತ್ಯಂತ ಕ್ಲಿಷ್ಟ ಕಲ್ಪನೆಯಾಗುವುದು.

III ಉಪಸಂಹಾರ :—ಇದೇನೋ ಅತಿ ಗಹನವಾದ ಸಮಸ್ಯೆಯಾಗಿ ಬಿಟ್ಟಿದ್ದರಿಂದ ಇದರ ಗೋಜಿಗೆ ಹೋಗದೆ ಇದನ್ನು ಇಲ್ಲಿಗೇ ಬಿಡುವೆವು. ಇದೀಗ ಭಾಸನ ಸಮಸ್ಯೆಯನ್ನು ನಮಗೆ ತಿಳಿದಂತೆ ವಾಚಕರ ಮುಂದೆ ಇಟ್ಟಾಯಿತು. ಈ ಸಮಸ್ಯೆಯಲ್ಲಿ ಭಾಗವಹಿಸಿದವರನ್ನು ಸಂಗ್ರಹವಾಗಿ ಮೂರು ಪಂಗಡಗಳವರೆಂದು ನಿರ್ದೇಶಿಸಬಹುದು: ಒಂದನೆಯವರೆಂದರೆ ದಿವಂಗತ ಗಣಪತಿಶಾಸ್ತ್ರಿಗಳ ಮೇಲ್ಪಂಕ್ತಿಯನ್ನನುಸರಿಸಿ ಈ ಹದಿಮೂರು ನಾಟಕಗಳನ್ನೂ ಭಾಸನವೇ ಎಂದು ಸ್ವೀಕರಿಸುವವರು. ಎರಡನೆಯದಾಗಿ Dr. Barnett, Pisharodi ಇತ್ಯಾದಿ ಮಹನೀಯರ ಮಾರ್ಗದರ್ಶಿತ್ವವನ್ನು ಸ್ವೀಕರಿಸಿ ಈ ನಾಟಕಗಳು ಖಂಡಿತವಾಗಿ ಭಾಸ ಪ್ರಣೀತಗಳೇ ಅಲ್ಲ, ಅವು ಗಣಪತಿಶಾಸ್ತ್ರಿಗಳಿಂದ ಅನ್ಯಾಯವಾಗಿ ಭಾಸವಿರಚಿತಗಳೆಂದು ಪರಿಗಣಿತಗಳಾಗಿವೆ, ಇದಕ್ಕಾಗಿಯೇ ಪೂಣಾ ಪತ್ತನದಲ್ಲಿ ಈ ನಾಟಕಚಕ್ರವನ್ನು ಪ್ರಕಾಶಿಸಿದ ಮಹನೀಯರಾದ ಶ್ರೀ ಸಿ. ಆರ್. ದೇವಧರರು ಇವುಗಳನ್ನು Dramas **ascribed** to Bhasa ಎಂದು ಕರೆದರು. ಇವರ ವಾದದಲ್ಲಿ ಸಂಪೂರ್ಣ ಸತ್ಯಾಂಶವಿಲ್ಲದಿದ್ದರೂ ಶಾರದಾತನಯನು ತನ್ನ ಉತ್ಕೃಷ್ಟವಾದ ಆಲಂಕಾರಿಕ ಗ್ರಂಥದಲ್ಲಿ ವಾದಿಸಿದಂತೆ ಇಲ್ಲಿ ಪ್ರಕಟಿತವಾದ ಸ್ವಪ್ನವಾಸವದತ್ತ ನಾಟಕದ ಮೂರನೆಯ ಅಂಕದಲ್ಲಿ ವಾಸವದತ್ತೆಯ ಶೇಷಕ – ಮನಃಶಿಲಾಯಾಸ್ತಿಲಕೋ ಗಂಡಪಾರ್ಶ್ವೇ ನಿವೇಶಿತಃ—ದ ಸುದ್ದಿಯೇ ಬಾರದಿರುವುದೇನೋ ನಿಷ್ಪಕ್ಷಪಾತವಾಗಿ ಯೋಚಿಸುವವರಿಗೆ ಸ್ವಲ್ಪ ಸಂಶಯವನ್ನುಂಟುಮಾಡಿಯೇ ತೀರುವುದು. ಅದೇ ಸಂದರ್ಭದಲ್ಲಿ ಶಾರದಾತನಯನುದಾಹರಿಸಿದ—ಚಿರಪ್ರಸುಪ್ತಃ ಮೇ ಕಾಮಃ ವೀಣಯಾ ಪ್ರತಿ ಬೋಧಿತಃ। ತಾಂ ತು ದೇವೀಂ ನ ಪಶ್ಯಾಮಿ ಯಸ್ಯಾಃ ಘೋಷವತೀ ಪ್ರಿಯಾ॥ —ಎಂಬ ಶ್ಲೋಕವು ಯಥಾಸ್ಥಾನದಲ್ಲಿಯೋ ಆರನೆಯ ಅಂಕದ ಆದಿಯಲ್ಲಿಯೋ ತೋರುವುದನ್ನೂ ನಾವು ಗಮನಿಸಬೇಕಾಗಿದೆ. ಪ್ರಾಯಶಃ ನಿಜಾಂಶವು ಹೀಗಿರಬಹುದೆಂತ ಮೂರನೆಯ ಪಂಗಡದವರಾದ ನಮ್ಮಂತವರು ವಾದಿಸಬಹುದೆಂತ ತೋರುತ್ತದೆ-ಈ ನಾಟಕಗಳನ್ನೇನೋ ಪ್ರಥಿತಯಶಸ್ಕನಾದ ಭಾಸ ಮಹಾಕವಿಯೇ ಬರೆದಿರಲೇಬೇಕು. ಆದರೆ ಎರಡುಸಾವಿರ ವರ್ಷಗಳು ದಾಟಿರುವುದರಿಂದಲೂ, ಇವುಗಳನ್ನನೇಕ ಕಾಲದವರೇಗೆ ಸರಿಯಾಗಿ ಸಂಗ್ರಹಿಸಿಡದಿದ್ದರಿಂದಲೂ, ದೈವ ದುರ್ವಿಪಾಕದಿಂದಲೂ ಸ್ವಲ್ಪಕಾಲದವರೇಗೂ ಈ ನಾಟಕಗಳು ಪ್ರಚಾರವಿಲ್ಲದೇನೆ ಎಲ್ಲಿಯೋ ಮೂಲೆಗಳಲ್ಲಿ ಮಾತ್ರ ಉಳಿಯಬೇಕಾಗಿ ಬಂದವು. ಆದರೂ ಅನಂತ

ಶಯನದಲ್ಲಿದ್ದ ಚಾಕ್ಯಾರು ನಾಟಕ ಸಂಘಗಳಲ್ಲಿ ಇವುಗಳ ಪ್ರಯೋಗವುಳಿದು, ಈಗ ಅವರ ಅನುಗ್ರಹದಿಂದಲೇ ಸಮಾನಧರ್ಮರಾದ ಗಣಪತಿಶಾಸ್ತ್ರಿಗಳು ಈ ನಾಟಕಗಳ ಪ್ರಚಾರವನ್ನು ಪುನಃ ನಮ್ಮ ಮುಂದಿಟ್ಟು ನಮ್ಮ ಕೃತಜ್ಞತೆಗೆ ಪಾತ್ರರಾಗಿರುವರು. ಸ್ವಪ್ನವಾಸವದತ್ತ ನಾಟಕದ ಮೂರನೆಯ ಅಂಕವೇನೋ ಈಗ ಅತಿ ಚಿಕ್ಕದಾಗಿ ಅವರಿಂದ ಸಂಗ್ರಹೀತವಾಗಿರಲೇಬೇಕೆಂಬುದನ್ನು ನಾವು ಒಪ್ಪಿಯೇ ತೀರಬೇಕಾಗಿದೆ. ಆದರೆ ಉಳಿದ ಅಂಕಗಳು ಮುಂಚೆ ಹೇಗಿದ್ದವೋ ಹಾಗೆಯೇ ಈಗಲೂ ಉಳಿದಿರಬಹುದೆಂಬ ಆಶೆಯನ್ನೇ ನಾವು ಮುಂದಿಟ್ಟುಕೊಳ್ಳ ಬೇಕಾಗಿದೆ. ದಿವಂಗತರಾದ ಶ್ರೀ ಪಿ. ವಿ. ಭಟ್ಟನಾಥಸ್ವಾಮಿ ಮಹಾಶಯ ರೇನೋ 'ಸಂಜಯಾಯ ಪ್ರತಿಶ್ರುತಾಂ' ಇತ್ಯಾದಿ ಭವಭೂತಿಯ ವಾಕ್ಯವನ್ನಾ ಧಾರವಾಗಿಟ್ಟುಕೊಂಡು ಇಡೀ ಸ್ವಪ್ನವಾಸವದತ್ತ ನಾಟಕವೇ ಬೇರೆ ಇದ್ದಿರಬೇಕು ಅದರ ವಸ್ತುವಿಗೂ ಇದಕ್ಕೂ ಯಾವ ತರದ ಸಂಬಂಧವೇ ಇಲ್ಲವೆಂದೂ ವಾದಿಸಿಯೇ ಬಿಟ್ಟರು. ನಾವು ಇದನ್ನು ಅಂಗೀಕರಿಸಲಂತೂ ಸಾಧ್ಯವೇ ಇಲ್ಲ ವೆಂದು ಹೇಳಲು ಬಯಸುತ್ತೇವೆ. ಮೂರನೆಯ ಅಂಕವು ಮಾತ್ರ ಸಂಗ್ರಹೀತ ವೆಂದು ಅಲ್ಲಿಯೇ ನಿಲ್ಲಿಸಬಾರದೆಂದೂ ಒಪ್ಪುವುದಾದರೂ ಒಪ್ಪಬಹುದೆಂತ ತೋರುತ್ತದೆ. ಅಂದರೆ ಅಲ್ಲಲ್ಲಿ ಒಂದೆರಡು ವಾಕ್ಯಗಳೋ ಶ್ಲೋಕಗಳೋ ಬಿಟ್ಟು ಹೋಗಿರಲೂಬಹುದು. ಆದರೆ ಇಷ್ಟೇ ಮಾತ್ರದಿಂದಲೇ ಇವು ಪ್ರಥಿತಯಶಸ್ಕನವೇ ಅಲ್ಲವೆಂದು ಸರ್ವಾತ್ಮನಾ ಅಲ್ಲಗಳೆಯಕೂಡದು. ಕೆಲವು ಮಹನೀಯರ ಪ್ರಕಾರ 'ಕಪಾಲೇ ಮಾರ್ಜಾರಃ' ಇತ್ಯಾದ್ಯುತ್ಕೃಷ್ಟ ಪ್ರೌಢೋಕ್ತಿ ವಿಶಿಷ್ಟಗಳಾದ ಶ್ಲೋಕಗಳಲ್ಲಿಲ್ಲವೇನೋ ಸಹಜ, ಒಂದೆರಡು ನಾಟಕಗಳಲ್ಲಿ-ಅವಿಮಾರಕ ಇತ್ಯಾದಿ ಗಳಲ್ಲಿ ಈತನ ಸಿದ್ಧಹಸ್ತವಿಲ್ಲದಿದ್ದರೆ, ಅವುಗಳನ್ನು ಮೊಟ್ಟಮೊದಲೀತನು ರಚಿಸಿ, ಮೆಲ್ಲಮೆಲ್ಲನೆ ಕೈಯನ್ನು ಪಳಗಿಸಿಕೊಂಡು, ಕಟ್ಟಕಡೇಗೇನೆ ಅತ್ಯುಚ್ಚಗಳಾದ ಪ್ರತಿಮಾ ಸ್ವಪ್ನವಾಸವದತ್ತಗಳನ್ನು ಬರೆಯುವ ಕೌಶಲವನ್ನೂ ಸಾಧಿಸಕೊಂಡ ನೆಂದು ನಾವೇಕೆ ವಾದಿಸಕೂಡದು. ಪ್ರಾಚೀನ ವಿಮರ್ಶಕರೇನೋ ಈತನನ್ನು ಗೌರೀಶಂಕರ (Everest) ಶಿಖರದ ಉಚ್ಚದಲ್ಲಿಟ್ಟು ಮೂರ್ಧಾಭಿಷಿಕ್ತ ನೆಂದು ಗೌರವಿಸಿದರೆ, ಇದರ ಮುಂಚೆ ಎಷ್ಟು ಪರ್ವತಾರೋಹಿಗಳು ಪರ್ವತ ವನ್ನೇರುವ ಪ್ರಯತ್ನವನ್ನು ಮಾಡಿ ಕೃತಕೃತ್ಯರಾಗದೇ ಉಳಿದಿಲ್ಲ ?

Sir Isac Newton ಎಂಬ ಪ್ರಸಿದ್ಧ Physics ತತ್ತ್ವಶಾಸ್ತ್ರ ವೇತ್ತರೊಂದು ಕಡೆ ಅಪ್ಪಣೆ ಕೊಡಿಸಿದುದನ್ನು ನಾವು ಮರೆಯಲಾಗದು— 'If I have been privileged to see farther than most, it is because I have stood on the shoulders

of giants —ಅರ್ಥಾತ್ ಅನೇಕರಿಗಿಂತಲೂ ಹೆಚ್ಚು (ಆರ್ಷ) ಜ್ಞಾನ ನನಗಿದ್ದಿತ್ತೆಂದು ಸತ್ಯವಾದರೆ, ಅದಕ್ಕೆ ಕಾರಣ ನಾನು ಅಮಾನುಷರಾದ ದೊಡ್ಡ ಅತಿ ಬಲಿಷ್ಠರ ಭುಜಗಳ ಮೇಲೆ ನಿಲ್ಲುವ ಭಾಗ್ಯ ನನಗೆ ದೊರಕಿದೆ' ಇದು ಈತನ ವಿನಯವನ್ನೇ ವ್ಯಕ್ತಪಡಿಸುತ್ತಿದ್ದರೂ, ಇದರಲ್ಲಿನ್ನೊಂದು ತತ್ತ್ವವಿರುವುದನ್ನು ನಾವು ಮರೆಯಬಾರದು. ಈತನ ಹಿಂದೆ ಅನೇಕ ಸುಪ್ರಸಿದ್ಧ ಶಾಸ್ತ್ರವೇತ್ತರಿದ್ದರು, ಅವರ ಮಾರ್ಗವನ್ನವಲಂಬಿಸಿ, ಅವರ ಶೋಧನೆಗಳನ್ನೇ ಮುಂದುವರಿಸಿ, ತಾನು ಯಶಸ್ವಿಯಾದೆನೆಂದು ಅವನು ಪೂರ್ವಜರನ್ನು ಬಾಯಿ ತುಂಬಾ ಹೊಗಳಿರುವನು. ನಮ್ಮ ಭಾಸನಾದರೋ ಎರಡು ಸಾವಿರ ವರ್ಷಗಳ ಹಿಂದೆ ನಮ್ಮ ದೇಶದಲ್ಲಿದ್ದನಲ್ಲವೇ ? ಅವನ ಮುಂಚೆ ಯಾವ ತರದ ಸಾಹಿತ್ಯವಿತ್ತೋ ಅಥವಾ ಇಲ್ಲವೋ ಎಂಬುವನ್ನೂಹಿಸಲಿಕ್ಕೂ ಈಗ ಅಸಾಧ್ಯವಾಗಿದೆ. ವಾಲ್ಮೀಕಿಯೇನೋ ಇದ್ದನೆಂಬುದು ಸ್ಪಷ್ಟ ; ಆದರೆ ಪತಂಜಲಿ, ಭರತನಾಟ್ಯಶಾಸ್ತ್ರ ಇತ್ಯಾದಿಗಳನ್ನು ಪರಿಶೀಲಿಸಿದರೇನೋ ಕೆಲವು ಉಚ್ಚ ನಾಟಕಗಳೂ ಮಹಾಕಾವ್ಯಗಳೂ ಇದ್ದಿರಲೇಬೇಕೆಂದು ನಾವು ಒಪ್ಪಲೇಬೇಕಾದರೂ, ಅವು ಈಗೆಲ್ಲಾ 'ದಗ್ಧ' ಅಥವಾ 'ಲುಪ್ತ'ವಾಗಿರಲೇಬೇಕೆಂತ ನಾವು ವಿಷಾದದಿಂದ ಸ್ವೀಕರಿಸಬೇಕಾಗಿದೆ. (ಇದಕ್ಕೆ ಆಧಾರವಾಗಿ ಭಾಸನ ನಾಟಕಗಳನ್ನೇ ಬೆಂಕಿಯಲ್ಲಿ ವಿದ್ವಾಂಸರು ಹಾಕಿ, ಸ್ವಪ್ನನಾಟಕ ಮಾತ್ರ ಸುಡದೇ ಹೊರಗೆ ಬಂತೆಂಬುದನ್ನು ನಾವು ನೆನಪಿಗೆ ತಂದುಕೊಳ್ಳಬಹುದಲ್ಲವೇ ?) ಒಂದೇ ಮಾತಿನಲ್ಲಿ ಹೇಳುವುದಾದರೆ, ವಾಲ್ಮೀಕಿಯೇನೋ 'ಮಧುಮಯ ಫಣಿತೀನಾಂ ಮಾರ್ಗದರ್ಶೀ ಮಹರ್ಷಿಃ'ಯಾಗಿ ತಲೆದೋರಿದ್ದರೂ, ಮಾರ್ಗದರ್ಶಿಯ ಕೆಲಸವೆಂಬುದು ಸಂಪೂರ್ಣವಾಗಿ ನಿರ್ವ್ಯೂಢವಾಗಿರಲಿಲ್ಲ. ಕಾಲಿದಾಸಾದಿಗಳಿಗೆ ಸರಿಯಾಗಿ ಮೇಲ್ಪಂಕ್ತಿಯನ್ನಿತ್ತವನೆಂದರೆ ಈತನೆಂದೇ ಧಾರಾಳವಾಗಿ ಒಪ್ಪಬೇಕು. ಆದರೆ ಕಾಲಿದಾಸನಿಗೇ ಈತನ ಮೇಲೆ ಸ್ವಲ್ಪ ಅಸೂಯೆಯಿದ್ದಿರಬೇಕು. ನಾವು ಊಹಿಸಿದಂತೆ 22 ವರ್ಷದ ತರುಣನು ಹಣ್ಣು ಮುದುಕನಾಗಿ 'ಪ್ರಥಿತಯಶಸ್ಕ'ನಾಗಿದ್ದ ಭಾಸನನ್ನು ಕಂಡಿರಲೇಬೇಕು. ನಮ್ಮ ಕಣ್ಣಿನ ಮುಂದೆಯೇ ಮರೆಯಾದ ಟಾಗೋರ್ ಮಹಾಕವಿಗಳ ಸಮಕಾಲೀನರಾಗಿ ಬಾಳಿದ್ದ ಸರೋಜಿನಿದೇವಿ, ಅಥವಾ ಅವಳ ತಮ್ಮ ಹರೀಂದ್ರನಾಥ ಚಟ್ಟೋಪಾಧ್ಯಾಯರ ಉದಾಹರಣೆಯನ್ನು ನಾವು ಮರೆಯಲಾಗದು. ಇನ್ನೊಂದೆರಡು ಶತಮಾನಗಳ ನಂತರ ಸರೋಜಿನಿದೇವಿಯರನ್ನೋ ಅವರ ತಮ್ಮನನ್ನೋ ಎಲ್ಲರೂ ಮರೆತುಬಿಟ್ಟರೂ ಸೋಜಿಗವಲ್ಲವೆಂದು ನಾವು ಒಪ್ಪಲೇಬೇಕು. ಆದರೆ ಈ ಇಬ್ಬರು ಕವಿವರ್ಯರಿಗೆ 'Prophetic Vision=ಆರ್ಷಜ್ಞಾನ'ವೇ ಇಲ್ಲವೆಂದವರನ್ನು ನಾವು ತಳ್ಳಿಬಿಡಬಹುದೇ ?

ಇನ್ನೊಂದು ಕಾರಣವನ್ನೂ ನಾವು ಗಮನಿಸತಕ್ಕದ್ದಾಗಿದೆ. ಕೆಲವು ವರ್ಷಗಳ ಹಿಂದೆ ಒಬ್ಬ ಮಹನೀಯರು ಬರೆದುದು ನಮ್ಮ ಸ್ಮೃತಿಪಥಕ್ಕೆ ಬರುವುದು. "The more actable a play is, the less great it is ; if you doubt me, read the dramas of Shakespeare or of Ibsen. King Lear and Peer Gynt are hard to put on the stage, while the Merry wives of Windsor and a Doll's house can be done justice to even by amateurs" ಅರ್ಥಾತ್ ಯಾವುದಾದರೊಂದು ನಾಟಕವು ರಂಗದ ಮೇಲೆ ಅತ್ಯುತ್ಕೃಷ್ಟವಾಗಿದ್ದರೆ, ಅದರ ಅನ್ಯಥಾ ಉತ್ಕರ್ಷವೇ ಸ್ವಲ್ಪಮಟ್ಟಿಗೆ ಅಪಕೃತವಾಗಿ ಬಿಡುವುದು. ದೃಷ್ಟಾಂತವಾಗಿ ಷೇಕ್ಸ್‌ಪೀಯರ್ ಅಥವಾ ಇಬ್ಸನ್ ಇವರ ನಾಟಕಗಳನ್ನು ನಿರ್ದೇಶಿಸಬಹುದು. ಲೀಯರ್ ರಾಜ (Shakespeare) ಅಥವಾ ಪೀಯರ್ ಜಿಂಟ್ ರಂಗದಮೇಲೆ ರೈಸದಿದ್ದರೂ, ವಿಂಡ್ಸರ್ —ಇಲ್ಲಿಯ ಪ್ರಮುದಿತ ರಾಣಿಗಳು ಅಥವಾ ಸಾಲಭಂಜಿಕೆಯ ಮನೆಯೆಂಬ ನಾಟಕಗಳಲ್ಲಿ ಭರತನಾಟ್ಯದಲ್ಲಿ ಮೊಟ್ಟಮೊದಲು ಪ್ರವೇಶವನ್ನು ಇಚ್ಛಿಸುವವರೂ ಯಶಸ್ವಿಯಾಗಬಲ್ಲರು. ಇದೇ ಮಾತನ್ನು ನಾವು ಭಾಸನಿಗೂ ಅನ್ವಯಿಸಬಯಸುವೆವು. ಈತನ ನಾಟಕಗಳೆಂಬುವು ಆಗಿನ ಕಾಲದ ರಂಗಭೂಮಿಗಾಗಿಯೇ ಮೀಸಲಿಡಲ್ಪಟ್ಟವೆಯೆಂದು ಮೊಟ್ಟಮೊದಲೇ ನಾವು ಒಪ್ಪಬೇಕಾಗಿದೆ. ಆಗಿನ ವಾತಾವರಣಕ್ಕೆ ಅತ್ಯಂತ ರಂಜಕವಾಗಿದ್ದವು; ಆ ವಾತಾವರಣವು ಸ್ವಲ್ಪಮರೆಯಾದ ನಂತರ, ಅಂದರೆ ನಾವು ಹೇಳಿದಂತೆ ಮಧ್ಯಮನಿಗೂ ಸರಿಯಾದ ಪಾಲು ನಿಶ್ಚಿತವಾದನಂತರ ಆ ನಾಟಕದ ಪ್ರಾಶಸ್ತ್ಯವನ್ನು ಸರಿಯಾಗಿ ತಿಳಿಯುವುದೇ ಸ್ವಲ್ಪ ಕ್ಲಿಷ್ಟವಾಯಿತು. ಅಷ್ಟರೊಳಗಾಗಿಯೇ, ಅಂದರೆ ಒಂದು 25 ವರ್ಷಗಳೊಳಗಾಗಿಯೇ ಕಾಳಿದಾಸನ ಅತ್ಯುಚ್ಚ ನಾಟಕಗಳೂ ತಲೆದೋರಿ ಮುಂಚಿನ ಎಲ್ಲ ನಾಟಕಗಳನ್ನೂ ಬದಿಗೇ ದೂಡಿಬಿಟ್ಟವು. (ನಮ್ಮ ದೇಶದಲ್ಲಿ ಇದೇ ಹಾಡು ಪ್ರತಿಯೊಂದು ಶಾಸ್ತ್ರಕ್ಕೂ ಅನ್ವಯಿಸುವುದು–ಪಾಣಿನಿಯು ಬಂದನೆಂತಾದರೆ, ಅವನ ಮುಂಚೆ ಇದ್ದ ಎಲ್ಲಾ ವ್ಯಾಕರಣಗಳೂ ಬದಿಗೊತ್ತಲ್ಪಟ್ಟವು–ಶಂಕರರ ಮುಂಚೆ ಇದ್ದ ವೇದಾಂತ ಟೀಕೆಗಳೆಲ್ಲಾ ಲುಪ್ತವಾಗಿವೆ. ಬಾಣನ ಮುಂಚೆ ಇದ್ದ ಗದ್ಯಗ್ರಂಥಗಳಲ್ಲಿ ಒಂದಾದರೂ ನಮಗೆ ಸಿಕ್ಕಲೇ ಇಲ್ಲ – ಹೀಗೆಯೇ ಈ ಮಾತು ಎಲ್ಲಾ ಶಾಸ್ತ್ರಗಳಿಗೂ ಸಾಮಾನ್ಯವಾಗಿ ಒಪ್ಪುವುದು.)

ಇನ್ನೊಬ್ಬ ಮಹನೀಯರ ಪ್ರಶಂಸೆಯನ್ನು ಗಮನಿಸಬಹುದು– 'Bhasa is certainly exciting and dramatic ; he is careful

not to overdo the vain hectics of his marionettes; his creators do not break away from the scheme of the author while Bhavabhuthi's dramas suffer from both these defects and are not easily actable" ಇವರ ಆಶಯವನ್ನು ಹೀಗೆ ಕನ್ನಡಿಸಬಹುದು—(ಈಗಿನ ಕೆಲವು ನಾಟಕಗಳಲ್ಲಿ ಅದೂ ವಿಶೇಷವಾಗಿ ಚಲಚ್ಚಿತ್ರಗಳಲ್ಲಿ ಕೆಲವು ರಚಯಿತರು ಬೇಕೆಂತಲೇ ಮನೋವೇಧಕ ದೃಶ್ಯಗಳನ್ನೇ ಶೇಖರಿಸುತ್ತಿರುವಂತೆ) ಅಧಿಕ ಪ್ರಸಂಗವನ್ನೋ ಇನ್ನಿತರ ಹೃದಯವಿದ್ರಾವಕ ವಸ್ತುವನ್ನೋ ತಂದೊಡ್ಡುವುದಿಲ್ಲ; ಆತನು ಹಾಕಿಕೊಟ್ಟ ಮೇಲ್ಪಂಕ್ತಿ, ಎಲ್ಲೆಗಳನ್ನು ಅವನ ಪಾತ್ರಗಳು ಉಲ್ಲಂಘಿಸುವುದೇ ಇಲ್ಲ. ಆದರೆ ಭವಭೂತಿಯಲ್ಲಿ ಮಾತ್ರ ಈ ಎರಡು ದೋಷಗಳುತುಂಬಾ ಇದ್ದುದರಿಂದಲೇ ಅವುಗಳನ್ನು ರಂಗಭೂಮಿಯಮೇಲೆ ತರುವುದೆಂದರೂ ಅತಿ ಸಾಹಸದ ಕೆಲಸವಾಗಿದೆ.

ಇನ್ನು ಇವನ ಕಾಲದ ವಿಷಯದಲ್ಲಿ ಸಾಕ್ಷಾತ್ ಪ್ರಸಿದ್ಧ ಮಹನೀಯರಾದ ಡಾಕ್ಟರ್ ರಾಮಕೃಷ್ಣ ಭಾಂಡಾರಕರರ ಸಹಾಯ ಅಥವ ಸಹಾನುಭೂತಿ ನಮಗೆ ದೊರಕದಿದ್ದರೂ (ಅವರ ಕಾಲದಲ್ಲಿ, 1872ರಲ್ಲಿ ಈ ನಾಟಕಗಳೇ ಅಚ್ಚಾಗಿದ್ದಿಲ್ಲವಷ್ಟೆ.) ಆ ಮಹಾಶಯರ ಅಭಿಪ್ರಾಯವನ್ನೊಮ್ಮೆ ಉದಹರಿಸಿ ಅದರ ಪ್ರಕೃತಾನ್ವಯವನ್ನು ಕಾಣುವಾ—"It might be granted that the 2 vyuhas, Vasudeva and Sankarsana only were known up to the time of the earliest inscriptions which is to be referred to about the beginning of the 1st Cen. B. C. so that the system of the 4 vyuhas was not fully developed at that time"—(Sri R. G· Bhandarkar, Vaisnavaism P. 3.) ಅರ್ಥಾತ್ ಪಂಚರಾತ್ರಾಗಮದ 4 ವ್ಯೂಹಗಳನ್ನೂ ಬಳಕೆಯಲ್ಲಿ ಬಂದಿದ್ದಿಲ್ಲ; ಸಂಕರ್ಷಣ, ವಾಸುದೇವ ಎಂಬ ಎರಡೇ ವ್ಯೂಹಗಳನ್ನೇ ಆಗ ಪೂಜಿಸುವ ವಾಡಿಕೆ ಬಂದಿತ್ತು, ಪ್ರದ್ಯುಮ್ನ, ಅನಿರುದ್ಧಗಳನ್ನು ಸೇರಿಸಿ, 4 ವ್ಯೂಹಗಳನ್ನೂ ಪೂಜಾಕ್ರಮದಲ್ಲಿ ಸೇರಿಸಿ, ಪಂಚರಾತ್ರಾಗಮವೆಂದು ಬಳಕೆಯಲ್ಲಿ ತಂದದ್ದೇ ಸಾಧಾರಣ 3ಯಾ 4ನೇ ಶತಮಾನದಲ್ಲಿ ಎಂಬ ಈ ವಿಷಯದಲ್ಲಿ ಪ್ರಸಿದ್ಧ ಪುರಾಣ ವಿಷಯಗಳನ್ನು ವಿಮರ್ಶಿಸಿದ ಮಹನೀಯರಾದ Sri R. C. Hazra ಎಂಬುವರ ಸಮ್ಮತಿಯೂ ಇರುವುದು. ಈ ಮಹನೀಯರು ತಮ್ಮ Puranic Records and Customs ಎಂಬ ಉತ್ಕೃಷ್ಟವಾದ ಗ್ರಂಥದಲ್ಲಿ ಜಯಾಖ್ಯಾ ಸಂಹಿತೆ

ಯನ್ನು 450 A. D. ಸಮಯದಲ್ಲಿ ಬರೆಯಲ್ಪಟ್ಟಿತ್ತೆಂದೂಹಿಸಿ, ಈ ಪಂಚರಾತ್ರಾಗಮವೇ ಆಗಲೇ ತಾನೇ ಬಳಕೆಯಲ್ಲಿ ಬಂತೆಂದು ನಿರ್ಧರಿಸಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಭಾಸನ ನಾಟಕಗಳಲ್ಲಿ ದೇವಕುಲ ಶಬ್ದವೇನೋ ತೋರಿಬಂದರೂ, ಈಗಿನ ಕಾಲದ ಪಂಚರಾತ್ರಾಗಮ ರೀತ್ಯಾ. ಪ್ರತಿಷ್ಠಿತಗಳಾದ ದೇವಾಲಯಗಳಿನ್ನೂ ಬಳಕೆಯಲ್ಲಿ ಬಂದಿರಲೇ ಇಲ್ಲವೆಂದೇ ಒಪ್ಪಬೇಕು, ಯಾಕೆಂದರೆ ಈತನ 'ಪ್ರತಿಮಾ' ನಾಟಕದ ಹೆಸರನ್ನೂ, ದಿಲೀಪಾದಿ ನಾಲ್ಕು ರಾಜರಪ್ರತಿಮೆಗಳನ್ನೂ ಪರಿಶೀಲಿಸಿದಲ್ಲಿ, ವರಾಹಮಿಹಿರ, ಅಗ್ನಿಪುರಾಣ ಇತ್ಯಾದ್ಯರ್ವಾಚೀನ ಗ್ರಂಥಗಳಲ್ಲಿ ಪ್ರತಿಪಾದಿಸಿರುವ ದೇವತಾ ಪ್ರತಿಮೆಗಳ ಪ್ರಚಾರ, ದೇವಾಲಯಗಳಲ್ಲಿ ಪ್ರತಿಷ್ಠೆ ಇನ್ನೂ ಬಳಕೆಯಲ್ಲಿ ಬಂದಿದ್ದೇ ಇಲ್ಲವೆಂದು ನಮಗನಿಸುತ್ತದೆ.

ಇದೀಗ ಉಪಸಂಹರಿಸುವೆವು. ಸಮಾನಧರ್ಮರಾದ ಗಣಪತಿಶಾಸ್ತ್ರಿಗಳೇನೋ ಭಾಸನನ್ನು ಉಜ್ಜೀವಿಸಿಯೇ ಬಿಡುವೆನೆಂದೇ ಹೆಣಗಾಡಿದ್ದರೂ, ದುರ್ದೈವವಶಾತ್ ಅವಿಮಾರಕನು ಉಂಗುರವನ್ನು ಧರಿಸಿ ಮಾಯವಾದಂತೆ, ನಮ್ಮ ಪ್ರಥಿತಯಶಸ್ಕನಾದ ಭಾಸನೂ ಆಗಲೇ ಮಾಯವಾಗಿಬಿಟ್ಟಿದ್ದಾನೆಂದು ನಾವು ವಿಷಾದದಿಂದ ಸ್ವೀಕರಿಸಬೇಕಾಗಿದೆ. ಶ್ರೀ ದೇವತಾನುಗ್ರಹದಿಂದ ಈ ಉಂಗುರವನ್ನು ಸರಿಯಾದ ಕೈಯಲ್ಲಿ ಅವಿಮಾರಕನಂತೆಯೇ ಆತನನ್ನು ಸೃಜಿಸಿದ ಭಾಸನೂ ಧರಿಸಿ, ಸಾಹಿತ್ಯಾಕಾಶದಲ್ಲಿ ಧ್ರುವನಕ್ಷತ್ರದಂತೆ ಈತನ ಕೀರ್ತಿಯೂ ಆತನ ಸಹಚರರಾದ ಚಂದ್ರಸೂರ್ಯರಂತೆಯೇ ರಾರಾಜಿಸಲಿ ಎಂಬ ಪ್ರಾರ್ಥನೆಯನ್ನು ಸಲ್ಲಿಸಿ ವಿರಮಿಸುವೆವು.

ಒಪ್ಪೋಲೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೭	೨೦	ಶ್ರೀಯೇವ	ಶ್ರೀಯೇವಃ
೧೦	೧೧	ಅನ್ಯದಪ್ಯಭಿಲಾಪ	ಅಭಿಲಾಷಂ
೧೧	೧೩	ಕಾಲಯೌಗೇನ	ಕಾಲಯೋಗೇನ
೪೩	೨೨	ಅಶ್ವಿಸುತೇ	ಅಶ್ವಿಸುತೇ ವಿನೀತೇ
೪೫	೩೦	ರಥಃಗೋವೃಪಶ್ಚ	ರಥಃಗೋವೃಷಶ್ಚ

ಅಶುದ್ಧ			ಶುದ್ಧ
ಪುಟ	ಪಂಕ್ತಿ		
೧೪೧	೭	ಅಸ್ಮಾಬಿಲ್ಲ	ಅಸ್ಮಾಭಿ
	೯	ಅಥಮಪಸತು	ಅಥಮುಮುಸತು
೧೪೬	೪	literary tes	literary ties
೧೫೪	೮	from force to	from farce to
೧೫೫	೪	of culhned gosthial	of a cultured gosthiall
೧೬[illegible]	೧೦	ಪೂರಯಿಕೃತ	ಪೂರಯಿತ್ರಕ
೧೬೫	೯	ಮಹೀಂ ಕಾತಪತ್ರಾಂಕಾಂ	ಮಹೀಂ ಏಕಾತಪತ್ರಾಂಕಾಂ
೧೭೬	೨೦	ಉತ್ತರಾಧಿಕಾರಿಯಾಗರಾಗ	ಉತ್ತರಾಧಿಕಾರಿಯಾಗ
೧೮೯	೧೭	ಪ್ರಥಿತಯಸ್ಕ	ಪ್ರಥಿತಯಶಸ್ಕ

ಶಾರದಾ ಪ್ರಕಟನಾಲಯದ ಪ್ರಕಟನೆ

ಭಾಸ ನಾಟಕಚಕ್ರ

☆

ಷ್ಟೋಽಷ್ಟೋ ಮುಷ್ಟಿಮುದ್ಯಮ್ಯ ತಿಷ್ಠತ್ಯೇಷ ಘಟೋತ್ಕಚಃ
ಉತ್ತಿಷ್ಠ ತು ಪುಮಾನ್ ಕಶ್ಚಿದ್ಗಂತುಮಿಚ್ಛೇದ್ಯಮಾಲಯಂ

☆

ಪ್ರೊ. ಯು. ವೆಂಕಟಕೃಷ್ಣರಾವ್